# ಸಂವಾದ

ಅಗಸ್ಟ್ ೨೦೧೦ ರೂ. ೨೦

## ಗೌರವ ಹತ್ಯೆಯ ಕರಾಳ ಮುಖಗಳು

**ದಲಿತರ ಮುಂದಿನ ಹೆಜ್ಜೆಗಳು**

**ಜನಾದೇಶದಿಂದ ದೈವಕೃಪೆ ಕಡೆಗೆ**

# ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೧೦

ಆಗಸ್ಟ್ ೨೦೧೦

ಸಂಪಾದಕ :

ಇಂದೂಧರ ಹೊನ್ನಾಪುರ



ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ



ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

**✆ Editorial: 9448048306**

**✆ Circulation: 080- 23480278, 9945264687**

e- mail : **samvaada@hotmail.com**
**honnapura@yahoo.co.in**

EDITOR :
**INDUDHARA HONNAPURA**


## ಒಳಪುಟಗಳಲ್ಲಿ


❑ ಪತ್ರಗಳು ೦೩

❑ ಹೊಸ ಪುಸ್ತಕ ೦೪

❑ ಸಂಪಾದಕರೊಂದಿಗೆ ಸಂವಾದ:
- ○ ಸರಸ್ವತಿ ಕೆ.ಬಿ ೦೬
- ○ ಬಾಪು ಹೆದ್ದೂರಶೆಟ್ಟಿ ೦೭
- ○ ನಾಗರಾಜ ಬಿ.ಟಿ ೦೮

❑ ಜನಾದೇಶದಿಂದ ದೈವ ಕೃಪೆಯ ಕಡೆಗೆ
- ○ ಎಸ್. ಮರಿಸ್ವಾಮಿ ೧೦

❑ ತಂದೆ ಸಮಾನ ವ್ಯಕ್ತಿಯೂ ಕೆಲ ಐತಿಹಾಸಿಕ.... ೧೨

❑ ಆ ಖಂದಿನಗಳ ಗೋಳು..?
- ○ ಎಸ್.ಬಿ.ಜೋಗುರ ೧೫







❑ ಮಾಧ್ಯಮ ಸ್ವಾತಂತ್ರ್ಯ ಮತ್ತು ಪೊಲೀಸ್ ರಾಜ್ಯ
- ○ ಮಲ್ಲಿಕಾರ್ಜುನ ಗುಮ್ಮಗೋಳ ೧೬

❑ ಗೌರವ ಹತ್ಯೆಯ ಕರಾಳ ಮುಖಗಳು
- ○ ನಾ. ದಿವಾಕರ ೧೮

❑ ಯಶೋಧರೆಯರ ಕಷ್ಟಗಳು
- ○ ರಹಮತ್ ತರೀಕೆರೆ ೨೨

❑ ಲೋಹಿಯಾವಾದಿ ಸಾಂಸ್ಕೃತಿಕ ಪರಂಪರೆಯೂ, ತರೀಕೆರೆಯವರ ಮೆಳ್ಳೆಗಣ್ಣಿನ ನೋಟವೂ...
- ○ ಡಿ.ಎಸ್.ನಾಗಭೂಷಣ ೨೬

❑ ಪೂರ್ಣತೆಯೆಂಬ ಕರುಳ ಮಿಡಿತ
- ○ ಜ್ಯೋತಿ ಗುರುಪ್ರಸಾದ್ ೩೨

❑ ಗೋಮುಖ ವ್ಯಾಘ್ರರ ಜಾನುವಾರು ಹತ್ಯೆ ನಿಷೇಧ ಕಾಯಿದೆ
- ○ ವೈ. ಮರಿಸ್ವಾಮಿ ೩೫

❑ ಕಾಲಮಾನ... ೭
- ○ ಡಾ. ಮುಜಾಫ್ಫರ್ ,ಅಸ್ಸಾದಿ ೩೮

❑ ಧರೆ ಹತ್ತಿ ಉರಿದರೆ... ೨೨
- ○ ಡಾ. ಟಿ. ಆರ್ ಚಂದ್ರಶೇಖರ್ ೪೨

❑ ದಲಿತ್ ಡೈರಿ
- ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬

❑ ಬುದ್ಧಾಯಣ
- ○ ಸಿ. ಎಚ್. ರಾಜಶೇಖರ್ ೫೦

ಕವನಗಳು : ❑ ಮೌನ ಮಾತಾಡಿದ ಹೊತ್ತು ೦೫ ❑ ಬುದ್ಧ ಕವಿತೆಗಳು ೦೯

❑ ಹಕ್ಕಿಯೂ ಬೇಡನೂ ನಿಶ್ಯಸ್ತ್ರ ಜೊತೆಗಾರ ೪೦


ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್


(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

# ಅಪದ್ಧಕ್ಕೆ ಅಪ್ಪಣೆ ಎಂದಾಗ ಬಾರದಲ್ಲವೆ?

ಪ್ರಿಯ ಇಂದೂಧರ್,

ಡಾ. ಸಿ.ಜಿ.ಲಕ್ಷ್ಮೀಪತಿಯವರ 'ಅಂತರಜಾತಿ ವಿವಾಹಗಳು ಬೇಕೆ?' ಲೇಖನ ಓದಿದೆ ('ಸಂವಾದ', ಜುಲೈ, 2010). ಶೀರ್ಷಿಕೆಯಲ್ಲೇ ಅಂತರ್ಜಾತಿ ವಿವಾಹಗಳು ಬೇಡ, ಉಪಯೋಗವಿಲ್ಲ, ಅಪಾಯಕಾರಿ ಎಂಬೆಲ್ಲ ಧ್ವನಿಗಳಿದ್ದರೂ; ಅವರೇ ಹೇಳಿಕೊಂಡಂತೆ, ಇಂದಿನ ಸಂದರ್ಭದಲ್ಲಿ ಹಾಗೆ ಹೇಳುವುದು ಜನ ವಿರೋಧಿ ನೀತಿಯಾಗುತ್ತದೆ ಎಂಬ ಭೀತಿಯಿಂದ ಏನೇನೋ ಬೌದ್ಧಿಕ ಸರತ್ತುಗಳನ್ನು ಮಾಡಿ ಅಂತರ್ಜಾತಿ ವಿವಾಹಗಳ ವಿರುದ್ಧ ಪರೋಕ್ಷವಾದ ಮಂಡಿಸಿದ್ದಾರೆ. ಅದೂ ಒಂದು ಪೀಳಿಗೆಯ, ಒಂದು ಆಯ್ದ ನಿರ್ದಿಷ್ಟ ಮಾದರಿಯ ಅಂತರ್ಜಾತಿ ವಿವಾಹಗಳ ಮೇಲಿನ ತಮ್ಮ ಪ್ರವಚನ ನೀಡುತ್ತಾ! ಪ್ರವಚನ ಏಕೆಂದರೆ, ಲೇಖಕರೇ ಈ ಎಲ್ಲ ಅಂತರ್ಜಾತಿ ವಿವಾಹಿತರ ವಕ್ತಾರರಂತೆ ಅಭಿಪ್ರಾಯಗಳನ್ನೂ, ಚಿಂತನೆಯನ್ನೂ ಲೇಖನದ ತುಂಬಾ ಸಾರುತ್ತಾ ಹೋಗಿದ್ದಾರೆ.

ಬರಿಯ ಬುದ್ಧಿ ಹೇಗೆ ಭಾಷೆ ಕಳೆದುಕೊಂಡು ಪರಿಭಾಷೆಯಾಗಿ ಮಾರ್ಪಾಡಾದಾಗ ಎಷ್ಟು ವಿನಾಶಕಾರಿಯಾಗಬಲ್ಲುದು ಎಂಬುದಕ್ಕೆ ಈ ಲೇಖನ ಉದಾಹರಣೆಯಾಗಿದೆ. ಇಡೀ ಈ ಲೇಖನ, ಮನುಷ್ಯನಿಗೆ ಜಾತಿ ಚರ್ಮದಂತೆ ಅಂಟಿಕೊಂಡಿದ್ದು, ಅವನು ಯಾವ ಕಾರಣಕ್ಕೂ ಅದರಿಂದ ಹೊರಬರಲಾರ ಎಂಬ (ಮೂಢ)ನಂಬಿಕೆಯನ್ನು ಆಧರಿಸಿ ಒಂದು (ಹುಸಿ ವೈಜ್ಞಾನಿಕ)ಕಥೆ ಕಟ್ಟುವ ಪ್ರಯತ್ನ ಮಾಡಿದೆ.

## ಪತ್ರಾಗಾರ

ಇದು ಮನುಷ್ಯ ಚೇತನವೆಂಬುದನ್ನೇ ಅರ್ಥ ಮಾಡಿಕೊಳ್ಳಲಾಗದ ಜಾತಿ ಬಂಧಿತ ಬೌದ್ಧಿಕ ಕುಬ್ಜತನ ಮಾತ್ರ. ಮನುಷ್ಯ ಅರ್ಥ ಮಾತ್ರ ತಾನು ಏನಾಗಿರುತ್ತಾನೋ ಅದಾಗಿದ್ದರೆ, ಇನ್ನರ್ಥ ತಾನು ಏನಾಗಿದ್ದಾನೋ ಸದಾ ಅದರಾಚೆಗೆ ಜಿಗಿಯುತ್ತಿರುವವನಾಗಿರುತ್ತಾನಂತೆ. ಮನುಷ್ಯ ಚೈತನ್ಯದ ಈ ಚಲನಶೀಲತೆಯೇ–ಈ ಸೌಂದರ್ಯವೇ, ಈ ಸಾಹಸ ಪ್ರವೃತ್ತಿಯೇ, ಈ ರೋಚಕತೆಯೇ–ಈವರೆಗೆ ಇತಿಹಾಸವನ್ನೂ, ಸಂಸ್ಕೃತಿ–ನಾಗರೀಕತೆಗಳನ್ನೂ ಕಟ್ಟಿರುವುದು. ಆದರೆ ಲಕ್ಷ್ಮೀಪತಿಯವರ ಮನಸ್ಸಿನ ತುಂಬಾ ಜಾತಿಯೇ ತುಂಬಿದ್ದು, ಮನುಷ್ಯನ ಮನಸ್ಸಿನ ಈ ವಿರಾಟ್ ಜಿಗಿತಗಳ ವಿರಾಟ್ ದೃಶ್ಯವೇ ಕಾಣದೇ ಹೋಗಿದೆ! ಲಕ್ಷ್ಮೀಪತಿಯವರ ಈ ಹಿಂದಿನ ಹಲವು ಲೇಖನಗಳನ್ನು ಓದಿ ಮೆಚ್ಚಿರುವ ನನಗೆ ಇದು ಉದ್ದೇಶಪೂರ್ವಕ ಮತ್ತು ಜಾಣ ಕುರುಡುತನವಾಗಿ ಮಾತ್ರ ಕಾಣುತ್ತದೆ.

ಲಕ್ಷ್ಮೀಪತಿಯವರು ಪ್ರೇಮಿಸಿದ್ದಾರೋ ಇಲ್ಲವೋ – ಪ್ರೇಮಿಸಿ ಮದುವೆಯಾಗಿ ಮೋಸವೇನಾದರೂ ಹೋಗಿದ್ದಾರೋ ತಿಳಿಯದು! ಅವರು caste chemistryಯಲ್ಲಿ ಪರಿಣಿತಿ ಸಾಧಿಸಲು ಹೋಗಿ ಹೋಗಿ ಪ್ರೇಮದ chemistryಯನ್ನು ಅರಿಯಲಾಗದೇ ಹೋಗಿದ್ದಾರೆ. ಹಾಗಾಗಿಯೇ ಅವರು ಪ್ರೇಮವೆಂಬ chemistryಯನ್ನು physicsನಂತೆ ಅಭ್ಯಸಿಸಿ ಅಸಂಬದ್ಧ ತೀರ್ಮಾನಗಳಿಗೆ ಬಂದಿದ್ದಾರೆ. ಬಹುಶಃ ಅವರು ಮರುಳಾಗಿರುವ ಆಧುನಿಕೋತ್ತರ ಚಿಂತನೆ ಎಂದರೆ ಇದೇ ಇರಬೇಕು: ಅನ್ಯಾಯ ಅನ್ಯಾಯ ಎಂದು ನ್ಯಾಯವಾಗಿಯೇ ಅರಚಿದ ವಂಚಿತ ವರ್ಗಗಳು ಪಡೆಯಬೇಕಾದ್ದನ್ನೆಲ್ಲ ಪಡೆದ ನಂತರದಲ್ಲಿ, ಯಾವುದೇ ಎಗ್ಗಿಲ್ಲದೆ ಪ್ರತಿಷ್ಠಿತ ವರ್ಗದೊಳಕ್ಕೆ ಲೀನವಾಗಲು ಬಳಸುವ ಬೌದ್ಧಿಕ (ಕು)ತಂತ್ರಗಳು! ಇನ್ನು ಮುಂದೆ ಇಂತಹ ಚಿಂತನೆಯಿಂದ, ಜಾತಿ ಪದ್ಧತಿ ನಿಜವಾಗಿ ಕೆಟ್ಟದ್ದೇ? ಮರ್ಯಾದಾ ಹತ್ಯೆಗಳು ಅಪರಾಧಗಳೇ? ಕರ್ನಾಟಕದಲ್ಲಿ 'ಖಾಪ್' ಪಂಚಾಯತ್‌ಗಳು ಏಕಿಲ್ಲ? ಕೋಮುವಾದ ಸಮಾಜ ವಿರೋಧಿ ಸಿದ್ಧಾಂತವೇ? ಕನ್ನಡವೇಕೆ ಪ್ರಗತಿ ವಿರೋಧಿ? ಪರಿಸರವಾದ ಮೇಲ್ಜಾತಿಗಳ ಹುನ್ನಾರವೇ? ಬಹುರಾಷ್ಟ್ರೀಯ ಕಂಪನಿಗಳು ಹಿಂದುಳಿದ ವರ್ಗಗಳಿಗೆ ಎಷ್ಟು ಅಗತ್ಯ? ಇತ್ಯಾದಿ ಇತ್ಯಾದಿ ಶೀರ್ಷಿಕೆಗಳ ಸಂಶೋಧಾನಾತ್ಮಕ ಪ್ರಬಂಧಗಳು ಹೊರಬಹುದು!

'ಸಂವಾದ' ಇಂತಹ ಲೇಖನಗಳಿಗೆ ಅವಕಾಶ ಮಾಡಿಕೊಡುತ್ತಿರುವುದು ನಿಜವಾಗಿಯೂ ಆಶ್ಚರ್ಯಕರ! ಮುಕ್ತ ಚಿಂತನೆ ಎಂದರೆ ಅಪದ್ಧಕ್ಕೆ ಅಪ್ಪಣೆ ಎಂದಾಗ ಬಾರದಲ್ಲವೆ?

ಡಿ.ಎಸ್. ನಾಗಭೂಷಣ
ಶಿವಮೊಗ್ಗ

# ಅಕಾಲಿಕವಾಗಿ ಬಾಡುವ ಹೂಗಳು!

ಪ್ರಿಯ ಸಂಪಾದಕರಿಗೆ,

ಜುಲೈ ತಿಂಗಳ ಜ್ಯೋತಿಯವರ ಹೊಸ ಅಂಕಣಕ್ಕೆ ಪುಟ್ಟ ಪ್ರತಿಕ್ರಿಯೆ:

ಮೊದಲಿಗೆ ಪದ್ಮಪ್ರಿಯ ಎಂಬ ಹೆಸರಿನ ಬಗ್ಗೆಯ ಇನ್ನೊಂದು ವಿಶೇಷ ಆಯಾಮವನ್ನು ಅವರು ಮರೆತಂತೆ ಕಾಣುತ್ತೆ. 'ಪದ್ಮ' ಅಂದರೆ ಕಮಲ. ವಿಪರ್ಯಾಸವೆಂದರೆ ಅದು ಅವಳನ್ನು ಸಾವಿನ ದವಡೆಗೆ ನೂಕಿದ ಮಹಾನುಬಾವರುಗಳ ಪಕ್ಷದ ಗುರುತು!(ಚಿಹ್ನೆ). ಕೆಸರಲ್ಲಿ ಹುಟ್ಟಿಯೂ ಕೆಸರನ್ನು ಅಂಟಿಸಿಕೊಳ್ಳದ ಕಮಲದಂತೆ ಕಮಲವನ್ನು ಕೆಸರೊಳಗೆ ಹೂತು ಹಾಕಿದಂತ ಪಕ್ಷವೊಂದರ ನಾಯಕರುಗಳು ಹೆಣ್ಣನ್ನು ಹೇಗೆ ತಾನೆ ಅವಳಿಚ್ಛೆಯ ಹಾಗೆ ಬದುಕಲು ಬಿಡುತ್ತಾರೆ? ಹೇಳಿ.

ತಮ್ಮ ಹೆಸರಿನ ಮುಂದೆ ತಂದೆ ಅಥವಾ ಗಂಡನ ಹೆಸರಿನ ಐಡೆಂಟಿಯನ್ನು ಬಳಸಿಕೊಳ್ಳದೇ ಬದುಕಬಲ್ಲ ವಾತಾವರಣ ನಿರ್ಮಾಣವಾಗುವ ತನಕ ಪದ್ಮಪ್ರಿಯಾಳಂತಹ ಹೂಗಳು ಅಕಾಲಿಕವಾಗಿ ಬಾಡುತ್ತಲೇ ಇರುತ್ತವೆ.

ಕು.ಸ. ಮಧುಸೂದನ
ರಂಗೇನಹಳ್ಳಿ

# ಹುಡುಕಿಕೊಳ್ಳುವುದು ಎಷ್ಟು ಸುಲಭ!

ಮಾನ್ಯ ಸಂಪಾದಕರಿಗೆ,

ಕಳೆದ ತಿಂಗಳಿನ 'ಸಂವಾದ'ದಲ್ಲಿ ಅಪೂರ್ವ ಡಿ.ಸಿಲ್ವಾರ ಲೇಖನ ಓದಿದೆ. ಬುದ್ಧನನ್ನು ಅದೆಷ್ಟು ಸಲ ನಾವೆಲ್ಲ ಬೇಟಿ ಮಾಡಿಲ್ಲ....... ಆದರೆ ಪ್ರತಿಸಲ ಭೇಟಿ ಮಾಡಿದಾಗಲೂ ಆ ಕ್ಷಣದ ನಮ್ಮ ತುರ್ತಿಗೆ ಈ ಪುರಾತನ ಮನುಷ್ಯ ಅದೆಷ್ಟು ಸಹಜವಾಗಿ ನಮಗೆ ಒದಗಿಬಿಡುತ್ತಾನಲ್ಲ

ಎಂದು ಆಶ್ಚರ್ಯವಾಯಿತು.

ನಾವೆಲ್ಲಾ ರಾಜನಿಕೋತ್ತರ ಯುಗದಲ್ಲಿ ಬದುಕುತ್ತಿರುವವರು. ಆದ್ದರಿಂದಲೇ ಅನೇಕ ರೀತಿಯಲ್ಲಿ ಸೀಳಿಕೋಂಡಿರುವವರು. ಹಾಗೆಯೇ ನಮ್ಮೊಳಗಿನ ಅನೇಕ ಸೀಳುಗಳಲ್ಲಿ ಕಳೆದುಹೋದ 'ನಮ್ಮನ್ನು' ಹುಡುಕುತ್ತಿರುವವರು. ಅಪೂರ್ವರವರ ಲೇಖನ ಓದಿದ ಮೇಲೆ, ನಮ್ಮನ್ನು ಹುಡುಕಿಕೊಳ್ಳುವುದು ಎಷ್ಟು ಸುಲಭ ಎನಿಸಿತು. ಹೌದಲ್ಲವೇ, ಜ್ಞಾನದ ವಸಾಹತಿಕರಣದಿಂದ ಮೊದಲು ನಾವು ಬಿಡುಗಡೆ ಪಡೆಯಬೇಕು: ಇವಾನ್ ಇಲಿಯಿಚ್ ತನ್ನ ಡೀಸ್ಕೂಲಿಂಗ್‌ನಲ್ಲಿ ಇದನ್ನು ಕುರಿತು ಹೇಳುತ್ತಾನೆ. ಆದರೆ ಪಾಪಿಸೇನನ ಉದಾಹರಣೆ ಈ ಸಂಗತಿಯನ್ನು ಸುಲಿದ ಬಾಳೆ ಹಣ್ಣಿನಷ್ಟು ಸಲೀಸಾಗಿಸಿಬಿಟ್ಟಿತು. ಜೊತೆಗೆ ಕೇಂದ್ರ ಮತ್ತು ಪರಿಧಿಯ ಬಗೆಗಿನ ನಮ್ಮ ಗ್ರಹಿಕೆಯನ್ನೆಲ್ಲ ಕೇವಲ ಪಠ್ಯಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸೀಮಿತಗೊಳಿಸಿಬಿಟ್ಟಿರುತ್ತೇವೆ. ಆದರೆ ಅದನ್ನು ನಮ್ಮ ಬದುಕಿಗೇ ಅನ್ವಯಿಸಿ ಕೊಂಡಾಗ ಒಂದು ಆಶ್ಚರ್ಯಕರ ಬದಲಾವಣೆ ಆಗಿಬಿಡುತ್ತದಲ್ಲಾ......! ಪ್ರಜ್ಞಾಪೂರ್ವಕ ಎಚ್ಚರ ವಿಸ್ತರಿಸಲಾರಂಭಿಸಿದಾಗ ಈ ರೀತಿಯ ಪಲ್ಲಟಗಳೂ ಕೂಡ ಅತ್ಯಂತ ಸಹಜ ಎನಿಸುವಷ್ಟು ಸರಳವಾಗಿ ಆಗತೊಡಗುತ್ತವೆ. ಅದಕ್ಕಾಗಿಯೇ ಬುದ್ಧ 'ಆಗು'ವ ಪ್ರಕ್ರಿಯೆಗೆ ಹೆಚ್ಚು ಒತ್ತು ಕೊಡುತ್ತಾನೆ.




ಅಪೂರ್ವ ಅವರ ಲೇಖನದ ಈ ಬುದ್ಧ ನನಗೆ ಭಾರ ಎನಿಸುತ್ತಿಲ್ಲ, ದೂರ ಎನಿಸುತ್ತಿಲ್ಲ. ನನ್ನ ಮನಸ್ಸಿನ ಗೋಜಲು, ನನ್ನ ದೇಹದ ಮಿತಿ ಮತ್ತು ಈ ಹೊತ್ತಿನ ತಾಕಲಾಟಗಳಿಗೆ ಒದಗುವ ಬುದ್ಧನನ್ನು ಕೊಟ್ಟ ಲೇಖಕರಿಗೆ ಧನ್ಯವಾದಗಳು.

ಬಿ.ಯು. ಸುಮಾ
ಬೆಂಗಳೂರು

## ಹೊಸ ಪುಸ್ತಕ

**ಕ್ರಿಯೆ ಪ್ರತಿಕ್ರಿಯೆ**
ಲೇ: ಜಿ.ಕೆ. ಗೋವಿಂದರಾವ್
ಬೆಲೆ: ರೂ ೧೮೦/-

ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ರಂಗಭೂಮಿ–ಕಲೆ, ವಿಮರ್ಶೆ, ಪತ್ರ ಪ್ರತಿಕ್ರಿಯೆ–ಹೀಗೆ ೬ ವಿಭಾಗಗಳನ್ನು ಒಳಗೊಂಡ ೩೯ ಲೇಖನಗಳು ಈ ಕೃತಿಯಲ್ಲಿವೆ. ಅತ್ಯಂತ ಸಣ್ಣ ಘಟನೆಯನ್ನೂ ಸೂಕ್ಷ್ಮವಾಗಿ ಗಮನಿಸುವ ಲೇಖಕರು ನಮ್ಮ ಪ್ರಜಾಪ್ರಭುತ್ವದ ವೈಫಲ್ಯ – ವೈಕಲ್ಯಗಳನ್ನು ಕುರಿತು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಹಿಂದುತ್ವದ ತತ್ವ, ಸಂಘಟನೆ – ಕಾರ್ಯಾಚರಣೆಯನ್ನು ವಿಶ್ಲೇಷಣೆಗೆ ಒಳಪಡಿಸುವಲ್ಲಿ ಅವರ ಸಂವೇದನಾಶೀಲ ವ್ಯಕ್ತಿತ್ವ ಅನಾವರಣಗೊಂಡಿದೆ. ಆಧುನಿಕ ಸವಾಲುಗಳ ತಳಮಳ – ಈ ಬರಹಗಳ ಕಾಲಘಟ್ಟ ಅತ್ಯಂತ ಪ್ರಕ್ಷುಬ್ಧ ಕಾಲಾವಧಿಯೂ ಆಗಿರುವುದರಿಂದ ಈ ಕೃತಿ ಹೆಚ್ಚು ಪ್ರಸ್ತುತವೆನಿಸುತ್ತದೆ.

ಪ್ರಕಾಶಕರು: ಅನ್ನಪೂರ್ಣ ಪ್ರಕಾಶನ, ಸಿರಿಗೇರಿ–೫೮೩೧೨೦




**ಹಿಂದುತ್ವ ಮತ್ತು ದಲಿತರು**
ಸಂ : ಆನಂದ್ ತೇಲ್ತುಂಬ್ಡೆ
ಅನು : ಪ್ರೊ.ಬಿ.ಗಂಗಾಧರ ಮೂರ್ತಿ ಹಾಗೂ ಇತರರು.
ಬೆಲೆ : ೧೨೦/-

ಹಿಂದುತ್ವ ಶಕ್ತಿಗಳು ದಲಿತರನ್ನು ತಮ್ಮತ್ತ ಸೆಳೆದುಕೊಳ್ಳುತ್ತಿರುವ ಷಡ್ಯಂತ್ರದ ಬಗ್ಗೆ ತೀಕ್ಷ್ಣ ಪರಾಮರ್ಶೆಗೆ ಒಳಪಡಿಸುವ ಈ ಕೃತಿ 'ಹಿಂದುತ್ವ ಅಂಡ್ ದಲಿತ್ಸ್: ಪರ್ಸ್ಪೆಕ್ಟೀವ್ಸ್ ಫಾರ್ ಅಂಡರ್‌ಸ್ಟಾಂಡಿಗ್ ಕಮ್ಯುನಲ್ ಪ್ರಾಕ್ಸೀಸ್' ಎಂಬ ಆಂಗ್ಲ ಸಂಪಾದಿತ ಕೃತಿಯ ಕನ್ನಡ ರೂಪ. ಕ್ರಿಯಾಶೀಲ ಚಳವಳಿಗಾರರು ಮತ್ತು ಅನೇಕ ಅನುಭವಜನ್ಯ ಲೇಖಕರು ಬರೆದ ಈ ಲೇಖನಗಳು ದಲಿತರ ಆಶೋತ್ತರಗಳೇ ಬೇರೆ–ಹಿಂದುತ್ವದ ಆಶೋತ್ತರಗಳೇ ಬೇರೆ ಎಂದು ಗಟ್ಟಿಯಾಗಿ ಧ್ವನಿಸಿ, ಪರ್ಯಾಯ ಕ್ರಾಂತಿಕಾರಿ ರಾಜಕಾರಣದ ಅಗತ್ಯತೆ ಬಗ್ಗೆ ಚಿಂತನೆಗೆ ಹಚ್ಚುತ್ತವೆ.

ಪ್ರಕಾಶಕರು: ಚಿಂತನ ಪುಸ್ತಕ ಬೆಂಗಳೂರು–೫೬೦೦೪೧




**ಪ್ರೀತಿ ಮತ್ತು ಪ್ರೀತಿ ಮಾತ್ರ**
ಲೇ: ಜ್ಯೋತಿ ಗುರುಪ್ರಸಾದ್
ಬೆಲೆ: ರೂ೧೨೦/-

ಅನೇಕ ಜನಪ್ರಿಯ ಪತ್ರಿಕೆಗಳ ಅಂಕಣಗಳಿಗೆ ಬರೆದ ಲೇಖನಗಳ ಸಂಕಲನ ಈ ಕೃತಿ. ಕನ್ನಡದ ಹೊಸ ತಲೆಮಾರಿನ ಲೇಖಕರಲ್ಲಿ ಮುಂಚೂಣಿಯಲ್ಲಿರುವ ಇವರು ಗಂಡು ಹೆಣ್ಣಿನ ಸಂಬಂಧ ಕುರಿತಾದ ಬರಹಗಳನ್ನು ಬರೆಯುವಲ್ಲಿ ಎತ್ತಿದ ಕೈ. ದೈನಂದಿನ ವಿದ್ಯಮಾನಗಳ ಬಗ್ಗೆ ಭಿನ್ನವಾಗಿ ಆಲೋಚಿಸುವ ಲೇಖಕಿ ತಮಗೆ ಕಾಡುವ ಸಂಗತಿಗಳನ್ನು ಸರಳತೆ, ಭಾವನಾತ್ಮಕತೆ, ಮುಕ್ತತೆಯಿಂದ ಸಾದರಪಡಿಸಿದ್ದಾರೆ. ವರ್ತಮಾನದ ಪ್ರಜ್ಞೆಯೂ ಇಣುಕಿದ್ದು ಅನೇಕ ಉಪಮೆಗಳನ್ನು ಬಳಸುವ ಮೂಲಕ ತಮ್ಮ ಲೇಖನಗಳನ್ನು ಆಸಕ್ತಿಯಿಂದ ಓದುವಂತೆ ಮಾಡಿದ್ದಾರೆ.

ಪ್ರಕಾಶಕರು: ವಿಸ್ಮಯ ಪ್ರಕಾಶನ ಬೆಂಗಳೂರು–೫೬೦೦೧೮

**ಗಾಳಿ ಗಮಲು**
ಲೇ: ಮಂಜುನಾಥ ಅದ್ದೆ
ಬೆಲೆ: ರೂ ೨೫೦/-

ಅಗ್ನಿ ವಾರ ಪತ್ರಿಕೆಯ 'ಗಾಳಿಗಮಲು' ಅಂಕಣಕ್ಕೆ ಬರೆದ ೭೫ ಲೇಖನಗಳ ಗುಚ್ಛ ಅದೇ ಹೆಸರಿನಲ್ಲಿ ಪುಸ್ತಕ ರೂಪ ಪಡೆದಿದೆ. ಶೀರ್ಷಿಕೆಯಲ್ಲೇ ಹಳ್ಳಿ ಸೊಗಡಿದೆ. ಲೇಖನಗಳಲ್ಲೂ. ವಿಚಾರಗಳಲ್ಲದೆ; ಅಪರೂಪದ ವ್ಯಕ್ತಿಗಳ ವ್ಯಕ್ತಿತ್ವವನ್ನು ಸಮರ್ಥವಾಗಿ ಕಟ್ಟಿಕೊಡಲಾಗಿದೆ. ಸ್ಥಳೀಯ ಶಕ್ತಿಗಳು ಸೃಷ್ಟಿಸುತ್ತಿರುವ ಅವಘಡಗಳನ್ನು, ಆದೇ ವೇಳೆಯಲ್ಲಿ ಜಾಗತೀಕರಣ ತಂದೊಡ್ಡುತ್ತಿರುವ ಸವಾಲುಗಳನ್ನು ವಿಶ್ಲೇಷಿಸಿರುವ ರೀತಿ ಹಾಗೂ ವಿಷಯ ವೈವಿಧ್ಯತೆಯಿಂದ ಗಮನ ಸೆಳೆಯುತ್ತದೆ.

ಪ್ರಕಾಶಕರು: ಕಿಕ್ಕೇರಿ ಪಬ್ಲಿಕೇಶನ್ಸ್, ಬೆಂಗಳೂರು–೫೬೦೧೧೦




**ಸಮಾಜವಾದ–ನಾ ಕಂಡಂತೆ...**
ಲೇ: ಪ್ರೋ: ಹನುಮಂತ
ಬೆಲೆ:ರೂ ೧೦೦/-

ಹಲವು ಆಯಾಮಗಳನ್ನು ಸಮಾಜವಾದದ ಬೆಳಕಿಂಡಿಯಿಂದ ವಿಶ್ಲೇಷಣೆಗೆ ಒಳಪಡಿಸಿರುವ ಲೇಖಕರು; ಕರ್ನಾಟಕದಲ್ಲಿ ನಡೆದ ಹಲವು ಹೋರಾಟಗಳು, ಕೆಲ ಸಮಾಜ ವಾದಿಗಳ ಬದುಕು ಹಾಗೂ ಅವರ ಸೈದ್ಧಾಂತಿಕ ಕೊಡುಗೆಗಳ ಬಗ್ಗೆ ಸಮರ್ಥವಾಗಿ ದಾಖಲಿಸಿದ್ದಾರೆ. ಸಮಾಜವಾದಿ ರಾಷ್ಟ್ರಗಳು ಎಂದು ಬಿಂಬಿತವಾದ ಪೋಲೆಂಡ್ ಹಾಗೂ ಸ್ವೀಡನ್ನಿನ ಮೂಲಭೂತ ವ್ಯತ್ಯಾಸವನ್ನೂ ತಿಳಿಯಬಹುದು.

ಪ್ರಕಾಶಕರು: ಸಮಾಜವಾದಿ ಅಧ್ಯಯನ ಕೇಂದ್ರ, ಬೆಂಗಳೂರು–೫೬೦೦೨೬

**ಗಿಲೋಟಿನ್**
ಲೇ: ಡಾ॥ ಶಿವಾನಂದ ಕುಬಸದ
ಬೆಲೆ: ರೂ ೧೦೦/-

ಬೇರೆ ಬೇರೆ ದೇಶ, ಸಂಸ್ಕೃತಿಗಳ ಬಗ್ಗೆ ಪ್ರತಿಯೊಬ್ಬರಿಗೂ ಕುತೂಹಲವಿದ್ದೇ ಇರುತ್ತದೆ. ಲೇಖಕರು ಯೂರೋಪ್ ಪ್ರವಾಸದ ತಮ್ಮ ಅನುಭವವನ್ನು ಮಾನವೀಯ–ಮನೋಜ್ಞವಾಗಿ ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಪ್ರವಾಸ ಕುರಿತ ಬರಹ ಅಲ್ಲಿನ 'ಕಥನ'ವೂ ಆಗಿದೆ. ಯುರೋಪಿನ ಇತಿಹಾಸದೊಡನೆ; ಮಾನವನ ಅಧಿಕಾರಲಾಲಸೆ ಹಾಗೂ ಅದರಿಂದ ಉಂಟಾಗುವ ಕ್ರೌರ್ಯದೊಂದಿಗೆ ತಳುಕು ಹಾಕಿಕೊಂಡಿರುವ 'ಗಿಲೋಟಿನ್' ಎಂಬ ಮನುಷ್ಯರನ್ನು ತುಂಡರಿಸುವ ಯಂತ್ರದ ಹೆಸರನ್ನಿಟ್ಟಿರುವುದು ಔಚಿತ್ಯಪೂರ್ಣವಾಗಿದೆ.

ಪ್ರಕಾಶಕರು: ಸಂಗಮ ಪ್ರಕಾಶನ ಹುನಗುಂದ: ೫೮೭೧೧೮

# ಮೌನ ಮಾತಾಡಿದ ಹೊತ್ತು




○ ಕೆ. ಷರೀಫಾ

ಮೌನ!
ದೂರ ಬೆಟ್ಟಸಾಲು ಕಣಿವೆಯಿಂದ
ಶಾಂತ ಸರೋವರದ ತನಕ.
ಅಂಕು ಡೊಂಕಾದ ಕಾಲು ದಾರಿಯಲಿ
ಉದ್ದಕ್ಕೂ ಹುಲ್ಲು ಹಾಸಿನ ಮೇಲೆ
ಧ್ಯಾನಾಸಕ್ತ ಮೌನ ಮಲಗಿತ್ತು

ಜುಳು ಜುಳು ಹರಿವ ನದಿ
ಗಾಳಿಯ ಸರಪರ ಶಬ್ದ
ಹಕ್ಕಿಗಳ ಚಿಲಿಪಿಲಿ ಗಾನ
ಗಾಳಿ ತೆಕ್ಕೆಯಲಿ ಕುಣಿವ
ಚಿಟ್ಟೆಗಳ ಬಳಗ
ನನ್ನ ಉಸಿರಾಟದ ಶಬ್ದ
ಎದೆ ಮಿಡಿತದ ಸದ್ದು
ಕೇಳುವ ಮೌನದ ಹೊತ್ತು

ನಾನು ಮಾತಾಡುತ್ತಿದ್ದೆ
ಶಬ್ದವಿಲ್ಲ–ತುಟಿ ಬಿಚ್ಚಲಿಲ್ಲ
ಕಣ್ಣಿನ ಭಾಷೆಯೂ ಅದಲ್ಲ
ಕೇವಲ ಮೌನದ ಮಾತು
ನೀ ನನ್ನ ಸನಿಹವೇ ಇದ್ದೆ
ಆದರೆಲ್ಲೊ ಕಳೆದು ಹೋಗಿದ್ದೆ
ಹೃದಯದ ಆ ಮಾತು
ನಿನಗೇಕೆ ಅರಿವಾಗಲಿಲ್ಲ?
ನಿನ್ನ ಗ್ರಹಿಕೆಗೂ ನಿಲುಕದ
ಮೌನ ಮಾತಿನ ಬೀಜ
ಸುಟ್ಟು ಕರಕಲಾಯ್ತು

ಮೌನದ ಆ ಮಾತು
ಶಬ್ದ ರೂಪವ ಪಡೆದು
ಗಂಟಲು ಬಿಟ್ಟು ಹೊರಗೆ
ಬರಲೇ ಇಲ್ಲ–ಮಾತು
ನೀಳ ಉಸುರನು ಮಿದ್ದು
ಜೀವ ಮಿಡಿತದ ಸದ್ದು
ಕೇಳಿ ಬರುತ್ತಿದ್ದ ನೀರವ ಕ್ಷಣಗಳಲ್ಲಿ
ಅಂತರಂಗದ ಮಾತರಿಯಲು
ನೀನಲ್ಲಿ ಇರಲೇ ಇಲ್ಲ ಗೆಳೆಯಾ
ಎಲ್ಲೋ ಕಳೆದು ಹೋಗಿದ್ದೆ
ಮೌನ ಮಾತಾಡಿದ ಹೊತ್ತಲ್ಲಿ
ನೀ ಇದ್ದೂ ಇಲ್ಲವಾಗಿದ್ದೆ.

ಸಂಪಾದಕರೊಡನೆ ಸಂವಾದ

# ಅರ್ಥ ಪಲ್ಲಟಗಳು ಶಕ್ತಿ ಕೇಂದ್ರಗಳ ಸೋಪಾನಗಳಾಗುವ ಬೆಡಗ ನೋಡಾ!

**ಸರಸ್ವತಿ. ಕೆ.ಬಿ.**

> **ವ್ಯಕ್ತಿಯೊಬ್ಬ ದೇವರನ್ನು ತೋರಿಸುತ್ತೇನೆಂದು ಪ್ರತಿ ಯೊಬ್ಬನಿಂದ 100ರೂಗಳನ್ನು ಸಂಗ್ರಹಿಸಿರುತ್ತಾನೆ. ನಿಗದಿತ ದಿನದಂದು ಬೆಟ್ಟವೊಂದರ ಬಳಿ ಜನರನ್ನು ಕರೆದೊಯ್ದು ಸ್ವಲ್ಪ ಹೊತ್ತಿನ ಬಳಿಕ ದೇವರು ಕಾಣಿಸಿದನೆಂದು ಭಕ್ತಿಪರವಶನಾಗಿ ಕೂಗುತ್ತಾನೆ. ಯಾರಿಗೂ ದೇವರು ಕಾಣುವುದಿಲ್ಲ. ಹಣ ನೀಡಿದವರು ಸಂಶಯದಿಂದ ದೇವರೆಲ್ಲಿ ಎಂದು ಕೇಳುತ್ತಾರೆ. ಯಾರ ಹೆಂಡತಿ ಪತಿವ್ರತೆಯೋ ಅವರಿಗೆ ಮಾತ್ರ ದೇವರು ಕಾಣಿಸುತ್ತಾನೆಂದು ಆ ಮೋಸಗಾರ ಕೂಗುತ್ತಾನೆ. ಜನ ಹೋ ದೇವರು ಕಾಣಿಸಿದ ಎಂದು ಕೂಗುತ್ತಾ ಅಡ್ಡಾಗುತ್ತಾರೆ.**

ಮಾನ್ಯ ಸಂಪಾದಕರೇ

ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸ
ಬಾರದು
ಓಗರವನರ್ಪಿಸಬಹುದಲ್ಲದೆ ಪ್ರಸಾದವನರ್ಪಿಸ
ಬಾರದು
ಗುಹೇಶ್ವರ ನಿಮ್ಮ ಶರಣರು ಹಿಂದೆ ನೋಡಿ
ಮುಂದನರ್ಪಿಸುವರು ಕಾಣಾ.

"The so-called goodness of modamrn man is not virtuous, that his so-called religion is not religious, and that his so called traths are not truth ful," -Kqufmann.

ಈ ಸನ್ನಿವೇಶಗಳನ್ನು ಗಮನಿಸೋಣ.

"ಸ್ತ್ರೀಯರ ಸ್ಥೂಲಕಾಯಕ್ಕೆ ಸಿಗದ ಪ್ರೀತಿ ಕಾರಣ"?

ಪ್ರಜಾವಾಣಿ (ಭೂಮಿಕ)ಯ ಲೇಖನ ದಿನಾಂಕ 20-3-2010 ರ ಸಂಚಿಕೆ.

"ಸ್ನೇಹಿತನ ಪತ್ನಿಯ ಮೇಲೆ ಅತ್ಯಾಚಾರ, ಶಾಸಕ ರಾಜೀನಾಮೆ."

ಟಿ.ವಿ ವರದಿ.

ವ್ಯಕ್ತಿಯೊಬ್ಬ ದೇವರನ್ನು ತೋರಿಸುತ್ತೇನೆಂದು ಪ್ರತಿಯೊಬ್ಬನಿಂದ 100ರೂಗಳನ್ನು ಸಂಗ್ರಹಿಸಿರುತ್ತಾನೆ. ನಿಗದಿತ ದಿನದಂದು ಬೆಟ್ಟವೊಂದರ ಬಳಿ ಜನರನ್ನು ಕರೆದೊಯ್ದು ಸ್ವಲ್ಪ ಹೊತ್ತಿನ ಬಳಿಕ ದೇವರು ಕಾಣಿಸಿದನೆಂದು ಭಕ್ತಿಪರವಶನಾಗಿ ಕೂಗುತ್ತಾನೆ. ಯಾರಿಗೂ ದೇವರು ಕಾಣುವುದಿಲ್ಲ. ಹಣ ನೀಡಿದವರು ಸಂಶಯದಿಂದ ದೇವರೆಲ್ಲಿ ಎಂದು ಕೇಳುತ್ತಾರೆ. ಯಾರ ಹೆಂಡತಿ ಪತಿವ್ರತೆಯೋ ಅವರಿಗೆ ಮಾತ್ರ ದೇವರು ಕಾಣಿಸುತ್ತಾನೆಂದು ಆ ಮೋಸಗಾರ ಕೂಗುತ್ತಾನೆ. ಜನ ಹೋ ದೇವರು ಕಾಣಿಸಿದ ಎಂದು ಕೂಗುತ್ತಾ ಅಡ್ಡಾಗುತ್ತಾರೆ.

-ಚಲನಚಿತ್ರವೊಂದರ ಹಾಸ್ಯ ಕ್ಲಿಪಿಂಗ್.

ಇಂತಹ ಪತ್ರಿಕಾ ಲೇಖನವೊಂದರ ವರದಿ, ಜನರಿಂದ ಆಯ್ಕೆಗೊಂಡ ಪ್ರತಿನಿಧಿಯೊಬ್ಬನ ಲೈಂಗಿಕ ಹಳವಾಂಡ, ಸಿನಿಮಾದ ಒಂದು ಹಾಸ್ಯ ಸನ್ನಿವೇಶ ಕೆಲವೊಮ್ಮೆ ಹೌದಾ! ಎಂಬ ಉದ್ಗಾರದೊಂದಿಗೆ, ಕೆಲವೊಮ್ಮೆ ಜಿಗುಪ್ಸೆ, ಅಸಹ್ಯ ಅಥವಾ ಮುಸಿ ಮುಸಿ ನಗುವಿನೊಂದಿಗೆ ಮುಗಿಯುವಂಥವು.

ಈ ಮೂರೂ ಸನ್ನಿವೇಶಗಳು ಕುತೂಹಲ ಮೂಡಿಸುವುದು ಯಾಕೆಂದರೆ ಇವು ನಮ್ಮ ಗ್ರಹಿಕೆಯಲ್ಲಿ ಸ್ಥಾಪಿತಗೊಂಡಿರುವ ಕೆಲವೊಂದು ಅರ್ಥಗಳನ್ನು ಪಲ್ಲಟಗೊಳಿಸುವ ರೀತಿ ಮತ್ತು ಯಜಮಾನಿಕೆಯ ಶಕ್ತಿಗಳನ್ನು ಛಿದ್ರಗೊಳಿಸುವ ಪರಿ.

ಮಾನಸಿಕವಾಗಿ ಹೆಣ್ಣು ಗಂಡು ಒಬ್ಬರನ್ನೊಬ್ಬರು ಅವಲಂಬಿಸುವುದು ಸಹಜ ಮತ್ತು ವಾಸ್ತವ. ಆದರೆ ಹೆಣ್ಣಿನ ಸ್ಥೂಲತೆ ಅಥವಾ ಅವಳ ಅಂಗಸೌಷ್ಠವ ಅವಲಂಬಿಸಿರುವುದು ಆಕೆ ಸೇವಿಸುವ ಆಹಾರ ಮತ್ತು ಜೀವನ ಶೈಲಿಯನ್ನು.

ಪುರುಷ ಅಭಿಮತವು ಎಲ್ಲರ ಮತವೆಂಬ ಭಾವನೆ ಹೆಚ್ಚಾದಂತೆಲ್ಲಾ ಸಹಜವಾಗಿಯೇ ಎಲ್ಲಾ ಜ್ಞಾನ ಕೇಂದ್ರಗಳಲ್ಲಿ ಅವನ ಅಧಿಪತ್ಯ/ ಅಧ್ಯಯನ ಹೆಚ್ಚುತ್ತದೆ. ವಿಜ್ಞಾನಿಗಳು ಪುರುಷ ದೇಹವನ್ನು ದೃಷ್ಠಿಯಲ್ಲಿಟ್ಟುಕೊಂಡು ವೈದ್ಯಕೀಯ ಅನ್ವೇಷಣೆಗಳನ್ನು ಮಂಡಿಸುತ್ತಾರೆ ಮತ್ತು ರೈತ ಕೂಡ ಪುರುಷನೇ ಆಗಿರುವುದರಿಂದ ಗಂಡಿನ ದೇಹಕ್ಕೆ ಹೊಂದಿಕೊಳ್ಳುವ ಆಹಾರ ಬೆಳೆಗಳನ್ನು ಬೆಳೆಯುತ್ತಾನೆ.! ಮತ್ತೆ ಹೆಣ್ಣು (ಅಗೋಚರ ಪುರುಷ) ಪುರುಷನ ಅದೀನದಲ್ಲಿರುವುದರಿಂದ ಅವನ ರುಚಿಗೆ ತಕ್ಕಂತ ಆಹಾರವನ್ನು ತನ್ನ ಮೆನುವಿನಲ್ಲಿ ಅಳವಡಿಸಿಕೊಳ್ಳುತ್ತಾಳೆ.

ಹೆಣ್ಣಿನ ದೇಹ ರಚನೆಗೆ ಅಗತ್ಯವಾದದ್ದು starch ಮತ್ತು Carbohydrate ಹೆಚ್ಚಿರುವ ಅಕ್ಕಿ ಮತ್ತು ಗೋದಿಯಿಂದ ಮಾಡಿದ ಅಡುಗೆಗಳಲ್ಲ: ಪ್ರೋಟಿನ್ ಮತ್ತು ವಿಟಮಿನ್ ಹೆಚ್ಚಿರುವ ಸೊಪು ತರಕಾರಿಗಳು, ಮಾಂಸ, ಕಿರುಧಾನ್ಯಗಳು, ಹಾಲು ಮತ್ತು ಹಣ್ಣುಗಳು, ಇವುಗಳ ಬಳಕೆ ಹೆಚ್ಚಾದರೆ ಸಹಜವಾಗಿ ಅವಳ ಆರೋಗ್ಯ ಚೆನ್ನಾಗಿರುತ್ತದೆ.

ಗಂಡನ 'ಸಿಗದ ಪ್ರೀತಿ' ಯೇನು ಅವಳ ಆರೋಗ್ಯ ಕಾಪಾಡುವ ವಿಟಮಿನ್ ಅಲ್ಲ!

ಇಲ್ಲಿ ಗಮನಿಸಿ 'ಹೆಣ್ಣು', 'ದೇಹ', 'ಆಹಾರ ಕ್ರಮ' ಪದಗಳೆಲ್ಲವೂ ಪಿತೃ ಪ್ರಧಾನತೆಯನ್ನು ಹೆಚ್ಚಿಸಲು ಬೇಕಾದ ಅರ್ಥವಿಸ್ತರಣೆಗೆ ಮಾತ್ರವೇ ಬಳಿಕೆಯಾಗುತ್ತಿದ್ದು ಹೆಣ್ಣಿನ ಬಗ್ಗೆ ಏನೂ ಹೇಳುತ್ತಲೇ ಇಲ್ಲ!

ನಮ್ಮನ್ನು ಇಂದು ಆಳುತ್ತಿರುವುದು ಯಾವುದೋ ಒಂದು 'ರಾಜ', 'ಪ್ರಜೆ' ಎಂಬಂತಹ ಶಕ್ತಿ ಕೇಂದ್ರವಲ್ಲ: ಬದಲಾಗಿ ಪದಗಳು ಕಟ್ಟುತ್ತಿರುವ ಅರ್ಥಗಳು.

ಶಾಸಕ ಎಂದರೆ ಪ್ರಜೆಗಳನ್ನು ಪ್ರತಿನಿಧಿಸುವವ ಎಂಬುದು ಸಂವಿಧಾನದಲ್ಲಿ ಸೂಚಿಸಲ್ಪಟ್ಟಿರುವ ಅರ್ಥ. ಆದರೆ ಶಾಸಕನಾದವನು ನಡೆಸುತ್ತಿರುವ ಬದುಕು, ಅವನು ಆಚರಿಸುತ್ತಿರುವ ಮೌಲ್ಯಗಳು ಪ್ರಜೆಗಳ ಪ್ರತಿನಿಧಿ ಎಂಬ ವ್ಯಾಖ್ಯೆಗೆ ವ್ಯತಿರಿಕ್ತವಾದಾಗ, 'ಶಾಸಕ' ನೆಂದರೆ ಅನ್ಯಾಯ ಆಚರಿಸುವವನು, ಜನರ ಮತ ಪಡೆದು ಅವರ ಆಸಕ್ತಿಗಳಿಗೆ ವಿರೋಧ ವ್ಯಕ್ತಪಡಿಸುವವನು ಎಂದಾಯಿತಲ್ಲವೆ? ಆಗ ಅನಿವಾರ್ಯವಾಗಿ 'ಶಾಸಕ' ಪದ ಅವನ ಎಲ್ಲಾ Totalitarian ಆಚರಣೆಗಳನ್ನು ಹೊತ್ತೊಯ್ಯುತ್ತಿರುತ್ತದೆ. ಇದೇ ರೀತಿ 'ಸ್ನೇಹಿತ' ಎಂಬ, 'ಅತ್ಯಾಚಾರ' ಎಂದರೆ. 'ರಾಜೀನಾಮೆ' ಎಂದರೆ ಹಾಗು ವಿಸ್ತೃತ ಪರಿಧಿಯಲ್ಲಿ 'ಮದುವೆ' ಎಂದರೆ 'ಕುಟುಂಬ' ಎಂದರೆ ವಿಭಿನ್ನ ಅರ್ಥಗಳು ಸ್ಫುರಿಸುತ್ತಿರುವುದು ಸ್ಪಷ್ಟ. ಈ ಪದಗಳು ಆಳುವ ಮಂದಿಯ ಶಕ್ತಿಯನ್ನು ವೃದ್ಧಿಸುವಂತಾಗುತ್ತಿರುವುದು ಹಾಗು ಯಜಮಾನಿಕೆಯ ವಾಹಕಗಳಾಗುತ್ತಿರುವುದು ಹೌದು ತಾನೆ?

ಮೋಸಗಾರನೊಬ್ಬ ಜನರನ್ನು ವಂಚಿಸುವ ಸಲುವಾಗಿ ದೇವರು ಕಾಣಿಸುವುದು ಯಾರ ಹೆಂಡತಿ ಪತಿವ್ರತೆಯಾಗಿರುತ್ತಾಳೆ ಅಂತಹವನಿಗೆ ಮಾತ್ರ ಎಂದಾಗ ಪ್ರತಿಯೊಬ್ಬನೂ ದೇವರು ಕಾಣಿಸುತ್ತಾನೆಂದು ವಾದಿಸುವುದರ ಹಿಂದೆ 'ಪಾತಿವ್ರತ್ಯ' ಪದದ ಮೇಲೆ ಆವಾಹಿಸಿರುವ ಅರ್ಥದ ಚರಿತ್ರೆಯೇ ಅಡಗಿದೆ. ಯಾವುದು ಕಾಣಿಸುತ್ತಿಲ್ಲವೋ ಅದನ್ನು ಕಾಣಿಸುತ್ತಿಲ್ಲ ಎಂದು ಘೋಷಿಸಲು 'ಪತಿವ್ರತೆ' ಪದದ ಅರ್ಥ ಅಡ್ಡಿಯಾಗುವುದರ ಹಿಂದೆ ಹೆಣ್ಣು ಸಂಸ್ಕೃತಿಯ ರಕ್ಷಕಳಾಗಿಯೂ ಹಾಗೂ 'ಪಾತಿವ್ರತ್ಯ' ಅವಳ ಮತ್ತು ಅವಳ ಕುಟುಂಬದ ಮಾನವ ಸಂಕೇತವಾಗಿಯೂ ನಿರ್ಮಿಸಲ್ಪಟ್ಟಿರುವುದು ಕೆಲಸ ಮಾಡಿದೆ.

Totalitarian ಶಕ್ತಿಗಳು ತಮ್ಮ ಬಲವನ್ನು ವೃದ್ಧಿಸಿಕೊಳ್ಳುವುದು ಪದಗಳ ಅರ್ಥದಿಂದ ಆ ಅರ್ಥಗಳು ನಿರ್ಮಿಸಿಕೊಡುವ ಸಾಮಾಜಿಕ ಸನ್ನಿವೇಶಗಳಿಂದ. ಆರೋಗ್ಯಕರ ವ್ಯವಸ್ಥೆಯಲ್ಲಿ ಪದಗಳ ಅರ್ಥಗಳು ಯಾವುದೇ ದಮನಕಾರಿ ಅಂಶಗಳನ್ನು ಹೊಂದದೆ ಎಲ್ಲರ ಏಳಿಗೆಗೆ ಶ್ರಮಿಸಿದರೆ ಅರಾಜಕ ವ್ಯವಸ್ಥೆಯಲ್ಲಿ ಅದೇ ಪದಗಳು ಶಕ್ತಿಯ ಸೋಪಾನಗಳಾಗಿ ದಮನಕಾರಿ ಪ್ರವೃತ್ತಿಯನ್ನು ಕೈ ಹಿಡಿದು ನಡೆಸುವುದರಲ್ಲಿ ಪ್ರಮುಖ ಪಾತ್ರವಹಿಸುತವೆ ಎಂಬುದರ ಜಾಗೃತಿ ಈ ಹೊತಿನ ಅಗತ್ಯ. □

## ಸಂಪಾದಕರೊಡನೆ ಸಂವಾದ

# ಅಪಾರ್ಥ–ವಿರೋಧಾಭಾಸಗಳ ವ್ಯಾಖ್ಯಾನ....

**ಬಾಪು ಹೆದ್ದೂರಶೆಟ್ಟಿ**

ಮಾನ್ಯ ಸಂಪಾದಕರೇ

**ಸಂ**ವಾದದ ಜೂನ್ 2010ರ ಸಂಚಿಕೆಯಲ್ಲಿ ಪ್ರಕಟವಾದ ತಮ್ಮ ಲೇಖನ ಲೋಹಿಯಾವಾದಿಗಳ ಗೊಂದ್ಲು ಪತ್ರದಲ್ಲಿ ಶಿವಸುಂದರ್ ಅವರು ಮಾರ್ಕ್ಸ್‌ವಾದ, ಸಮಾಜವಾದ, ಸಮತಾವಾದ, ಲೋಹಿಯಾವಾದ ಮೊದಲಾದ ಶಬ್ದಗಳನ್ನು ನಿಖರವಾದ ಅರ್ಥಗಳೊಂದಿಗೆ ಬಳಸದೇ ತಮ್ಮ ಅನುಕೂಲಕ್ಕೆ ತಕ್ಕಂತೆ, ಪರ್ಯಾಯಗಳಂತೆ ಬಳಸುವ ಮೂಲಕ ಸಾಕಷ್ಟು ಗೊಂದಲವನ್ನು ನಿರ್ಮಿಸಿದ್ದಾರೆ. ಹಿಂದೂತ್ವದ ದಾಳಿ, ಕಾರ್ಪೋರೇಟ್ ಜಾಗತೀಕರಣದ ಆಕ್ರಮಣದಿಂದಾಗಿ ಸಮಾಜವಾದವೆಂಬ ಪರಿಕಲ್ಪನೆಯೇ ಅಪಹಾಸ್ಯಕ್ಕೀಡಾಗುತ್ತಿರುವ ಸಂದರ್ಭದಲ್ಲಿ ಎಂದು ಹೇಳುವಾಗ ಸಮಾಜವಾದದ ಪರಿಧಿಯಲ್ಲಿ ಮಾರ್ಕ್ಸ್‌ವಾದಿಗಳನ್ನೂ ಸೇರಿಸುವ ಶಿವಸುಂದರ್ ಅವರು ಇಂದು ಸಮಾಜವಾದಿ ರಾಜಕಾರಣದಲ್ಲೂ ಸೈದ್ಧಾಂತಿಕ ಮೂಲಭೂತವಾದೀತನ–'ರಾಜಿ'ಕಾರಣ ಎರಡೂ ಸಂಭವಿಸುತ್ತಿದೆ ಎನ್ನುವಾಗ ಸಮಾಜವಾದದ ಪರಿಧಿಯಲ್ಲಿ ಮಾರ್ಕ್ಸ್‌ವಾದಿಗಳನ್ನು ಹೊರತುಪಡಿಸಿ ಬರಿ ಜನತಾಂತ್ರಿಕ ಸಮಾಜ ವಾದಿಗಳನ್ನೂ, ಲೋಹಿಯಾವಾದಿಗಳನ್ನೂ ಸೇರಿಸುತ್ತಾರೆ. ಸೋಷಿಯಲ್ ಡೆಮೊಕ್ರೆಟಿಕ್ ಪಕ್ಷಗಳನ್ನು ಒಡೆದು ತನ್ನ ಗುಂಪುಗಳಿಗೆ ಕಮ್ಯುನಿಸ್ಟ್ ಪಕ್ಷ ಎಂದು ಲೆನಿನ್ ಹೆಸರಿಟ್ಟ ನಂತರವೂ ಶಿವಸುಂದರ್ ಅವರು ಮಾರ್ಕ್ಸ್‌ವಾದಿ ಸಮಾಜ ವಾದ ಎಂಬ ಶಬ್ದಗಳನ್ನು ಬಳಸುತ್ತಾರೆ.

ಮಾರ್ಕ್ಸ್‌ವಾದಿಗಳು ನಿರ್ಮಿಸಿದ ಇಂತಹ ಗೊಂದಲಗಳಿಂದ ತಪ್ಪಿಸಿಕೊಳ್ಳಲೆಂದೇ ಸಮಾಜವಾದಿಗಳು ತಮ್ಮನ್ನು ಜನತಾಂತ್ರಿಕ ಸಮಾಜವಾದಿಗಳು ಎಂದು ಕರೆದುಕೊಳ್ಳಲಾರಂಭಿಸಿದರು. ಲೋಹಿಯಾವಾದಿಗಳೂ ಕೂಡ ತಮ್ಮನ್ನು ಒಂದೊಂದು ಸಲ ಸಮಾಜವಾದಿಗಳೆಂದೂ ಒಂದೊಂದು ಸಲ ಲೋಹಿಯಾವಾದಿಗಳೆಂದೂ ಹೇಳಿಕೊಳ್ಳುತ್ತ ಇಂತಹುದೇ ಗೊಂದಲವನ್ನು ನಿರ್ಮಿಸುತ್ತಾರೆ. ಅದು ಹಾಗಿರಲಿ.

ಹಬ್ಬವನ್ನಾಚರಿಸುವ ಸಂದರ್ಭದಲ್ಲಿ ಶವಪರೀಕ್ಷೆ ಮಾಡಬೇಕು, ಅಥವಾ ಆತ್ಮವಿಮರ್ಶೆ ಮಾಡಿಕೊಳ್ಳಬೇಕು ಎನ್ನುವುದು ಶಿವಸುಂದರ್ ಅವರ ಕಲ್ಪನೆಯಾಗಿರಬಹುದು, ಜನತಾಂತ್ರಿಕ ಸಮಾಜವಾದಿಗಳ ಹಾಗೂ ಬಹುಶಃ ಲೋಹಿಯಾವಾದಿಗಳ ಕಲ್ಪನೆಯಲ್ಲ. ಅದರ ಅರ್ಥ ಜನತಾಂತ್ರಿಕ ಸಮಾಜವಾದಿಗಳು ತಮನ್ನು ಆತ್ಮ ವಿಮರ್ಶೆಗೆ ಒಡ್ಡಿಕೊಳ್ಳುವುದಿಲ್ಲ ಎಂತಲೂ ಅಲ್ಲ.

ಭಾರತದ ಸಮಾಜವಾದಿ ಆಂದೋಲನದ 75ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸಮಾಜವಾದಿ ಅಧ್ಯಯನ ಕೇಂದ್ರ ಹೊರತಂದ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾದ ನನ್ನ ಲೇಖನದ ಶೀರ್ಷಿಕೆಯೇ ಭಾರತೀಯ ಸಮಾಜವಾದದ ಸೋಲು ಗೆಲುವುಗಳು ಎನ್ನುವುದು. ಶೀರ್ಷಿಕೆಯನ್ನು ಪ್ರಜಾವಾಣಿಯ ಸಂಪಾದಕರು ಗದ್ದ ಆಂದೋಲನ ಎಂದು ಬದಲಾಯಿಸಿದ್ದರೆ ಅವರಿಗೆ ಆ ಅಧಿಕಾರ ಇದೆ ಎಂದು ನಾನು ಭಾವಿಸಿದ್ದೇನೆ. ಹಾಗೆಯೇ ಅದೇ ಸಂದರ್ಭದಲ್ಲಿ ಉದಯವಾಣಿಯಲ್ಲಿ, ಸಂಯುಕ್ತ ಕರ್ನಾಟಕದಲ್ಲಿ, ವಿಜಯ ಕರ್ನಾಟಕದಲ್ಲಿ ಹಾಗೂ ಡೆಕ್ಕನ್ ಹೆರಾಲ್ಡ್‌ನಲ್ಲಿ ಪ್ರಕಟವಾದ ನನ್ನ ಲೇಖನಗಳನ್ನೂ (ಕನ್ನಡದಲ್ಲಿ ಪ್ರಕಟವಾದ ಈ ಎಲ್ಲಾ ಲೇಖನಗಳನ್ನು ಸ್ಮರಣ ಸಂಚಿಕೆಯಲ್ಲಿ ಒಟ್ಟಾಗಿ ಪ್ರಕಟಿಸಲಾಗಿದೆ) ಶಿವಸುಂದರ್ ಅವರು ಗಮನಿಸಿದ್ದರೆ ಬಹುಶಃ ಜನತಾಂತ್ರಿಕ ಸಮಾಜವಾದಿಗಳ ಆತ್ಮವಿಮರ್ಶೆಯ ಬಗ್ಗೆ ಅವರು ಇಷ್ಟು ಕಟುವಾಗಿ ಬರೆ ಯುತ್ತಿರಲಿಲ್ಲ ಎಂದು ಕೊಂಡಿದ್ದೇನೆ.

1934ರಲ್ಲಿ ಜನತಾಂತ್ರಿಕ ಸಮಾಜವಾದಿಗಳು ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಲ್ಲಿ ಹೆಚ್ಚಿನವುಗಳನ್ನು ದೇಶದಲ್ಲಿಂದು ಜಾರಿಗೊಳಿಸಲಾಗಿದೆ ಎಂದು ನಾನು ಸಾಧಾರವಾಗಿ ಹೇಳಿರುವುದು ಶಿವಸುಂದರ್ ಅವರಿಗೆ ಹುಂಬ ಹೆಗ್ಗಳಿಕೆ ಎನಿಸಿದ್ದರೆ ಅಂತಹ ಹುಂಬರಾಗಲು ಜನತಾಂತ್ರಿಕ ಸಮಾಜವಾದಿಗಳು ಹಾಗೂ ಬಹುಶಃ ಲೋಹಿಯಾವಾದಿಗಳು ಕೂಡ ಹೆಮ್ಮೆ ಪಡಬಹುದು ಎಂದುಕೊಂಡಿದ್ದೇನೆ. ಕಮ್ಯುನಿಸ್ಟರ ಬಗ್ಗೆ ಮಾಡಲಾಗುವ ಟೀಕೆಗಳಿಗೆ ಸಂಬಂಧಪಟ್ಟಂತೆ ಜನತಾಂತ್ರಿಕ ಸವಾಜವಾದಿಗಳು ಲೋಹಿಯಾವಾದಿಗಳ ಜೊತೆಗೆ ನಿಲ್ಲುತ್ತಾರಾದರೂ ಲೋಹಿಯಾವಾದಿಗಳ ಬಗ್ಗೆ ಶಿವಸುಂದರ್ ಮಾಡಿರುವ ಟೀಕೆಗೆ ಲೋಹಿಯಾವಾದಿಗಳೇ ಉತ್ತರಿಸಬೇಕು ಹಾಗೂ ಅವರು ಉತ್ತರಿಸುತ್ತಾರೆ ಎನ್ನುವುದು ನನ್ನ ನಂಬಿಕೆ.

ಹಲವು ಲೋಹಿಯಾವಾದಿಗಳು ಶತ್ರುಗಳೊಂದಿಗೆ ರಾಜಿ ಮಾಡಿಕೊಂಡಿರುವುದನ್ನು ಹೇಳಿ ಅದನ್ನು ಇಡೀ ಸಮಾಜವಾದಿ ಚಳುವಳಿಗೇ ಪಟ್ಟಕಟ್ಟುವ ಶಿವಸುಂದರ್ ಅವರು 'ರಾಜಿ'ಕಾರಣ ಮಾಡದೇ ಇರುವ ಜನತಾಂತ್ರಿಕ ಸಮಾಜವಾದಿಗಳ ಬಗ್ಗೆ ಹೇಳುವುದೇ ಇಲ್ಲ. ರಾಮ ವಿಲಾಸ ಪಾಸವಾನರ ಬಗ್ಗೆ ಹೇಳುವ ಶಿವಸುಂದರ್ ಅವರು ಎನ್.ಜಿ.ಗೋರೆ, ಮಧು ದಂಡವತೆ, ಸಮರೇಂದ್ರ ಕುಂಡು ಮೊದಲಾದವರನ್ನು ಗಮನಿಸುವುದೇ ಇಲ್ಲ.

**ಭಾರತದ ಸಮಾಜವಾದಿ ಆಂದೋಲನದ 75ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸಮಾಜವಾದಿ ಅಧ್ಯಯನ ಕೇಂದ್ರ ಹೊರತಂದ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾದ ನನ್ನ ಲೇಖನದ ಶೀರ್ಷಿಕೆಯೇ ಭಾರತೀಯ ಸಮಾಜವಾದದ ಸೋಲು ಗೆಲುವುಗಳು ಎನ್ನುವುದು.**

ತಮ್ಮ ತಪ್ಪುಗಳನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಲಾಗಲೀ, ಬದಲಾಯಿಸಿಕೊಳ್ಳಲಾಗಲೀ ಅಡ್ಡಿಯಿರಬೇಕಿಲ್ಲ ಎನ್ನುವುದು ನಿಜ. ಆದುದರಿಂದಲೇ ಮಹಾತ್ಮಾ ಗಾಂಧಿಯವರ conservative classicismನ್ನು reactionary romanticism ಜೊತೆಗೆ ನಾನು ಗೊಂದಲಿಸಿಕೊಂಡಿದ್ದೆ. ಇದನ್ನು ಸರಿಪಡಿಸಿಕೊಳ್ಳಲು ನನಗೆ 20 ವರ್ಷಗಳೇ ಬೇಕಾದವು ಎನ್ನುತ್ತಾರೆ ಅಶೋಕ ಮೆಹತಾ. ಲೋಹಿಯಾ ಕೂಡ ಮುಂಚೆ ನಾನು ಕೆಲವು ಸಂದರ್ಭಗಳಲ್ಲಿ ನೈಜವಲ್ಲದ ಆದರ್ಶವನ್ನು ಪ್ರತಿಪಾದಿಸುವ ತಪ್ಪು ಮಾಡಿದ್ದೇನೆ ಎಂದು ಹೇಳುತ್ತಾರೆ. ತಾವು ತಿಳಿದುಕೊಂಡಿದ್ದು ತಪ್ಪು ಎಂದು ಗೊತ್ತಾದಾಗ ಅದನ್ನು ಒಪ್ಪಿಕೊಳ್ಳುವ ನಮ್ರತೆ ಜನತಾಂತ್ರಿಕ ಸಮಾಜವಾದಿಗಳಲ್ಲೂ, ಲೋಹಿಯಾ ಅವರಲ್ಲೂ ಇತ್ತು. Bombard the Head Quarters ಎನ್ನುವುದು ತಪ್ಪೊಪ್ಪಿಗೆಯಲ್ಲ.

ಶಿವಸುಂದರ್ ಅವರ ಪ್ರಕಾರ ಪಂಚಾಯತ್ ರಾಜ್ ಸಾಧನೆಗೂ ನಕ್ಸಲೀಯರ ಚಳುವಳಿಯ ಹಿನ್ನೆಲೆ ಇದೆ. ಪಂಚಾಯತ್ ರಾಜ್ ವ್ಯವಸ್ಥೆ, ಅಂದರೆ ಅಧಿಕಾರವನ್ನು ಹೆಚ್ಚು ಹೆಚ್ಚು ಜನರ ಕೈಗೆ ತಲುಪುವ ಹಾಗೆ ಮಾಡುವ ಮೂಲಕ ರಾಜ್ಯವ್ಯವಸ್ಥೆಯನ್ನು ಬಲಹೀನಗೊಳಿಸುವ ವಿಕೇಂದ್ರೀಕರಣದ ಪರಿಕಲ್ಪನೆ. ವಿಕೇಂದ್ರೀಕರಣದ ಈ ಪರಿಕಲ್ಪನೆ ಕಾರ್ಮಿಕರ ಪ್ರಥಮ ಅಂತರ್ರಾಷ್ಟ್ರೀಯದಲ್ಲಿ ಮಾರ್ಕ್ಸ್‌ನ ವಿರುದ್ಧ ಸೆಣಸಾಟ ನಡೆಸಿದ ಅನಧಿಪತ್ಯವಾದಿಗಳ ಪರಿಕಲ್ಪನೆ. ಅದು ಯಾವ ದಾರಿಯ ಮೂಲಕ ಅನಧಿಪತ್ಯವಾದಿಗಳ ಶತ್ರುವಾಗಿದ್ದ ಮಾರ್ಕ್ಸ್‌ನ ಅನುಯಾಯಿಗಳಾದ ನಕ್ಸಲೀಯರನ್ನು ತಲುಪಿತು ಎಂಬುದನ್ನು ಶಿವಸುಂದರ್ ಅವರೇ ವಿವರಿಸಬೇಕು. ಶತ್ರುವಿನ ಸಿದ್ಧಾಂತದ ಒಪ್ಪಿಗೆಯನ್ನು ತನ್ನ ಸಿದ್ಧಾಂತದ ಬೆಳವಣಿಗೆ ಎನ್ನುವುದಾದರೆ ಆ ಮಾತು ಬೇರೆ. ಅದರ ಬಗ್ಗೆ ನಮಗೇನೂ ತಕರಾರು ರಲಾರದು.

ಅಭಿವೃದ್ಧಿಯ ನೆಹರೂ ಮಾದರಿಯನ್ನು ಒಪ್ಪಿಕೊಂಡದ್ದೇ ಭಾರತದ ಎಲ್ಲಾ ದುರಂತಗಳಿಗೂ ಕಾರಣ ಎಂದು ಕಾಂಗ್ರೆಸ್ಸೇತರವಾದವನ್ನು ಪ್ರತಿಪಾದಿಸಿದ ಲೋಹಿಯಾ ಅವರ ಅನುಯಾಯಿಗಳ ವಾದದೊಂದಿಗೆ, 1934ರಲ್ಲಿ ಜನತಾಂತ್ರಿಕ ಸಮಾಜವಾದಿಗಳು ರೂಪಿಸಿದ ಕಾರ್ಯಕ್ರಮಗಳಲ್ಲಿ ಹೆಚ್ಚಿನವು ಕಾರ್ಯಗತವಾಗಿವೆ ಎನ್ನುವ ಜನತಾಂತ್ರಿಕ ಸಮಾಜವಾದಿಗಳ ವಾದದೊಂದಿಗೆ ಗೊಂದಲಿಸಿಕೊಂಡು ಇವುಗಳಲ್ಲಿ ಶಿವಸುಂದರ್ ಅವರು ವಿರೋಧಾಭಾಸ ಕಂಡುಕೊಳ್ಳುವುದಕ್ಕೆ ಕಾರಣ ಅವರು ಲೋಹಿಯಾವಾದ ಹಾಗೂ ಜನತಾಂತ್ರಿಕ ಸಮಾಜವಾದಗಳನ್ನು ಪರ್ಯಾಯವಾಗಿ ಬಳಸುವುದರಿಂದ. ಇವೆರಡನ್ನೂ ಬೇರೆ ಬೇರೆ ಸಿದ್ಧಾಂತಗಳೆಂದು ಅರ್ಥಮಾಡಿಕೊಂಡರೆ ಈ ಗೊಂದಲ ನಿವಾರಣೆಯಾಗುತ್ತದೆ. □

ಸಂಪಾದಕರೊಡನೆ ಸಂವಾದ

# ಧರ್ಮ— ಸಾಮಾನ್ಯ ವಿಶ್ಲೇಷಣೆ

**ನಾಗರಾಜ .ಬಿ.ಟಿ**

**ಮಾನ್ಯ ಸಂಪಾದಕರೇ,**

ಇಂದಿನ ಸಮಾಜದಲ್ಲಿ ಧರ್ಮ ಎಂದರೆ, ಹಿಂದೂ ಧರ್ಮ, ಕ್ರಿಸ್ತನ ಧರ್ಮ, ಮುಸ್ಲಿಂ ಧರ್ಮ– ಈ ಮುಂತಾದ ಪರಿ ಭಾಷೆಗಳಲ್ಲಿ ಗುರುತಿಸುವುದು ಲೋಕ ರೂಢಿಯಾಗಿದೆ. ಹಿಂದೂ, ಕ್ರೈಸ್ತ, ಮುಸ್ಲಿಂ, ಪಾರ್ಸಿ–ಇವುಗಳೆಲ್ಲ ಮತಗಳಾಗಿದ್ದು; ಆ ಮತಗಳವರು ಆಚರಿಸುವ ರೀತಿ–ನೀತಿಗಳನ್ನು ಮತಧರ್ಮವೆಂದು ಗುರುತಿಸಲಾಗುತ್ತದೆ. 'ಧರ್ಮ' ಎಂಬ ಪದ ಸಂಸ್ಕೃತ ಪದವಾಗಿದೆ. ಈ ಪದವು – "ಕಾಯಿದೆ, ಪದ್ಧತಿ, ಸಂಪ್ರದಾಯ, ಪುಣ್ಯ ಕರ್ಮ, ನ್ಯಾಯ, ಕರ್ತವ್ಯ, ಸ್ವಭಾವ, ಗುಣ, ಆತ್ಮ, ಯಮ, ಪುಣ್ಯ, ಸದ್ಗುಣ, ಸ್ವಾಭಾವಿಕ ಗುಣ, ಧರ್ಮರಾಜ" ಎಂಬ ಹಲವಾರು ಅರ್ಥಗಳನ್ನು ಹೊಂದಿದೆ. ಇದೇ ಅರ್ಥಗಳಲ್ಲಿ ಕನ್ನಡದಲ್ಲಿಯೂ 'ಧರ್ಮ' ಪದವು ಬಳಕೆಯಲ್ಲಿದೆ.

ಜಗತ್ತಿನ ಮೊದಲ ಕೃತಿ ಎನಿಸಿದ ಋಗ್ವೇದ ಕಾಲದಿಂದಲೂ ಧರ್ಮ ಎನ್ನುವ ಪದವು ಬಳಕೆಯಲ್ಲಿದೆ. ಅಂದಿನಿಂದ ಬಳಕೆಯಲ್ಲಿ ಬಂದಂತೆ ಈ ಶಬ್ದ ಬಹು ಅರ್ಥವ್ಯತ್ಯಾಸಗಳನ್ನು ಹೊಂದಿ, ಅರ್ಥವ್ಯಾಪ್ತಿಯಲ್ಲಿ ಏರು ಪೇರುಗಳನ್ನು ಕಾಣುತ್ತಾ ಬಂದಿದೆ. "ನಮ್ಮಲ್ಲಿ ಧರ್ಮದ ಸ್ವರೂಪ ಸಂಕೀರ್ಣವಾದದ್ದು. ಅದು ಸಹಜವೂ ಹೌದು, ಅದರಂತೆ ಅಭ್ಯಾಸದ ಫಲವೂ ಹೌದು. ಸುಡುವುದು ಅಗ್ನಿಯ ಧರ್ಮ. ಹರಿಯುವುದು ನೀರಿನಧರ್ಮ, ಅರಳುವುದು ಹೂವಿನ ಧರ್ಮ, ಬೀಸುವುದು ಗಾಳಿಯ ಧರ್ಮ. ಇವು ಸಹಜವಾದ ಧರ್ಮದ ಉದಾಹರಣೆಗಳು. ಅದರಂತೆ ಸತ್ಯವನ್ನು ನುಡಿಯುವುದು ಧರ್ಮ, ಉಪಕಾರ ಮಾಡುವುದು ಧರ್ಮ, ಅತಿಥಿಯನ್ನು ಆಧರಿಸುವುದು ಧರ್ಮ, ಇತ್ಯಾದಿ ಧರ್ಮದ ಪ್ರಕಾರಗಳಿವೆ. ಇಲ್ಲಿ ಧರ್ಮವೆಂದರೆ ಅಭ್ಯಾಸದಿಂದ, ಪರಿಶ್ರಮದಿಂದ, ಅನುಸರಿಸಬೇಕಾದ ಸಾಧನೆ ಯಾಗುತ್ತದೆ. ಆದರೆ ಇಂಥ ಧರ್ಮದ ಅಪಾಯವೆಂದರೆ ಅದು ಯಾಂತ್ರಿಕವಾಗಿ ತನ್ನ ಅರ್ಥವನ್ನು ಕಳೆದುಕೊಳ್ಳಬಹುದು." ಎನ್ನುತ್ತಾರೆ ಕೀರ್ತಿನಾಥ ಕುರ್ತಕೋಟಿಯವರು.

ಪ್ರಕೃತಿಯಲ್ಲಿ ಸಹಜವಾದ ಧರ್ಮವನ್ನು ಬದಲಾಯಿಸಲು ಸಾಧ್ಯವೇ ಇಲ್ಲ. ಆದರೆ ಮಾನವನು ತನ್ನ ಒಳಿತಿಗಾಗಿ ತರ್ಕ–ವಿಚಾರಗಳ ಅಭ್ಯಾಸದಿಂದ ರೂಢಿಸಿಕೊಂಡಿರುವ ಧರ್ಮವು ಯಾಂತ್ರಿಕವಾದರೆ ಅವ್ಯವಸ್ಥೆಯಾಗುತ್ತದೆ. ಮಾನವನು ರೂಢಿಸಿಕೊಂಡ ಧರ್ಮವು ಸಹ ಪ್ರಕೃತಿಯ ಅಂಶವೆಂದು ಪರಿಗಣಿಸಲಾಗಿರುವ ಆತ್ಮ ಪ್ರಜ್ಞೆಯಿಂದಲೇ ರೂಢಿಸಿಕೊಂಡದ್ದಾಗಿದೆ. ಇಂಥ ಧರ್ಮ ಕಾಲ ಸಂದರ್ಭದ ವಿಚಾರಶೀಲತೆಯನ್ನು ಕಳೆದುಕೊಂಡು ಯಾಂತ್ರಿಕವಾಗಿ ಕುರುಡು ಅನುಸರಣೆಯಾದರೆ ಅದು ಧರ್ಮವಾಗುವುದಿಲ್ಲ.

> ಮನುವಿಗೆ ನೈತಿಕತೆಯೆಂದರೆ ವಿಶಿಷ್ಟತೆಯನ್ನು ಗ್ರಹಿಸುವುದು. ಇತರರು ನನಗೆ ಹೀಗೆ ಮಾಡಬೇಕು ಅಂತ ನಿಮಗನ್ನಿಸುವುದನ್ನು ನೀವು ಇತರರಿಗೆ ಮಾಡಬೇಡಿ. ಅವರ ಅಭಿರುಚಿಗಳು ಅವೇ ಇರಲಿಲ್ಲಿಲ್ಲ ಎನ್ನುತ್ತಾನೆ ಬರ್ನಾಡ್ ಶಾ. ಇದು ಮನುವಿನ ದೃಷ್ಟಿಗೆ ಹತ್ತಿತವಾದದ್ದು. ಶಾನ ಮಾತುಗಳಲ್ಲಿ 'ಅಭಿರುಚಿ' ಎಂದಿರುವಲ್ಲಿ ಮನುವು 'ಜಾಯಮನ' ಅಥವಾ ಜಾತಿ ಅಂತ ಬಳಸುತ್ತಾನೆ. ಒಂದೂಂದು ಜಾತಿ, ಜಾಯಮಾನದವನಿಗೂ ಸಾರ್ವತ್ರಿಕವಾಗಿಸಲು ಬಾರದಂಥ ಅವನದೇ ನ್ಯಾಯ, ಅವನದೇ ನಿಷ್ಕೃಷ್ಟ ನೀತಿಗಳಿರುತ್ತವೆ ಎನ್ನುವುದು ಇಲ್ಲಿನ ಕಲ್ಪನೆ.

ಉದಾಹರಣೆ ಮನುವಿನ ಒಂದು ನೀತಿಯನ್ನು ಗಮನಿಸ ಬಹುದು. ಮನುವು ವಿಧಿಸಿರುವ ಪ್ರಕಾರ "ವಿವಾಹ ಕಾಲದಲ್ಲಿ, ಪ್ರಣಯ ಲೀಲೆಗಳಲ್ಲಿ, ಪ್ರಾಣಕ್ಕೆ ಆಪತ್ತು ಉಂಟಾಗುವಲ್ಲಿ, ಬ್ರಾಹ್ಮಣನನ್ನು ರಕ್ಷಿಸ ಬೇಕಾದಂಥ ಸಂದರ್ಭದಲ್ಲಿ ಸತ್ಯಸಾಕ್ಷಿ ಹೇಳುವ ಮೂಲಕ ಯಾವುದೆ ಸಾವು ಸಂಭವಿಸುತ್ತದೆಯೆನ್ನುವ ಎಲ್ಲ ಸತ್ಯವನ್ನು ಹೇಳು ವುದಕ್ಕಿಂತ ಸುಳ್ಳನ್ನು ಹೇಳುವುದೇ ಸೂಕ್ತ. – ಮನುವಿನ ಈ ಮಾತುಗಳನ್ನು ಕುರಿತು ಎ.ಕೆ.ರಾಮಾನುಜಂರವರು, ಮನುಷ್ಯರು ಕೊಲ್ಲಬಾರದು, ಮನುಷ್ಯರು ಸುಳ್ಳು ಹೇಳಬಾರದು ಮುಂತಾದ ನೈತಿಕ ಸೂತ್ರಗಳು ಸಿದ್ಧವಾಗುವುದಕ್ಕೆ ಮಾನವತ್ವ ಎಂಭಂಥ ಒಂದು 'ಸಾರ್ವತ್ರಿಕತೆ'ಯ ಸ್ಪಷ್ಟ ಕಲ್ಪನೆಯು ಮನುವಿಗೆ ಇರುವಂತೆ ಕಾಣುವುದಿಲ್ಲ. ಮನುಷ್ಯ ರೆಲ್ಲರಿಗೂ ಸಾಮಾನ್ಯ–ಸಾಧಾರಣವಾಗಿ ಅನ್ವಯಿಸಬಹುದಾದಂತ ಒಂದು ಅವಸ್ಥೆ ಒಂದು 'ಸಾರ್ವತ್ರಿಕಧರ್ಮ' ಎನ್ನುವುದರ ಅರಿವೆ ಮನುವಿಗೆ ಇಲ್ಲ. ನೈತಿಕ ತೀರ್ಮಾನಗಳು ಲೋಕ ಸಾರ್ವತ್ರಿಕವಾಗಿರುವಂಥವು ಎನ್ನುತ್ತಾನೆ ಮ್ಯಾಕಿ. ಲೋಕ ಸಾರ್ವತ್ರಿಕವೆಂದರೆ ತನ್ನನ್ನು ಇನ್ನೊಬ್ಬನ ಸ್ಥಳದಲ್ಲಿಟ್ಟುಕೊಳ್ಳುವುದು. ಅದೇ ನ್ಯೂಟೆಸ್ಟ್ರೆಂಟ್‌ನ ಮತ್ತು ಹಾಬ್ಸ್‌ನ ಹಾಬ್ಸ್‌ನ 'ಸರ್ವಜನಶಾಸನದ ಸುವರ್ಣ ನ್ಯಾಯವಾಗಿದೆ.

'ನಿಮಗೆ ಇತರರು ಯಾವುದನ್ನು ಮಾಡಬಾರದೆನ್ನುತ್ತೀರೋ ಅದನ್ನು ನೀವು ಇತರರಿಗೆ ಮಾಡಬೇಡಿ. ಎನ್ನುತ್ತದೆ ಅದು. ಇಂಥ ಆಧಾರ ಭೂಮಿಕೆಯು ಮನುವಿಗೆ ತಿಳಿಯದು. ಮನುವಿಗೆ ನೈತಿಕತೆಯೆಂದರೆ ವಿಶಿಷ್ಟತೆಯನ್ನು ಗ್ರಹಿಸುವುದು. ಇತರರು ನನಗೆ ಹೀಗೆ ಮಾಡಬೇಕು ಅಂತ ನಿಮಗನ್ನಿಸುವುದನ್ನು ನೀವು ಇತರರಿಗೆ ಮಾಡ ಬೇಡಿ. ಅವರ ಅಭಿರುಚಿಗಳು ಅವೇ ಇರಲ್ಲಿಲ್ಲ ಎನ್ನುತ್ತಾನೆ ಬರ್ನಾಡ್‌ಶಾ. ಇದು ಮನುವಿನ ದೃಷ್ಟಿಗೆ ಹತ್ತಿತವಾದದ್ದು. ಶಾನ ಮಾತುಗಳಲ್ಲಿ 'ಅಭಿರುಚಿ' ಎಂದಿರುವಲ್ಲಿ ಮನುವು 'ಜಾಯಮನ' ಅಥವಾ ಜಾತಿ ಅಂತ ಬಳಸುತ್ತಾನೆ. ಒಂದೂಂದು ಜಾತಿ, ಜಾಯಮಾನ ದವನಿಗೂ ಸಾರ್ವತ್ರಿಕವಾಗಿಸಲು ಬಾರದಂಥ ಅವನದೇ ನ್ಯಾಯ. ಅವನದೇ ನಿಷ್ಕೃಷ್ಟ ನೀತಿಗಳಿರುತ್ತವೆ ಎನ್ನುವುದು ಇಲ್ಲಿನ ಕಲ್ಪನೆ. ಈ ಬಗೆಯ ಭಾರತೀಯ ಒಲುಮೆಯನ್ನು, ಹೆಗಲ್ 'ಶೌರ್ಯವು ಕ್ಷತ್ರಿಯನ ಸದ್ಗುಣ ಅಂತ ನಾವು ಹೇಳಿದರೆ, ಇದಕ್ಕೆ ಭಿನ್ನವಾಗಿ ಹಿಂದೂಗಳು, ಶೌರ್ಯವು ಕ್ಷತ್ರಿಯನ ಸದ್ಗುಣ ಎನ್ನುತ್ತಾರೆ. ಅನ್ನುತ್ತಾನೆ ಹೆಗಲ್." ಧರ್ಮವು ಯಾಂತ್ರಿಕವಾಗುವುದರ ಅಪಾಯವನ್ನು, ಎ.ಕೆ.ರಾಮಾನುಜಂರವರು ತುಂಬ ಸೂಕ್ತವಾಗಿ ವಿಶ್ಲೇಷಿಸಿದ್ದಾರೆ.

ನಾಲ್ಕು ಪುರುಷಾರ್ಥಗಳಲ್ಲಿ ಒಂದಾದ ಧರ್ಮಕ್ಕೆ ಕೇವಲವಾದ ಮೌಲ್ಯವೆಂಬುದುದಿಲ್ಲ. ಅದು ಕಾಲ–ದೇಶ–ವ್ಯಕ್ತಿಚಾರಿತ್ರ್ಯ– ಸಾಮಾಜಿಕ ಪರಿಸರ ಮತ್ತು ಸಂದರ್ಭ ಇತ್ಯಾದಿಗಳಿಗೆ ಬದ್ಧವಾಗಿದ್ದು, ಇವುಗಳಿಗೆ ಅನುಗುಣವಾಗಿ ಧರ್ಮದ ಮೌಲ್ಯವು ಸಿದ್ಧವಾಗುತ್ತದೆ. ಇಂತಹ ಮೌಲ್ಯಗಳು ಮರು ಬಳಕೆಯಿಂದ ಧಾರ್ಮಿಕ ನಿಯಮಗಳಾಗಿ ರೂಪುಗೊಳ್ಳುತ್ತವೆ. ಧರ್ಮವನ್ನು ಕುರಿತಂತೆ ಎ.ಕೆ. ರಾಮಾನುಜಂ ಅವರ ಮಾತುಗಳನ್ನು ಗಮನಿಸಬಹುದು. "ಆಶ್ರಮ ಧರ್ಮ (ವಯೋಮಾನದ ಅವಸ್ಥೆಗಳಿಗೆ ಅನುಗುಣವಾಗಿ ಆಚರಿದಬೇಕಾಗಿದ್ದು) ಸ್ವಧರ್ಮ (ಸ್ಥಳ.ಜಾತಿ. ಸ್ವಭಾವಗಳಿಗೆ ತಕ್ಕಂತೆ ಆಚರಿಸಬೇಕಾದ್ದು) ಆಪದ್ಧರ್ಮ (ಆಪತ್ಕಾಲದಲ್ಲಿ ಅಸಾಧಾರಣ ಸಂದರ್ಭಗಳಲ್ಲಿ ಆಚರಿಸಬಹುದಾದ್ದು – ಆಹಾರವಿಲ್ಲದೆ ಸಾಯುವ ಸಂದರ್ಭ ಬಂದಾಗ ವಿಶ್ವಮಿತ್ರನು ನಾಯಿ ಮಾಂಸವನ್ನು ತಿಂದ ಎನ್ನುತ್ತಾರಲ್ಲ ಆ ಬಗೆಯದು) ಇತ್ಯಾದಿಗಳು. ನೈತಿಕ ಕಲ್ಪನೆಯಲ್ಲಿ ಹೀಗೆ ಅನೇಕ ಭಿನ್ನ ಪರ್ಯಾಯಗಳು ರೂಪುಗೊಳ್ಳುತ್ತವೆ.

ಈ ಬಗೆಯಲ್ಲಿ ಕೂಡಿ ಕೊಳ್ಳುತ್ತಾ ಹೋಗುವ ಒಂದೊಂದು ಪರ್ಯಾಯ ನೀತಿಯು ವಾಸ್ತವವಾಗಿ 'ಸಾರ್ವತ್ರಿಕ ನೀತಿ, ಎಂಬುದರಲ್ಲಿ ಅಸ್ಪಷ್ಟವನ್ನು ಕಳೆಯುತ್ತ ಹೋಗುತ್ತದೆ. ಈ ಪ್ರಕ್ರಿಯೆಯಲ್ಲಿ ಅಂತಿಮವಾಗಿ, ಸಾರ್ವತ್ರಿಕ ಧರ್ಮ ವೆನ್ನುವುದೇನಿದ್ದರೂ ಮೊದಲಲ್ಲ, ತುದಿಯಲ್ಲಿ ಪರಿಗಣಿತವಾಗ ಬೇಕಾದ್ದು ಎನ್ನುತ್ತವೆ ನೀತಿಗ್ರಂಥಗಳು. ಸಂದರ್ಭ ಸನ್ನಿವೇಶವನ್ನ ಅನುಸರಿಸಿ ನಿಮ್ಮ ವಿಶಿಷ್ಟಧರ್ಮವನ್ನು ಕಂಡುಕೊಳ್ಳಿ ಸಂಧರ್ಭ– ಸನ್ನಿವೇಶ ಧರ್ಮಗಳಲ್ಲಿ ಯಾವುದೂ ನಿಮಗೆ ಅನ್ವಯಿಸದೆ ಹೋಗುವ ಸಂದರ್ಭದಲ್ಲಿ (ಬಹುಶಃ ಹಾಗೆ ಆಗುವುದಿಲ್ಲ) ಅಂಥ ನಿರುಪಾಯ ಸ್ಥಿತಿಯಲ್ಲಿ ಸಾರ್ವತ್ರಿಕ ಧರ್ಮವನ್ನು ಆಶ್ರಯಿಸಿ ಅಂತ ಅವು ಹೇಳುವಂತಿವೆ." ಎನ್ನುತ್ತಾರೆ. ಧರ್ಮ ಎನ್ನುವುದಕ್ಕೆ

ಒಂದು ನಿರ್ಧಿಷ್ಟವಾದ ಮತ್ತು ನಿಖರವಾದ ಪ್ರಮಾಣಬದ್ಧ ವ್ಯಾಖ್ಯಾನವನ್ನು ಯಾರೂ ಒದಗಿಸದೇ ಇರುವುದರಿಂದ ಆ ಪದವು ಅರ್ಥ ವೈಶಾಲ್ಯತೆಗೆ ದಾರಿ ಮಾಡಿರುವಂತೆ ಅರ್ಥ ಸಂಧಿಗ್ಧತೆಗೂ ದಾರಿ ಮಾಡಿಕೊಟ್ಟಿದೆ. ರೂದ್ದಂ ನರಸಿಂಹ ಅವರ ಮಾತುಗಳನ್ನು ಅನುಲಕ್ಷಿಸಿ ಕೆ.ವಿ. ಅಕ್ಷರ ಅವರು ಧರ್ಮ ಸಂಧಿಗ್ಧತೆಯನ್ನು ಕುರಿತು ಹೇಳಿರುವ ಮಾತುಗಳನ್ನು ಗಮನಿಸಬಹುದು. "ಮಹಾ ಭಾರತದ ಯಕ್ಷಪ್ರಶ್ನೆಯ ಸಂದರ್ಭದಲ್ಲಿ, ಯಕ್ಷನು ಯುಧಿಷ್ಠಿರನಿಗೆ ಒಡ್ಡುವ ಸವಾಲು ಇದು– 'ನೈತಿಕ ಇಕ್ಕಟ್ಟಿನಲ್ಲಿ ಸಿಲುಕಿದ ವ್ಯಕ್ತಿಯೊಬ್ಬ ಆ ಸನ್ನಿವೇಶದಲ್ಲಿ ಯಾವ ರೀತಿಯಲ್ಲಿ ವರ್ತಿಸಬೇಕು'–ಎಂಬ ಪ್ರಶ್ನೆಗೆ ಯುದಿಷ್ಠಿರ ಕೊಡುವ ಉತ್ತರವೆ ಈ ಉಲ್ಲೇಖ, ಶ್ಲೋಕ ಇದು.

ತರ್ಕೋಽ ಅಪ್ರತಿಷ್ಠಿತಃ ಶ್ರುತಯೋ ವಿಭಿನ್ನಾ
ನ ಏಕೋ ಮುನಿಃ ಯಸ್ಯ ಮತಮ್‌ಪ್ರಮಾಣಮ್।
ಧರ್ಮಸ್ಯ ತತ್ತ್ವಂ ನಿಹಿತಮ್ ಗುಹಾಯಾಮ್
ಮಹಾಜನೇನ ಏನಗತಾಃ ಸ ಪಂಥಃ॥

ತರ್ಕವು ಆಧರಿಸಲಿಕ್ಕೆ ಬರದಂಥಾಗಿದೆ. ವೇದಾದಿ ವಾಙ್ಮಯಗಳು ಪರಸ್ಪರ ಭಿನ್ನ ಭಿನ್ನ ಮತವನ್ನು ವ್ಯಕ್ತಪಡಿಸುತ್ತವೆ. ಪ್ರಮಾಣ ಎಂದು ಭಾವಿಸಬಹುದಾದಂಥ ಅಭಿಪ್ರಾಯವನ್ನು ಕೊಡಬಲ್ಲ ಒಬ್ಬ ಮುನಿಯೂ ಇಲ್ಲ, ಧರ್ಮದ ಅರ್ಥವು ಗಹ್ವರದೊಳಗೆ ಅಡಗಿ ಕೂತಿದೆ. ಆದ್ದರಿಂದ ಉಳಿದಿರುವುದೊಂದೇ ದಾರಿ ಮಹಾಜನರ ಮಾರ್ಗಗಳನ್ನು ಅನುಸರಿಸುವುದು.... ನೈತಿಕ ಬಿಕ್ಕಟ್ಟಿನ ಘಳಿಗೆಯೊಂದರಲ್ಲಿ ಸತ್–ಕ್ರಿಯೆಯನ್ನು ಕಂಡುಕೊಳ್ಳುವ ದಾರಿ ಎಷ್ಟು ಸಂಕೀರ್ಣ ಎಂಬುದು ಈ ಮಾತುಗಳ ಇಂಗಿತ. ಈ ಉತ್ತರವು ನನಗೆ ಹಲವು ಕಾರಣಗಳಿಂದ ಅರ್ಥವಂತವಾದದ್ದೆಂದು ಕಾಣುತ್ತದೆ. ಇಲ್ಲಿ ಏಕರೂಪಿ ಅಧಿಕಾರದ ಬಗ್ಗೆ ಅಪನಂಬಿಕೆಯಿದೆ (ಬಣ) ತರ್ಕವನ್ನು ಇದು ತಿರಸ್ಕರಿಸುತ್ತದೆ. ಜತೆಗೆ ಇದು ಬಹುದೃಷ್ಟಿಗಳನ್ನು ಒಳಗೊಳ್ಳುವ ಒಂದು ಮಂಡನೆಯೂ ಹೌದು ಎಂಬುವನ್ನು ನಿರ್ಧರಿಸುವ ಕೆಲಸವೇ ಸರ್ವಸಮ್ಮತಿಯೊಂದನ್ನು ರೂಢಿಸುವ ಪ್ರಯತ್ನವೂ ಹೌದು ಎಂಬುದನ್ನು ನಾವು ಗಮನಿಸಬೇಕು. ಯಾಕೆಂದರೆ ಸಮಾಜವನ್ನು ಧಾರಣೆ ಮಾಡಿ ನಡೆಸುವ ಈ ಧರ್ಮವೆಂಬ ಪರಿಕಲ್ಪನೆಯು ಸುಲಭವಾಗಿ ಹುಡುಕಿ ಹಿಡಿಯಬಹುದಾದ್ದಲ್ಲ. ಆದರೂ ಅದನ್ನು ಹುಡುಕುವ ಪ್ರಯತ್ನ ಮಾಡಲೇ ಬೇಕು. ಕಾರಣ ಅದೇ ಅಂತಿಮವಾಗಿ ಎಲ್ಲಾ ಕ್ರಿಯಾ ವಂತಿಕೆಯ ಪರಮೋ ದ್ದಿಶ್ಯ."

ಈ ಮಾತುಗಳು ಹೇಳುವಂತೆ ಧರ್ಮದ ಆಯ್ಕೆಯು ಕಪ್ಪು–ಬಿಳುಪಿನ ನಡುವಿನ ಹುಡುಕಾಟವಲ್ಲ. ಸಾರ್ವತ್ರಿಕವಗಿ ಎಕಪ್ರಕಾರವಾಗಿ ಹೇರುವಂಥ ನಿಯಮವೂ ಅಲ್ಲ. ಅದೇ ಸಂದರ್ಭದಲ್ಲಿ ಧರ್ಮ, ಸಾರ್ವಜನಿಕ ನೈತಿಕ ಪ್ರಶ್ನೆಯ ಮೌಲ್ಯ. ಆತ್ಮ, ಪರಮಾತ್ಮ ವಿಷಯವಾಗಿ, ಆತ್ಮದ ಸಾಧಾನಾ ಮಾರ್ಗವಾಗಿ ಧರ್ಮ ವ್ಯಕ್ತಿ ವಿಶಿಷ್ಟ ಮೌಲ್ಯವೂ ಸರ್ವಾತ್ಮ, ಸರ್ವಜನ ಹಿತದೃಷ್ಠಿಯಲ್ಲೇ ಸಾಗಬೇಕಾಗುತ್ತದೆ. ಹಾಗೇಯೇ ಸಾರ್ವತ್ರಿಕ ಮೌಲ್ಯವೂ ಸಮಷ್ಟಿ ನೆಲೆಯದಾದರೂ ವ್ಯಷ್ಟಿ ಉದ್ಧಾರದ ನೆಲೆಯನ್ನು ಹೊಂದಿರುತ್ತದೆ. ಆದ್ದರಿಂದ ಎ.ಕೆ. ರಾಮಾನಿಜಂ ಅವರು ಮೇಲೆ ಹೆಳಿರುವಂತೆ ಧರ್ಮ ಒಂದು ಸಂದರ್ಭಬದ್ಧ ಸಮಸ್ಯೆ. ಈ ಸಮಸ್ಯೆ ಯನ್ನು ಪರಿಹರಿಸಲು ವಿಚಾರಶೀಲ ಮನಸ್ಸೊಂದೇ ಮಾರ್ಗ. ಆದ್ದರಿಂದ ಧರ್ಮದ ಅಧ್ಯಯನವೆಂದರೆ ನೈತಿಕ ತಾತ್ತ್ವಿಕ ವಿಷಯಗಳ ತರ್ಕಜಿಜ್ಞಾಸೆ. ಈ ವಿಚಾ ರಶೀಲತೆಯಿಂದಲೇ ಧರ್ಮ ನಿರ್ಣಯ. □

# ಬುದ್ಧ ಕವಿತೆಗಳು




೧. **Sengtsan**

ನಮ್ಮ ಇಚ್ಛೆಯನ್ನ ಸರಿಸಿ ಹೂವು ಬೀಳುತ್ತೆ,
ನಮ್ಮ ನಿರಾಕರಣೆಯನ್ನೂ ನಿರ್ಲಕ್ಷಿಸಿ
ಹುಲ್ಲು ಬೆಳೆಯುತ್ತೆ.

೨. ಯೂಗೋಚಿಯಾ

ನಿರಾಳವೆಂದರೆ ಧ್ಯಾನ (ಝೆನ್)
ಮಾತಿರಲಿ, ಮೌನವಿರಲಿ;
ಜಡವಿರಲಿ, ಚೈತನ್ಯವಿರಲಿ;
ನಡೆವಲ್ಲಿ, ಕುಳಿತಲ್ಲಿ ಧ್ಯಾನವಿರಲಿ.

೩. **Ikkyn**

ಶಾಕ್ಯಕುಲದ ತುಂಟ
ಈ ಜಗತ್ತಿನಲಿ ಹುಟ್ಟಿದಂದಿನಿಂದ
ಎಷ್ಟೊಂದು ಜನ! ಅಸಂಖ್ಯಾತ ಜನರು
ಮರುಳಾಗುತ್ತಲೇ ಇದ್ದಾರೆ.

೪. ಡೋಜನ್

ನನ್ನ ಹುಟ್ಟೂರು
ಯಾವಾಗಲೂ
ಬಣ್ಣಗೆಡದ ಚರ್ರಿ ಮೊಗ್ಗಿನಂತೆ;
ಇದೀಗ ತಾನೆ ವಸಂತ ಕಳೆದಿದೆ.

೫. **Busan**

ಹೂವಿನೊಳಗೇ ಬಂದ ನಾನು
ಅವುಗಳ ಬುಡದಲ್ಲೇ ನಿದ್ದೆ;
ಇದೇ ನನ್ನ ವಿರಾಮ ತಾಣ.

೬. **Basho**

೧. ಲಂಟಾನದ ಹುಟ್ಟುವಳಿಯಂತೆ
ಮನಸ್ಸಿನ ಎಲ್ಲಾ ನೋವುಗಳು
ಅತೃಪ್ತಿಯನ್ನುಂಟು ಮಾಡುತ್ತವೆ.

೨. ಚಿಗಟೆಯ ಕಾಟದಿಂದ
ನೊಂದ ಕುದುರೆ
ನನ್ನ ದಿಂಬಿಗೇ ಮೂತ್ರಿಸಿದೆ.

೩. ಬೇಸಿಗೆಯಲಿ ರಾಜಹಂಸ
ಬಳಕುತ್ತಾ ನಿಧಾನವಾಗಿ
ಕುರುಚಲು ಮೈದಾನವ (ಮಾಳಾನ)
ದಾಟುತ್ತಿತ್ತು
ನನ್ನ ಅರಿವಿನ ಚಿತ್ರವ ನಾನಲ್ಲಿ ಕಂಡೆ.

○ ಅನು: ಬಿ. ಮಹೇಶ್ ಹರವೆ

ಆಕರ: Games Zen Master's Play.- R.H. Blyth

# ಜನಾದೇಶದಿಂದ ದೈವ ಕೃಪೆಯ ಕಡೆಗೆ

**ಎಸ್. ಮರಿಸ್ವಾಮಿ**

ನೀವು ಟಿವಿಯಲ್ಲಿ ಈ ದೃಶ್ಯವನ್ನು ನೋಡಿರಲೇಬೇಕು. ಸಾರ್ವಜನಿಕ ಹುದ್ದೆಗೆ ಹೊಸದಾಗಿ ನೇಮಕಗೊಂಡವರು ಅವರ ಕೊಠಡಿಯ ಬಾಗಿಲು ಕಿಟಕಿ, ಕುರ್ಚಿ ಮೇಜು ಇವುಗಳನ್ನು ಶ್ರದ್ಧಾಪೂರ್ವಕವಾಗಿ ಪೂಜಿಸುವ ದೃಶ್ಯ ನನಗೆ ಜ್ಞಾಪಕವಿರುವಂತೆ ಒಂದು ದಶಕಗಳಿಂದೀಚೆಗಿನ ಬೆಳವಣಿಗೆ. ಕೆಟ್ಟ ದೃಷ್ಟಿ ನಿವಾರಿಸಿಕೊಳ್ಳಲು ಮನೆಯ ಮುಂಬಾಗಿಲಿಗೆ ನಿಂಬೆಹಣ್ಣು, ಮೆಣಸಿನಕಾಯಿ ಕಟ್ಟುವ ಸಂಪ್ರದಾಯದಂತೆ ಇದೂ ಸಹ. ಹುದ್ದೆಗೆ ತನ್ನ ಅರ್ಹತೆಯ ಬಗ್ಗೆ ನಂಬಿಕೆ ಇಲ್ಲದ ವ್ಯಕ್ತಿ ತನ್ನ ನ್ಯೂನತೆಗಳನ್ನು ಸಹಿಸಿಕೊಳ್ಳುತ್ತಾ ತನ್ನೊಡನೆ ಸಹಕರಿಸಲು ಈ ಜಡ ವಸ್ತುಗಳನ್ನು ಕೇಳಿಕೊಳ್ಳುವ ತರದಲ್ಲಿ ಕಾಣುವ ಈ ಪೂಜೆಗಳು, ಉದ್ಯೋಗಿಯಲ್ಲಿನ ಕೊರತೆಯ ಸಂಕೇತಗಳೂ ಆದಾವು.

ಸಾರ್ವಜನಿಕ ಕಛೇರಿಗಳಲ್ಲಿ ತಮಗೆ ಹಿತವಾದ ದೇವರ ಸಣ್ಣ ಸಣ್ಣ ಚಿತ್ರಗಳನ್ನು ಇಟ್ಟುಕೊಳ್ಳುವುದರಿಂದ ಪ್ರಾರಂಭವಾದ ಈ ಗೀಳು, ಕುರ್ಚಿ ಮೇಜುಗಳನ್ನು ಪೂಜಿಸುವುದು, ಯಜ್ಞ ಯಾಗಾದಿಗಳನ್ನು ಮಾಡುವುದು ಇವುಗಳನ್ನೊಳಗೊಂಡಂತೆ ಇಂದು ಬೃಹದಾಕಾರವಾಗಿ ಬೆಳೆದಿದೆ. ಸಾರ್ವಜನಿಕ ವೆಚ್ಚದಲ್ಲಿ ದೇವಾಲಯಗಳನ್ನು ಸಂದರ್ಶಿಸುವುದು, ಚಿತ್ರ ವಿಚಿತ್ರ ಪೂಜೆ ಮಾಡುವುದು ಸಾಮಾನ್ಯವಾಗಿದೆ. ಎಲ್ಲಿ ಹೋದರೂ ಪ್ರಾರ್ಥನೆ ಒಂದೇ, ಸ್ವಂತ ರಕ್ಷಣೆ. ಎಲ್ಲೆಂದರಲ್ಲಿ ಈ ಜನ ಮಠಾಧೀಶರ ಪಾದಗಳನ್ನು ವಿವಿಧ ದೈನ್ಯತೆಗಳಲ್ಲಿ ತಪ್ಪಿ ಓಲೈಸುವುದು ನೋಡುವವರಿಗೊಂದು ಹಿಂಸೆಯೆ.

> **ಸಾರ್ವಜನಿಕ ಕಛೇರಿಗಳಲ್ಲಿ ತಮಗೆ ಹಿತವಾದ ದೇವರ ಸಣ್ಣ ಸಣ್ಣ ಚಿತ್ರಗಳನ್ನು ಇಟ್ಟುಕೊಳ್ಳುವುದರಿಂದ ಪ್ರಾರಂಭವಾದ ಈ ಗೀಳು, ಕುರ್ಚಿ ಮೇಜುಗಳನ್ನು ಪೂಜಿಸುವುದು, ಯಜ್ಞ ಯಾಗಾದಿಗಳನ್ನು ಮಾಡುವುದು ಇವುಗಳನ್ನೊಳಗೊಂಡಂತೆ ಇಂದು ಬೃಹದಾಕಾರವಾಗಿ ಬೆಳೆದಿದೆ. ಸಾರ್ವಜನಿಕ ವೆಚ್ಚದಲ್ಲಿ ದೇವಾಲಯಗಳನ್ನು ಸಂದರ್ಶಿಸುವುದು, ಚಿತ್ರ ವಿಚಿತ್ರ ಪೂಜೆ ಮಾಡುವುದು ಸಾಮಾನ್ಯವಾಗಿದೆ. ಎಲ್ಲಿ ಹೋದರೂ ಪ್ರಾರ್ಥನೆ ಒಂದೇ, ಸ್ವಂತ ರಕ್ಷಣೆ. ಎಲ್ಲೆಂದರಲ್ಲಿ ಈ ಜನ ಮಠಾಧೀಶರ ಪಾದಗಳನ್ನು ವಿವಿಧ ದೈನ್ಯತೆಗಳಲ್ಲಿ ತಬ್ಬಿ ಓಲೈಸುವುದು ನೋಡುವವರಿಗೊಂದು ಹಿಂಸೆಯೆ.**

ಇದಿಷ್ಟೆ ಅಲ್ಲ. ಸಣ್ಣದೊಂದು ಉದ್ಘಾಟನೆ, ಮರ ನೆಡುವುದು, ಟ್ರಾಫಿಕ್ ಲೈಟುಗಳ ನೆಡುವಿಕೆ, ಹೀಗೆ ಎಂತಹ ಕನಿಷ್ಠ ಕಾರ್ಯಕ್ರಮವೂ ಪೂಜೆ ಇಲ್ಲದೆ ನಡೆಯಲಾರದು. ಇಷ್ಟೆಲ್ಲಾ ಆದ ಮೇಲೆ ಪುರೋಹಿತರನ್ನು ಹಿಂದೆ ಬಿಡಲು ಹೇಗೆ ಸಾಧ್ಯ? ಕೆಲ ಸಮಯ ನೇಪಥ್ಯಕ್ಕೆ ಸರಿದಿದ್ದ ನಮ್ಮ ಪುರೋಹಿತಶಾಹಿ ಸಾರ್ವಜನಿಕ ಕಛೇರಿಗಳಲ್ಲಿ ವಿಜೃಂಭಿಸಲು ಪ್ರಾರಂಭಿಸಿದೆ. ಸ್ವಂತ ಹಿತ ಕಾಪಾಡಿಕೊಳ್ಳುವುದೊಂದೇ ಇದೆಲ್ಲದರ ಉದ್ದೇಶ. ಅಂದರೆ ಸಾರ್ವಜನಿಕ ಕ್ಷೇತ್ರದಲ್ಲಿ ಎಷ್ಟೇ ಮೇಲೇರಲಿ ಆತ್ಮ ವಿಶ್ವಾಸದ ಕೊರತೆ ಈ ಜನರನ್ನು ಸದಾ ಕಾಡುತ್ತಿರುತ್ತದೆ. ನಿತ್ಯ ಜೀವನದಲ್ಲಿ ಹೊಂದಾಣಿಕೆ, ಓಲೈಕೆ, ಜಬರದಸ್ತು ಇವುಗಳಿಂದ ಕೆಲವರನ್ನು ಒಲಿಸಿಕೊಂಡು, ಕೆಲವರನ್ನು ಬೆದರಿಸಿ, ಕೆಲವರನ್ನು ಹತ್ತಿಕ್ಕಿ ಮಾಡುವ ಹಾಗೆ ದೇವರನ್ನು ಕಾಡಿ, ಬೇಡಿ, ಆಸೆ ತೋರ್ಸಿ ಒಲಿಸಿಕೊಳ್ಳಲಿಚ್ಚಿಸುವುದು ನಿಜವಾಗಿಯೂ ಅಚ್ಚರಿ ಹುಟ್ಟಿಸುವಂತಹುದು.



ಒಂದು ಕಾಲದಲ್ಲಿ ಇಂತಹ ನಡವಳಿಕೆಯನ್ನು ಜನ ಮೂಢಾಚಾರವೆಂದು ಅಲ್ಲಗಳೆದಿದ್ದರು. ಆಗ ವಿಜ್ಞಾನ, ವಿವೇಕ, ಧೈರ್ಯ, ಆತ್ಮ ವಿಶ್ವಾಸ ಇವು ನಾಯಕರಲ್ಲಿ ಮನೆ ಮಾಡಿದ್ದವು. ಸಾಮಾನ್ಯವಾಗಿ ಅವರು ಜನರ ಮಧ್ಯದಿಂದಲೇ ಬಂದವರಾಗಿರುತ್ತಿದ್ದು, ನಿಜ ನಾಯಕತ್ವ ಗುಣ ಹೊಂದಿರುತ್ತಿದ್ದರು. ಕಾಲ ಕಳೆದಂತೆ ಕಳಪೆ ಜನ ನಾಯಕತ್ವದ ಸ್ಥಾನಗಳಿಗೆ ಬರುತ್ತಿದ್ದಂತೆ ವೃದ್ಧಿಯಾಗಬೇಕಿದ್ದ ವೈಜ್ಞಾನಿಕ ಮನೋಭಾವ ನಶಿಸಿ, ಸಾರ್ವಜನಿಕ ಜೀವನದಲ್ಲಿ ಮೂಢನಂಬಿಕೆಯೆ ವಿಜೃಂಭಿಸ ತೊಡಗಿತು.

ಇಂತಹ ನಂಬಿಕೆ ಮತ್ತು ಆಚರಣೆಗಳು ವ್ಯಕ್ತಿಯ ಮೇಲಷ್ಟೇ ಪರಿಣಾಮ ಬೀರಿದ್ದಲ್ಲಿ ಬಹುಶಃ ಅವುಗಳನ್ನು ವೈಯಕ್ತಿಕ ವಿಚಾರವೆಂದು ಕೈಬಿಡಬಹುದಿತ್ತು. ಆದರೆ ಇವು ವ್ಯಕ್ತಿಯನ್ನು ಮೀರಿ ಇಡೀ ಸಮಾಜದ ಮೇಲೆ ಪರಿಣಾಮ ಬೀರುವಂತವುಗಳಾಗಿವೆ. ಮತ್ತು ನಮ್ಮ ಎಲ್ಲಾ ಸಾಮಾಜಿಕ, ಸಂವಿಧಾನಿಕ ಪ್ರಕ್ರಿಯೆಗಳನ್ನು ದಿಕ್ಕುಗೆಡಿಸುವಂತಹವಾಗಿವೆ. ನಮ್ಮ ಮುಖ್ಯಮಂತ್ರಿಯವರ ನಡವಳಿಕೆಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಅವರ ದೇವಾಲಯ ಮತ್ತು ಮಠಾಧೀಶರ ದರ್ಶನಗಳೆಲ್ಲಾ ಸಾರ್ವಜನಿಕ ಖರ್ಚಿನಲ್ಲಿಯೇ ನಡೆಯುತ್ತಿರುವುದರಲ್ಲಿ ಸಂಶಯವಿಲ್ಲ. ಅವರು ತಮ್ಮ ಮೂಢಾಚಾರಗಳಿಗಾಗಿ ಹಲವಾರು ಕೋಟಿ ರೂಪಾಯಿಗಳನ್ನು ಪೋಲು ಮಾಡುತ್ತಿದ್ದಾರೆ. ಸಾರ್ವಜನಿಕ ಹಣದ ಪೋಲು ಒಂದು ಕಡೆಯಾದರೆ, ಸಮಯದ ಪೋಲು ಮತ್ತೊಂದು ಕಡೆ. ಬಹುಶಃ ನಮ್ಮ ಮುಖ್ಯಮಂತ್ರಿಗಳು ಮತ್ತು ಇತರ ಮಂತ್ರಿಗಳು ದೇವಾಲಯಗಳ ಸಂದರ್ಶನದಲ್ಲಿ ಕಳೆಯುವ ಕಾಲದಷ್ಟೂ ಸಹ ವಿಧಾನಸೌಧದಲ್ಲಿ ಕಳೆಯುವುದಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಇದರಿಂದ ಇವರೆಷ್ಟು ಮಟ್ಟಿಗೆ ಜನರ ಕೆಲಸದಲ್ಲಿ ನಿರತರಾಗಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಹುದು.

ಅಧಿಕಾರ ಹಿಡಿದವರಿಗೆ ತಾವು ಜನಪ್ರತಿನಿಧಿಗಳು, ಜನರಿಗೆ ಜವಾಬ್ದಾರರು ಎಂಬುದು ಸಾಮಾನ್ಯವಾಗಿ ಮರೆತು ಹೋಗುತ್ತದೆ. ದೈವ ಕೃಪೆಯಿಂದ ತಾವು ಪ್ರಧಾನಮಂತ್ರಿಗಳಾಗಿರುವುದಾಗಿ ಒಂದೊಬ್ಬ ಪ್ರಧಾನಮಂತ್ರಿಗಳು ಕೊಟ್ಟ ಹೇಳಿಕೆ ಇಲ್ಲಿ ಸ್ಮರಣೀಯ. ಹಿಂದಿನ ಎಷ್ಟೋ ರಾಜರುಗಳು ತಮ್ಮ ರಾಜ್ಯದಷ್ಟು ವಿಸ್ತಾರವಾದ ಭೂಮಿಗೂ ಬಾಧ್ಯರಾಗಿರಲಿಲ್ಲ. ಆದುದರಿಂದ ನಾವು ಅವರಿಗೇನು ಕಡಿಮೆ? ನಾವೂ ಅವರಂತೆ ಅಧಿಕಾರ ಚಲಾಯಿಸಹುದು ಎಂದು ಕೊಳ್ಳುತ್ತಾರೆ ಈ ಜನ. ನಮ್ಮ ಮುಖ್ಯಮಂತ್ರಿಯವರು ಆದ್ದರಿಂದಲೇ ಹೋದಕಡೆ ಬಂದಕಡೆ ಕೋಟಿಗಟ್ಟಲೆ ಸರ್ಕಾರದ ಹಣ, ಭೂಮಿ, – ಇತರ ಸೌಲತ್ತುಗಳನ್ನು ತಮ್ಮ ಹತ್ತಿರದವರಿಗೆ, ತಮ್ಮನ್ನು ಆಶೀರ್ವದಿಸಿ ಹಾಡಿ ಹೊಗಳುವವರಿಗೆ ದಯಪಾಲಿಸುತ್ತಾರೆ. ಇದೆಲ್ಲವೂ ಸಾರ್ವಜನಿಕರದು. ಇವುಗಳನ್ನು ನೀಡುವುದಕ್ಕೆ ಕಾನೂನು ಕಟ್ಟಳೆಗಳಿವೆ ಎಂಬುದು ಅವರ ಮನಸ್ಸಿಗೆ ಬರುವುದೇ

ಇಲ್ಲ. ಅಧಿಕಾರ ಇಂತಹ ಅನುಮಾನಗಳೆಲ್ಲವನ್ನು ಆಚೆಗೆ ನೂಕಿಬಿಡುತ್ತದೆ. ಇತ್ತೀಚೆಗೆ ನಮ್ಮ ಗೌರವಾನ್ವಿತ ಮುಖ್ಯ ಮಂತ್ರಿಗಳು ತಮಿಳುನಾಡಿನ ಯಾವುದೊ ದೇವಸ್ಥಾನಕ್ಕೆ ಸ್ಥಳದಲ್ಲೇ ಒಂದು ಕೋಟಿ ರೂಪಾಯಿಯನ್ನು ರಾಜ್ಯದ ಬೊಕ್ಕಸದಿಂದ ನೀಡಿದರೆಂದು ವರದಿಯಾಗಿದೆ.

ಇದೊಂದು ಉದಾಹರಣೆ ಮಾತ್ರ. ಸಾರ್ವಜನಿಕ ರಂಗಕ್ಕೆ ಧರ್ಮದ ಪ್ರವೇಶ ಮತ್ತೊಂದು ರೀತಿಯಲ್ಲಿ ಜನರಿಗೆ ಅನ್ಯಾಯವೆಸಗಿದೆ. ಸಾರ್ವಜನಿಕ ಕ್ಷೇತ್ರವನ್ನು ಅದು ಕುಬ್ಜವಾಗಿಸಿದೆ. ಅನೇಕ ಸಾರ್ವಜನಿಕ ಸಭೆಗಳಲ್ಲಿ ಧರ್ಮಗುರುಗಳನ್ನು ಎತ್ತರದ ಸ್ಥಾನಗಳಲ್ಲಿಯೂ, ಮಂತ್ರಿ ಮಹೋದಯರನ್ನು ಕೆಳ ಸ್ಥಾನಗಳಲ್ಲಿಯೂ ಕುಳ್ಳಿರಿಸುವುದನ್ನು ನಾವು ನೋಡುತ್ತೇವೆ. ಮತ್ತು ಹೆಚ್ಚು ಕಡಿಮೆ ವೇದಿಕೆಗೆ ಬರುವ ಎಲ್ಲಾ ನಾಯಕರೂ ಮಠಾಧೀಶರ ಕಾಲು ಮುಟ್ಟಿ ನಮಸ್ಕರಿಸಿಯಲ್ಲದೆ ತಮ್ಮ ಸ್ಥಾನಗಳಲ್ಲಿ ಕೂರುವುದಿಲ್ಲ. ಮಠಧೀಶರಿಗಿಂತ ತಾವು ಕೀಳು, ನಿಕೃಷ್ಟ ಎಂಬುದನ್ನು ಎಲ್ಲರೂ ಒಪ್ಪಿಕೊಂಡಂತೆ ಆಗಿದೆ.

ಧಾರ್ಮಿಕ ಕ್ಷೇತ್ರದಲ್ಲಿ ಧರ್ಮಗುರುಗಳನ್ನು ಶ್ರೇಷ್ಠವೆಂದು ಒಪ್ಪಿಕೊಳ್ಳುವುದಕ್ಕೂ ಸಾರ್ವಜನಿಕ ಕ್ಷೇತ್ರದಲ್ಲಿ ಒಪ್ಪಿಕೊಳ್ಳುವುದಕ್ಕೂ ಬಹಳ ವ್ಯತ್ಯಾಸವಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಮಠಾಧೀಶರಿಗೆ ಹೆಚ್ಚಿನ ಅಂತಸ್ತು ನೀಡಿದಾಗ ಅವರು ಆಡಳಿತದಲ್ಲಿ ಮೂಗು ತೂರಿಸಲು ತೊಡಗುತ್ತಾರೆ. ಸರ್ಕಾರದ ಅನೇಕ ಧೋರಣೆಗಳು ಮತ್ತು ಕಾರ್ಯಕ್ರಮಗಳಲ್ಲಿ ಮಠಾಧೀಶರುಗಳು ತಲೆ ಹಾಕಿರುವ ಅನೇಕ ನಿದರ್ಶನಗಳನ್ನು ನಾವು ಕಾಣಬಹುದು. ಇಲ್ಲಿ ಮತ್ತೊಂದು ವಿಚಾರವನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಎಲ್ಲ ಧರ್ಮಗಳ ಗುರುಗಳಿಗೂ ಈ ರೀತಿಯ ಅವಕಾಶ ಸಿಕ್ಕಿದ್ದಲ್ಲಿ ಬಹುಶ: "ಹುಚ್ಚಿನಲ್ಲಿಯೂ ಒಂದು ನೀತಿಯಿದೆ" ಎಂದು ಇದನ್ನು ಕ್ಷಮಿಸಬಹುದಿತ್ತು. ಆದರೆ ಈಗ ಹಾಗಾಗಿಲ್ಲ. ಕೇವಲ ಹಿಂದು ಧರ್ಮದ ಕೆಲ ಜಾತಿಯ ಗುರುಗಳ, ಮಠಾಧೀಶರ ವಿಷಯದಲ್ಲಿ ಮಾತ್ರ ಈ ರೀತಿಯ ಬದಲಾವಣೆಗಳಾಗಿದ್ದು ಇತರರೆಲ್ಲಾ ಈ ಬೆಳವಣಿಗೆಗಳ ಹೊರಗಿದ್ದಾರೆ.

**ಧಾರ್ಮಿಕ ಕ್ಷೇತ್ರದಲ್ಲಿ ಧರ್ಮಗುರುಗಳನ್ನು ಶ್ರೇಷ್ಠವೆಂದು ಒಪ್ಪಿಕೊಳ್ಳುವುದಕ್ಕೂ ಸಾರ್ವಜನಿಕ ಕ್ಷೇತ್ರದಲ್ಲಿ ಒಪ್ಪಿಕೊಳ್ಳುವುದಕ್ಕೂ ಬಹಳ ವ್ಯತ್ಯಾಸವಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಮಠಾಧೀಶರಿಗೆ ಹೆಚ್ಚಿನ ಅಂತಸ್ತು ನೀಡಿದಾಗ ಅವರು ಆಡಳಿತದಲ್ಲಿ ಮೂಗು ತೂರಿಸಲು ತೊಡಗುತ್ತಾರೆ. ಸರ್ಕಾರದ ಅನೇಕ ಧೋರಣೆಗಳು ಮತ್ತು ಕಾರ್ಯಕ್ರಮಗಳಲ್ಲಿ ಮಠಾಧೀಶರುಗಳು ತಲೆ ಹಾಕಿರುವ ಅನೇಕ ನಿದರ್ಶನಗಳನ್ನು ನಾವು ಕಾಣಬಹುದು. ಇಲ್ಲಿ ಮತ್ತೊಂದು ವಿಚಾರವನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಎಲ್ಲ ಧರ್ಮಗಳ ಗುರುಗಳಿಗೂ ಈ ರೀತಿಯ ಅವಕಾಶ ಸಿಕ್ಕಿದ್ದಲ್ಲಿ ಬಹುಶ: "ಹುಚ್ಚಿನಲ್ಲಿಯೂ ಒಂದು ನೀತಿಯಿದೆ" ಎಂದು ಇದನ್ನು ಕ್ಷಮಿಸಬಹುದಿತ್ತು.ಆದರೆ ಈಗ ಹಾಗಾಗಿಲ್ಲ. ಕೇವಲ ಹಿಂದೂ ಧರ್ಮದ ಕೆಲ ಜಾತಿಯ ಗುರುಗಳ, ಮಠಾದೀಶರ ವಿಷಯದಲ್ಲಿ ಮಾತ್ರ ಈ ರೀತಿಯ ಬದಲಾವಣೆಗಳಾಗಿದ್ದು ಇತರರೆಲ್ಲಾ ಈ ಬೆಳವಣಿಗೆಗಳ ಹೊರಗಿದ್ದಾರೆ. ಈ ಬೆಳವಣಿಗೆಗಳು ಸಾರ್ವಜನಿಕ ವಲಯದಲ್ಲಿ ಏರುಪೇರಿಗೆ ಕಾರಣವಾಗಿವೆ.**

ಈ ಬೆಳವಣಿಗೆಗಳು ಸಾರ್ವಜನಿಕ ವಲಯದಲ್ಲಿ ಏರುಪೇರಿಗೆ ಕಾರಣವಾಗಿವೆ. ಸಾರ್ವಜನಿಕ ಹಣ ಮತ್ತು ಸೌಲತ್ತು ಕೆಲ ವರ್ಗಗಳಿಗೆ ಮಾತ್ರ ಹರಿಯುವಂತಾಗಿದೆ. ಇದರಿಂದ ಆಯಾ ಮಠಾಧೀಶರು ಆ ಜಾತಿಗಳಿಗೆ ಹೆಚ್ಚು ಸೌಲತ್ತು, ಅಧಿಕಾರ, ಶ್ರೀಮಂತಿಕೆ ತರುವ ಮಾರ್ಗಗಳಾಗಿದ್ದಾರೆ. ಆದುದರಿಂದ ಆ ಜಾತಿ ಜನ ಅವರ ಸುತ್ತ ಒಟ್ಟಾಗುತ್ತಿದ್ದು ಅವರ ನಿರ್ದೇಶನದಂತೆ ಚುನಾವಣೆಗಳಲ್ಲಿ ಮತ ಚಲಾಯಿಸುತ್ತಾರೆ. ಇದರಿಂದ ಬೇಕಾದವರನ್ನು ಆರಿಸುವ, ತಮ್ಮ ವಿರುದ್ಧ ಚಕಾರವೆತ್ತುವವರನ್ನು ಸೋಲಿಸುವ ಮಟ್ಟಿಗೆ ಈ ಪ್ರವೃತ್ತಿ ಬೆಳೆದಿದೆ. ಈಗಾಗಿ ನಮ್ಮ ರಾಜಕೀಯ ನಾಯಕರು ಅಧಿಕಾರಕ್ಕಾಗಿ ಮಠಾಧೀಶರನ್ನು ಓಲೈಸುವುದು, ಅವರು ಇವರಿಂದ ಹಣ, ಭೂಮಿ, ಮತ್ತು ಶರಣಾಗತಿ ಬಯಸುವುದು ಸಾಮಾನ್ಯವಾಗಿಬಿಟ್ಟಿದೆ. ಆದುದರಿಂದಲೇ ಮಾನ್ಯ ಯಡಿಯೂರಪ್ಪನವರು ಅಧಿಕಾರ ವಹಿಸಿಕೊಳ್ಳುತ್ತಲೆ ಮೊದಲು ಮಾಡಿದ ಮಹತ್ಕಾರ್ಯ ತುಮಕೂರಿನ ಸಿದ್ಧಗಂಗಾ ಮಠಕ್ಕೆ ಯಾವ ಕೋರಿಕೆಯೂ ಇಲ್ಲದೆ ಅದೊಂದು ಸರ್ಕಾರಿ ಸಂಸ್ಥೆ ಎನ್ನುವ ರೀತಿಯಲ್ಲಿ 10 ಕೋಟಿ ರೂಪಾಯಿಗಳನ್ನು ನೀಡಿದ್ದು. ಇಂತಹ ಮಹತ್ಕಾರ್ಯಗಳನ್ನು ಅವರು ಅಂದಿನಿಂದೆ ಮಾಡುತ್ತಲೇ ಬಂದಿದ್ದಾರೆ. ಸಂವಿಧಾನ ಘೋಷಿತ 'ಸಮಾನ ಅವಕಾಶ' ಮತ್ತು ಯಾವುದೇ ಸರ್ಕಾರಿ ಕೆಲಸದಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳ ಬಗ್ಗೆ ಅವರು ಎಳ್ಳಷ್ಟೂ ತಲೆ ಕೆಡಿಸಿಕೊಳ್ಳುವುದಿಲ್ಲ.

ಇವುಗಳಿಂದುಂಟಾಗಿರುವ ಮತ್ತೊಂದು ಪರಿಣಾಮವೇನೆಂದರೆ ಸಾರ್ವಜನಿಕ ಸಂಪನ್ಮೂಲಗಳು ಸಾಮಾಜಿಕ ದುಃಸ್ಥಿತಿಯಲ್ಲಿರುವವರಿಗಿಂತ ಸಾಮಾಜಿಕ ಸುಸ್ಥಿತಿಯಲ್ಲಿರುವವರ ಕಡೆ ಹರಿದು ಹೋಗುವಂತಾಗಿದೆ. ಹಿಂದುಳಿದ ವರ್ಗಗಳು, ದಲಿತರು ಮುಂತಾದವರ ಸ್ಥಿತಿ ಶೋಚನೀಯವಾಗಿದೆ. ಇತರ ಜಾತಿಗಳ, ಧರ್ಮಗಳ ಜನರು ಸಾರ್ವಜನಿಕ ಜೀವನದಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿತರಾಗಿದ್ದಾರೆ. ಬಲಿಷ್ಠ ಜಾತಿಗಳನ್ನು ವಿರೋಧಿಸಿದರೆ ತಾವು ಮುಂದೆ ಗೆದ್ದು ಬರುವ ಸಾಧ್ಯತೆಗಳು ಕಡಿಮೆಯಾಗುತ್ತವೆ ಎಂಬ ಭಯ ಹಿಂದುಳಿದ ಜನಾಂಗಗಳ ಪ್ರತಿನಿಧಿಗಳನ್ನು ಆವರಿಸಿದೆ. ಅವರು ಈ ಎಲ್ಲಾ ಉಲ್ಲಂಘನೆಗಳೂ ಸಹ ಜವೆಂಬಂತೆ ಕಣ್ಣುಮುಚ್ಚಿ ಕುಳಿತಿದ್ದಾರೆ. ಎಂಥದೇ ದುರ್ವ್ಯಯವಾಗಲಿ, ಏನೇ ಕೊಳ್ಳೆ ಹೋಗಲಿ ಅವರು ಚಕಾರವೆತ್ತಲಾರರು. ಈ ಪರಿಸ್ಥಿತಿ ಇಂತಹ ಉಲ್ಲಂಘನೆಗಳು ಯಾವುದೇ ಅಡೆ ತಡೆ ಇಲ್ಲದೆ ಅನೂಚಾನವಾಗಿ ನಡೆಯಲು ಅನುಕೂಲ ಮಾಡಿಕೊಟ್ಟಿದೆ.

ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಇಂದು ಸರಕಾರ ಒಂದು ಧರ್ಮದ ಚಿಂತನೆಯನ್ನು ಹೇರಲು ಹೊರಟಿರುವುದು ಈ ಬೆಳವಣಿಗೆಯ ಕಾರಣವಾಗಿದೆ. ಈ ಹಿಂದೆ ನಡೆದ ಚರ್ಚುಗಳ ಮೇಲಿನ ಹಲ್ಲೆ, ಅಂತರ್‌ಜಾತಿ ಹೆಣ್ಣು ಗಂಡುಗಳ ಸ್ನೇಹಪರ ನಡವಳಿಕೆಗೆ ವಿರೋಧ, ಗೋಹತ್ಯಾ ನಿಷೇಧ ಮುಂತಾದವು ಈ ಬೆಳವಣಿಗೆಯ ಪರಿಣಾಮ. ಇನ್ನೂ ಅನೇಕ ಜನವಿರೋಧಿ ಕಾರ್ಯಕ್ರಮಗಳನ್ನೂ ಸದ್ಯದಲ್ಲಿಯೇ ನಾವು ಕಂಡರೆ ಆಶ್ಚರ್ಯವಿಲ್ಲ.

ನಾವು ಒಂದು ಜಾತ್ಯತೀತ ರಾಷ್ಟ್ರ – ಕೆಲವರು ಇದನ್ನು ಸುಳ್ಳು ಜಾತ್ಯಾತೀತತೆ ಎಂದು ಕರೆದಾಗ ಕೂಡ. ನಮ್ಮ ಸಂವಿಧಾನ ಯಾವುದೇ ಧರ್ಮವನ್ನು ಆಚರಿಸುವ, ಪ್ರಚಾರ ಮಾಡುವ ಹಕ್ಕನ್ನು ಎಲ್ಲ ಜನರಿಗೆ ನೀಡಿದೆ. ಧರ್ಮ ಮತ್ತು ಆಡಳಿತ ಒಂದರಿಂದೊಂದು ದೂರವಿರಬೇಕಾದ್ದು ಇದರ ಒಂದು ಅವಶ್ಯಕತೆ. ವ್ಯಕ್ತಿ ಯಾವುದೇ ಧರ್ಮ ಆಚರಿಸಲಿ ಅದು ಅವನ ವೈಯಕ್ತಿಕ ವಿಚಾರವೇ ಹೊರತು ಸಾರ್ವಜನಿಕವಲ್ಲ. ಆ ಸ್ವಾತಂತ್ರ್ಯಕ್ಕೆ ಸರ್ಕಾರ ರಕ್ಷಣೆ ನೀಡಲೇಬೇಕು. ಅನೇಕ ಜಾತಿ ಧರ್ಮಗಳನ್ನುಳ್ಳ ನಮ್ಮ ರಾಷ್ಟ್ರ ಛಿದ್ರವಾಗದಿರಬೇಕಾದರೆ ಆಡಳಿತ ಎಲ್ಲ ಧರ್ಮಾಚರಣೆಗಳಿಂದ ದೂರವಿದ್ದು, ಎಲ್ಲ ಜಾತಿ, ಧರ್ಮಗಳನ್ನೂ ಸಮಾನವಾಗಿ ಕಾಣಬೇಕಲ್ಲದೆ, ಎಲ್ಲರಿಗೂ ಅವರವರ ಅರ್ಹತೆಗೆ ತಕ್ಕಂತೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ಮತ್ತು ರಾಜ್ಯದ ಎಲ್ಲ ಸಂಪನ್ಮೂಲಗಳೂ ಅರ್ಹತೆಗೆ ತಕ್ಕಂತೆ ಹಂಚಿಕೆಯಾಗಬೇಕಾಗುತ್ತದೆ. ಸಾರ್ವಜನಿಕ ವೇದಿಕೆಗೆ ಧರ್ಮದ ಪ್ರವೇಶ ಈ ಸಂವಿಧಾನಿಕ ಆಶಯಗಳನ್ನು ತಲೆಕೆಳಗೆ ಮಾಡಿದೆ. ಯಜಮಾನ ಸಂಸ್ಕೃತಿ ಮೇಲುಗೈ ಪಡೆಯುವಂತಾಗಿದೆ.

ಈ ಸಂದರ್ಭದಲ್ಲಿ ಚರಿತ್ರೆಯ ಪುಟಗಳತ್ತ ಕ್ಷಣ ಕಣ್ಣು ಹಾಯಿಸಿದಲ್ಲಿ ರಾಜ್ಯಾಡಳಿತದಲ್ಲಿ ಧರ್ಮದ ಪ್ರವೇಶ ಎಂತಹ ವಿಕೃತಿಗಳನ್ನು ಹುಟ್ಟುಹಾಕಬಲ್ಲದು ಎಂಬುದನ್ನು ಮನಗಾಣಬಹುದು. ಭಾರತದಲ್ಲಂತೂ ಅದರ ಅಟ್ಟಹಾಸ ಸರ್ವವಿಧಿತ. ಶಿಕ್ಷಣವನ್ನು ಕೆಲವರಿಗೇ ಮೀಸಲಿಟ್ಟು ಬಹುಜನರು ಯಾವುದೇ ಶಿಕ್ಷಣಕ್ಕೆ ಆಳಿಸಿದರೆ ಅವರ ಕಿವಿ ಕಿವುಡು ಮಾಡಬೇಕೆಂದು ಅದು ವಿಧಿಸಿತು. ಅದು ಜಾರಿಗೆ ತಂದ ಧರ್ಮ ಶಾಸ್ತ್ರ ಒಂದೇ ಅಪರಾಧಕ್ಕೆ ಒಬ್ಬರಿಗೆ ತೀವ್ರ ಶಿಕ್ಷೆ ವಿಧಿಸಿ ಮತ್ತೊಬ್ಬರನ್ನು ಸಂಪೂರ್ಣವಾಗಿ ಮುಕ್ತ ಮಾಡಿತು. ಈ ರೀತಿಯ ತಾರತಮ್ಯ ಶೋಷಣೆ ಎಲ್ಲಾ ಸಾಮಾಜಿಕ ಚಟುವಟಿಕೆಗಳಲ್ಲಿ, ಎಲ್ಲ ವೈಯಕ್ತಿಕ ಕ್ರಿಯೆಗಳಲ್ಲಿ ಕಂಡವು. ಒಡೆದ ಭಾರತ ಸಮಾಜ ತನ್ನಲ್ಲಿ ಎಲ್ಲ ಜ್ಞಾನವಿದ್ದಾಗ್ಯೂ ಯಾವುದೇ ಬೆಳವಣಿಗೆ ಕಾಣುವಲ್ಲಿ ಸೋತಿತು. ಪದೇ ಪದೇ ಪರಕೀಯರ ಆಕ್ರಮಣಕ್ಕೆ ಒಳಗಾಯಿತು. ಅವರಿಂದ ಆಳಲ್ಪಟ್ಟಿತು. ತೀವ್ರ ಅಂಧಶ್ರದ್ಧೆ, ಬಡತನ ಮತ್ತು ದುರಾಡಳಿತಗಳಿಗೆ ತುತ್ತಾಯಿತು.

ಇದನ್ನು ಸರಿಯಾಗಿ ಗ್ರಹಿಸಿ, ಸಮಾಜದ ಎಲ್ಲರ ಸಮಾನತೆ, ಎಲ್ಲರಿಗೆ ಸಮಾನ ಹಕ್ಕು, ಮತ್ತು ಸಂಪನ್ಮೂಲಗಳ ವಿತರಣೆ ಮಾಡುವ ದೃಷ್ಟಿಯಿಂದ ನಮ್ಮ ಸಂವಿಧಾನ ನಿರ್ಮಾಪಕರು ಜಾತ್ಯತೀತತೆಯನ್ನು ಒಂದು ಶ್ರೇಷ್ಠ ವಿಧಿಯಾಗಿ ಸಂವಿಧಾನದಲ್ಲಿ ಎತ್ತಿ ಹಿಡಿದಿರುತ್ತಾರೆ. ಈ 60 ವರ್ಷಗಳಲ್ಲೇ ಇದನ್ನು ಬುಡಮೇಲು ಮಾಡುವ ಅನೇಕ ಕೃತ್ಯಗಳು ನಮ್ಮ ಮುಂದೆಯೇ ನಡೆಯುತ್ತಿವೆ. ಇವುಗಳನ್ನು ಈಗಲೇ ಪತ್ತೆಹಚ್ಚದಿದ್ದಲ್ಲಿ ನಮ್ಮೆಲ್ಲಾ ಉಚ್ಚ ಧ್ಯೇಯಗಳು ಮಣ್ಣುಗೂಡಿ ಮತ್ತದೇ ಹಳೆ ಪರಿಸರಕ್ಕೆ ಜನ ನೂಕಲ್ಪಡಬಹುದು. □

ಪಿತೃಸಮಾನರಾದ ಶ್ರೀ ಲಾಲ್ ಕೃಷ್ಣ ಅಡ್ವಾಣಿಯವರ ಮಾತಿಗೆ ಗೌರವ ಕೊಟ್ಟು ರಾಜೀನಾಮೆ ಹಿಂಪಡೆಯುವ ನಿರ್ಧಾರ ಕೈಗೊಂಡೆನೆಂದು ಮೊದಲು ಹೇಳಿದ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆಯವರು ಬಳಿಕ ತಕ್ಷಣ ಸ್ಪಂದಿಸಿ ಜನತೆಯ ಕರೆಯನ್ನು ಮಾನ್ಯ ಮಾಡದಿದ್ದುದಕ್ಕೆ ಪಶ್ಚಾತ್ತಾಪ ವ್ಯಕ್ತಪಡಿಸಿದ್ದಾರೆ.

ಆದರೂ ಎಲ್ಲಾ ಬಣ್ಣವನ್ನು ಮಸಿ ನುಂಗಿತೆಂದೇ ಅನಿಸುತ್ತಿದೆ. ಏಕೆಂದರೆ ಭಾರತದ ಇತ್ತೀಚಿನ ಇತಿಹಾಸವನ್ನು ಅಭ್ಯಾಸಿಸಿದ ಯಾರಿಗೂ ಅಡ್ವಾಣಿ ಬಗ್ಗೆ ಗೌರವದ ಭಾವನೆ ಹುಟ್ಟುವುದು ಕಷ್ಟ. ಚರಿತ್ರೆಯ ಪುಟಗಳಲ್ಲಿ ಏನು ದಾಖಲಿಸಲ್ಪಟ್ಟಿದೆಯೆಂಬುದನ್ನು ತಿಳಿಯುವ ನಿಟ್ಟಿನಲ್ಲಿ ಇಲ್ಲೊಂದು ಪುಟ್ಟ ಪ್ರಯತ್ನ.

## ಮುನ್ನುಡಿ

ಅಕ್ಟೋಬರ್ 31, 1984ರಿಂದ ಡಿಸೆಂಬರ್ 2, 1989ರ ವರೆಗೆ ಭಾರತದ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ 1986ರ ಫೆಬ್ರವರಿ ಯಲ್ಲಿ ಬಾಬರಿ ಮಸೀದಿಯ ಗೇಟುಗಳ ಬೀಗ ತೆರೆಯಲು ನಿರ್ಧರಿಸಿದರು. ಇದು ಭಾರತೀಯ ಜನತಾ ಪಕ್ಷದ ಪಾಲಿಗೆ ವರದಾನ ವಾಗಿ ಪರಿಣಮಿಸಿತು. ಏಪ್ರಿಲ್ 8, 1988ರಂದು ಆಗ್ರಾದಲ್ಲಿ ನಡೆದ ಬಿಜೆಪಿ ಸರ್ವಸದಸ್ಯರ ಸಭೆ ಮಹತ್ವಪೂರ್ಣವಾಗಿತ್ತು. ಮೇ 9, 1986ರಂದು ವಾಜಪೇಯಿಯಿಂದ ಅಧ್ಯಕ್ಷ ಸ್ಥಾನ ವಹಿಸಿಕೊಂಡಿದ್ದ ಅಡ್ವಾಣಿ ಆ ಸಭೆಯಲ್ಲಿ "ಭಾರತೀಯ ಸಂಸ್ಕೃತಿಯ ಸಮ್ಮಿಳಿತ ಗುಣಕ್ಕೆ ಒತ್ತು ನೀಡುವುದೆಂದರೆ ಸಾಮಾನ್ಯವಾಗಿ ಅದು ಅದರ ನೈಜ ಹಿಂದೂ ಸತ್ವವನ್ನು ಅಲ್ಲಗಳೆಯುವ ಯತ್ನ" ಎನ್ನುವ ನೂತನ ಸಂಶೋಧನೆಯನ್ನು ಮಾಡಿದರು. ಇದೇ ಅಡ್ವಾಣಿ ಏಪ್ರಿಲ್ 4, 1980ರಂದು "ಭಾರತದ ಸಮ್ಮಿಳಿತ ಸಂಸ್ಕೃತಿಯನ್ನು ಮತ್ತು ಜಾತ್ಯತೀತತೆಯನ್ನು ಕಾಪಾಡುವೆನೆಂದು "ಗಂಭೀರವಾಗಿ" ಪಣ ತೊಟ್ಟಿದ್ದರು!

ಜೂನ್ 11, 1989ರಂದು ಪಾಲಂಪುರದಲ್ಲಿ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಯಿತು. ನವಂಬರ್‌ನಲ್ಲಿ ನಡೆಯಲಿರುವ ಮಹಾಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಯೋಧ್ಯೆ ಕುರಿತಂತೆ ಒಂದು ನಿರ್ಣಯವನ್ನು ಅಲ್ಲಿ ಕೈಗೊಳ್ಳಲಾಯಿತು. "ಈ ದೇಶದ ಬಹುಸಂಖ್ಯಾತರಾದ ಹಿಂದೂಗಳ ಭಾವನೆಗಳನ್ನು ಗೌರವಿಸಬೇಕು. ವಿವಾದಾತ್ಮಕ ಸ್ಥಳವನ್ನು ಹಿಂದೂಗಳಿಗೊಪ್ಪಿಸಿ ಬೇರೊಂದು ಜಾಗದಲ್ಲಿ ಮಸೀದಿ ನಿರ್ಮಿಸಬೇಕೆಂದು ಆಗ್ರಹಿಸಲಾಯಿತು. ಆದರೆ ಅಲ್ಲಿರುವ ಮಸೀದಿಯನ್ನು ಬಿಜೆಪಿ ಏನು ಮಾಡಲಿದೆಯೆಂಬ ವಿಷಯದ ಪ್ರಸ್ತಾಪ ಅದರಲ್ಲಿರಲಿಲ್ಲ. ಅದೇನೆಂದು ಬಯಲಾದದ್ದೇ ಡಿಸೆಂಬರ್ 6, 1992ರಂದು. ಪಾಲಂಪುರದ ನಿರ್ಣಯ ಅಂಗೀಕೃತವಾಗುತ್ತಲೇ "ಐದು ಮತಗಳಲ್ಲಿ ಪರಿವರ್ತಿತವಾಗಲಿದೆ ಎನ್ನುವುದು ಖಚಿತ" ಎಂದಿದ್ದ ಅಡ್ವಾಣಿ ಅಂತಿಮವಾಗಿ ತನ್ನ ನಿಲುವು ಬಿಜೆಪಿಗೆ ತಂದುಕೊಟ್ಟಿರುವ ರಾಜಕೀಯ ಲಾಭವನ್ನು ಡಿಸೆಂಬರ್ 3, 1989ರಂದು ಹೆಮ್ಮೆಯಿಂದ ಒಪ್ಪಿಕೊಂಡಿದ್ದರು.

ಅಡ್ವಾಣಿ ಪ್ರಕಾರ ವಿವಾದದ ವಸ್ತುವಾಗಿದ್ದುದು ಮಂದಿರ ನಿರ್ಮಾಣವಲ್ಲ, "ದೇಶದ ರಾಷ್ಟ್ರೀಯತೆಯ ತಳಹದಿ." 1989ರ ಸೆಪ್ಟೆಂಬರ್ 24ರಂದು ಅದನ್ನು "ಹಿಂದುತ್ವದ ರಕ್ಷಣೆಗಾಗಿರುವ ಧರ್ಮಯುದ್ಧ"ವೆಂದು ಕರೆದಿದ್ದರು. ಮರುದಿನ ಅದನ್ನು "ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ರಾಷ್ಟ್ರೀಯತೆಯ ಪುನರುತ್ಥಾನದ ದ್ವಿತೀಯ ಮಜಲು" ಎಂದು ಬಣ್ಣಿಸಿದರು. "ಬಿಜೆಪಿ ಹಿಂದೂಗಳ ಭಾವನೆಗಳನ್ನು ನಿರ್ದಿಷ್ಟ ಪಥದಲ್ಲಿ ಹರಿಸಲು ಪ್ರಯತ್ನಿಸದಿರುತ್ತಿದ್ದರೆ ಅದು ದೇಶದ ಐಕ್ಯತೆಯ ಮೇಲೆ ಒಳ್ಳೆಯ ಪರಿಣಾಮಗಳನ್ನು ಬೀರುತ್ತಿರಲಿಲ್ಲ"ವೆಂದು ನವೆಂಬರ್ 1989ರಲ್ಲಿ ಹೇಳಿದರು. "ಭಾರತದ ಸಂಸ್ಕೃತಿ ಮೂಲತಃ ಒಂದು ಹಿಂದೂ ಸಂಸ್ಕೃತಿಯಾಗಿದೆ. ಅದು ನಮ್ಮ ಬಗೆಬಗೆಯ ನೀತಿಗಳಲ್ಲಿ, ಕಾರ್ಯಕ್ರಮಗಳಲ್ಲಿ ಮತ್ತು ಧೋರಣೆಗಳಲ್ಲಿ ಪ್ರತಿಫಲಿತವಾಗಬೇಕೆ"ಂದು ಕೊಯಮತ್ತೂರಿನಲ್ಲಿ ತಿಳಿಸಿದರು. ಈ ಮಾತುಗಳಲ್ಲೆಲ್ಲ ಅಧ್ಯಕ್ಷಂತಲೂ ಬೆದರಿಕೆಯೇ ಜಾಸ್ತಿ ಇರುವುದನ್ನು ಆಮೇಲಿನ ಘಟನೆಗಳು ವಿಶದಪಡಿಸುತ್ತವೆ.



### ಅಡ್ವಾನಿ ಮತ್ತು ಬಿಜೆಪಿ, ಆರೆಸ್ಸೆಸ್ ನಡುವಿನ ನಂಟು

ಮಾರ್ಚ್ 17, 1990ರಂದು ಕೊಯಮತ್ತೂರಿನಲ್ಲಿ ಆರೆಸ್ಸೆಸ್ ಸದಸ್ಯರನ್ನು ಉದ್ದೇಶಿಸಿ ಅಡ್ವಾಣಿ ಹೇಳಿದರು: "........ಬಿಜೆಪಿ ಮತ್ತು ಆರೆಸ್ಸೆಸ್ ನಡುವೆ ಕೇವಲ ಸೈದ್ಧಾಂತಿಕವೊಂದೇ ಅಲ್ಲ, ಜಾಲತ್ರಿಕ ಸಂಬಂಧವೂ ಇದೆ. ......ನೀವು ಉತ್ತಮ ಪಕ್ಷವೆಂದು ಬಣ್ಣಿಸುವ ಬಿಜೆಪಿ ಉತ್ತಮವಾಗಿರುವುದು ಕೇವಲ ಅದು ಆರೆಸ್ಸೆಸ್‌ನೊಂದಿಗೆ ಜೊತೆಗೂಡಿರುವುದರಿಂದ ಎನ್ನುವುದನ್ನು ಅರಿತುಕೊಳ್ಳಬೇಕು" (ದ ಟೆಲಿಗ್ರಾಫ್ ಮೇ 17)

ಮುಂದುವರಿದು, "......ಬಿಜೆಪಿಯಲ್ಲಿ ದುಡಿಯುತ್ತಿರುವ ಸ್ವಯಂಸೇವಕರು ........ನಮ್ಮ ಸೈದ್ಧಾಂತಿಕ ನೆಲೆಗಟ್ಟಿನ ಬಗ್ಗೆ ನಮ್ಮಲ್ಲಿ ಪ್ರತಿಯೊಬ್ಬನಲ್ಲೂ ಅರಿವು ಮೂಡಿಸಿದ್ದಾರೆ. ಆರೆಸ್ಸೆಸ್‌ನಿಂದ

**ಅಡ್ವಾನಿ ಪ್ರಕಾರ ವಿವಾದದ ವಸ್ತುವಾಗಿದ್ದುದು ಮಂದಿರ ನಿರ್ಮಾಣವಲ್ಲ, "ದೇಶದ ರಾಷ್ಟ್ರೀಯತೆಯ ತಳಹದಿ." ೧೯೮೯ರ ಸೆಪ್ಟಂಬರ್ ೨೪ರಂದು ಅದನ್ನು "ಹಿಂದುತ್ವದ ರಕ್ಷಣೆಗಾಗಿರುವ ಧರ್ಮಯುದ್ಧ"ವೆಂದು ಕರೆದಿದ್ದರು. ಮರುದಿನ ಅದನ್ನು "ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ರಾಷ್ಟ್ರೀಯತೆಯ ಪುನರುತ್ಥಾನದ ದ್ವಿತೀಯ ಮಜಲು" ಎಂದು ಬಣ್ಣಿಸಿದರು. "ಬಿಜೆಪಿ ಹಿಂದೂಗಳ ಭಾವನೆಗಳನ್ನು ನಿರ್ದಿಷ್ಟ ಪಥದಲ್ಲಿ ಹರಿಸಲು ಪ್ರಯತ್ನಿಸದಿರುತ್ತಿದ್ದರೆ ಅದು ದೇಶದ ಐಕ್ಯತೆಯ ಮೇಲೆ ಒಳ್ಳೆಯ ಪರಿಣಾಮಗಳನ್ನು ಬೀರುತ್ತಿರಲಿಲ್ಲ"ವೆಂದು ನವಂಬರ್ ೧೯೮೯ರಲ್ಲಿ ಹೇಳಿದರು. "ಭಾರತದ ಸಂಸ್ಕೃತಿ ಮೂಲತಃ ಒಂದು ಹಿಂದೂ ಸಂಸ್ಕೃತಿಯಾಗಿದೆ.**

# ತಂದೆ ಸಮಾನ ವ್ಯಕ್ತಿಯೂ ಕೆಲ ಐತಿಹಾಸಿಕ...

ಪ್ರೇರಣೆ ಪಡೆದಿರುವಂತಹ ನಮ್ಮೆಲ್ಲಾ ಸಹ ಸಂಘಟನೆಗಳಾದ ವಿಹಿಂಪ, ಎಬಿವಿಪಿ, ಬಿಎಂಎಸ್, ಸೇವಾ ಭಾರತಿ, ಕಲ್ಯಾಣ್ ಆಶ್ರಮ ಮುಂತಾದವುಗಳ ಜೊತೆ ನಮಗಿರುವ ಸಂಬಂಧಗಳ ಬಗ್ಗೆ ತಿಳುವಳಿಕೆ ಕೊಟ್ಟಿದ್ದಾರೆ. ..........ನಾವು ನಮ್ಮ ಪ್ರಯತ್ನಗಳನ್ನು ಇನ್ನಷ್ಟು ತೀವ್ರಗೊಳಿಸಬೇಕಿದೆ. ಪ್ರಸಕ್ತವಾಗಿ ಆರೆಸ್ಸೆಸ್‌ನ ನಿಲುವನ್ನು ಬಿಂಬಿಸಲಾಗುತ್ತಿಲ್ಲ. ಅದನ್ನು ನಾವು ಎಲ್ಲೆಡೆ ಹಾಯಿಸಬೇಕಿದೆ. ಆ ಮೂಲಕ ಅದು [ಆರೆಸ್ಸೆಸ್] ತನ್ನ ರಾಜಕೀಯ ಉಪಕರಣವಾಗಿರುವ ಬಿಜೆಪಿ ನೆರವಿನಿಂದ ಅಧಿಕ ಮತಗಳನ್ನು ಪಡೆದು, ಸಂಸತ್ತಿನಲ್ಲಿ, ಅಸೆಂಬ್ಲಿಗಳಲ್ಲಿ ಅಧಿಕ ಸೀಟುಗಳನ್ನು ಗಳಿಸಿ, ಸರಕಾರಗಳಲ್ಲಿ ಅಧಿಕ ಸ್ಥಾನ ಪಡೆದುಕೊಂಡು ಹೆಚ್ಚು ಸ್ವೀಕಾರಾರ್ಹತೆ ಹೊಂದುವಂತೆ ಮಾತ್ರವಲ್ಲ ಗೌರವಕ್ಕೂ ಪಾತ್ರವಾಗುವಂತೆ ಮಾಡಬೇಕಿದೆ........." ಎಂದು ಹೇಳಿದರು.

### ಅಡ್ವಾನಿಯೂ ಮಂಡಲ ಕಮಂಡಲವೂ

ಡಿಸೆಂಬರ್ 2, 1989ರಂದು ವಿ.ಪಿ.ಸಿಂಗ್ ದೇಶದ ಪ್ರಧಾನಿಯಾದರು. ಆಗಸ್ಟ್ 7, 1990ರಂದು ಆತ ಮಂಡಲ್ ವರದಿಯನ್ನು ಅನುಷ್ಠಾನಗೊಳಿಸುವ ನಿರ್ಧಾರವನ್ನು ಪ್ರಕಟಿಸುತ್ತಲೇ ಅಡ್ವಾನಿ ರಥಯಾತ್ರೆಯ ಘೋಷಣೆ ಮಾಡಿದರು. ರಥಯಾತ್ರೆ ಸಪ್ಟೆಂಬರ್ 25ರಂದು ಸೋಮನಾಥದಿಂದ ಆರಂಭಗೊಂಡು ಅಕ್ಟೋಬರ್ 30ಕ್ಕೆ ಅಯೋಧ್ಯೆ ತಲುಪಲಿದೆಯೆಂದು ತಿಳಿಸಿದರು.

ನವೆಂಬರ್ 10, 1990ರಂದು ವಿ.ಪಿ.ಸಿಂಗ್ ರಾಜೀನಾಮೆ ನೀಡಿದಾಗ ನೂತನ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡವರು ಚಂದ್ರಶೇಖರ್. ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿದ್ದ ಕ್ರಿಶನ್ ಲಾಲ್ ಶರ್ಮ ಅಂದು ಪ್ರಧಾನಿ ಚಂದ್ರಶೇಖರ್‌ಗೆ ಬರೆದಿರುವ ಪತ್ರವೊಂದು ಹೀಗಿದೆ: "ನಾನಾಗಲಿ ನನ್ನ ಪಕ್ಷವಾಗಲಿ ಯಾವುದೇ ಮಸೀದಿಯನ್ನು ಧ್ವಂಸಗೊಳಿಸುವುದರ ಪರ ಇಲ್ಲ. ಬಾಬರಿ ಮಸೀದಿ ಕಟ್ಟಡವನ್ನು ಗೌರವಯುತವಾಗಿ ಬೇರೊಂದು ಕಡೆಗೆ ಸ್ಥಳಾಂತರಿಸಬೇಕೆಂದು ಅಧ್ಯಕ್ಷ ಎಲ್.ಕೆ.ಅಡ್ವಾನಿ ಸಲಹೆ ಮಾಡಿರುವುದು ಈ ಕಾರಣಕ್ಕಾಗಿ."

ರಥಯಾತ್ರೆ ಹೊರಡುವುದಕ್ಕೆ ಮುನ್ನ ಅಡ್ವಾನಿ ಅದನ್ನು "ಹಿಂದುತ್ವದ ಸಂರಕ್ಷಣೆಗಾಗಿರುವ ಧರ್ಮಯುದ್ಧ; ನಕಲಿ ಜಾತ್ಯತೀತತೆಯ ವಿರುದ್ಧದ ಧರ್ಮಯುದ್ಧ"ವೆಂದು ಕರೆದರು. ಸಪ್ಟೆಂಬರ್ 30, 1990ರಂದು ಮುಂಬಯಿಯಲ್ಲಿ "ಈ ದೇಶ ಹಾಗೂ ಅದರ ಸಂಸ್ಕೃತಿಯನ್ನು ಸ್ವೀಕರಿಸಬೇಕೆ"ಂದು ಅಲ್ಪಸಂಖ್ಯಾತರಿಗೆ ಕರೆಕೊಟ್ಟರು. ಮರುದಿನ "ಮುಸ್ಲಿಮರು, ಸಿಖ್ಖರು ಮತ್ತು ಇತರ ಸಮುದಾಯಗಳು ತಂತಮ್ಮ ಧರ್ಮಗಳನ್ನು ಅನುಸರಿಸುತ್ತಿರುವಾಗ ಅವುಗಳನ್ನು ಜಾತ್ಯತೀತವೆಂದು ಕರೆಯುತ್ತೇವೆ. ಆದರೆ ಬಿಜೆಪಿ, ಶಿವಸೇನೆಯಂತಹ ಪಕ್ಷಗಳು ಹಿಂದೂ ಧರ್ಮವನ್ನು ಆಚರಿಸಿದಾಗ ನಮ್ಮನ್ನು ಕೋಮುವಾದಿಯೆಂದು ಕರೆಯಲಾಗುತ್ತದೆ"ಂದು ದೂರಿದರು. ಹೀಗೆ ಸಮುದಾಯಗಳ 'ಧರ್ಮಾಚರಣೆ'ಯನ್ನು ಮತ್ತು ರಾಜಕೀಯ ಪಕ್ಷವೊಂದರ ಧರ್ಮಪರಿಪಾಲನೆಯನ್ನು ಅಕ್ಕಪಕ್ಕದಲ್ಲಿರಿಸಿ ತನ್ನ ಭಾಷಾಪ್ರಾವೀಣ್ಯದ ಚಳಕವನ್ನು ಪ್ರದರ್ಶಿಸಿದರು. ಬಹುಸಂಸ್ಕೃತಿಯ ಸಮಾಜವೊಂದರಲ್ಲಿ ಇಂತಹ ಮಾತುಗಳನ್ನಾಡುವುದು ಅಪಾಯಕಾರಿ ಪ್ರವೃತ್ತಿಯಲ್ಲದೆ ಇನ್ನೇನು?

**ಡಿಸೆಂಬರ್ 2, 1989ರಂದು ವಿ.ಪಿ.ಸಿಂಗ್ ದೇಶದ ಪ್ರಧಾನಿಯಾದರು. ಆಗಸ್ಟ್ 7, 1990ರಂದು ಆತ ಮಂಡಲ್ ವರದಿಯನ್ನು ಅನುಷ್ಠಾನಗೊಳಿಸುವ ನಿರ್ಧಾರವನ್ನು ಪ್ರಕಟಿಸುತ್ತಲೇ ಅಡ್ವಾನಿ ರಥಯಾತ್ರೆಯ ಘೋಷಣೆ ಮಾಡಿದರು. ರಥಯಾತ್ರೆ ಸೆಪ್ಟೆಂಬರ್ 25ರಂದು ಸೋಮನಾಥದಿಂದ ಆರಂಭಗೊಂಡು ಅಕ್ಟೋಬರ್ 30ಕ್ಕೆ ಅಯೋಧ್ಯೆ ತಲಪಲಿದೆಯೆಂದು ತಿಳಿಸಿದರು.**

### ರಥಯಾತ್ರೆ, ವಿಹಿಂಪ ಮತ್ತು ಬಜರಂಗ ದಳ

1990ರ ರಥಯಾತ್ರೆಯಲ್ಲಿ ಪ್ರಧಾನ ಪಾತ್ರ ಬಜರಂಗ ದಳದ್ದೆ ಆಗಿತ್ತು. ಬಜರಂಗ ದಳದ ಸ್ವಯಂಸೇವಕರು ತಮ್ಮ ಬದ್ಧತೆಯನ್ನು ರುಜುವಾತುಮಾಡಿ ತೋರಿಸುವುದಕ್ಕೋಸ್ಕರ ಒಂದು ಕಪ್ ರಕ್ತವನ್ನು ಅಡ್ವಾನಿಗೆ ಅರ್ಪಿಸಿದರು. ಉಜ್ಜಯಿನಿಯಲ್ಲಿ ಅಡ್ವಾನಿಗೆ ಶಸ್ತ್ರಾಸ್ತ್ರಗಳನ್ನು ಸಮರ್ಪಿಸಲಾಯಿತು. ಸ್ವಯಂಸೇವಕರು "ಬಹುತೇಕ ಸಮಯ ಅಡ್ವಾನಿಯನ್ನು ಸ್ವಾಗತಿಸುತ್ತಿದ್ದುದು ಆತನಹಣೆಗೆ ರಕ್ತ ತಿಲಕವನ್ನಿಡುವ ಮೂಲಕ" ಎಂದು ಯೇಲ್‌ವಿವಿಯ ಪ್ರೊ॥ ರಿಚರ್ಡ್ ಎಚ್. ಡೇವಿಸ್ ದಾಖಲಿಸಿದ್ದಾರೆ.

ಶ್ರೀರಾಮ ರಥದ ಪ್ರತಿಮಾಶಿಲ್ಪ ಕುರಿತಾಗಿ ಹರಿತವಾದ ಪ್ರಬಂಧವೊಂದನ್ನು ಬರೆದಿರುವ ಡೇವಿಸ್, 1990ರ ರಥಯಾತ್ರೆಯಲ್ಲಿ ವಿಶ್ವ ಹಿಂದೂ ಪರಿಷತ್ತು ವಹಿಸಿದ್ದ ಒಂದು ಅತಿ ಮುಖ್ಯ ಪಾತ್ರವನ್ನು ನಮ್ಮ ಮುಂದಿಡುತ್ತಾರೆ:

"ಆ ಮೆರವಣಿಗೆಯನ್ನು [ಬಿಜೆಪಿ ಮತ್ತು ವಿಹಿಂಪ ವತಿಯಿಂದ] ಜಂಟಿಯಾಗಿ ಆಯೋಜಿಸಲಾಗಿತ್ತು. ವಿಹಿಂಪ ನಾಯಕತ್ವವು ಭೂಮಿಕೆಯನ್ನು ಅಣಿಗೊಳಿಸಿ ತೆರೆಮರೆಯಿಂದ ರಣತಂತ್ರದ ಸಲಹೆ ನೀಡಿತ್ತು.....

ಧಾರ್ಮಿಕ, ಸೂಚ್ಯಾರ್ಥದಿಂದ ಕೂಡಿದ, ಉಗ್ರಗಾಮಿ, ಗಂಡುತನದ, ಮುಸ್ಲಿಂ ವಿರೋಧಿಯಾದ ನಿಷ್ಠುರ ನಿಷ್ಠೆಯ ಚಿತ್ರಣಕ್ಕೆ ವಿಹಿಂಪ ಮತ್ತು ಇತರ ಸಂಬಂಧಿತ ಗುಂಪುಗಳು ಪ್ರಮುಖ ಕಾರಣವಾಗಿದ್ದವು. ಈ ಚಿತ್ರಣಕ್ಕೆ ಬೇರೊಂದು ಚೌಕಟ್ಟು ಒದಗಿಸಲೆತ್ನಿಸುವವರ ಅಥವಾ ಅದನ್ನು ಮೃದುವಾಗಿಸಲೆತ್ನಿಸುವವರ ಸ್ಥಾನದಲ್ಲಿ ಬಿಜೆಪಿ ಮತ್ತು ಅಡ್ವಾನಿ ಹೆಚ್ಚಾಗಿ ತಮ್ಮನ್ನು ಇರಿಸಿಕೊಂಡಿದ್ದರು...... ಈ ಎರಡೆರಡು ಸಂದೇಶಗಳಿಂದ ಎರಡೂ ತಂಡಗಳಿಗೆ ಲಾಭವಿತ್ತು. ಈ ಮೆರವಣಿಗೆಯಲ್ಲಿ ಬಿಜೆಪಿ ಭಾಗವಹಿಸುವುದರಿಂದಾಗಿ ಪ್ರಮುಖ ಮಾಧ್ಯಮಗಳು ಅದನ್ನು ವರದಿ ಮಾಡುವುದು ಖಚಿತವಾಯಿತು. ಪರಿಣಾಮವಾಗಿ ವಿಹಿಂಪ ಮತ್ತು ಅದೇ ಬಳಗಕ್ಕೆ ಸೇರಿದ [ಬಜರಂಗ ದಳದಂತಹ] ಗುಂಪುಗಳಿಗೆ ತಮ್ಮ ಸಂದೇಶವನ್ನು ಹಿಂದಿಗಿಂತಲೂ ದೊಡ್ಡ ಪ್ರೇಕ್ಷಕ ಸಮೂಹದ ಮುಂದಿಡಲು ಸಾಧ್ಯವಾಯಿತು.

ಅತ್ತ ಜಾಸ್ತಿ ಉಗ್ರಗಾಮಿಯಾಗಿರುವುದು ವಿಹಿಂಪ ಎನ್ನುವ ಮೂಲಕ ಬಿಜೆಪಿ ತನ್ನ ಉಗ್ರಗಾಮಿತ್ವದ ಚಿತ್ರಣವನ್ನು ಅಲ್ಲಗಳೆದು ಮತದಾರರ ಮಧ್ಯೆ ತನ್ನ ಗೌರವ ಕಾಪಾಡಿಕೊಳ್ಳುವ ಯತ್ನ ಮಾಡಿತು. ಅದೇ ವೇಳೆ ಆ ಉಗ್ರಗಾಮಿತ್ವದ ಚಿತ್ರಣದಿಂದ ಕೆಲವರಲ್ಲಿ ಉಂಟಾದ ನಿಸ್ಸಂದಿಗ್ಧ ಬದ್ಧತೆ ಮತ್ತು ಅಧಿಕಾರಗಳ ಲಾಭವನ್ನೂ ಪಡೆದುಕೊಂಡಿತು."ಅಂತಿಮವಾಗಿ ಅಡ್ವಾನಿಯ ರಥಯಾತ್ರೆಯ ವೇಳೆ ದೇಶಕ್ಕೆ ದೇಶವೇ ಅಲ್ಲೋಲಕಲ್ಲೋಲಗೊಂಡು ನೆತ್ತರಹೊಳೆ ಹರಿದಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

### ಮಂದಿರ ಮಸೀದಿ ವಿವಾದದ ರಾಜಕೀಯ

1991ರಲ್ಲಿ ಭಾರತ ಮತ್ತೊಂದು ಚುನಾವಣೆಯತ್ತ ಮುಗ್ಗರಿಸತೊಡಗಿತು. ರಾಮಮಂದಿರದ ವಿವಾದ "ಚುನಾವಣೆಯ ಫಲಿತಾಂಶವನ್ನು ಬಿಜೆಪಿ ಪರವಾಗಿ ಪ್ರಭಾವಿಸುವುದರ ಬಗ್ಗೆ" ಫೆಬ್ರವರಿ 24ರಂದು ಅಡ್ವಾನಿ ವಿಶ್ವಾಸ ವ್ಯಕ್ತಪಡಿಸಿದರು. ಏಪ್ರಿಲ್ 4, 1991ರಂದು ನವದೆಹಲಿಯಲ್ಲಿ ವಿಹಿಂಪದ ಅಶೋಕ್ ಸಿಂಘಾಲ್ "ನಮ್ಮ ಶೋಭಾಯಾತ್ರೆಗಳು ಪ್ರತಿಯೊಂದು ಪ್ರದೇಶದ ಮೂಲಕವೂ ಸಾಗಲೇಬೇಕು" ಎಂದು ಗುಡುಗಿದಾಗ ಅಲ್ಲಿ ಅಡ್ವಾನಿ ಕೂಡಾ ಉಪಸ್ಥಿತರಿದ್ದರು. ಚುನಾವಣೆಯಲ್ಲಿ ಬಿಜೆಪಿಯ ರಾಜಕೀಯ ಅದೃಷ್ಟ ಮಿಂಚಾಯಿಸಿದಾಗ ಅಡ್ವಾನಿ "ನಾನು ರಾಮನ ವಿಷಯವನ್ನು ಪರಿಣಾಮ ಕಾರಿಯಾಗಿ ಬಳಸದಿರುತ್ತಿದ್ದ ಪಕ್ಷದಲ್ಲಿ ಖಂಡಿತಾ ನವದೆಹಲಿ ಕ್ಷೇತ್ರದಲ್ಲಿ ಸೋಲುಣ್ಣುತ್ತಿದ್ದೆ" ಎಂದು ಜೂನ್ 18, 1991ರಂದು ಒಪ್ಪಿಕೊಂಡರು.

### ಅಡ್ವಾನಿ ಮತ್ತು ಬಾಬರಿ ಮಸೀದಿ ಧ್ವಂಸಕೃತ್ಯ

"ಭಯೋತ್ಪಾದನೆ" ಶಬ್ದದ ಮೂಲಾರ್ಥವನ್ನು ನೋಡಿದರೆ ಅದರ ಪ್ರಕಾರ ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿರುವುದು ಒಂದು ಭಯೋತ್ಪಾದಕ ಕೃತ್ಯವಾಗುತ್ತದೆ. ಈ ಇಡೀ ಕಾರ್ಯಾಚರಣೆಯಲ್ಲಿ ಅಡ್ವಾನಿ ವಹಿಸಿದ್ದ ಪಾತ್ರ ಕೆಳಗಿನ ದಾಖಲೆಗಳಿಂದ ಸ್ಪಷ್ಟವಾಗುತ್ತದೆ:

ಡಿಸೆಂಬರ್ 2, 1992ರಂದು ಜನಸತ್ತಾ ಪತ್ರಿಕೆ ಜೊತೆ ಮಾತನಾಡಿದ ಅಡ್ವಾನಿ, ಶ್ರೀ ರಾಮ ಮಂದಿರ ನಿರ್ಮಾಣದ ಸಲುವಾಗಿ ಬಿಜೆಪಿ ಅಯೋಧ್ಯೆಯಲ್ಲಿ ಕಾನೂನು ಭಂಗ ಮಾಡಲಿದೆ ಎಂದು ಒತ್ತಿ ಹೇಳಿದರು.

"......ಬಾಬರಿ ಮಸೀದಿ ಉರುಳುವ ಮುನ್ನಾದಿನ, ಅಂದರೆ ಡಿಸೆಂಬರ್ 5, 1992ರಂದು ವಿನಯ್ ಕಟಿಯಾರ್ ಮನೆಯಲ್ಲಿ ನಡೆದಿದ್ದ ರಹಸ್ಯ ಸಭೆಯಲ್ಲಿ ಅಡ್ವಾನಿ, ಪವನ್ ಪಾಂಡೆ ಮುಂತಾದವರು ಭಾಗವಹಿಸಿದ್ದರು. ಅಲ್ಲಿ ಮಸೀದಿಯನ್ನು ಧ್ವಂಸಗೊಳಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತು......" ಎನ್ನುತ್ತದೆ ಅಕ್ಟೋಬರ್ 5, 1993ರಂದು ಸಿಬಿಐ ಸಲ್ಲಿಸಿದ ದೋಷಾರೋಪ ಪಟ್ಟಿ.

ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಪ್ರಕಾರ: ಡಿಸೆಂಬರ್ 6ರಂದು "ಅಯೋಧ್ಯೆಯೊಳಕ್ಕೆ ಕೇಂದ್ರದ ಪಡೆಗಳು ಪ್ರವೇಶಿಸುವುದನ್ನು ತಡೆಯಲು ನಗರದ ಎಲ್ಲಾ ಪ್ರವೇಶ ದ್ವಾರಗಳನ್ನೂ ಮುಚ್ಚಿಸಬೇಕೆಂದು ಅಡ್ವಾನಿ ಆದೇಶಿಸುತ್ತಿದ್ದುದನ್ನು ಕೇಳಿಸಿಕೊಳ್ಳಲಾಗಿದೆ. ಆಗ ಸುಮಾರು ಅಪರಾಹ್ನ 2 ಗಂಟೆ. ಆ ಸಮಯದಲ್ಲಿ ಕಟ್ಟಡದ ಗೋಪುರಗಳ ಮೇಲಿದ್ದ ಜನರು ಒಡೆಯುವ ಕೆಲಸದಲ್ಲಿ ತೊಡಗಿದ್ದರು."

ಧ್ವಂಸಕೃತ್ಯದ ಹೊಣೆಗಾರಿಕೆಯನ್ನು ಮೊದಲು ಪ್ರಧಾನಿ ಪಿ.ವಿ.ನರಸಿಂಹ ರಾವ್ ಮೇಲೆ ಹೊರಿಸಿದ ಅಡ್ವಾನಿ ತರುವಾಯ ಅದನ್ನೊಂದು ಚಾರಿತ್ರಿಕ ಘಟನೆಯೆಂದು ಕೊಂಡಾಡಿದರು. ಮಸೀದಿ ಧ್ವಂಸಗೊಂಡ ಕೆಲವೇ ಗಂಟೆಗಳ ನಂತರ ಲಕ್ನೋದಿಂದ ಲೋಕಸಭಾಧ್ಯಕ್ಷರಿಗೆ ಬರೆದ ಪತ್ರ ಅಡ್ವಾನಿಯ ಕಪಟನೀತಿಗೊಂದು ಉತ್ಕೃಷ್ಟ ಉದಾಹರಣೆ: "ಇಂದು ಅಯೋಧ್ಯೆಯಲ್ಲಿ ನಡೆದ ಘಟನೆಗಳಿಗಾಗಿ ತೀವ್ರ ವಿಷಾದ ವ್ಯಕ್ತಪಡಿಸುತ್ತೇನೆ......

ನನ್ನಿಂದ ಅದನ್ನು ತಡೆಯಲಾಗದಿದ್ದುದಕ್ಕಾಗಿ ನನಗೆ ದುಃಖವಾಗುತ್ತಿದೆ."

ಕೋಮು ಅಸಾಮರಸ್ಯ ಹರಡಿದ ಆರೋಪದ ಮೇರೆಗೆ ಅಡ್ವಾನಿಯನ್ನು ಮರುದಿನ ಬೆಳಗ್ಗೆ ಬಂಧಿಸಲಾಯಿತು. ಆಗ "ಅಯೋಧ್ಯೆ ವಿಷಯದಲ್ಲಿ ಜನರ ಭಾವನೆಗಳ ತೀವ್ರತೆಯ ಮಟ್ಟವನ್ನು ಅಳೆಯಲು ನಮ್ಮಿಂದ ಸಾಧ್ಯವಾಗಿಲ್ಲ"ವೆಂದು ತನ್ನನ್ನು ಸಮರ್ಥಿಸಿಕೊಂಡರು. ವಾಸ್ತವದಲ್ಲಿ ಸುಮಾರು ಎರಡು ಲಕ್ಷದಷ್ಟಿದ್ದ ಜನರ ಪೈಕಿ ಧ್ವಂಸ ಕೃತ್ಯದಲ್ಲಿ ನೇರವಾಗಿ ಪಾಲ್ಗೊಂಡವರು ತರಬೇತಾದ ಕೇವಲ 500-600 ಮಂದಿ. ಮರುದಿನ ಅಡ್ವಾನಿ ಹೇಳಿದರು:

"ನ್ಯಾಯದಾನ ಪ್ರಕ್ರಿಯೆಯ ಮಂದಗತಿಯಿಂದಲೂ ಮತ್ತು ಕಾರ್ಯಾಂಗದ ಮಂದಬುದ್ಧಿ ಹಾಗೂ ಮಂದ ದೃಷ್ಟಿಗಳಿಂದಲೂ ಕೆರಳಿದ್ದ ಜನರ ಗುಂಪೊಂದು 50 ವರ್ಷಗಳ ಹಿಂದೆಯೇ ಕೈಬಿಡಲಾಗಿರುವ ಹಳೆ ಮಸೀದಿಯ ಕಟ್ಟಡವೊಂದನ್ನು ಇಂದು ಕೆಡವಿದಾಗ ರಾಷ್ಟ್ರಪತಿ, ಉಪ ರಾಷ್ಟ್ರಪತಿ ಮತ್ತು ರಾಜಕೀಯ ಪಕ್ಷಗಳು ಅವರನ್ನು ದೇಶಕ್ಕೆ ದ್ರೋಹ ಬಗೆದವರು, ಸಂವಿಧಾನವನ್ನು ನಾಶಗೊಳಿಸಿದವರು ಮತ್ತು ಇನ್ನೂ ಏನೇನೋ ಕೆಟ್ಟ ಹೆಸರುಗಳಿಂದ ಕರೆಯುತ್ತಿದ್ದಾರೆ."

ಹೀಗೆ ಮಸೀದಿಯನ್ನು ಕೆಡವಿದ ಎರಡೇ ದಿನಗಳಲ್ಲಿ ಅಡ್ವಾನಿಯ ಸಮರ್ಥನೆಗಳು ನಿರ್ದಿಷ್ಟ ರೂಪವನ್ನು ತಾಳಿದ್ದವು. ಬಿಡುಗಡೆಗೊಂಡ ಬಳಿಕ ನಡೆಸಿದ ಮೊದಲ ಪತ್ರಿಕಾ ಗೋಷ್ಠಿಯಲ್ಲಿ ಅಡ್ವಾನಿ ಹೇಳಿದ ಮಾತುಗಳು ಗಮನಾರ್ಹ: 1990ರಲ್ಲಿ ಆರಂಭವಾದ ಸೈದ್ಧಾಂತಿಕ ಚರ್ಚೆಯ ಉಗ್ರರೂಪವೇ ಡಿಸೆಂಬರ್ 6ರ ಘಟನೆಗಳು.

ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದ ನಂತರ ನಡೆದ ಮತ್ತೊಂದು ಸುತ್ತು ಹಿಂಸಾಚಾರದ ಬಳಿಕ ಅಡ್ವಾನಿ ಹೇಳಿದರೇನೆಂದರೆ ಮುಸ್ಲಿಮರು ಹಿಂದುತ್ವದ ಕಲ್ಪನೆಯ ಜೊತೆ ಗುರುತಿಸಿಕೊಂಡಲ್ಲಿ ದಂಗೆಗಳು ಸಂಭವಿಸಲು ಕಾರಣವೇ ಇರುವುದಿಲ್ಲ (ದ ಟೈಮ್ಸ್ ಆಫ್ ಇಂಡಿಯ, ಜನವರಿ 30, 1993). ಬಿಜೆಪಿಯ ಧಾರ್ಮಿಕ-ಸಾಂಸ್ಕೃತಿಕ ಅಲಂಕಾರಿಕ ಮಾತುಗಳ ಹಿಂದೆ ಯಾವತ್ತೂ ಒಂದು ಕ್ರೂರ ರಾಜಕೀಯ ಲೆಕ್ಕಾಚಾರ ಇದ್ದೇ ಇದೆ. ಇದನ್ನು ಖುದ್ದು ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್ ಏಪ್ರಿಲ್ 14, 2000ರಂದು ಭೋಪಾಲ್‌ನಲ್ಲಿ ಒಪ್ಪಿಕೊಂಡಿದ್ದಾರೆ. ರಾಮ ಜನ್ಮಭೂಮಿ ಚಳುವಳಿ "ಶುದ್ಧ ರಾಜಕೀಯ ಚಳುವಳಿಯಾಗಿತ್ತು. ಅದಕ್ಕೂ ಧರ್ಮಕ್ಕೂ ಯಾವ ಸಂಬಂಧವೂ ಇರಲಿಲ್ಲ." (ದ ಟೆಲಿಗ್ರಾಫ್, ಏಪ್ರಿಲ್ 16, 2000).

**ಅಡ್ವಾನಿ ಮತ್ತು ಮಹಾತ್ಮಾ ಗಾಂಧಿ**

1980ರಲ್ಲಿ ಜನತಾ ಪಕ್ಷಾಧ್ಯಕ್ಷ ಚಂದ್ರಶೇಖರ್‌ಗೆ ಬರೆದಿದ್ದ ಪತ್ರವೊಂದರಲ್ಲಿ ಅಡ್ವಾನಿ, "ಪಕ್ಷದ ತತ್ವ ಹಾಗೂ ಕಾರ್ಯಕ್ರಮಗಳಿಗೆ, ಗಾಂಧೀ ಮಾರ್ಗದ ಸಮಾಜವಾದ ಹಾಗೂ ಜಾತ್ಯತೀತತೆಯ ಕಲ್ಪನೆಗಳಿಗೆ ನಾವು ಸಂಪೂರ್ಣ, ನಿಸ್ಸಂದಿಗ್ಧ ಬದ್ಧತೆ ಪ್ರದರ್ಶಿಸುತ್ತೇವೆ" ಎಂದಿದ್ದರು. ಈ ಬದ್ಧತೆಯನ್ನು ತೋರಿದ್ದು ಜನತಾ ಪಕ್ಷವು ನಂಬಿದ್ದ ಜಾತ್ಯತೀತತೆಗಾದರೂ ನಂತರ ಇದಕ್ಕೇ 'ನಕಲಿ ಜಾತ್ಯತೀತತೆ' ಎಂಬ ಅಡ್ಡ ಹೆಸರಿಟ್ಟವರೂ ಅಡ್ವಾನಿಯೇ.

"ಭಾರತ ಮಾತೆ ಬಗ್ಗೆ ಉಪದೇಶ ನೀಡುವ ಅಡ್ವಾನಿ ಈಗ ಮಹಾತ್ಮಾ ಗಾಂಧಿಯನ್ನು ರಾಷ್ಟ್ರಪಿತನೆಂದು ಒಪ್ಪಲು ನಿರಾಕರಿಸುವ ಮಟ್ಟಿಗೆ ಹೋಗಿದ್ದಾರೆ"ಎಂದು ಅಕ್ಟೋಬರ್ 17, 1989ರ ಟೈಮ್ಸ್ ಆಫ್ ಇಂಡಿಯ ಸಂಪಾದಕೀಯ ಟೀಕಿಸಿದೆ.

ಗಾಂಧಿ ಹಂತಕ ನಾಥೂರಾಮ್‌ನ ಸಹೋದರ ಗೋಪಾಲ್ ಬರೆದ 'Why I Assassinated Mahatma Gandhi' (ನಾನೇಕೆ ಮಹಾತ್ಮಾ ಗಾಂಧಿಯನ್ನು ಕೊಂದೆ) ಡಿಸೆಂಬರ್ 1993ರಲ್ಲಿ ಪ್ರಕಟಗೊಂಡಾಗ ಗುಟ್ಟು ರಟ್ಟಾಯಿತು. ಫ್ರಂಟ್‌ಲೈನ್ (ಜನವರಿ 28, 1994) ಜೊತೆ ನಡೆಸಿದ ಸಂದರ್ಶನವೊಂದರಲ್ಲಿ ಗೋಪಾಲ್ ಎಲ್ಲ ವಿವರಗಳನ್ನು ನೀಡಿದರು.

ನಾಥೂರಾಮ್‌ಗೂ ಆರೆಸ್ಸೆಸ್‌ಗೂ ಏನೂ ಸಂಬಂಧವಿರಲಿಲ್ಲವೆಂದು ಅಡ್ವಾನಿ ಸಾಧಿಸುತ್ತಿರುವ ಬಗ್ಗೆ ಗೋಪಾಲ್‌ರನ್ನು ಪ್ರಶ್ನಿಸಿದಾಗ "ಹಾಗೆ ಹೇಳುವುದು ಪುಕ್ಕಲುತನವಾಗುತ್ತದೆಂದು ಅಡ್ವಾನಿಗೆ ಎದಿರೇಟು ನೀಡಿದ್ದೇನೆ. 'ಹೋಗಿ ಗಾಂಧಿಯ ಹತ್ಯೆ ಮಾಡು' ಎನ್ನುವ ಠರಾವನ್ನು ಆರೆಸ್ಸೆಸ್ ಅಂಗೀಕರಿಸಿರಲಿಲ್ಲವೆಂದು ಹೇಳಬಹುದು. ಆದರೆ ಆತ ತಮ್ಮವನಲ್ಲವೆಂದು ಹೇಳುವುದಲ್ಲ. ಹಿಂದೂ ಮಹಾಸಭಾ ಆತನನ್ನು ದೂರಮಾಡಿಲ್ಲ. ಆರೆಸ್ಸೆಸ್‌ನ ಬೌದ್ಧಿಕ್ ಕಾರ್ಯವಾಹ್ (ಬೌದ್ಧಿಕ ಕಾರ್ಯಕರ್ತ) ಆಗಿದ್ದ ಸಮಯದಲ್ಲೇ 1944ರಲ್ಲಿ ನಾಥೂರಾಮ್ ಹಿಂದೂ ಮಹಾಸಭಾದ ಕೆಲಸ ಮಾಡಲಾರಂಭಿಸಿದ. .........ನಾಥೂರಾಮ್, ದತ್ತಾತ್ರೇಯ, ನಾನು ಮತ್ತು ಗೋವಿಂದ ನಾವು ನಾಲ್ವರು ಸಹೋದರರೂ ಆರೆಸ್ಸೆಸ್‌ನಲ್ಲಿದ್ದೆವು. .......ಗಾಂಧಿ ಕೊಲೆ ಬಳಿಕ ಗೋಲ್ವಲ್ಕರ್ ಮತ್ತು ಆರೆಸ್ಸೆಸ್ ತುಂಬಾ ಸಂಕಷ್ಟಕ್ಕೀಡಾದುದರಿಂದ ಆರೆಸ್ಸೆಸ್ ತ್ಯಜಿಸಿದ್ದೇನೆಂದು ಆತ [ನಾಥೂರಾಮ್] ಹೇಳಿಕೆ ಕೊಟ್ಟಿದ್ದ. ಆದರೆ ಆತ ಆರೆಸ್ಸೆಸ್ ತ್ಯಜಿಸಲಿಲ್ಲ."

ಸ್ವಾತಂತ್ರ್ಯದ 50ನೆ ವಾರ್ಷಿಕೋತ್ಸವದ ಅಂಗವಾಗಿ ಸ್ವರ್ಣ ಜಯಂತಿ ರಥಯಾತ್ರೆಯನ್ನು ಹಮ್ಮಿಕೊಂಡಿದ್ದ ಅಡ್ವಾನಿ ಆಗ ಗಾಂಧಿಯಲ್ಲಿ ಅಸಾಧಾರಣ ಸಾಮರ್ಥ್ಯಗಳನ್ನು ಕಂಡುಹುಡುಕಿದ್ದರು. ಆದರೆ ಹರಿಯಾಣಾದ ಝಿನ್ಝೋಲಿಯಲ್ಲಿ ನಡೆದ ಬಿಜೆಪಿಯ ನಾಲ್ಕು ದಿನಗಳ ತರಬೇತಿ ಶಿಬಿರದ ಕಾರ್ಯಕ್ರಮಗಳಲ್ಲಿ ಗಾಂಧಿ ತತ್ವಗಳ ಉಲ್ಲೇಖವೇ ಇರಲಿಲ್ಲ. ಅಲ್ಲಿ ಬಿಜೆಪಿಯ ಹಿಂದಿನ ಅವತಾರವಾದ ಜನಸಂಘದ ಓರ್ವ ಅಧ್ಯಕ್ಷನಾಗಿದ್ದ ದೀನದಯಾಳ್ ಉಪಾಧ್ಯಾಯರ ಚಿಂತನೆಯನ್ನು ಪ್ರಚುರಪಡಿಸಲಾಯಿತು (ದ ಟೆಲಿಗ್ರಾಫ್, ಸಪ್ಟಂಬರ್ 4, 1997).

**ಕೊನೆಯದಾಗಿ**

ಬಾಬರಿ ಮಸೀದಿ ಧ್ವಂಸಕೃತ್ಯದ ಸಮಯದಲ್ಲಿ ಕೇಂದ್ರ ಗೃಹ ಕಾರ್ಯದರ್ಶಿಯಾಗಿದ್ದ ಮಾಧವ್ ಗೋಡ್‌ಬೋಲೆ ತನ್ನ ಆತ್ಮಕಥನ 'Unfinished Innings' ನಲ್ಲಿ ಬರೆದಿದ್ದಾರೆ:

"........ಡಿಸೆಂಬರ್ 29, 1992ರಂದು ಅಯೋಧ್ಯೆಗೆ ಭೇಟಿ ನೀಡಿದೆ....ಅಯೋಧ್ಯೆಯಿಂದ ನನಗೆ ಸಾಕಾಗಿ ಹೋಗಿತ್ತು.....ನಾನು ಮಂದಿರವನ್ನು ಸಂದರ್ಶಿಸಲೂ ಇಲ್ಲ, ಪ್ರಸಾದ ಸ್ವೀಕರಿಸಲೂ ಇಲ್ಲ. .....ಯಾವ ಮಂದಿರದ ನಿರ್ಮಾಣ ಇಷ್ಟೊಂದು ದೊಡ್ಡ ಪ್ರಮಾಣದ ವಂಚನೆ ಮತ್ತು ಬೇಕುಬೇಕೆಂದೇ ಎಸಗಿದ ಹಿಂಸೆಯೊಂದಿಗೆ ಥಳಕು ಹಾಕಿಕೊಂಡಿದೆಯೋ ಆ ಮಂದಿರದಲ್ಲಿ ದೇವರು ನೆಲೆಸಲು ಸಾಧ್ಯವಿಲ್ಲವೆಂಬುದು ನನ್ನ ಪ್ರಾಮಾಣಿಕ ನಂಬಿಕೆಯಾಗಿತ್ತು."

ಆಧಾರ: ಎ.ಜಿ. ನೂರಾನಿಯವರ ಕೃತಿ 'The RSS and the BJP- A Division of Labour' □

# ಸಂವಾದ

## ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

## ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

**ಎಸ್.ಬಿ.ಜೋಗುರ**

# ಆ ೩೦ ದಿನಗಳ ಗೋಳು..?

'The essence of liberal democratic politics is the construction of a rich,complex social order,not one dominated by single idea.'

-Farid Zakaria

**೨೦೦೫ರ ಸಂದರ್ಭ. ವಿಶ್ವ ವಿದ್ಯಾಲಯದ ಅಧಿಕಾರ ವರ್ಗದವರು ಈ ಫ್ರೊಫೆಸರ್ ವಿದ್ಯಾರ್ಥಿಗಳಲ್ಲಿ ಬಂಡಾಯದ ಧ್ವನಿ ಬಿತ್ತುತ್ತಿದ್ದಾನೆ ಎಂದು ಧಾವಿಸಿ ಬಂದ ಪ್ರಭುತ್ವದ ಅಧಿಪತಿಗಳು, ಆ ಫ್ರೊಫೆಸರ್ ಜೊತೆಗೆ ಅನೇಕ ಆತನ ಬೆಂಬಲಿಗ ವಿದ್ಯಾರ್ಥಿ- ವಿದ್ಯಾರ್ಥಿನಿಯರನ್ನೂ ದರದರನೇ ಎಳೆದುಕೊಂಡು ನಡೆದರು. ಅವರ ಬಂಧನಕ್ಕೆ ಅದಾಗಲೇ ಅವರು ಬಂಡುಕೋರರು ಎನ್ನುವ ಹಣೆಪಟ್ಟಿ ರೆಡಿಯಾಗಿತ್ತು. ವಿದ್ಯಾರ್ಥಿಗಳೊಂದಿಗೆ ಕೂಡಿ ಆ ಫ್ರೊಫೆಸರ್ ಬಂಡುಕೋರ ಚಟುವಟಿಕೆಗಳನ್ನು ವಿಶ್ವ ವಿದ್ಯಾಲಯದ ಎದುರು ಹೊಸೆಯುತ್ತಿದ್ದಾನೆ ಎಂದು ಆರೋಪಿಸಿ, ಇವರನ್ನು ತೆಹರಾನ್ ಎವಿನ್ ಎನ್ನುವ ಪ್ರಸಿದ್ಧ ಜೈಲಲ್ಲಿ ಸುಮಾರು ಒಂದು ತಿಂಗಳ ಕಾಲ ಬಂಧಿಸಿಡಲಾಗಿತ್ತು ಎನ್ನುವ ವಿಷಯವನ್ನು ಎಳೆ ಎಳೆಯಾಗಿ ಈಗ ಆಷ್ಟ್ರೇಲಿಯಾದಲ್ಲಿರುವ ಝುಹರಾ ಹೇಳುತ್ತಾಳೆ.**

ರುಸ್ಸೋರಂತಹ ದಾರ್ಶನಿಕರ 'ಮನುಷ್ಯ ಬೆಳೆಯುತ್ತಾ ಹೋದಂತೆ ಅನೇಕ ರೀತಿಯ ಸಂಕೋಲೆಗಳಿಗೆ ಸಿಲುಕಬೇಕಾಗುತ್ತದೆ' ಎನ್ನುವ ಮಾತು ಸರ್ವವ್ಯಾಪಕವಾದ ಸತ್ಯವಾಗಿ ಹೊರಹೊಮ್ಮಿದೆ. ವಿಶ್ವದ ಬಹುದೊಡ್ಡ ಪ್ರಜಾಪ್ರಭುತ್ವ ಎಂದು ಹೇಳುತ್ತಲೇ ಮನುಷ್ಯ ಮನುಷ್ಯರ ಮಧ್ಯೆ ಅಮೂರ್ತವಾದ ಗೋಡೆಗಳನ್ನು ಎಬ್ಬಿಸುವ ಹುನ್ನಾರಗಳು ಅತ್ಯಂತ ವ್ಯವಸ್ಥಿತವಾಗಿ ಹಿಂದೆಂದಿಗಿಂತಲೂ ನಾಜೂಕಾಗಿ ನಡೆದುಕೊಂಡು ಬಂದಿವೆ. ಶೋಷಣೆಯ ವಿರುದ್ಧ ಮಾತನಾಡುವುದು, ಧ್ವನಿ ಎತ್ತುವುದು, ಪ್ರತಿಭಟನೆ ಮಾಡುವುದನ್ನು ಮೆಟ್ಟಿನಡಿಯಲ್ಲಿ ಹೊಸಕಿ ಹಾಕುವ ಹೈವಾನ್ ಪ್ರವೃತ್ತಿಯನ್ನೇ ಪೋಷಿಸಿಕೊಂಡು ಬಂದ ಕೆಲವು ಮಾನವ ನೆಲೆಗಳಿವೆ.

ಅವುಗಳಲ್ಲಿ ಇರಾನ್‌ನ ತೆಹರಾನ್ ಕೂಡಾ ಒಂದು. ಅದು ತೆಹರಾನ್ ವಿಶ್ವ ವಿದ್ಯಾಲಯ. ಅಲ್ಲಿಯ ಫ್ರೊಫೆಸರ್ ಅರ್ಷದ್ ಹಜರತಿ ಎನ್ನುವವರು ಎಡಪಂಥಿಯ ನಿಲುವಿನವನು ಎನ್ನುವುದು ಆ ವಿಶ್ವ ವಿದ್ಯಾಲಯದ ಕ್ಯಾಂಪಸ್ ಒಳ ಹೊರಗಿನ ಮಾತು. ಆತ ಆ ಪಂಥದೊಂದಿಗೆ ಗುರುತಿಸಿಕೊಂಡದ್ದೇ ಬಹು ದೊಡ್ಡ ಪ್ರಮಾದ ಎನ್ನುವ ರೀತಿಯಲ್ಲಿ ಬಿಂಬಿಸುವ ಯತ್ನಗಳು ಸಫಲವಾಗಿವೆ. ಆತ ಕಮ್ಯುನಿಸ್ಟ್ ಸಿದ್ಧಾಂತವನ್ನು ಒಪ್ಪಿಕೊಂಡವನು ಎನ್ನುವದು ಪ್ರೊಫೆಸರ್ ಪಾಲಿಗೆ ಇನ್ನೊಂದು ಮೈನಸ್ ಮಾತು. ಆತನ ಮಾತು - ಕೃತಿಗಳ ಮೇಲೆ ಮುಂಚಿನಿಂದಲೂ ಒಂದು ಕಣ್ಣಿಟ್ಟ ಅಲ್ಲಿನ ಸರಕಾರ, ಅವನು ಯಾವುದಾದರೂ ಒಂದು ಕಾರಣವನ್ನು ಮುಂದಿಟ್ಟುಕೊಂಡು ವಿಶ್ವ ವಿದ್ಯಾಲಯದ ಎದುರು ಧ್ವನಿ ಎತ್ತುವುದನ್ನೇ ಕಾಯುತ್ತಿದ್ದರು. ಅಂಥಾ ಒಂದು ದಿನ ಬಂದೇ ಬಿಟ್ಟಿತು.

ಅದು 2005ರ ಸಂದರ್ಭ. ವಿಶ್ವ ವಿದ್ಯಾಲಯದ ಅಧಿಕಾರ ವರ್ಗದವರು ಈ ಫ್ರೊಫೆಸರ್ ವಿದ್ಯಾರ್ಥಿಗಳಲ್ಲಿ ಬಂಡಾಯದ ಧ್ವನಿ ಬಿತ್ತುತ್ತಿದ್ದಾನೆ ಎಂದು ಧಾವಿಸಿ ಬಂದ ಪ್ರಭುತ್ವದ ಅಧಿಪತಿಗಳು, ಆ ಫ್ರೊಫೆಸರ್ ಜೊತೆಗೆ ಅನೇಕ ಆತನ ಬೆಂಬಲಿಗ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನೂ ದರದರನೇ ಎಳೆದು ಕೊಂಡು ನಡೆದರು. ಅವರ ಬಂಧನಕ್ಕೆ ಅದಾಗಲೇ ಅವರು ಬಂಡುಕೋರರು ಎನ್ನುವ ಹಣೆಪಟ್ಟಿ ರೆಡಿಯಾಗಿತ್ತು. ವಿದ್ಯಾರ್ಥಿಗಳೊಂದಿಗೆ ಕೂಡಿ ಆ ಫ್ರೊಫೆಸರ್ ಬಂಡುಕೋರ ಚಟುವಟಿಕೆಗಳನ್ನು ವಿಶ್ವ ವಿದ್ಯಾಲಯದ ಎದುರು ಹೊಸೆಯುತ್ತಿದ್ದಾನೆ ಎಂದು ಆರೋಪಿಸಿ, ಇವರನ್ನು ತೆಹರಾನ್ ಎವಿನ್ ಎನ್ನುವ ಪ್ರಸಿದ್ಧ ಜೈಲಲ್ಲಿ ಸುಮಾರು ಒಂದು ತಿಂಗಳ ಕಾಲ ಬಂಧಿಸಿಡಲಾಗಿತ್ತು ಎನ್ನುವ ವಿಷಯವನ್ನು ಎಳೆ ಎಳೆಯಾಗಿ ಈಗ ಆಷ್ಟ್ರೇಲಿಯಾದಲ್ಲಿರುವ ಝುಹರಾ ಹೇಳುತ್ತಾಳೆ.

ಈ ಝುಹರಾ ಅರ್ಷದ್ ಹಜರತಿಯವರ ಅಭಿಮಾನಿ ವಿದ್ಯಾರ್ಥಿನಿ. ಆ ದಿನ ಅವಳು ವಿಶ್ವ ವಿದ್ಯಾಲಯದಿಂದ ಸ್ನೇಹಿತರೊಡನೆ ಮನೆಗೆ ನಡೆದಾಗ ಅವಳನ್ನು ಪೋಲಿಸ್ ಅಧಿಕಾರಿಗಳು ಬಲವಂತವಾಗಿ ಎವಿನ್ ಜೈಲಿಗೆ ಕರೆತಂದರು. ಯಾಕೆ ಎನ್ನುವ ಪ್ರಶ್ನೆಗೆ ಅನೇಕಸುಳ್ಳು ಉತ್ತರಗಳು ಆ ಅಧಿಕಾರಿಗಳಲ್ಲಿ ಇದ್ದವು. 'ನೀನು ಆ ಪ್ರೊಫೆಸರ್ ಅವರೊಂದಿಗೆ ಅನೈತಿಕ ಲೈಂಗಿಕ ಸಂಪರ್ಕ ಹೊಂದಿರುವೆ, ವಿಶ್ವವಿದ್ಯಾಲಯದ ಕ್ಯಾಂಪಸ್‌ನ್ನು ಕುಲಗೆಡಿಸಿರುವೆ. ಬಂಡಾಯದ ಬೀಜವನ್ನು ಬಿತ್ತುತ್ತಿರುವೆ' ಒಂದೇ ಎರಡೆ ಇಂಥಾ ಅನೇಕ ರೇಡಿ ಮೇಡ್ ಆಪಾದನೆಗಳು ಅಲ್ಲಿದ್ದವು. ಅದೊಂದು ಪುಟ್ಟ ಕೋಣೆ.

ಅತ್ಯಂತ ಗಲೀಜಾದ ಜಾಗವದು. ವಿಚಿತ್ರ ಬಗೆಯ ಗಮಟು ವಾಸನೆ, ಹಾಸಿಕೊಳ್ಳಲು ಕೂಡಾ ಸರಿಯಾಗಿ ಹಾಸಿಗೆಗಳಿಲ್ಲ. ಇರೋದೇ ಒಂದು ಹರಕು ರಗ್ಗು ಅದೇ ಹಾಸಲು, ಹೊದೆಯಲು ಎರಡಕ್ಕೂ. ಇಡೀ ಕೋಣೆಗೆ ಒಂದೇ ಒಂದು ಕಿಡಕಿ. ಕಬ್ಬಿಣದ ಬಾಗಿಲು. ಪ್ರಶ್ನೆ ಮಾಡಲು ಒಬ್ಬ ಧಡೂತಿ ಅಧಿಕಾರಿ ಬಂದವನೇ ನಿನ್ನ ಮುಖಕ್ಕೆ ಮುಚ್ಚಬೇಕಾದ ಪರದೆಯನ್ನು ತಗೆದಿರುವಿಯಲ್ಲ ..? ಎಂದು ಝುಹರಾಗೆ ಪ್ರಶ್ನೆ ಮಾಡಿದ. ಆಕೆ ದಿಟ್ಟತನದಿಂದ 'ನಿಮ್ಮ ಗಡುಸು ಮುಖ ನೋಡುವುದು ಬೇಡವೇ..?' ಎಂದಾಗ ಆ ಅಧಿಕಾರಿ ಅವಳ ಕೆನ್ನೆಗೊಂದು ಜೋರಾಗಿ ಪಂಚ್ ಕೊಟ್ಟ. ಆಕೆಯ ಕಣ್ಣಿಂದ ಚಲ್ಲನೇ ನೀರು ಸಿಡಿಯಿತು. ನಂತರ ಆತ ಪ್ರಶ್ನೆಗಳನ್ನು ಮುಂದುವರೆಸಿದ.

ಅತ್ಯಂತ ತುಚ್ಛವಾದ ಭಾಷೆಯನ್ನು ಬಳಸುತ್ತ, ಅವಳನ್ನು ತಿವಿಯುತ್ತ, ಹೊಡೆಯುತ್ತ, ಬೂಟುಗಾಲಲ್ಲಿ ಒದೆಯುತ್ತ ಕಠೋರವಾದ ಪ್ರಶ್ನೆಗಳನ್ನು ಇಡ ತೊಡಗಿದ. ಅವನ ಬಹುತೇಕ ಪ್ರಶ್ನೆಗಳಲ್ಲಿ ಉತ್ತರವೂ ಇರುತ್ತಿತ್ತು. ಸ್ವತ: ತಾನೇ ಕಣ್ಣಾರೆ ಕಂಡಿರುವೆ, ಕಿವಿಯಾರೆ ಕೇಳಿರುವೆ ಎನ್ನುವ ಹಾಗೆ ಆತ ಪ್ರಶ್ನೆಗಳನ್ನು ಇಡುತ್ತಿದ್ದ. ಅನೇಕ ಬಾರಿ ಲೈಂಗಿಕವಾಗಿಯೂ ಹಿಂಸಿಸುತ್ತಿದ್ದ ಬಗ್ಗೆ ಝುಹರಾ ಹೇಳಿಕೊಂಡಿದ್ದಾಳೆ. ಆತನವರ್ತನೆ ಅತ್ಯಂತ ರಕ್ಕಸಮಯವಾಗಿತ್ತು. ಆತ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವದಕ್ಕಿಂತಲೂ ಹಿಂಸಿಸುವುದೇ ಹೆಚ್ಚಾಗಿತ್ತು. ಈ ಝುಹರಾ ಮೂಲತ: ಖುರ್ದಿಸ್ ಮೂಲದವಳು. ಈ ಖುರ್ದಿಸ್ ಪ್ರಾಂತದ ಬಗ್ಗೆ ಮೊದಲೇ ಆ ತೆಹರಾನ್ ಭಾಗದಲ್ಲಿ ಕೆಲವು ಗುಮಾನಿಗಳಿದ್ದವು. ಎಲ್ಲ ಖುರ್ದಿಸ್‌ಗಳು ಕೂಡಾ ಸಾರಾಸಗಟಾಗಿ ಬಂಡುಕೋರರು ಎನ್ನುವ ಪೂರ್ವಾಗ್ರಹವನ್ನು ಆ ಅಧಿಕಾರಿ ಹೊಂದಿದಂತಿತ್ತು. ಆ ಬಗೆಯ ಅಪಕ್ವ ಮನಸ್ಥಿತಿಯೂ ಅವಳನ್ನು ಹಿಂಸಿಸಲು ಪ್ರೇರೇಪಿಸುತ್ತಿತ್ತು. ಸುಮಾರು ಮೂವತ್ತುದಿನಗಳ ಕಾಲ ಬಂಧನದಲ್ಲಿ, ಹಿಂಸೆಯನ್ನು ಅನುಭವಿ

(34ನೇ ಪುಟಕ್ಕೆ)

# ಮಾಧ್ಯಮ ಸ್ವಾತಂತ್ರ್ಯ ಮತ್ತು ಪೊಲೀಸ್ ರಾಜ್ಯ

ಮಲ್ಲಿಕಾರ್ಜುನ ಗುಮ್ಮಗೋಳ.

ಪತ್ರಿಕೆ ಎನ್ನುವುದು ಅಭಿವ್ಯಕ್ತಿಯ ಮಾಧ್ಯಮವಾಗಿ ಆರಂಭವಾಯಿತು. ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಯ ಸಲುವಾಗಿ ಪತ್ರಿಕೆಗಳು ಮಾಡುತ್ತಿರುವ ಹೋರಾಟ ಸಾಮಾಜಿಕ ಸೇವೆಗೆ ಒಂದು ಹೊಸರೂಪವನ್ನು ತಂದು ಕೊಟ್ಟಿತು. ನೊಂದವರ ಹಾಗೂ ಧ್ವನಿಯಿಲ್ಲದವರ ಧ್ವನಿಯಾಗಿ ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ಸಾರ್ವಭೌಮತ್ವೆಗಾಗಿ ಅಸ್ತಿತ್ವಕ್ಕೆ ಬಂದ ಮಾಧ್ಯಮಕ್ಕೆ, ಕಾಲಾನಂತರದಲ್ಲಿ ಸಂವಿಧಾನಾತೀತವಾದ ಒಂದು ಸಾಂಸ್ಥಿಕ ಚೌಕಟ್ಟು ನಿರ್ಮಾಣವಾಯಿತು. ಹೀಗಾಗಿ ಇಂದು ಸಾರ್ವತ್ರಿಕವಾಗಿ ಅದನ್ನು ಸಂವಿಧಾನದ ನಾಲ್ಕನೆಯ ಅಂಗವೆಂದೇ (Fourth Estate) ಕರೆಯಲಾಗುತ್ತಿದೆ. ಶಾಸಕಾಂಗ - ಕಾರ್ಯಾಂಗದಿಂದ ಹಕ್ಕು ಮತ್ತು ನ್ಯಾಯ ಸಿಗದ ಜನ ನ್ಯಾಯಾಂಗದ ಮೊರೆ ಹೋಗುತ್ತಾರೆ. ಆದರೆ ಆ ಸಾಮರ್ಥ್ಯ ಈ ದೇಶದಲ್ಲಿ ಎಷ್ಟು ಜನರಿಗೆ ಇದೆ? ಹೀಗಾಗಿ ಜನತಾ ನ್ಯಾಯಾಲಯವಾದ ಪತ್ರಿಕೆ ಮತ್ತು ಟಿ.ವಿ. ವಾಹಿನಿಗಳಿಗೆ ಜನ ತಮ್ಮ ಅಹವಾಲುಗಳನ್ನು ಹೊತ್ತುಕೊಂಡು ಬರುತ್ತಿದ್ದಾರೆ.

ಇದಕ್ಕೆ ಆ ಮಾಧ್ಯಮದ ಮೇಲೆ ಜನರಿಗೆ ಇರುವ ವಿಶ್ವಾಸ. ಮಾಧ್ಯಮವೂ ಸಹ ಅತ್ಯುತ್ಸಾಹದಿಂದ ಅನ್ಯಾಯದ ವಿರುದ್ಧ ಶೋಷಣೆಯ ವಿರುದ್ಧ ಸಾಂಘಿಕ ಹೋರಾಟವನ್ನು ನಡೆಸುತ್ತಿದೆ. ಇದಕ್ಕೆ ಪ್ರಬಲವಾಗಿ ಬೆನ್ನಿಗೆ ನಿಂತಿರುವುದು ಸಂವಿಧಾನದ ಐದನೆಯ ಅಂಗ (Fifth Estate) ಎಂದು ಕರೆಯಲಾಗುತ್ತಿರುವ ನಾಗರಿಕ ಸಮಾಜ (Civil Society). ಪತ್ರಿಕಾ ಸ್ವಾತಂತ್ರ್ಯವನ್ನು ಸಂವಿಧಾನ ಕಲಂ 19(1)(ಎ) ಅಡಿ ಕಲ್ಪಿಸಲಾಗಿದೆ. ಆದರೆ, ಅದು ಅಪರಿಮಿತವಾದ ಮುಕ್ತತೆಯನ್ನು ಮಾಧ್ಯಮಕ್ಕೆ ಕಲ್ಪಿಸಿರುವದಿಲ್ಲ. ಇತರ ಹಕ್ಕುಗಳಂತೆಯೇ ಪತ್ರಿಕಾ ಸ್ವಾತಂತ್ರ್ಯವನ್ನು ಕಾನೂನು ರಚನೆಯ ಮೂಲಕ ನಿರ್ಬಂಧಿಸಬಹುದಾಗಿದೆಯೆಂದು ಕಲಂ 19(2) ತಿಳಿಸುತ್ತದೆ. ದೇಶದ ಭದ್ರತೆ, ಸಾರ್ವಭೌಮತೆ ಮತ್ತು ಏಕತೆ, ಅಂತರಾಷ್ಟ್ರೀಯ ಸಂಬಂಧ, ಸಾರ್ವಜನಿಕ ಶಾಂತಿ, ಮಾನನಷ್ಟ ಹಾಗೂ ಅಪರಾಧ, ಹಿಂಸೆಗೆ ಪ್ರಚೋಧನೆ ಹಾಗೂ ನೈತಿಕ ಮೌಲ್ಯಗಳಿಗೆ ದಕ್ಕೆತರುವಂತಹ ವರದಿಗಳನ್ನು ಪ್ರತಿಬಂಧಿಸುವ ಸಲುವಾಗಿ ಯುಕ್ತವಾದ ಕಾಯ್ದೆ ಮೂಲಕ ನಿರ್ಬಂಧವನ್ನು ಹೇರಬಹುದಾಗಿದೆ. ಸ್ವಾತಂತ್ರ್ಯವಿಲ್ಲದ ಪತ್ರಿಕೆ ಹಾಗೂ ಜನ ಬೆಂಬಲವಿಲ್ಲದ ಸರಕಾರ ಎಂದೂ ಸಮಾಜದ ಹಿತವನ್ನು ಕಾಯಲು ಸಾಧ್ಯವಿಲ್ಲ.

"ಪತ್ರಿಕೆ ಮುಖ್ಯವೋ ಸರಕಾರ ಮುಖ್ಯವೋ ಎಂದು ಯಾರಾದರೂ ನನ್ನನ್ನು ಕೇಳಿದರೆ ಪತ್ರಿಕೆಯಿಲ್ಲದ ಸರಕಾರವನ್ನು ಆರಿಸಿಕೊಳ್ಳುವುದಕ್ಕಿಂತಲೂ ನಾನು ಸರಕಾರವಿಲ್ಲದ ಪತ್ರಿಕೆಯನ್ನು ಆರಿಸಿಕೊಳ್ಳುವುದಾಗಿ" ಅಮೇರಿಕೆಯ ಮಾಜಿ ಅಧ್ಯಕ್ಷ ಥಾಮಸ್ ಜೆಫರಸನ್ ಹೇಳುತ್ತಿದ್ದರು. ಹೌದು, ಪತ್ರಿಕೆ ಇಂದು ಕೇವಲ ಸುದ್ದಿ ಮಾಧ್ಯಮವಾಗಿ ಉಳಿದಿಲ್ಲ. ಅದು ಶಿಕ್ಷಣ, ಸಾಹಿತ್ಯ, ಮಾಹಿತಿ, ಮನರಂಜನೆ, ಜ್ಞಾನ, ವಿಜ್ಞಾನ, ಕ್ರೀಡೆ, ಕೃಷಿ ಹೀಗೆ ಸಮಾಜದ ಎಲ್ಲ ಆಯಾಮಗಳನ್ನು ಆವರಿಸಿಕೊಂಡಿದೆ. ಅದು ಒಂದರ್ಥದಲ್ಲಿ ಸಮಾಜದ ಪ್ರಾಥಮಿಕ ಸಂಸ್ಥೆಯಾಗಿದೆ. ಅಪರಿಮಿತ ಅಧಿಕಾರವನ್ನು ಸರಕಾರಕ್ಕೆ ಕೊಡುವ ಮಖಾಂತರ ಮಾಧ್ಯಮ ಸ್ವಾತಂತ್ರ್ಯವನ್ನು ನಿರ್ಬಂಧಿಸುವುದು ಪ್ರಜಾಪ್ರಭುತ್ವನಿಗೆ ವಿರುದ್ಧವಾದದ್ದು. ಆದರೆ, ನಾಗರಿಕ ಸಮಾಜ ಅದರ ಅಂಗ ಗಳಾದ ಸರಕಾರೇತರ ಸಂಸ್ಥೆಗಳು, ಮಾನವ ಹಕ್ಕು ಹೋರಾಟಗಾರರು, ಸಾಮಾಜಿಕ ಕಾರ್ಯಕರ್ತರು, ಒತ್ತಡ ಹಾಗೂ ಹಿತಾಸಕ್ತಿ ಗುಂಪುಗಳು, ಮಹಿಳಾ ಸಂಘಟನೆಗಳು ಹಾಗೂ ಕಾರ್ಮಿಕ ಒಕ್ಕೂಟಗಳು ಹೀಗೆ ಒಟ್ಟಾರೆಯಾಗಿ ಎಲ್ಲ ಪ್ರಜ್ಞಾವಂತ ನಾಗರೀಕರು, ಹಾಗೂ ಸಂಘ-ಸಂಸ್ಥೆಗಳು ಮಾಧ್ಯಮದ ಶಕ್ತಿಯನ್ನು ಜನಶಕ್ತಿಯಾಗಿ ಮಾಡಿವೆ.

**ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧ ಹಾಕುವ ಕೆಲಸ ಎಲ್ಲ ಕಡೆ ನಡೆಯುತ್ತಿದೆ. ಇತ್ತೀಚೀಗೆ ದೇಶದ ಪ್ರತಿಷ್ಟಿತ ಕಾನೂನು ವಿಶ್ವ ವಿದ್ಯಾಲಯದ ತಜ್ಞರ ತಂಡವೊಂದು ಆದಿವಾಸಿಗಳ ಹಾಗೂ ನಕ್ಸಲರ ಸ್ಥಿತಿಗತಿ ಕುರಿತು ಮಾಹಿತಿ ಸಂಗ್ರಹಿಸಲು ಛತ್ತಿಸ್‌ಘಡದ ದಾಂತೆವಾಡಕ್ಕೆ ಭೇಟಿನೀಡಿತ್ತು. ಆದರೆ, ಅಲ್ಲಿಯ ಸರಕಾರ -ಪೋಲೀಸರು ಅತ್ಯಂತ ಕ್ರೂರ ಹಾಗೂ ಅಮಾನವೀಯವಾಗಿ ನಡೆದುಕೊಂಡರು. ಭದ್ರತೆಯ ಹೆಸರಿನಲ್ಲಿ ಅವರನ್ನು ದಿಗ್ಭಂದನದಲ್ಲಿ ಇರಿಸಲಾಯಿತು. ಅಲ್ಲದೆ, ಯಾವುದೇ ಲಾಡ್ಜ್‌ಗಳಲ್ಲಿ ಅವರಿಗೆ ವಸತಿ ಸಿಗದಂತೆ ಮಾಡಲಾಯಿತು. ಯಾವುದೆ ಆದಿವಾಸಿಗಳ ಸಂದರ್ಶನವಾಗಲಿ ಅಥವಾ ಬೇಟಿಯಾಗಲಿ ಲಭಿಸದಂತೆ ಪೋಲೀಸರು ತಮ್ಮ ಎಕೆ ೪೭ ಗನ್ನುಗಳಿಂದ ಭಯಾನಕ ವಾತಾ ವರಣವನ್ನು ಸೃಷ್ಟಿ ಮಾಡಿದ್ದರು.**



ಆದರೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧ ಹಾಕುವ ಕೆಲಸ ಎಲ್ಲಕಡೆ ನಡೆಯುತ್ತಿದೆ. ಇತ್ತೀಚೀಗೆ ದೇಶದ ಪ್ರತಿಷ್ಠಿತ ಕಾನೂನು ವಿಶ್ವ ವಿದ್ಯಾಲಯದ ತಜ್ಞರ ತಂಡವೊಂದು ಆದಿವಾಸಿಗಳ ಹಾಗೂ ನಕ್ಸಲರ ಸ್ಥಿತಿಗತಿ ಕುರಿತು ಮಾಹಿತಿ ಸಂಗ್ರಹಿಸಲು ಛತಿಸ್‌ಘಡದ ದಾಂತೆವಾಡಕ್ಕೆ ಭೇಟಿ ನೀಡಿತ್ತು. ಆದರೆ, ಅಲ್ಲಿಯ ಸರಕಾರ–ಪೊಲೀಸರು ಅತ್ಯಂತ ಕ್ರೂರ ಹಾಗೂ ಅಮಾನವೀಯವಾಗಿ ನಡೆದುಕೊಂಡರು. ಭದ್ರತೆಯ ಹೆಸರಿನಲ್ಲಿ ಅವರನ್ನು ದಿಗ್ಭಂಧನದಲ್ಲಿ ಇರಿಸಲಾಯಿತು. ಅಲ್ಲದೆ, ಯಾವುದೇ ಲಾಡ್ಜ್‌ಗಳಲ್ಲಿ ಅವರಿಗೆ ವಸತಿ ಸಿಗದಂತೆ ಮಾಡಲಾಯಿತು. ಯಾವುದೆ ಆದಿವಾಸಿಗಳ ಸಂದರ್ಶನವಾಗಲಿ ಅಥವಾ ಬೇಟಿಯಾಗಲಿ ಲಭಿಸದಂತೆ ಪೋಲಿಸರು ತಮ್ಮ ಏಕೆ47ಗನ್ನುಗಳಿಂದ ಭಯಾನಕ ವಾತಾವರಣವನ್ನು ಸೃಷ್ಟಿ ಮಾಡಿದ್ದರು. ಹೀಗಾಗಿ, ಬಂದ ದಾರಿಗೆ ಸುಂಕವಿಲ್ಲವೆಂದು ಬರಿಗೈಯಲ್ಲಿ ತಜ್ಞರು ಹಿಂದಿರುಗಬೇಕಾಯಿತು.

ಆದರೆ, ಆಳುವವರು ಒಂದು ಮಾತನ್ನು ಅರ್ಥ ಮಾಡಿ ಕೊಳ್ಳಬೇಕು. ಇದೇ ಕಾನೂನು ತಜ್ಞರು ದೇಶದ ಕಾನೂನು ರಚನೆಯ ಭೌದ್ಧಿಕ ಶಕ್ತಿಗಳು. ಇಂತಹವರ ಕೈಯಲ್ಲಿ ಕಲಿತವರೇ ನಾಳೆ ಈ ದೇಶದ ನ್ಯಾಯಾಂಗದ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸುತ್ತಾರೆ. ಅಂತಹವರಿಗೆ ಈ ಪೊಲೀಸ್ ರಾಜ್ಯ ಯಾವ ಸಂದೇಶವನ್ನು ರವಾನಿಸುತ್ತಿದೆ?! ಶ್ರೀನಗರದಲ್ಲಿ ನಡೆದ ಪೊಲೀಸ್ ಎನ್‌ಕೌಂಟರ್ ಕುರಿತು ವರದಿ ಮಾಡಲು ತೆರಳಿದ್ದ ಛಾಯಾಚಿತ್ರಕಾರ ಅಮನ್ ಫಾರೂಕ್‌ನನ್ನು ಪೊಲೀಸರು ಗುಂಡಿಟ್ಟು ಕೊಂದರು. ಒರಿಸ್ಸಾದ ಹಳ್ಳಿಯೊಂದರ ರೈತರ ಮೇಲೆ ನಡೆದ ಗುಂಡಿನದಾಳಿ ಕುರಿತು ವರದಿ ಮಾಡಲು ತೆರಳಿದ್ದ ಅಮುಲ್ಯಪ್ರಾಣಿ ಎಂಬ ಪತ್ರಕರ್ತನ ಮೇಲೆ ಮಾರಣಾಂತಿಕ ಹಲ್ಲೆಯನ್ನು ಪೊಲೀಸರು ಮಾಡಿದ್ದರು. ಜನವರಿಯಿಂದ ಇಲ್ಲಿಯವರೆಗೆ ಇಂತಹ 12 ಪ್ರಕರಣಗಳು ದೇಶದಲ್ಲಿ ವರದಿಯಾಗಿವೆ.

ಕರ್ನಾಟಕದ ಕುದುರೆಮುಖ ಪ್ರದೇಶದಲ್ಲಿಯೂ ಸಹ ಇತ್ತೀಚಿಗೆ ಮಲೆಕುಡಿಯ ಆದಿವಾಸಿಗಳ ಮೇಲೆ ನಕ್ಸಲ್ ನಿಗ್ರಹ ದಳದ ಪೊಲೀಸರು ಮಾಧ್ಯಮದೊಂದಿಗೆ ಮಾತನಾಡಿದ್ದಕ್ಕಾಗಿ ಹಲ್ಲೆ ಮಾಡಿದ್ದಾರೆ. ಅತ್ತ ನಕ್ಸಲರಿಗೆ ನೆರವು ನೀಡುತ್ತಿದ್ದಾರೆಂದು ಪೊಲೀಸರು ಹಲ್ಲೆ ಮಾಡುತ್ತಿದ್ದರೆ, ಇತ್ತ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದಾರೆ ಎಂದು ನಕ್ಸಲರು ಹಲ್ಲೆ ಮಾಡುತ್ತಿದ್ದಾರೆ. ಹೀಗಾಗಿ, ಆದಿವಾಸಿಗಳ ಬದುಕು ಈ ಇಬ್ಬರ ನಡುವೆ ಸಿಕ್ಕು ನಲುಗಿ ಹೋಗಿದೆ. ಯಾವುದೇ ಆದಿವಾಸಿಯೂ ನಿಗದಿ ಪಡಿಸಿದ್ದಕ್ಕಿಂತ ಹೆಚ್ಚು ಆಹಾರ ಧಾನ್ಯಗಳು ಹಾಗೂ ಪದಾರ್ಥಗಳನ್ನು ಕೊಳ್ಳುವಂತಿಲ್ಲ. ಮುಕ್ತವಾಗಿ ಸಂಚರಿಸುವಂತಿಲ್ಲ. ಈ ಮೂಲಕ ಮಲೆನಾಡ ಮಕ್ಕಳ ಬದುಕಿನ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ.

'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿ ಕೊಂಡ' ಎನ್ನುವಂತೆ ಸರಕಾರ ನಡೆದುಕೊಳ್ಳುತ್ತಿದೆ. ನಿಸ್ಪಕ್ಷಪಾತ ವರದಿಯನ್ನು ಕೊಡುವದು ಪತ್ರಿಕೆಯ ಕೆಲಸ. ಅದು ಸರಕಾರದ ಪರವೋ – ವಿರುದ್ದವೋ ಎಂಬುದು ಕೇವಲ ಕಾಕತಾಳೀಯ. ಇತ್ತೀಚೆಗೆ 'ವಿಜಯ ಕರ್ನಾಟಕ' ಪತ್ರಿಕೆ ಸರಕಾರದ ವಿರುದ್ದ ಬರೆಯುತ್ತಿದೆ. ಎಂಬ ಅನಾಮಧೇಯ ಪತ್ರವೊಂದನ್ನು ಆಧಾರವಾಗಿ ಇಟ್ಟುಕೊಂಡು, ಪೊಲೀಸರು ತನಿಕೆ ಮಾಡುತ್ತಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ ಮಾಡಿದಂತೆ.

> **ಘೋರ ಅನ್ಯಾಯದ ವಿರುದ್ಧ ಬರೆಯುವುದು ಕಾನೂನು ಬಾಹಿರ ಎಂದು ಭಾವಿಸುವದಾದರೆ, ಈ ದೇಶದಲ್ಲಿ ಪ್ರಜಾರಾಜ್ಯವಿದೆಯೋ ಅಥವಾ ಪೊಲೀಸ್ ರಾಜ್ಯವಿದೆಯೋ ಎಂದು ಕೇಳಬೇಕಾಗುತ್ತದೆ. 1975ರಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ ಇಂದಿರಾ ಗಾಂಧಿಯವರು ಪತ್ರಿಕೆಗಳನ್ನು ತನ್ನ ವಿರೋಧ ಪಕ್ಷವೆಂಬಂತೆ ಭಾವಿಸಿ ಅವುಗಳ ಮೇಲೆ ಇನ್ನಿಲ್ಲದಂತೆ ಹಲ್ಲೆ ಮಾಡಿದರು. 1987ರಲ್ಲಿ ಬೋಫೋರ್ಸ್ ಹಗರಣವನ್ನು ಬಹಿರಂಗಗೊಳಿಸಿದ್ದಕ್ಕಾಗಿ ಒಂದು ಆಂಗ್ಲ ಪತ್ರಿಕೆಯ ವಿರುದ್ಧ ರಾಜೀವ ಗಾಂಧಿ ಸರಕಾರ ಯುದ್ಧವನ್ನೇ ಸಾರಿತು.**

ಈ ಹಿಂದೆ 'ಸಂಯುಕ್ತ ಕರ್ನಾಟಕ' ಪತ್ರಿಕೆ ನೈಸ್ ಹಗರಣ ಕುರಿತು ವರದಿ ಮಾಡಿದಾಗ ಮಾಜಿ ಪ್ರಧಾನಿ ದೇವೆಗೌಡರು ಪತ್ರಿಕೆಯನ್ನು ಹಾಗೂ ಅದರ ಟ್ರಸ್ಟಿಯೊಬ್ಬರನ್ನು ಅತ್ಯಂತ ಕಟುವಾದ ಶಬ್ದಗಳಿಂದ ನಿಂದಿಸಿದ್ದರು. 'ಕನ್ನಡಪ್ರಭ' ಪತ್ರಿಕೆಯ ವಿರುದ್ದ ಶಾಂತಿಭಂಗ ಕಾರಣದ ಆಧಾರದ ಮೇಲೆ ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಹಾಕಲಾಗಿತ್ತು. ಅಲ್ಲದೆ 'ಪ್ರಜಾವಾಣಿ'ಯ ಪತ್ರರ್ಕತರಿಗೆ 'ಕಾನೂನು ಬಾಹಿರ ತಡೆ ಚಟುವಟಿಕೆ ಕಾಯ್ದೆ' ಅಡಿಯಲ್ಲಿ ಬಂಧನ ನೋಟೀಸ್‌ನ್ನು ಜಾರಿಮಾಡಲಾಗಿತ್ತು. ಒಂದು ರೀತಿ ಮಾಧ್ಯಮ ಸ್ವಾತಂತ್ರ್ಯದ ಮೇಲೆ ಧಮನಕಾರಿ ನೀತಿಯನ್ನು ಅನುಸರಿಸಲಾಗುತ್ತಿದೆ. ರಾಜ್ಯದ ಸಮಸ್ಯೆಗಳನ್ನು ಮಾಧ್ಯಮಗಳು ಸರ್ಕಾರದ ಗಮನಕ್ಕೆ ತರಬೇಕೆಂದು ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ನೀಡಿದ್ದರು. ಈಗ ಅವರ ಮೂಗಿನ ಕೆಳಗೆ ಕೆಲಸ ಮಾಡುವ ಪೊಲೀಸರೇ ಮಾಧ್ಯಮದ ಬಾಯಿ ಮುಚ್ಚಿಸುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ?

ಈ ದೇಶದ ಕಾನೂನಿನ ಕಬಂಧ ಬಾಹುಗಳಾಗಲಿ, ಕೋರ್ಟುಗಳಾಗಲಿ ನೊಂದ ಜನರ ಮನೆಬಾಗಿಲನ್ನು ಹುಡುಕಿಕೊಂಡು ಹೋಗಲು ಸಾಧ್ಯವಿಲ್ಲ. ಆದರೆ ಮಾಧ್ಯಮ ಆ ಕೆಲಸ ಮಾಡುತ್ತಿದೆ. ಅಂತಹವರ ಕುರಿತು ವರದಿ ಮಾಡುತ್ತಿದೆ. ಆ ವರದಿಗಳನ್ನೇ ಆದರಿಸಿ ಕೋರ್ಟುಗಳು ಸಾರ್ವಜನಿಕ ಹಿತಾಸಕ್ತಿ ದಾವೆ (PIL)ಗಳನ್ನು ದಾಖಲಿಸಿಕೊಳ್ಳುವ ಮೂಲಕ ನ್ಯಾಯದಾನ ನೀಡಿವೆ. ಆದರೆ ವರದಿ ನೀಡುವ ಬರಾಟೆಯಲ್ಲಿ ಅದೆಷ್ಟೋ ಜನ ಪ್ರಾಣ ಕಳೆದುಕೊಂಡಿದ್ದಾರೆ. ಮಾಧ್ಯಮ ಕಚೇರಿಗಳ ಮೇಲೆ ದಾಳಿ ಮಾಡಲಾಗಿದೆ. ಇಂತಹ ಘಟನೆಗಳು ದಿನ ನಿತ್ಯ ನಡೆಯುತ್ತಲೇಯಿವೆ. ಅಂತಹವರಿಗೆ ಯಾವುದೇ ಭದ್ರತೆ ಇಲ್ಲದಂತಾಗಿದೆ.

ಘೋರ ಅನ್ಯಾಯದ ವಿರುದ್ಧ ಬರೆಯುವುದು ಕಾನೂನು ಬಾಹಿರ ಎಂದು ಭಾವಿಸುವುದಾದರೆ, ಈ ದೇಶದಲ್ಲಿ ಪ್ರಜಾರಾಜ್ಯವಿದೆಯೋ ಅಥವಾ ಪೊಲೀಸ್ ರಾಜ್ಯವಿದೆಯೋ ಎಂದು ಕೇಳಬೇಕಾಗುತ್ತದೆ. 1975ರಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ ಇಂದಿರಾ ಗಾಂಧಿಯವರು ಪತ್ರಿಕೆಗಳನ್ನು ತನ್ನ ವಿರೋಧ ಪಕ್ಷವೆಂಬಂತೆ ಭಾವಿಸಿ ಅವುಗಳ ಮೇಲೆ ಇನ್ನಿಲ್ಲದಂತೆ ಹಲ್ಲೆ ಮಾಡಿದರು. 1987ರಲ್ಲಿ ಬೋಫೋರ್ಸ್ ಹಗರಣವನ್ನು ಬಹಿರಂಗಗೊಳಿಸಿದ್ದಕ್ಕಾಗಿ ಒಂದು ಆಂಗ್ಲ ಪತ್ರಿಕೆಯ ವಿರುದ್ಧ ರಾಜೀವ್ ಗಾಂಧಿ ಸರಕಾರ ಯುದ್ಧವನ್ನೇ ಸಾರಿತು. 1986 ರಲ್ಲಿ ಸಿಖ್ ಬಂಡುಕೋರ ಮುಖಂಡನ ಸಂದರ್ಶನ ಪ್ರಕಟಿಸಿದ್ದಕ್ಕಾಗಿ ಶಾಹಿದ್ ಶಿದ್ದಿಕಿ ಎಂಬ ಸಂಪಾದಕನ್ನು ಜೈಲಿಗೆ ಹಾಕಲಾಯಿತು.

ಆದರೆ, ಈ ದೇಶದ ಪ್ರಜ್ಞಾವಂತ ಜನ ಅವರಿಗೆ ಚುನಾವಣೆಯಲ್ಲಿ ಯಾವ ಪಾಠ ಕಲಿಸಿದರು ಎಂಬುದು ಎಲ್ಲರಿಗೂ ತಿಳಿದ ವಿಚಾರ. ತಮ್ಮ ಉನ್ನತಿಗಾಗಿ ಮಾಧ್ಯಮವನ್ನು ಏಣಿಯಾಗಿ ಮಾಡಿಕೊಳ್ಳುವವರು ಅಧಿಕಾರ ಸಿಕ್ಕ ತಕ್ಷಣ ಅಂತಹ ಮಾಧ್ಯಮಕ್ಕೆ ಮೂಗುದಾರ ಹಾಕಲು ಹೊರಡುತ್ತಾರೆ. ಬಾಯಿಗೆ ಬಂದಂತೆ ಹೇಳಿಕೆ ನೀಡಿ ದಿನ ಬೆಳಗಾಗುತ್ತಿದ್ದಂತೆ 'ನಾನು ಹಾಗೆ ಹೇಳಿಯೇ ಇಲ್ಲ, ಪತ್ರಿಕೆಗಳು ನನ್ನ ಹೇಳಿಕೆಯನ್ನು ತಿರುಚಿ ಬರೆದಿವೆ' ಎಂದು ಗೂಬೆ ಕೂಡಿಸುವ ಕೆಲಸ ಮಾಡುತ್ತಾರೆ.

ಸ್ವಾತಂತ್ರ್ಯವಿಲ್ಲದ ಪತ್ರಿಕೆ ಹಾಗೂ ಜನಬೆಂಬಲವಿಲ್ಲದ ಸರಕಾರ ಎಂದೂ ಸಮಾಜದ ಹಿತವನ್ನು ಕಾಯಲು ಸಾಧ್ಯವಿಲ್ಲ. "ಪತ್ರಿಕೆ ಮುಖ್ಯವೋ ಸರಕಾರ ಮುಖ್ಯವೋ ಎಂದು ಯಾರಾದರೂ ನನ್ನನ್ನು ಕೇಳಿದರೆ ಪತ್ರಿಕೆಯಿಲ್ಲದ ಸರಕಾರವನ್ನು ಆರಿಸಿಕೊಳ್ಳುವುದಕ್ಕಿಂತಲೂ ನಾನು ಸರಕಾರ ವಿಲ್ಲದ ಪತ್ರಿಕೆಯನ್ನು ಆರಿಸಿಕೊಳ್ಳುವುದಾಗಿ" ಅಮೇರಿಕೆಯ ಮಾಜಿ ಅಧ್ಯಕ್ಷ ಥಾಮಸ್ ಜೆಫರ್‌ಸನ್ ಹೇಳುತ್ತಿದ್ದರು. ಹೌದು, ಪತ್ರಿಕೆ ಇಂದು ಕೇವಲ ಸುದ್ದಿ ಮಾಧ್ಯಮವಾಗಿ ಉಳಿದಿಲ್ಲ. ಅದು ಶಿಕ್ಷಣ, ಸಾಹಿತ್ಯ, ಮಾಹಿತಿ,ಮನರಂಜನೆ, ಜ್ಞಾನ, ವಿಜ್ಞಾನ, ಕ್ರೀಡೆ, ಕೃಷಿ ಹೀಗೆ ಸಮಾಜದ ಎಲ್ಲ ಆಯಾಮಗಳನ್ನು ಆವರಿಸಿದೆ. ಅದು ಒಂದರ್ಥದಲ್ಲಿ ಸಮಾಜದ ಪ್ರಾಥಮಿಕ ಸಂಸ್ಥೆಯಾಗಿದೆ.

ಪೌಷ್ಠಿಕ ಆಹಾರವಿಲ್ಲದೆ ಹಾಗೂ ಅನಾರೋಗ್ಯದಿಂದ ಅದೆಷ್ಟೋ ಆದಿವಾಸಿ ಪಂಗಡಗಳು ಅಳಿವಿನ ಅಂಚಿಗೆ ಬಂದಿವೆ. ಅವರಿಗೆ ಶಿಕ್ಷಣ, ಉದ್ಯೋಗ –ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಮುಖಾಂತರ ಅವರನ್ನು ಒಲಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಸರಕಾರಗಳು ಮಾಧ್ಯಮದ ವರದಿಗಳನ್ನು ಸಲಹೆ ಸೂಚನೆಗಳೆಂದು ಪರಿಗಣಿಸದೇ ತಮ್ಮ ವಿರುದ್ಧ ನಡೆದ ಪಿತೂರಿ ಎಂದು ಭಾವಿಸುವುದು ತುಂಬ ವಿಷಾದನೀಯ.

ಪತ್ರಿಕಾ ಸ್ವಾತಂತ್ರ್ಯವೆನ್ನುವುದು ಜನರ ಸ್ವಾತಂತ್ರ್ಯವಿದ್ದ ಹಾಗೆ. ಪತ್ರಿಕೆಗೆ ಕೊಡುವ ನೋಟೀಸ್ ಎಂದರೆ ಅದು ಜನರಿಗೆ ಕೊಟ್ಟ ನೋಟೀಸೇ. ಮೂರು ರೂಪಾಯಿ ಕೊಟ್ಟು ಪತ್ರಿಕೆ ಖರೀದಿಸಿ ಓದುವವನಿಗೆ ಆ ಪತ್ರಿಕೆ ನಿರ್ಮಾಣ ಮಾಡುವ ಪತ್ರಕರ್ತ ಎಂತಹ ಸಂಕಷ್ಟವನ್ನು ಎದುರಿಸುತ್ತಿದ್ದಾನೆ ಎಂಬ ಅರಿವು ಇದ್ದೇ ಇರುತ್ತದೆ. ಹೀಗಾಗಿ ಪತ್ರಿಕೆಯನ್ನು ಎದುರು ಹಾಕಿಕೊಳ್ಳುವುದೆಂದರೆ ಅದು ಜನರನ್ನು ಎದುರು ಹಾಕಿಕೊಂಡಂತೆಯೇ. ಅಂತಹ ಸರಕಾರಗಳು ಈ ದೇಶದಲ್ಲಿ ಹೇಗೆ ಮಣ್ಣು ಮುಕ್ಕಿವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇಂತಹ ಅರಿವಿನಿಂದಾಗಿಯೇ ಸರ್ವಾಧಿಕಾರಿ ನೆಪೋಲಿಯನ್ ಬೋನಾಪಾರ್ಟೆ ಸಹ "ನಾನು ನೂರು ಸಾವಿರ ಬಂದೂಕಿನ ಅಲಗುಗಳಿಗೆ ಹೆದರುವುದಿಲ್ಲ. ಆದರೆ, ಪತ್ರಿಕೆಗೆ ಹೆದರು

(31ನೇ ಪುಟಕ್ಕೆ)

# ಗೌರವ ಹತ್ಯೆಯ ಕರಾಳ ಮುಖಗಳು

ನಾ ದಿವಾಕರ

**ಭಾರತೀಯ ಸಮಾಜದಲ್ಲಿ ಅಂತರ್‌ಗ್ರಾಮ ವಿವಾಹಗಳು ಬಹುತೇಕವಾಗಿ ಸ್ವೀಕೃತವೇ ಆಗಿದ್ದು ಹರ್ಯಾಣದಂತಹ ಕೆಲವು ಉತ್ತರ ಭಾರತ ರಾಜ್ಯಗಳಲ್ಲಿ ಮಾತ್ರ ನಿಷೇಧಿತವಾಗಿದೆ. ಆದರೆ ಸಗೋತ್ರ ವಿವಾಹ ಮಾತ್ರ ಸುಶಿಕ್ಷಿತ ಸಮಾಜದಲ್ಲೂ, ಮೇಲ್ವರ್ಗಗಳಲ್ಲೂ ಇಂದಿಗೂ ವಿರೋಧ ಎದುರಿಸುತ್ತದೆ. ಇದರ ಮೂಲ ಕಾರಣವೆಂದರೆ ಒಂದೇ ಗೋತ್ರಕ್ಕೆ ಸೇರಿದವರ ಪೂರ್ವಿಕರ ಮೂಲ ಒಂದೇ ಆಗಿರುತ್ತದೆ ಮತ್ತು ಸೋದರ ಸಂಬಂಧಿಗಳಾಗುತ್ತಾರೆಂಬ ನಂಬಿಕೆ. ಭಾರತೀಯ ಸಮಾಜದಲ್ಲಿ ಗೋತ್ರದ ಮೂಲ ಇರುವುದು ವ್ಯಕ್ತಿಯ ಜನ್ಮದಲ್ಲಲ್ಲ. ಬದಲಾಗಿ ವಂಶವಾಹಿನಿಯಾಗಿ ಅನುಸರಿಸಿಕೊಂಡು ಬಂದ ಗುರುಪರಂಪರೆಯಿಂದ. ಉದಾಹರಣೆಗೆ ಭಾರದ್ವಾಜ ಗೋತ್ರದ ಸಮುದಾಯಗಳು ಭರದ್ವಾಜ ಮಹರ್ಷಿಯ ಅನುಯಾಯಿಗಳು. ಕಶ್ಯಪ ಗೋತ್ರದ ಸಮುದಾಯಗಳು ಕಶ್ಯಪ ಮಹರ್ಷಿಯ ಅನುಯಾಯಿಗಳು.**

ಭಾರತೀಯ ಸಮಾಜದ ವೈಚಿತ್ರ್ಯವೆಂದರೆ ಒಂದೆಡೆ ಸಾಮಾನ್ಯ ಜನಸಮುದಾಯಗಳು ತಮ್ಮ ಘನತೆ, ಗೌರವ ಮತ್ತು ಸಾಮಾಜಿಕ ಮರ್ಯಾದೆಯನ್ನು ರಕ್ಷಿಸಿಕೊಳ್ಳಲು ನಿರಂತರವಾದ ಹೋರಾಟದಲ್ಲಿ ತೊಡಗಿದ್ದರೆ ಮತ್ತೊಂದೆಡೆ ಕೆಲವೇ ಪ್ರಬಲ ವರ್ಗಗಳು ತಮ್ಮ ಜನಶ್ರೇಷ್ಠತೆಯ ಭ್ರಮೆಯಲ್ಲಿ, ಸಾಂಸ್ಕೃತಿಕ ಪರಿಶುದ್ಧತೆಯ ಭ್ರಮೆಯಲ್ಲಿ ಸಾಮುದಾಯಿಕ ಗೌರವದ ರಕ್ಷಣೆಯ ಹೆಸರಿನಲ್ಲಿ ಅದೇ ಜನಸಮುದಾಯಗಳನ್ನು ನಿಯಂತ್ರಿಸಲು ಯತ್ನಿಸುತ್ತಿರುತ್ತವೆ. ಸಮುದಾಯ ಅಥವಾ ಸಾಮಾಜಿಕ ಚೌಕಟ್ಟು ಕೆಲವೇ ಪ್ರಬಲ ವರ್ಗಗಳಿಂದ ನಿರ್ಧರಿಸಲ್ಪಡುವ ನಿಯಮಗಳಿಗೆ ಒಳಪಟ್ಟಿರುವುದನ್ನು ಭಾರತದ ವಿವಿಧ ರಾಜ್ಯಗಳಲ್ಲಿ ವಿಭಿನ್ನ ರೂಪಗಳಲ್ಲಿ ಕಾಣಬಹುದು. ಕೆಲವು ಸಂದರ್ಭಗಳಲ್ಲಿ ಪ್ರಬಲ ಸಮುದಾಯಗಳ ಸಾಮಾಜಿಕ ಘನತೆಯನ್ನು ರಕ್ಷಿಸಲು ನಿಮ್ನ ವರ್ಗಗಳನ್ನು ಬಲಿ ನೀಡುವ ಪ್ರಕ್ರಿಯೆ ಕಂಡುಬಂದರೆ, ಮತ್ತೊಂದೆಡೆ ಸಾಂಸ್ಕೃತಿಕ ಗೌರವ-ಮರ್ಯಾದೆಯನ್ನು ರಕ್ಷಿಸಲು ಸಮುದಾಯದಲ್ಲೇ ಆಂತರಿಕವಾಗಿ ದಬ್ಬಾಳಿಕೆ ನಡೆಸುವುದನ್ನು ಕಾಣಬಹುದು. ಹರ್ಯಾಣ, ಉತ್ತರಪ್ರದೇಶ, ತಮಿಳುನಾಡುಗಳಲ್ಲಿ ವ್ಯಾಪಕವಾಗಿ ಸಂಭವಿಸುತ್ತಿರುವ ಮರ್ಯಾದಾ ಹತ್ಯೆ ಅಥವಾ ಗೌರವ ಹತ್ಯೆಯ ಪ್ರಕರಣಗಳು ಈ ವಿದ್ಯಮಾನಗಳಿಗೆ ಸ್ಪಷ್ಟ ನಿದರ್ಶನ.

ಹರ್ಯಾಣ ಮತ್ತಿತರ ಉತ್ತರ ಭಾರತದ ರಾಜ್ಯಗಳಲ್ಲಿ ಪ್ರಚಲಿತವಾಗಿರುವ ಖಾಪ್ ಪಂಚಾಯತಿಗಳು ಒಂದು ರೀತಿಯಲ್ಲಿ ಮಿನಿ ಸಂವಿಧಾನಗಳಾಗಿವೆ. ಮಿನಿ ನ್ಯಾಯಾಂಗವೂ ಆಗಿವೆ. ಈ ಪಂಚಾಯತಿಯಲ್ಲಿ ನೀಡುವ ತೀರ್ಪು ಅಂತಿಮವಾಗಿದ್ದು, ವಿಧಿಸಲಾಗುವ ಶಿಕ್ಷೆಯೂ ಅಂತಿಮವೇ ಆಗಿರುತ್ತದೆ. ಕಳೆದ ವರ್ಷ ಹರ್ಯಾಣದ ಜಜ್ಜರ್ ಜಿಲ್ಲೆಯ ಧಾರಣ ಗ್ರಾಮ ದೇಶಾದ್ಯಂತ ಗಂಭೀರ ಚರ್ಚೆಗೆ ಗ್ರಾಸವಾಗಿತ್ತು. ಸಗೋತ್ರ ವಿವಾಹವಾದ ತರುಣ-ತರುಣಿಯರನ್ನು ಕುಟುಂಬವರ್ಗದವರೇ ಹತ್ಯೆ ಮಾಡುವ ಪರಂಪರೆ ಬೆಳಕಿಗೆ ಬಂದಿದ್ದು ಈ ಗ್ರಾಮದಲ್ಲಿ ಸಂಭವಿಸಿದ ಪ್ರಕರಣದಿಂದಲೇ. ಖಾಪ್ ಪಂಚಾಯತ್‌ನ ನಿರ್ಣಯಗಳಿಗೆ ಮೂಲ ಆಧಾರವೆಂದರೆ ಗೋತ್ರ ಪದ್ಧತಿ ಮತ್ತು ಸಗೋತ್ರ ವಿವಾಹದ ಸಮಸ್ಯೆ. ಗೋತ್ರವ್ಯವಸ್ಥೆಯ ಮೇಲೆ ಸಂಘಟಿತವಾಗಿರುವ ಖಾಪ್ ಪಂಚಾಯತ್‌ಗಳ ನಿಯಮದ ಪ್ರಕಾರ ವಿಭಿನ್ನ ಜಾತಿಗಳ ನಡುವೆ ವಿವಾಹ ಸಂಬಂಧ ಸಾಧ್ಯವಿಲ್ಲ. ಒಂದೇ ಜಾತಿಯ ಒಳಗೆ ಒಂದೇ ಗೋತ್ರಕ್ಕೆ ಸೇರಿದವರು ವಿವಾಹವಾಗಕೂಡದು. ಗೋತ್ರಗಳು ಭಿನ್ನವಾದವರೂ ಒಂದೇ ಗ್ರಾಮದಲ್ಲಿ ವಾಸಿಸುವವರು ಪರಸ್ಪರ ವಿವಾಹವಾಗಕೂಡದು. ಇದನ್ನು ಪರಂಪರೆಯ ಹೆಸರಿನಲ್ಲೇ ರಕ್ಷಿಸಲು ಯತ್ನಿಸುವ ಖಾಪ್ ಪಂಚಾಯತಿಗಳ ಕ್ರಮವನ್ನು ಅನೇಕ ಸಂಸದರೂ, ಶಾಸಕರೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಬೆಂಬಲಿಸುವುದು ಆಧುನಿಕ ಭಾರತದ ವಿಪರ್ಯಾಸ.

ಇತ್ತೀಚಿನ ದಿನಗಳಲ್ಲಿ ಖಾಪ್ ಪಂಚಾಯತಿಗಳ ಅಂತಿಮ ತೀರ್ಪಿಗೆ ಬಲಿಯಾಗುತ್ತಿರುವವರ ಸಂಖ್ಯೆ ಏರುತ್ತಲೇ ಇದೆ. ದಿನನಿತ್ಯ ವಿವಾಹಿತ ವಧೂವರರ ಹತ್ಯೆ ನಡೆಯುತ್ತಿದೆ. ಖಾಪ್ ಪಂಚಾಯತಿಯನ್ನು ಅನೂರ್ಜಿತಗೊಳಿಸಲು ಕೇಂದ್ರ ಸರ್ಕಾರ ಯೋಚಿಸುತ್ತಿದ್ದರೆ, ಹಿಂದೂ ವಿವಾಹ ಕಾಯ್ದೆಯನ್ನು ತಿದ್ದುಪಡಿ ಮಾಡಲು ಖಾಪ್ ಪಂಚಾಯತಿಯ ನೇತಾರರು ಒತ್ತಾಯಿಸುತ್ತಿದ್ದಾರೆ. ಸ್ಥಳೀಯ ಜನತೆಯೂ ಈ ಜಾತಿ ಸಮಿತಿಗಳ ನಿರ್ಣಯಗಳನ್ನು ಬೆಂಬಲಿಸುತ್ತಿದ್ದು ಕೆಲವು ಸಂಸದರೂ ನೇರವಾಗಿ ಸಮರ್ಥಿಸುತ್ತಿದ್ದಾರೆ. ಸಗೋತ್ರ ವಿವಾಹವಾಗಲೀ, ಒಂದೇ ಗ್ರಾಮದವರು ವಿವಾಹವಾಗುವುದಾಗಲೀ ಕಾನೂನುಬಾಹಿರ ಅಲ್ಲದಿದ್ದರೂ ಸ್ಥಳೀಯ ಸಮುದಾಯಗಳ ನಿಯಮಗಳು ಇದನ್ನು ನಿಷೇಧಿಸುತ್ತವೆ. ಹಾಗಾಗಿ ಇದು ಅನೈತಿಕ ಎಂದು ಖಾಪ್ ಪಂಚಾಯತಿಯ ಸಮರ್ಥಕರು ವಾದಿಸುತ್ತಾರೆ. ಈ ಅನೈತಿಕತೆಯ ಪ್ರಶ್ನೆ ಉದ್ಭವಿಸಲು ಮೂಲ ಕಾರಣವೆಂದರೆ ಪಾರಂಪರಿಕವಾಗಿ ಭಾರತೀಯ ಸಮಾಜ ನಂಬಿಕೊಂಡು ಬಂದಿರುವ ಗೋತ್ರ ಪದ್ಧತಿ ಮತ್ತು ಸಗೋತ್ರ ವ್ಯಕ್ತಿಗಳು ಸೋದರ ಸಂಬಂಧಿಗಳು ಎಂಬ ದೃಢ ನಂಬಿಕೆ.

## ಗೋತ್ರ ಪದ್ಧತಿಯ ಹಿನ್ನೆಲೆ

ಭಾರತೀಯ ಸಮಾಜದಲ್ಲಿ ಅಂತರ್‌ಗ್ರಾಮ ವಿವಾಹಗಳು ಬಹುತೇಕವಾಗಿ ಸ್ವೀಕೃತವೇ ಆಗಿದ್ದು ಹರ್ಯಾಣದಂತಹ ಕೆಲವು ಉತ್ತರ ಭಾರತ ರಾಜ್ಯಗಳಲ್ಲಿ ಮಾತ್ರ ನಿಷೇಧಿತವಾಗಿದೆ. ಆದರೆ ಸಗೋತ್ರ ವಿವಾಹ ಮಾತ್ರ ಸುಶಿಕ್ಷಿತ ಸಮಾಜದಲ್ಲೂ, ಮೇಲ್ವರ್ಗಗಳಲ್ಲೂ ಇಂದಿಗೂ ವಿರೋಧ ಎದುರಿಸುತ್ತದೆ. ಇದರ ಮೂಲ ಕಾರಣವೆಂದರೆ ಒಂದೇ ಗೋತ್ರಕ್ಕೆ ಸೇರಿದವರ ಪೂರ್ವಿಕರ ಮೂಲ ಒಂದೇ ಆಗಿರುತ್ತದೆ ಮತ್ತು ಸೋದರ ಸಂಬಂಧಿಗಳಾಗುತ್ತಾರೆಂಬ ನಂಬಿಕೆ. ಭಾರತೀಯ ಸಮಾಜದಲ್ಲಿ ಗೋತ್ರದ ಮೂಲ ಇರುವುದು ವ್ಯಕ್ತಿಯ ಜನ್ಮದಲ್ಲಲ್ಲ. ಬದಲಾಗಿ ವಂಶವಾಹಿನಿಯಾಗಿ ಅನುಸರಿಸಿಕೊಂಡು ಬಂದ ಗುರುಪರಂಪರೆಯಿಂದ. ಉದಾಹರಣೆಗೆ ಭಾರದ್ವಾಜ ಗೋತ್ರದ ಸಮುದಾಯಗಳು ಭಾರದ್ವಾಜ ಮಹರ್ಷಿಯ ಅನುಯಾಯಿಗಳು. ಕಶ್ಯಪ ಗೋತ್ರದ ಸಮುದಾಯಗಳು ಕಶ್ಯಪ ಮಹರ್ಷಿಯ ಅನುಯಾಯಿಗಳು. ವಿಭಿನ್ನ ಜಾತಿಗಳವರು ಭಾರ



ಮಗನನ್ನು ಕಳೆದುಕೊಂಡ ತಾಯಿ ಚಂದರ್‌ಪತಿ

ದ್ವಾಜ ಮಹರ್ಷಿಯ ಅನುಯಾಯಿಗಳಾಗಿದ್ದರೆ ಅವರೆಲ್ಲರೂ ಭಾರದ್ವಾಜ ಗೋತ್ರಕ್ಕೇ ಸೇರುತ್ತಾರೆ. ಕೆಲವು ಸಂದರ್ಭಗಳಲ್ಲಿ ಗೋತ್ರಗಳು ವೃತ್ತಿಯಿಂದಲೂ ಉದ್ಭವಿಸುತ್ತವೆ. ಉದಾಹರಣೆಗೆ ವಿಶ್ವಕರ್ಮ ಗೋತ್ರದವರ ಮೂಲ ಅವರ ವೃತ್ತಿಯಲ್ಲಿಯೇ ಕಂಡು ಬರುತ್ತದೆ.

ವಿಶ್ವಕರ್ಮ ಸಮುದಾಯದಲ್ಲಿ ಐದು ಪ್ರಮುಖ ಗೋತ್ರಗಳಿವೆ. ಬಡಗಿ ವೃತ್ತಿಯವರು ಸನಾತನ ಗೋತ್ರಕ್ಕೂ, ಲೋಹಗಳ ವೃತ್ತಿಯವರು ಅಹಭೂನಾಸ ಗೋತ್ರಕ್ಕೂ, ಶಿಲ್ಪಕಲಾ ವೃತ್ತಿಯವರು ಪ್ರತ್ನರಾಸ ಗೋತ್ರಕ್ಕೂ, ಅಕ್ಕಸಾಲಿಗ ವೃತ್ತಿಯವರು ಸುಪರ್ನಾಸ ಗೋತ್ರಕ್ಕೂ, ಕಬ್ಬಿಣ ಕುಲುಮೆ ವೃತ್ತಿಯವರು ಸನಾಗ ಗೋತ್ರಕ್ಕೂ ಸೇರುತ್ತಾರೆ. ಹಾಗಾಗಿ ಈ ಜಾತಿ-ಕುಲಗಳಲ್ಲಿ ಒಂದೇ ಗೋತ್ರಕ್ಕೆ ಸೇರಿದವರ ಮೂಲ ಒಂದೇ ಆಗಿರುವುದಿಲ್ಲ. ಆದರೂ ಪರಸ್ಪರ ವಿವಾಹ ಸಂಬಂಧಗಳು ನಿಷೇಧಿತವಾಗಿರುತ್ತವೆ. ಯಾವುದೇ ವ್ಯಕ್ತಿಗೆ ಹೆಚ್ಚೆಂದರೆ 10–15 ಪೀಳಿಗೆಯವರ ನೆನಪಿರಬಹುದು. ಅದಕ್ಕಿಂತಲೂ ಹೆಚ್ಚು ಹಿಂದೆ ಹೋಗುವುದು ಅಸಾಧ್ಯ. ಹೀಗಿರುವಾಗ ಯಾವುದೇ ಕುಟುಂಬ ತಮ್ಮ ವಂಶವಾಹಿನಿಯು ಮೂಲತಃ ಒಂದೇ ಮೂಲದಿಂದ ಬಂದಿರುವುದಾಗಿ ಹೇಗೆ ಹೇಳಲು ಸಾಧ್ಯ.

ಮೇಲಾಗಿ ವಿಭಿನ್ನ ಜಾತಿಗಳಲ್ಲಿ ಒಂದೇ ಗೋತ್ರದವರನ್ನೂ ಕಾಣಲು ಸಾಧ್ಯ. ಭಾರದ್ವಾಜ ಗೋತ್ರದವರು ಬ್ರಾಹ್ಮಣರಲ್ಲೂ ಇರುತ್ತಾರೆ. ವಿಶ್ವಕರ್ಮರಲ್ಲೂ ಇರುತ್ತಾರೆ. ಆದರೆ ಈ ಎರಡೂ ಜಾತಿಗಳವರ ನಡುವೆ ವಿವಾಹ ನಡೆಯುವುದನ್ನು ನಿಷೇಧಿಸುವುದು ಜಾತಿ ಆಧಾರದ ಮೇಲೆಯೇ ಹೊರತು, ಗೋತ್ರದ ಆಧಾರದ ಮೇಲಲ್ಲ. ಒಂದು ಜಾತಿಯ ಒಳಗೊಳಪಡುವ ವಿವಾಹಗಳನ್ನು ನಿರ್ಬಂಧಿಸುವುದು ಪಂಗಡಗಳನ್ನಾಧರಿಸಿಯೇ ಹೊರತು, ಗೋತ್ರವನ್ನಾಧರಿಸಿ ಅಲ್ಲ. ಹಾಗಾದಲ್ಲಿ ಸಗೋತ್ರ ವಿವಾಹವನ್ನು ನಿರ್ಬಂಧಿಸುವುದೇಕೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಚಾರಿತ್ರಿಕವಾಗಿ ನೋಡಿದಾಗ ಜಾತಿ ಸಮುದಾಯಗಳ ಸಾಮಾಜಿಕ ಚೌಕಟ್ಟನ್ನು ಕಾಪಾಡಿಕೊಳ್ಳಲು ಈ ರೀತಿಯ ವಿವಾಹ ನಿರ್ಬಂಧಗಳನ್ನು ವಿಧಿಸಿರುವುದನ್ನು ಕಾಣಬಹುದು. ಏಕೆಂದರೆ ಒಂದೇ ಗೋತ್ರದಲ್ಲಿ ವಿವಾಹವಾಗಲು ಅನುಮತಿ ನೀಡಿದರೆ ಸಮುದಾಯ ವಿಸ್ತಾರವಾಗುವುದಿಲ್ಲ. ಹೊಸ ಸದಸ್ಯರು ಸೇರ್ಪಡೆಯಾಗುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಗೋತ್ರ ಪದ್ಧತಿಯನ್ನು ಸಮರ್ಥಿಸಲು ವೈಜ್ಞಾನಿಕ ಕಾರಣಗಳನ್ನೂ ನೀಡಲಾಗುತ್ತಿದೆ. ಆದರೆ ಈ ಅವೈಜ್ಞಾನಿಕ ವಾದಗಳಿಗೆ ಯಾವುದೇ ಆಧಾರವಿಲ್ಲದಿರುವುದರಿಂದ ನಿರ್ಲಕ್ಷಿಸಬಹುದು.

### ಗೌರವ ಮರ್ಯಾದೆಯ ವ್ಯಾಖ್ಯಾನ

ಸಗೋತ್ರ ವಿವಾಹವಾದ ಯುವ ಪೀಳಿಗೆಯನ್ನು ಕುಟುಂಬವರ್ಗದವರೇ ಹತ್ಯೆ ಮಾಡುವ ಅನಿಷ್ಟ ಪರಂಪರೆ ಇತ್ತೀಚಿನ ದಿನಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದು ಹರ್ಯಾಣ, ಉತ್ತರಪ್ರದೇಶ ಮತ್ತು ತಮಿಳುನಾಡಿನಲ್ಲಿ ನಿತ್ಯ ಸುದ್ದಿಯಾಗಿದೆ. ದಲಿತರ ಮೇಲೆ ಆಕ್ರಮಣ ಮಾಡುವುದಾಗಲೀ, ದಲಿತರನ್ನು ಹತ್ಯೆ ಮಾಡುವುದಾಗಲೀ, ದಲಿತರ ಚರ್ಮ ಸುಲಿಯುವುದಾಗಲೀ, ಸಗೋತ್ರ ವಿವಾಹವಾದ ವಧೂವರರನ್ನು ಹತ್ಯೆ ಮಾಡುವುದಾಗಲೀ ಇವೆಲ್ಲವೂ ಜಾಟ್ ಸಮುದಾಯದಂತಹ ಪ್ರಬಲ ಜಾತಿಗಳ ಖಾಪ್ ಪಂಚಾಯತ್‌ನ ನಿರ್ಧಾರವೇ ಆಗಿರುತ್ತದೆ. ಈ ರೀತಿ ಇಲ್ಲಿ ಸಂವಿಧಾನವನ್ನೂ ಧಿಕ್ಕರಿಸಿ, ನ್ಯಾಯಾಂಗ ವ್ಯವಸ್ಥೆಯನ್ನೂ ಧಿಕ್ಕರಿಸಿ ನಿರ್ಣಯ ಕೈಗೊಳ್ಳುವ ಖಾಪ್ ಪಂಚಾಯತ್‌ಗಳು ದೇಶದ ಕಾನೂನನ್ನೂ ಉಪೇಕ್ಷಿಸದಿರುವುದು ಭಾರತೀಯ ಪ್ರಜಾತಂತ್ರಕ್ಕೆ ಅಪಮಾನ ಮಾಡಿದಂತಾಗಿದೆ. ಕಳೆದ ಒಂದು ದಶಕದಲ್ಲಿ ಖಾಪ್ ಪಂಚಾಯತ್‌ಗಳ ನಿರ್ಣಯಗಳ ಫಲವಾಗಿ 50ಕ್ಕೂ ಹೆಚ್ಚು ವಧೂವರರು ಹತ್ಯೆಗೊಳಗಾಗಿದ್ದಾರೆ. ವಿಪರ್ಯಾಸವೆಂದರೆ ಈವರೆಗೂ ಯಾರನ್ನೂ ಶಿಕ್ಷಿಸಲಾಗಿಲ್ಲ.

> **ಹದಿನೇಳನೆಯ ಶತಮಾನದ ನಂತರ ಐರೋಪ್ಯ ರಾಷ್ಟ್ರಗಳಲ್ಲಿ ನಡೆದ ಕ್ರಾಂತಿಕಾರಿ ಬದಲಾವಣೆಗಳ ಪರಿಣಾಮವಾಗಿ ಮಾನವ ಹಕ್ಕುಗಳು ತಮ್ಮದೇ ಆದ ವಿಶಿಷ್ಟ ಸ್ಥಾನ ಪಡೆದುಕೊಂಡವು. ಮಾನವ ಸಮಾಜದಲ್ಲಿ ಸಮುದಾಯ ಕೇಂದ್ರಿತ ಹಕ್ಕುಗಳು ಕ್ಷೀಣಿಸಿ ವ್ಯಕ್ತಿಗತ ಹಕ್ಕುಗಳು ಮಹತ್ವ ಪಡೆದವು. ವೈಯಕ್ತಿಕ ನೆಲೆಗಟ್ಟಿನಲ್ಲಿ ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಪರಂಪರೆಗೆ ಐರೋಪ್ಯ ಕ್ರಾಂತಿ ನಾಂದಿ ಹಾಡಿತ್ತು. ಸಮಾಜದಲ್ಲಿ ವ್ಯಕ್ತಿಯೇ ಪ್ರಧಾನವಾಗಿ ತನ್ನ ವೈಯಕ್ತಿಕ ನೆಲೆಗಟ್ಟಿನಲ್ಲಿ ಹಕ್ಕುಗಳ ಪ್ರತಿಪಾದನೆ ಮಾಡಲಾರಂಭಿಸಿದ್ದೂ ಈ ಹಂತದಲ್ಲೇ. ಹಾಗಾಗಿಯೇ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ವೈಯಕ್ತಿಕ ನಾಗರೀಕ ಮಾನವ ಹಕ್ಕುಗಳು ಪ್ರಾಧಾನ್ಯತೆ ಪಡೆದವು.ಈ ವಿದ್ಯಮಾನದ ಪರಿಣಾಮವಾಗಿ ತದನಂತರದಲ್ಲೂ ವಿಶ್ವದಾದ್ಯಂತ ಮಾನವ ಸಮಾಜದಲ್ಲಿ ಮಹತ್ತರ ಬದಲಾವಣೆಗಳಾದವು.**

ಗೌರವ ಅಥವಾ ಮರ್ಯಾದೆ ಎನ್ನುವ ಪರಿಕಲ್ಪನೆ ಮಾನವನ ಸಾಮಾಜಿಕ-ಸಾಂಸ್ಕೃತಿಕ ಜೀವನದಲ್ಲಿ ತನ್ನದೇ ಆದ ಸ್ಥಾನ ಹೊಂದಿರುತ್ತದೆ. ಸಾಮಾನ್ಯ ಪರಿಭಾಷೆಯಲ್ಲಿ ಮಾನವ ಸಮಾಜದ ಗೌರವವನ್ನು ಅದರ ಸಾಂಸ್ಕೃತಿಕ ಹಿನ್ನೆಲೆ, ಸಾಮಾಜಿಕ ಚೌಕಟ್ಟು ಮತ್ತು ಪಾರಂಪರಿಕ-ಸಾಂಪ್ರದಾಯಿಕ ವ್ಯವಸ್ಥೆಗಳಲ್ಲಿ ಕಾಣಲಾಗುತ್ತದೆ. ಮಾನವ ಸಮಾಜದ ಆಧುನಿಕತೆಗೆ ಒಳಪಟ್ಟಂತೆಲ್ಲಾ ಈ ಪರಿಕಲ್ಪನೆಗಳೂ ಬದಲಾವಣೆ ಹೊಂದುತ್ತಾ ಸಾಗುತ್ತವೆ. ತನ್ನ ಖಾಸಗಿ ಜೀವನದಲ್ಲಿ ಗೌರವ-ಘನತೆಗಾಗಿ ಬಾಳುವುದು ವ್ಯಕ್ತಿಗತವಾಗಿ ಎಷ್ಟು ಮಹತ್ವ ಪಡೆಯುತ್ತದೆಯೋ ಅಷ್ಟೇ ಮಹತ್ವ ಒಂದು ಸಾಮಾಜಿಕ ಚೌಕಟ್ಟಿಗೂ, ಸಾಮುದಾಯಿಕ ಚೌಕಟ್ಟಿಗೂ ಇರುತ್ತದೆ. ಗೌರವ-ಘನತೆಗಳ ಈ ಪರಿಕಲ್ಪನೆ ಮನುಕುಲದ ಸಾಮುದಾಯಿಕ-ವೈಯಕ್ತಿಕ ಹೆಮ್ಮೆ, ಮರ್ಯಾದೆ ಮತ್ತು ಘನತೆಗಳನ್ನು ತನ್ನ ಪರಿಕರಗಳಂತೆ ಬಳಸುತ್ತದೆ. ಸಂಘಪರಿವಾರ ಅಥವಾ ಯಾವುದೇ ರಾಷ್ಟ್ರವಾದಿ ಸಂಘಟನೆಗಳು ಪ್ರಾಂತೀಯ-ಪ್ರಾದೇಶಿಕ ಮಟ್ಟದಲ್ಲಿ ಈ ಪದಗಳನ್ನು ಸಂಕುಚಿತ ವ್ಯಾಪ್ತಿಯಲ್ಲಿ ಬಳಸುವುದನ್ನು ಕಾಣಬಹುದು. "ಗರ್ವದಿಂದ ಹೇಳಿ ನಾವು ಹಿಂದೂ" ಎಂಬ ಘೋಷಣೆಗಳಲ್ಲಿ ಇದು ಸುಸ್ಪಷ್ಟ.

ಸಾಂಪ್ರದಾಯಿಕ ದೃಷ್ಟಿಕೋನದಲ್ಲಿ ಗೌರವ ಎನ್ನುವ ಪರಿಕಲ್ಪನೆ ವೈಯಕ್ತಿಕ ನೆಲೆಗಟ್ಟಿನಲ್ಲಿ ವ್ಯಕ್ತವಾಗುತ್ತಿರಲಿಲ್ಲ. ಕಾರಣ, ಸಾಂಪ್ರದಾಯಿಕ, ಆಧುನಿಕಪೂರ್ವ ಸಮಾಜಗಳಲ್ಲಿ ಸಾಮಾಜಿಕ ಹಕ್ಕುಗಳು ಸಾಮುದಾಯಿಕ ಮಟ್ಟದಲ್ಲಿ ಪ್ರಕಟಗೊಳ್ಳುತ್ತಿದ್ದವೇ ಹೊರತು, ವೈಯಕ್ತಿಕ ಮಟ್ಟದಲ್ಲಲ್ಲ. ಅಂದಿನ ಕಾಲಘಟ್ಟದಲ್ಲಿ ಮಾನವ ಹಕ್ಕುಗಳು ಸಮುದಾಯ-ಸಮಾಜದ ಚೌಕಟ್ಟಿನಲ್ಲಿ ವ್ಯಕ್ತವಾಗುತ್ತಿತ್ತು. ಇಲ್ಲಿ ಮಾನವ ಹಕ್ಕುಗಳು ಎಂದರೆ ಆಧುನಿಕ ಪರಿಕಲ್ಪನೆಯ ಹಕ್ಕುಗಳಿಗಿಂತಲೂ, ಸಾಂಪ್ರದಾಯಿಕ ಸಮಾಜದಲ್ಲಿದ್ದ ಸಾಮುದಾಯಿಕ ಹಕ್ಕುಗಳು ಎಂದೇ ಪರಿಭಾವಿಸಬೇಕಾಗುತ್ತದೆ. ಹಾಗಾಗಿ ಅಂದಿನ ಕಾಲಘಟ್ಟದಲ್ಲಿ ಗೌರವ ಎಂಬ ಕಲ್ಪನೆಯೂ ಸಾಮೂಹಿಕ ಪರಿಕಲ್ಪನೆಯಾಗಿಯೇ ವ್ಯಕ್ತವಾಗುತ್ತಿತ್ತು. ಹಾಗಾಗಿ ಸಾಮುದಾಯಿಕ-ಸಾಮಾಜಿಕ ಗೌರವ-ಘನತೆಗೂ ವೈಯಕ್ತಿಕ ಖಾಸಗಿ ಹಕ್ಕುಗಳಿಗೂ ಸಂಘರ್ಷ ಏರ್ಪಡುತ್ತಲೇ ಇರಲಿಲ್ಲ. ಇದು ಎಲ್ಲ ಸಮಾಜಗಳಿಗೂ, ನಾಗರೀಕತೆಗಳಿಗೂ ಅನ್ವಯಿಸುವ ಸ್ವಾಭಾವಿಕ ನಿಯಮ.

ಹದಿನೇಳನೆಯ ಶತಮಾನದ ನಂತರ ಐರೋಪ್ಯ ರಾಷ್ಟ್ರಗಳಲ್ಲಿ ನಡೆದ ಕ್ರಾಂತಿಕಾರಿ ಬದಲಾವಣೆಗಳ ಪರಿಣಾಮವಾಗಿ ಮಾನವ ಹಕ್ಕುಗಳು ತಮ್ಮದೇ ಆದ ವಿಶಿಷ್ಟ ಸ್ಥಾನ ಪಡೆದುಕೊಂಡವು. ಮಾನವ ಸಮಾಜದಲ್ಲಿ ಸಮುದಾಯ ಕೇಂದ್ರಿತ ಹಕ್ಕುಗಳು ಕ್ಷೀಣಿಸಿ ವ್ಯಕ್ತಿಗತ ಹಕ್ಕುಗಳು ಮಹತ್ವ ಪಡೆದವು. ವೈಯಕ್ತಿಕ ನೆಲೆಗಟ್ಟಿನಲ್ಲಿ ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಪರಂಪರೆಗೆ ಐರೋಪ್ಯ ಕ್ರಾಂತಿ ನಾಂದಿ ಹಾಡಿತ್ತು. ಸಮಾಜದಲ್ಲಿ ವ್ಯಕ್ತಿಯೇ ಪ್ರಧಾನವಾಗಿ ತನ್ನ ವೈಯಕ್ತಿಕ ನೆಲೆಗಟ್ಟಿನಲ್ಲಿ ಹಕ್ಕುಗಳ ಪ್ರತಿಪಾದನೆ ಮಾಡಲಾರಂಭಿಸಿದ್ದೂ ಈ ಹಂತದಲ್ಲೇ. ಹಾಗಾಗಿಯೇ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ವೈಯಕ್ತಿಕ ನಾಗರೀಕ ಮಾನವ ಹಕ್ಕುಗಳು ಪ್ರಾಧಾನ್ಯತೆ ಪಡೆದವು. ಈ ವಿದ್ಯಮಾನದ ಪರಿಣಾಮವಾಗಿ ತದನಂತರದಲ್ಲೂ ವಿಶ್ವದಾದ್ಯಂತ ಮಾನವ ಸಮಾಜದಲ್ಲಿ ಮಹತ್ತರ ಬದಲಾವಣೆಗಳಾದವು.

ಸಾಮಾಜಿಕ-ಸಾಮುದಾಯಿಕ ಅಸ್ಮಿತೆಗಳಿಂದ ದೂರ ಸರಿದ ವ್ಯಕ್ತಿಗತ ಹಕ್ಕು, ಅಧಿಕಾರ ಮತ್ತು ಸಾಮರ್ಥ್ಯಗಳು ಪ್ರಧಾನ ಭೂಮಿಕೆ ನಿರ್ವಹಿಸಲಾರಂಭಿಸಿದವು. ತತ್ಪರಿಣಾಮವಾಗಿ ಸಾಮುದಾಯಿಕ ಬಂಧನಗಳು ಹಾಗೂ ಸಾಂಪ್ರದಾಯಿಕ ಬದ್ಧತೆಗಳು ಕ್ಷೀಣಿಸತೊಡಗಿದವು. ಪ್ರತಿಯೊಂದು ಹೊಸ ಪೀಳಿಗೆಯೊಂದಿಗೂ ಮಾನವ ಸಮಾಜದಲ್ಲಿ ವ್ಯಕ್ತಿಗತ ಸ್ವಾತಂತ್ರ್ಯ ಮತ್ತು ಹಕ್ಕು ಪ್ರತಿಪಾದನೆಗಳು ಹೆಚ್ಚು ಹೆಚ್ಚು ಪ್ರಾಧಾನ್ಯತೆ ಗಳಿಸಿದವು. ತಮ್ಮ ಜೀವನ ಶೈಲಿಯನ್ನು, ತಮ್ಮ ಬದ್ಧತೆ ಮತ್ತು ನಂಬಿಕೆಗಳನ್ನು ಸಾಮುದಾಯಿಕ-ಸಾಮಾಜಿಕ ಚೌಕಟ್ಟಿನೊಳಗೆ ಸೀಮಿತಗೊಳಿಸದೆ, ಸ್ವಪ್ರೇರಿತ ಮಾರ್ಗಗಳನ್ನು ಮಾನವ ಸಮಾಜ ಅನುಸರಿಸಲಾರಂಭಿಸಿತು. ಈ ಹಂತದಲ್ಲೇ ವಿಶ್ವದಾದ್ಯಂತ ಮಾನವ ಹಕ್ಕುಗಳ ಪರಿಕಲ್ಪನೆ ಸ್ಥಾಪಿತ ವ್ಯವಸ್ಥೆಯೊಡನೆ ಸಂಘರ್ಷ ನಡೆಸುವ ಅನಿವಾರ್ಯತೆಯೂ ಉಂಟಾಗಿತ್ತು.

### ಗೌರವದ ಪರಿಕಲ್ಪನೆ

ಬದಲಾದ ಕಾಲಘಟ್ಟಗಳಿಗನುಗುಣವಾಗಿ ಮಾನವ ಹಕ್ಕುಗಳ ಪರಿಕಲ್ಪನೆ ಬದಲಾವಣೆ ಕಂಡರೂ ಒಂದು ನಿರ್ದಿಷ್ಟ ಸಾಮಾಜಿಕ ಚೌಕಟ್ಟಿನೊಳಗೆ ಮಾನವನ ಗೌರವದ ಪರಿಕಲ್ಪನೆ ಮಾತ್ರ ಬೇರೆಯೇ ವ್ಯವಸ್ಥೆಯ

ಪುರುಷ ಪ್ರಧಾನ ಸಾಮುದಾಯಿಕ ಪಳೆಯುಳಿಕೆಗಳಿಂದ ಹೊರಬರಲಾಗಲಿಲ್ಲ. ಹಾಗಾಗಿಯೇ ಆಧುನಿಕ ಸಾಮಾಜಿಕ ಸಂರಚನೆಯಲ್ಲಿ ಇದರ ಪ್ರಜ್ಞೆಯ ಚೌಕಟ್ಟಿನೊಳಗೇ ವ್ಯಕ್ತಿ ನಿಷ್ಠೆಯ ಪರಿಪಾಲನೆ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಆಧುನಿಕ ನಾಗರಿಕ ಸಮಾಜದಲ್ಲಿ ಪ್ರಜಾತಂತ್ರ ವ್ಯವಸ್ಥೆಯ ಫಲಾಫಲಗಳನ್ನು ಅನುಭವಿಸಿದ ಮಾನವ ಸಮಾಜ ಸಾಮುದಾಯಿಕ ಗೌರವವನ್ನು ರಕ್ಷಿಸುವ ನಿಟ್ಟಿನಲ್ಲಿ ವ್ಯಕ್ತಿಗತ ಹಕ್ಕುಗಳ ಉಲ್ಲಂಘನೆಯಾಗುವುದನ್ನು ವಿರೋಧಿಸುತ್ತಲೇ ಬಂದಿರುವುದನ್ನು ಗಮನಿಸಬಹುದು. 20ನೆಯ ಶತಮಾನದ ಚಾರಿತ್ರಿಕ ಬೆಳವಣಿಗೆಗಳು ಮತ್ತು ಕ್ರಾಂತಿಕಾರಿ ಬದಲಾವಣೆಗಳ ಪರಿಣಾಮವಾಗಿ ಮಾನವ ಹಕ್ಕುಗಳ ಪರಿಕಲ್ಪನೆ ಸಾಮುದಾಯಿಕ ಚೌಕಟ್ಟುಗಳನ್ನು ಮೀರಿ ತನ್ನದೇ ಆದ ಅಸ್ತಿತ್ವವನ್ನು ಹೊಂದಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಮಾನವ ಸಮಾಜದ ಅಭ್ಯುದಯದ ಈ ಧೋರಣೆಯೊಂದಿಗೇ ಸಾಮಾಜಿಕ ಚೌಕಟ್ಟನ್ನು ನಿಯಂತ್ರಿಸುವ ಸಂಪ್ರದಾಯಗಳೂ ತನ್ನದೇ ಆದ ರೀತಿಯಲ್ಲಿ ಪರಿವರ್ತನೆ ಹೊಂದುವುದು ಚಾರಿತ್ರಿಕ ಅನಿವಾರ್ಯತೆಯಾಗಿರುತ್ತದೆ. ಇದು ಎಲ್ಲ ಸಮಾಜಗಳಲ್ಲೂ ಕಂಡುಬರುವಂತಹ ವಿದ್ಯಮಾನವೂ ಹೌದು. ಯಾವುದೇ ಚಲನಶೀಲ ಸಮಾಜದ ಅಗತ್ಯತೆಗಳಿಗನುಸಾರವಾಗಿ, ಸಾಮಾಜಿಕ ದೃಷ್ಟಿಕೋನಗಳಿಗನುಗುಣವಾಗಿ ಅಲ್ಲಿನ ಸಂಪ್ರದಾಯಗಳೂ ಬದಲಾವಣೆ ಹೊಂದುತ್ತಿರುತ್ತವೆ. ಇಲ್ಲವಾದಲ್ಲಿ ಸಮಾಜ ಜಡವಾಗುತ್ತದೆ. ನಿಂತ ನೀರಾಗುತ್ತದೆ. ಬದಲಾಗುತ್ತಿರುವ ಜೀವನ ಶೈಲಿ ಮತ್ತು ಸಾಮಾಜಿಕ ಸನ್ನಿವೇಶಗಳಿಗೆ ಅನುಸಾರವಾಗಿ ಸಾಂಪ್ರದಾಯಿಕ ಧೋರಣೆಗಳು ಬದಲಾಗಬೇಕಾಗುತ್ತದೆ. ಭಾರತೀಯ ಸಂದರ್ಭದಲ್ಲೇ ನೋಡಿದರೆ ಸತಿ ಪದ್ಧತಿ, ಬಾಲ್ಯ ವಿವಾಹ, ವಿಧವಾ ವಿವಾಹಗಳಲ್ಲಿ ಈ ಬದಲಾವಣೆಗಳನ್ನು ಕಾಣಬಹುದು. ಇದೇ ರೀತಿಯಲ್ಲೇ ಸಾಮುದಾಯಿಕ ಗೌರವದ ಪರಿಕಲ್ಪನೆಯೂ ಬದಲಾಗುವ ಅಗತ್ಯತೆ ಇರುತ್ತದೆ.

ಭಾರತೀಯ ಸಂದರ್ಭದಲ್ಲಿ ಈ ಪರಿಕಲ್ಪನೆಗಳನ್ನು ವಿಭಿನ್ನವಾಗಿಯೇ ವ್ಯಾಖ್ಯಾನಿಸುವ ಅಗತ್ಯತೆ ಇದೆ. ವಿಶ್ವದ ಇತರ ರಾಷ್ಟ್ರಗಳ ಮತ್ತು ನಾಗರೀಕತೆಗಳ ಸಾಮಾಜಿಕ–ಸಾಂಸ್ಕೃತಿಕ ಸಂರಚನೆಗೂ ಭಾರತೀಯ ಸಮಾಜದ ಸಂರಚನೆಗೂ ಇರುವ ಮೂಲಭೂತ ವ್ಯತ್ಯಾಸಗಳೇ ಈ ಪರಿಕಲ್ಪನೆಯನ್ನೂ ನಿರ್ಧರಿಸುತ್ತದೆ. ಭಾರತದ ಜಾತಿ ಕೇಂದ್ರಿತ ಶ್ರೇಣೀಕೃತ ಸಮಾಜದಲ್ಲಿ ಸಾಮುದಾಯಿಕ ಗೌರವ ನಿರ್ಧರಿತವಾಗುವುದು ಜಾತಿಯ ಚೌಕಟ್ಟಿನಲ್ಲೇ ಹೊರತು ಸಮಸ್ತ ಸಾಮುದಾಯಿಕ ಚೌಕಟ್ಟಿನಲ್ಲಲ್ಲ. ಭಾರತೀಯ ಸಂದರ್ಭದಲ್ಲಿ ಸಮುದಾಯವೇ ಜಾತಿ ಕೇಂದ್ರಿತವಾಗಿರುವುದರಿಂದ ಜಾತಿವ್ಯವಸ್ಥೆಯ ಎಲ್ಲಾ ಮಜಲುಗಳೂ ಸಾಮಾಜಿಕ ಸಂದರ್ಭದಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಒಂದೆಡೆ ಪುರುಷ ಪ್ರಾಧಾನ್ಯತೆ ಮತ್ತೊಂದೆಡೆ ಜಾತಿ ಶ್ರೇಷ್ಠತೆಗಳು ಭಾರತೀಯ ಸಾಮುದಾಯಿಕ ಗೌರವ, ಸಾಮಾಜಿಕ ಗೌರವದ ಚೌಕಟ್ಟುಗಳನ್ನು ನಿರ್ಮಿಸುತ್ತದೆ. ಹಾಗಾಗಿ ಒಂದು ಜಾತಿಯ ಶ್ರೇಷ್ಠತೆಯನ್ನು ಕಾಪಾಡಿಕೊಳ್ಳುವ ಹೊಣೆಗಾರಿಕೆ ಮಹಿಳೆಯರ ಮೇಲೆ ಇರುತ್ತದೆ.

ಈ ಸಂದರ್ಭದಲ್ಲಿ ಖ್ಯಾತ ಸ್ತ್ರೀವಾದಿ ಲೇಖಕಿ ಕ್ಯಾಥರಿನ್ ಮ್ಯಾಕ್ ಕಿನನ್ ಅವರ ಅಭಿಪ್ರಾಯ ಉಲ್ಲೇಖನಾರ್ಹ "ಇತಿಹಾಸದಲ್ಲಿ ಪುರುಷ ಪ್ರಾಧಾನ್ಯತೆ ತೀವ್ರ ವ್ಯಾಪಕವಾದ ಮತ್ತು ಗಟ್ಟಿಯಾದ ವ್ಯವಸ್ಥೆಯಾಗಿ ಪರಿಣಮಿಸಿದೆ. ಈ ವ್ಯವಸ್ಥೆಯ ಶಕ್ತಿಯೇ ಸ್ವೀಕೃತಿಯಾಗಿ ಅದರ ಅಧಿಕಾರವೇ ಭಾಗವಹಿಸುವಿಕೆಯಾಗಿ, ಅದರ ನಿಯಂತ್ರಣ ಶಕ್ತಿಯೇ 'ಇಡೀ ವ್ಯವಸ್ಥೆಯ ಸಮರ್ಥನೆಯಾಗಿ ವ್ಯಕ್ತವಾಗುತ್ತದೆ " ಎಂಬ ಅವರ ಮಾತುಗಳು ಇಂದಿಗೂ ಅಕ್ಷರಶಃ ಸತ್ಯ. ಸಾಮಾಜಿಕ ಗೌರವ ಎಂಬ ಪರಿಕಲ್ಪನೆಯನ್ನು ಈ ರೀತಿಯ ಪುರುಷ ಪ್ರಾಧಾನ್ಯತೆಯೇ ನಿಯಂತ್ರಿಸುತ್ತದೆ. ಹಾಗಾಗಿಯೇ ಮಹಿಳೆಯರನ್ನೇ ಕೇಂದ್ರೀಕರಿಸಿದ ಅಪರಾಧಗಳು ಸಾಮುದಾಯಿಕ ಗೌರವವನ್ನು ನಿರ್ಣಯಿಸುವ ಮೂಲ ಪರಿಕರಗಳಾಗಿಬಿಡುತ್ತವೆ. ಭಾರತದಂತಹ ಸಾಂಪ್ರದಾಯಿಕ ಸಮಾಜದಲ್ಲಿ ಕುಟುಂಬದ ಪರಿಸರಕ್ಕೂ ಸಾಮುದಾಯಿಕ ಚೌಕಟ್ಟಿಗೂ ಹೆಚ್ಚು ವ್ಯತ್ಯಾಸವಿಲ್ಲದಿರುವುದನ್ನೂ ಇಲ್ಲಿ ಗಮನಿಸಬೇಕಾಗುತ್ತದೆ. ಹಾಗಾಗಿ ಕುಟುಂಬದ ಒಪ್ಪಿಗೆ ಇಲ್ಲದೆ ವಿವಾಹವಾಗುವುದು, ಅಂತರ್ಜಾತಿ ವಿವಾಹವಾಗುವುದು, ಲೈಂಗಿಕ ಅತ್ಯಾಚಾರಕ್ಕೊಳಗಾಗುವುದು, ವಿವಾಹ ವಿಚ್ಛೇದನ ಪಡೆಯುವುದು, ಸ್ವಚ್ಛಂದತೆ ಎಂದೇ ಪರಿಗಣಿಸಲ್ಪಡುವ ರೀತಿಯ ನಡವಳಿಕೆಗಳು, ಬುರ್ಖಾ ಅಥವಾ ಪರದಾ ಹಾಕದಿರುವುದು ಈ ಎಲ್ಲಾ ನಡವಳಿಕೆಗಳು ಪುರುಷ ಪ್ರಧಾನ ಸಮಾಜದ ಕ್ರೌರ್ಯಕ್ಕೆ ಒಳಗಾಗುತ್ತವೆ. ಬಹುಪಾಲು ಸಂದರ್ಭಗಳಲ್ಲಿ ಸಾಮುದಾಯಿಕ, ಕೌಟುಂಬಿಕ ಗೌರವವನ್ನು ಕಾಪಾಡುವ ನೆಪದಲ್ಲಿ ಮಹಿಳೆಯರು ಪುರುಷರ ಕ್ರೌರ್ಯಕ್ಕೆ ಬಲಿಯಾಗುತ್ತಾರೆ.

ಈ ಕ್ರೌರ್ಯ ಎಷ್ಟು ಭೀಕರವಾಗಿ ಅನಾವರಣಗೊಳ್ಳುವುದೋ ಅಷ್ಟೇ ಪ್ರಮಾಣದಲ್ಲಿ ಸಮಾಜದ ಗೌರವವನ್ನು ರಕ್ಷಿಸುವ ಹೆಮ್ಮೆ ಪುರುಷ ಪ್ರಧಾನ ವ್ಯವಸ್ಥೆಯದ್ದಾಗಿರುತ್ತದೆ. ಹಾಗಾಗಿ ಪುರುಷರು ಸಾಮುದಾಯಿಕ–ಕೌಟುಂಬಿಕ ಗೌರವದ ನಿಯಂತ್ರಣವನ್ನು ವಹಿಸಿಕೊಳ್ಳುವುದೇ ಅಲ್ಲದೆ ರಕ್ಷಣೆಯ ನೈತಿಕ ಹೊಣೆಗಾರಿಕೆಯನ್ನೂ ವಹಿಸಿಕೊಳ್ಳುತ್ತಾರೆ. ಈ ಸನ್ನಿವೇಶದಲ್ಲಿ ಮಹಿಳೆ ಕುಟುಂಬದ, ಸಮುದಾಯದ, ಪುರುಷರ ಮತ್ತು ಸಮಾಜದ ಗೌರವವನ್ನು ಉಳಿಸುವ, ರಕ್ಷಿಸುವ ಪರಿಕರಗಳಾಗಿಬಿಡುತ್ತಾರೆ. ಗೌರವ ಮರ್ಯಾದೆ ಎಂಬ ಪರಿಕಲ್ಪನೆಗಳ ವ್ಯಾಖ್ಯಾನದ ಸಂದರ್ಭದಲ್ಲೂ ಸಹ ಮಹಿಳೆಯ ಚಾರಿತ್ರ್ಯ, ಶೀಲ ಮತ್ತು ಸಾಮಾಜಿಕ ಕಟ್ಟುಪಾಡುಗಳ ಪರಿಪಾಲನೆಯೇ ಮಹತ್ತರ ಪಾತ್ರ ವಹಿಸುತ್ತವೆ. ಸಮಾಜದ ಪುರುಷ ವರ್ಗ ನಿರ್ಧರಿಸುವ ಸಾಮಾಜಿಕ ಚೌಕಟ್ಟಿನೊಳಗೇ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಗೆ ಮಹಿಳೆಯರು ಒಳಗಾಗುತ್ತಾರೆ.

ಸಮಾಜ ಮತ್ತು ಕೌಟುಂಬಿಕ ಪರಿಸರಗಳಲ್ಲಿ ವ್ಯಕ್ತಗೊಳ್ಳುವ ಈ ರೀತಿಯ ಪುರುಷ ಪ್ರಧಾನ ನಿಯಂತ್ರಣಾಧಿಕಾರಗಳು ಅಂತರ್ಗತವಾಗಿರುವ ಸಂದರ್ಭದಲ್ಲಿ, ಸ್ವೀಕೃತವೆನ್ನಲಾಗುವ ನಿಯಮಗಳ ವಿರುದ್ಧ ನಡೆಯುವುದೇ ಶಿಸ್ತು ಉಲ್ಲಂಘನೆ ಎಂದು ಪರಿಗಣಿಸಲ್ಪಡುತ್ತದೆ. ಹಾಗಾಗಿ ಪುರುಷ ವರ್ಗ ನಿರ್ಧರಿಸುವ ನಿಯಮಗಳ ಪರಿಪಾಲನೆಗಾಗಿ ಒತ್ತಾಯಿಸುವುದೂ, ಬೆದರಿಕೆ ಒಡ್ಡುವುದೂ, ಉಲ್ಲಂಘನೆಯನ್ನು ಶಿಕ್ಷಾರ್ಹವೆಂದು ಪರಿಗಣಿಸುವುದೂ ಸ್ವೀಕೃತವಾಗಿಬಿಡುತ್ತದೆ. ತತ್ಪರಿಣಾಮವಾಗಿ"ಶಿಸ್ತು–ನಿಯಮ" ಉಲ್ಲಂಘಿಸುವ ಮಹಿಳೆಯರನ್ನು ಶಿಕ್ಷೆಗೊಳಪಡಿಸುವ ಹಕ್ಕು ಪುರುಷ ಸಮಾಜಕ್ಕೆ ಸ್ವಾಭಾವಿಕವಾಗಿ ಲಭಿಸಿದಂತೆಯೇ ಪರಿಗಣಿಸಲಾಗುತ್ತದೆ. ಈ ಶಿಕ್ಷೆಯ ವಿಭಿನ್ನ ಸ್ವರೂಪಗಳನ್ನೇ ಮರ್ಯಾದಾ ಹತ್ಯೆ ಅಥವಾ ಗೌರವ ಹತ್ಯೆಗಳೆಂದು ಕರೆಯಲಾಗುತ್ತಿದೆ. ಇಲ್ಲಿ ಸಮಾಜದ ಒಂದು ಸೀಮಿತ ವರ್ಗ ನಿರ್ಧರಿಸುವ ಸಾಮಾಜಿಕ ಚೌಕಟ್ಟುಗಳೇ ಅಂತಿಮ ಅಧಿಪತ್ಯ ಸಾಧಿಸುವುದರಿಂದ ಈ ಚೌಕಟ್ಟುಗಳನ್ನು ಮೀರುವುದು ಸ್ವೀಕೃತ ಅಪರಾಧವಾಗಿ ಪರಿಣಮಿಸುತ್ತದೆ. ಅಪರಾಧ ಎಸಗಿದವರು ನಿಕೃಷ್ಟರಾಗಿ ಕಂಡುಬಂದರೆ, ಶಿಕ್ಷೆ ವಿಧಿಸುವವರಿಗೆ ಪವಿತ್ರ ಸ್ಥಾನ ನೀಡಲಾಗುತ್ತದೆ.

ಆದ್ದರಿಂದಲೇ ಪ್ರಸ್ತುತ ಹರ್‍ಯಾಣ ಮತ್ತಿತರ ರಾಜ್ಯಗಳಲ್ಲಿ ನಡೆಯುತ್ತಿರುವ ಮರ್ಯಾದಾ ಹತ್ಯೆ ಅಥವಾ ಗೌರವ ಹತ್ಯೆಗಳು ಪುರುಷ ಪ್ರಾಧಾನ್ಯತೆಯ ಪ್ರಾಬಲ್ಯದ ಸಂಕೇತವಾಗಿ ಪರಿಣಮಿಸುತ್ತಿದೆ. ಸಾಮಾಜಿಕ ಸಾಮುದಾಯಿಕ ಮತ್ತು ಕೌಟುಂಬಿಕ ಗೌರವ(?)ವನ್ನು ರಕ್ಷಿಸಲು ಬಲಪ್ರಯೋಗದಿಂದ ನಿಯಂತ್ರಿಸುವ ಪರಂಪರೆಗೆ ಸಮಾಜದ ಸುಶಿಕ್ಷಿತ ಸಮುದಾಯದಿಂದಲೂ ಸಮರ್ಥನೆ ಒದಗಿಬರುತ್ತದೆ. ಹರ್‍ಯಾಣದ ಖಾಪ್ ಪಂಚಾಯತಿಗಳಲ್ಲಿ ಈ ವಿದ್ಯಮಾನವನ್ನು ಸ್ಪಷ್ಟವಾಗಿ ಕಾಣಬಹುದು. ಖಾಪ್ ಪಂಚಾಯತಿಗಳಲ್ಲಿ ನಿರ್ಣಾಯಕ ಪಾತ್ರ ವಹಿಸುವುದು ಸಮುದಾಯದ ಹಿರಿಯ ಪೀಳಿಗೆಯವರೇ ಆದರೂ ಈ ನಿರ್ಧಾರಗಳನ್ನು ವಿರೋಧಿಸುವ ಯುವ ದನಿ ಎಲ್ಲಿಯೂ ಕೇಳಿಬರುವುದಿಲ್ಲ. ಇಂತಹ ಏಕರೂಪಿ ದೃಷ್ಟಿಕೋನದ ಪರಿಣಾಮವಾಗಿ ಸಮಾಜದ ಪ್ರಬಲ ವರ್ಗಗಳ ಭೌತಿಕ, ಬೌದ್ಧಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನಿಯಂತ್ರಣ ಇನ್ನೂ ಗಟ್ಟಿಯಾಗುತ್ತದೆ. ಈ ಪ್ರಕ್ರಿಯೆಯನ್ನು ಹರಿಯಾಣಾದ ಖಾಪ್ ಪಂಚಾಯತ್‌ನ ನಿರ್ಣಯಗಳಲ್ಲಿ, ಬರ್ಬರ ಕೊಲೆಗಳಲ್ಲಿ, ಅಮಾನವೀಯ ಹಿಂಸೆಯಲ್ಲಿ ಕಾಣಬಹುದು. ಹಾಗಾಗಿ ಮರ್ಯಾದಾ ಹತ್ಯೆಯನ್ನು ಮಾನವ ಹಕ್ಕುಗಳ ವಿರುದ್ಧ, ವಿಶೇಷವಾಗಿ ಮಹಿಳಾ ಸ್ವಾತಂತ್ರ್ಯದ ವಿರುದ್ಧ ನಡೆಯುತ್ತಿರುವ ಆಕ್ರಮಣವಾಗಿ ಪರಿಗಣಿಸಿದಲ್ಲಿ ಮಾತ್ರ ಈ ಬರ್ಬರ ವ್ಯವಸ್ಥೆಯ ವಿರುದ್ಧ ಹೋರಾಡಲು ಸಾಧ್ಯ. □

**ಸಮಾಜ ಮತ್ತು ಕೌಟುಂಬಿಕ ಪರಿಸರಗಳಲ್ಲಿ ವ್ಯಕ್ತಗೊಳ್ಳುವ ಈ ರೀತಿಯ ಪುರುಷ ಪ್ರಧಾನ ನಿಯಂತ್ರಣಾಧಿಕಾರಗಳು ಅಂತರ್ಗತವಾಗಿರುವ ಸಂದರ್ಭದಲ್ಲಿ, ಸ್ವೀಕೃತವೆನ್ನಲಾಗುವ ನಿಯಮಗಳ ವಿರುದ್ಧ ನಡೆಯುವುದೇ ಶಿಸ್ತು ಉಲ್ಲಂಘನೆ ಎಂದು ಪರಿಗಣಿಸಲ್ಪಡುತ್ತದೆ. ಹಾಗಾಗಿ ಪುರುಷ ವರ್ಗ ನಿರ್ಧರಿಸುವ ನಿಯಮಗಳ ಪರಿಪಾಲನೆಗಾಗಿ ಒತ್ತಾಯಿಸುವುದೂ, ಬೆದರಿಕೆ ಒಡ್ಡುವುದೂ, ಉಲ್ಲಂಘನೆಯನ್ನು ಶಿಕ್ಷಾರ್ಹವೆಂದು ಪರಿಗಣಿಸುವುದೂ ಸ್ವೀಕೃತವಾಗಿಬಿಡುತ್ತದೆ. ತತ್ಪರಿಣಾಮವಾಗಿ"ಶಿಸ್ತು–ನಿಯಮ" ಉಲ್ಲಂಘಿಸುವ ಮಹಿಳೆಯರನ್ನು ಶಿಕ್ಷೆಗೊಳಪಡಿಸುವ ಹಕ್ಕೂ ಪುರುಷ ಸಮಾಜಕ್ಕೆ ಸ್ವಾಭಾವಿಕವಾಗಿ ಲಭಿಸಿದಂತೆಯೇ ಪರಿಗಣಿಸಲಾಗುತ್ತದೆ.**

# ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು:-

**ಡೆಂಗಿ ಜ್ವರ ಎಂದರೇನು ?**

ಡೆಂಗಿ ಜ್ವರವು ಡೆಂಗಿ ವೈರಸ್ಸಿಂದ ಉಂಟಾಗುವ ಕಾಯಿಲೆ. ಈ ಕಾಯಿಲೆಯು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

**ಈ ರೋಗದ ಮುಖ್ಯ ಲಕ್ಷಣಗಳು**

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

**ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು:-**

1) ಡೆಂಗಿ ಹರಡುವ ಈಜಿಪ್ಟ್ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು, ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.

2) ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

3) ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು, ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.

**ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ**
**ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ**

ಕರ್ನಾಟಕ ವಾರ್ತೆ
Karnataka Information

# ಯಶೋಧರೆಯರ ಕಷ್ಟಗಳು

ರಹಮತ್ ತರೀಕೆರೆ

ಧಾರವಾಡದಿಂದ ಪಯಣ ಆರಂಭಿಸಿ ಕರ್ನಾಟಕವನ್ನು ಅದ ರಂಚಿನಲ್ಲೇ ಚಲಿಸುತ್ತ ಒಂದು ಸುತ್ತು ಹಾಕಿದೆವು. ಸುಮಾರು ೧೫೦೦ ಕಿಮಿ ಉದ್ದದ ೧೫ ದಿನಗಳ ಪಯಣ. ಇದರಲ್ಲಿ ನಾವು ಬೌದ್ಧ ವಿಹಾರಗಳನ್ನೂ ಚೈತ್ಯಾಲಯಗಳನ್ನೂ ಬೌದ್ಧ ಮೂರ್ತಿಗ ಳನ್ನೂ ಕಂಡೆವು; ಧಮ್ಮ ಸ್ವೀಕಾರದ ಬಳಿಕ ಅಶೋಕನು ಕರ್ನಾಟಕದಲ್ಲಿ ಹಾಕಿಸಿದ ಶಾಸನಗಳನ್ನು ಕಂಡೆವು; ಬೌದ್ಧ ಧರ್ಮದ ಬೋಧನೆ ನಡೆಯುತ್ತಿದ್ದ ಗುರುಕುಲಗಳನ್ನೂ ಬುದ್ಧನ ಹೆಸರಲ್ಲಿ ಕಟ್ಟಲಾಗಿರುವ ಶಿಕ್ಷಣ ಸಂಸ್ಥೆಗ ಳನ್ನೂ ಭೇಟಿಮಾಡಿದೆವು; ಬೌದ್ಧ ಚಿಂತಕ ರನ್ನೂ ಭಂತೆಗಳನ್ನೂ ಸಾಧಕರನ್ನೂ ಕಂಡು ಮಾತಾಡಿದೆವು. ತಮ್ಮ ರಾಜಕೀಯ ಕಾರ್ಯ ಕ್ರಮದ ಭಾಗವಾಗಿ ಧಮ್ಮ ಪ್ರಸಾರ ಕೈ ಗೊಂಡಿರುವ ಬಿಎಸ್‌ಪಿ ಕಾರ್ಯ ಕರ್ತರ ಜತೆ ಚರ್ಚಿಸಿದೆವು.

**ನ**ನಗೊಮ್ಮೆ ಕರ್ನಾಟಕದ ಬೌದ್ಧಧರ್ಮಕ್ಕೆ ಸಂಬಂಧಿಸಿದ ಜನರನ್ನೂ ಜಾಗಗಳನ್ನೂ ಕಣ್ಣಾರೆ ಕಾಣುವ ಆಸೆ ಮೊಳೆಯಿತು. ಆಸೆಯನ್ನು ಧಾರವಾಡದ ವೈದ್ಯಮಿತ್ರರಾದ ಡಾ. ಸಂಜೀವ ಕುಲಕರ್ಣಿಯವರಲ್ಲಿ ಹಂಚಿಕೊಂಡೆ. ಬೌದ್ಧಧರ್ಮದ ಬಗ್ಗೆ ಒಳ ಸೆಳೆತವುಳ್ಳ ಅವರು ಕೂಡಲೇ ಸೈಯೆಂದು ಒಪ್ಪಿಕೊಂಡರು. ಇಬ್ಬರೂ ಸೇರಿ, ತಿರುಗಾಟದ ಪಥವನ್ನೂ ನೋಡಬೇಕಾದ ಜಾಗವನ್ನೂ ಕಾಣಬೇಕಾದ ಜನರನ್ನೂ ಗುರುತು ಮಾಡಿಕೊಳ್ಳುತ್ತ ತಯಾರಿ ನಡೆಸಲಾರಂಭಿಸಿದೆವು. ಇದರ ಪತ್ತೆಯನ್ನು ಹೇಗೊ ಮಾಡಿದ ಮೈಸೂರಿನ ಗೋವಿಂದಯ್ಯನವರು ನಾನೂ ಬರು ತ್ತೇನೆಂದು ಗಂಟುಬಿದ್ದರು. ಕಡೆಗೆ ತಂಡಕ್ಕೆ ತರುಣ ಕವಿ ಅರುಣ್ ಜೋಳದ ಕೂಡ್ಲಿಗಿಯನ್ನೂ ಸೇರಿಸಿಕೊಂಡೆವು. ನಾವು ನಾಲ್ವರು, ಆಕಸ್ಮಿಕವಾಗಿ ಸಮಾಜದ ನಾಲ್ಕು ಸ್ತರಗಳಿಂದ ಬಂದವರಾಗಿದ್ದು, ಬುದ್ಧನ ನೆಪದಲ್ಲಿ ಒಂದಾಗಿದ್ದೆವು.

ಆಯಾದಿನ ಸಿಕ್ಕ ಅನುಭವವನ್ನು ನಾಲ್ವರೂ ಸೇರಿ ಚರ್ಚಿಸುತ್ತಿದ್ದೆವು. ಭಿನ್ನಮತಗಳನ್ನು ಇಟ್ಟುಕೊಂಡು ಜಗಳ ಮಾಡುತ್ತಿದ್ದೆವು. ನಮ್ಮ ಜತೆ ಒಂದು ಹೆಂಜೀವವೂ ಇದ್ದಿದ್ದರೆ, ತಂಡಕ್ಕೆ ಬೇರೊಂದು ಕಣ್ಣು ಒದಗಿರುತ್ತಿತ್ತೇನೊ? ಆದರೆ ಹೊರಡುವಾಗ ಹಾಗೆ ಯಾರೂ ನಮಗೆ ಸಿಗಲಿಲ್ಲ. ನಿಜ ಹೇಳ ಬೇಕೆಂದರೆ, ನಾವು ಈ ದಿಸೆಯಲ್ಲಿ ಚಿಂತಿಸಲಿಲ್ಲ. ಮನೆ ಮಡದಿ ಯಶೋಧರೆಯ ಹಂಗಿಲ್ಲದೆ ತಿಳಿವಳಿಕೆಯ ಹುಡುಕಾಟಕ್ಕೆ ಹೊರಟ ಬುದ್ಧನ ನಾಡಿನವರು ತಾನೇ ನಾವು?

ಧಾರವಾಡದಿಂದ ಪಯಣ ಆರಂಭಿಸಿ ಕರ್ನಾಟಕವನ್ನು ಅದ ರಂಚಿನಲ್ಲೇ ಚಲಿಸುತ್ತ ಒಂದು ಸುತ್ತು ಹಾಕಿದೆವು. ಸುಮಾರು 1500 ಕಿಮಿ ಉದ್ದದ 15 ದಿನಗಳ ಪಯಣ. ಇದರಲ್ಲಿ ನಾವು ಬೌದ್ಧ ವಿಹಾರಗಳನ್ನೂ ಚೈತ್ಯಾಲಯಗಳನ್ನೂ ಬೌದ್ಧ ಮೂರ್ತಿಗಳನ್ನೂ ಕಂಡೆವು; ಧಮ್ಮ ಸ್ವೀಕಾರದ ಬಳಿಕ ಅಶೋಕನು ಕರ್ನಾಟಕದಲ್ಲಿ ಹಾಕಿಸಿದ ಶಾಸನಗಳನ್ನು ಕಂಡೆವು; ಬೌದ್ಧ ಧರ್ಮದ ಬೋಧನೆ ನಡೆಯುತ್ತಿದ್ದ ಗುರುಕುಲಗಳನ್ನೂ ಬುದ್ಧನ ಹೆಸರಲ್ಲಿ ಕಟ್ಟಲಾಗಿರುವ ಶಿಕ್ಷಣ ಸಂಸ್ಥೆಗಳನ್ನೂ ಭೇಟಿಮಾಡಿದೆವು; ಬೌದ್ಧ ಚಿಂತಕರನ್ನೂ ಭಂತೆಗಳನ್ನೂ ಸಾಧಕರನ್ನೂ ಕಂಡು ಮಾತಾಡಿದೆವು. ತಮ್ಮ ರಾಜಕೀಯ ಕಾರ್ಯಕ್ರಮದ ಭಾಗವಾಗಿ ಧಮ್ಮ ಪ್ರಸಾರ ಕೈಗೊಂಡಿರುವ ಬಿಎಸ್‌ಪಿ ಕಾರ್ಯಕರ್ತರ ಜತೆ ಚರ್ಚಿಸಿದೆವು. ಬೌದ್ಧ ಸಂಪ್ರದಾಯದಲ್ಲಿ ಲಗ್ನವಾಗಿರುವ ದಂಪತಿಗಳನ್ನೂ ಧಮ್ಮ ದೀಕ್ಷೆ ಪಡೆದು ಹೊಸ ಬದುಕನ್ನು ನಡೆಸುತ್ತಿರುವ ಕುಟುಂಬಗಳನ್ನೂ ಕಂಡೆವು. ಒಟ್ಟಿನಲ್ಲಿ ಅದೊಂದು ಅಪೂರ್ವ ಬೌದ್ಧಯಾನ.

ಈ ಯಾನದಲ್ಲಿ ಮೂರು ಅಂಶಗಳು ಗೋಚರಿಸಿದವು. 1.ಕರ್ನಾಟಕದಲ್ಲಿ ಒಂದು ಕಾಲಕ್ಕೆ ವ್ಯಾಪಕ ಅಸ್ತಿತ್ವವನ್ನು ಹೊಂದಿದ್ದ ಬೌದ್ಧ ಧರ್ಮವು, ಸದ್ಯಕ್ಕೆ ತನ್ನ ಗತಕಾಲದ ಅವಶೇಷಗಳ ಮೂಲಕ ಉಸಿರೆಳೆಯುತ್ತಿದ್ದ ಪಳೆಯುಳಿಕೆಗಳು 2. ಧಮ್ಮದೀಕ್ಷೆ ಸ್ವೀಕರಿಸಿರುವ ಸಾವಿರಾರು ಜನರ ಬಾಳಿನಲ್ಲಿ ಹೊಸಹೊಸ ರೂಪದಲ್ಲಿ ನೆಲೆಯೂರುತ್ತ ಅದು ಚಿಗುರೊಡೆಯುತ್ತಿದ್ದುದು. 3. ಹಾಗೆ ಚಿಗುರೊಡೆಯುವ ಪ್ರಕ್ರಿಯೆಯಲ್ಲಿ ಮನೆಗಳನ್ನು ಮನಸ್ಸುಗಳನ್ನು ಸಂಬಂಧಗಳನ್ನು ಕೂಡ ಒಡೆದುಕೊಂಡಿರುವುದು. ಒಂದು, ಚರಿತ್ರೆಯ ಸ್ಥಗಿತ ದರ್ಶನವಾದರೆ, ಮತ್ತೆರಡು ವರ್ತಮಾನದ ಚಲನಶೀಲ ದರ್ಶನ; ಒಂದು, ಭಗ್ನತೆಯ ಮುಖವಾದರೆ, ಇನ್ನೆರಡು ಹೊಸ ಹುಟ್ಟಿನ ಮತ್ತು ಹೊಸ ಬಿಕ್ಕಟ್ಟಿನ ಮುಖಗಳು. ಒಂದು ಸ್ಮಾರಕಗಳ ಜಗತ್ತಾದರೆ ಇನ್ನೆರಡು ಭಾವನೆಗಳ ಮಾನುಷ ಜಗತ್ತು.

ನಮಗೆ ಕಾಡಿಸುತ್ತಿದ್ದುದು ಧಮ್ಮವು ನೆಲೆಯೂರುತ್ತಿರುವ ಕಡೆ ಹುಟ್ಟಿರುವ ಬಿರುಕು ಮತ್ತು ಬಿಕ್ಕಟ್ಟುಗಳು. ಇವು ಧಮ್ಮದೀಕ್ಷೆ ಪಡೆದ ಕುಟುಂಬದಲ್ಲಿ ವ್ಯಕ್ತಿವ್ಯಕ್ತಿಗಳ ನಡುವೆ; ಕೇರಿ ಮತ್ತು ಕುಟುಂಬಗಳ ನಡುವೆ ಬಿದ್ದಿರುವ ಕಂದರದಲ್ಲಿ ಕಾಣುತ್ತಿದ್ದವು; ದಲಿತರ ಎರಡು ಬಣಗಳ ನಡುವೆ ನಡೆಯುತ್ತಿದ್ದ ಸಂಘರ್ಷದ ರೂಪದಲ್ಲಿದ್ದವು. ಯಾವುದೇ ಹಳೆಯ ರೂಪದ ಜಾಗವನ್ನು ಹೊಸತೊಂದು ಆಕ್ರಮಿಸುವಾಗ, ಇಂತಹ ಸಂಘರ್ಷ ಸಾಮಾನ್ಯ. ಹೊಸತು ಮತ್ತು ಹಳತುಗಳ ಈ ಸಂಘರ್ಷವು ಕೆಲವು ಕಾಲದ ಬಳಿಕ ಸಾಮರಸ್ಯಗೊಂಡು ಮೂರನೆಯ ಹೊಸರೂಪವಾಗಿ ಸಿದ್ಧವಾಗಬಹುದು. ಅಂತಹ ಹೊಸ ರೂಪವೊಂದು ಸಿದ್ಧವಾಗುವ ತನಕ ಈ ಜಗ್ಗಾಟಗಳು ಸಹಜ. ಆದರೆ ಸಾಮಾಜಿಕ ಧಾರ್ಮಿಕ ಮಾನಸಿಕ ಹಾಗೂ ಸಾಂಸ್ಕೃತಿಕವಾದ ಈ ಜಗ್ಗಾಟಗಳ ನಡುವೆ ಸಿಕ್ಕು ನಲುಗುತ್ತಿರುವವರ ತೊಳಲಾಟ ಮತ್ತು ಹತಾಶೆಗಳನ್ನು ಹೆಚ್ಚಿನವರು ಲೆಕ್ಕಿಸಿದಂತೆ ಕಾಣುತ್ತಿರಲಿಲ್ಲ. ಮಾನವೀಯವೂ ಸಂಕೀರ್ಣವೂ ಆಗಿರುವ ಈ ನೋವು ಸಂಕಟಗಳನ್ನು ಸರಿ ತಪ್ಪುಗಳೆಂದು ಸರಳವಾಗಿ ತೀರ್ಮಾನಿಸುವುದು ಕಷ್ಟ. ಹೀಗಾಗಿ ಇವು ಯಾಕೆ-ಹೇಗೆ ಮೂಡಿದವು ಎಂದು ಅರ್ಥ ಮಾಡಿಕೊಳ್ಳಲುಯತ್ನಿಸಬಹುದು.

ಎರಡು ವಾರಗಳ ನಮ್ಮ ಧಮ್ಮ ಯಾನದಲ್ಲಿ ಧಮ್ಮ ದೀಕ್ಷೆ ಪಡೆದ ಹತ್ತಾರು ಕುಟುಂಬಗಳನ್ನು ನಾವು ಭೇಟಿಮಾಡಿದೆವು. ಇವುಗಳಲ್ಲಿ ಏಳು ದಲಿತ ಕುಟುಂಬಗಳು. ಒಂದು ಬ್ರಾಹ್ಮಣ. ಎರಡು ಬಂಟರವು. ಕೊನೆಯ ಮೂರು ಕರಾವಳಿಯವು;

ಮೊದಲ ಏಳು ದಲಿತ ಕುಟುಂಬಗಳು ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ, ಗುಲ್ಬರ್ಗ ಜಿಲ್ಲೆಗೆ ಸೇರಿದವು. ಎಲ್ಲ ಕುಟುಂಬ ಗಳೂ ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡವು; ಉಡಲು ಉಣ್ಣಲು ಹೋರಾಟವಿಲ್ಲದ ಮಧ್ಯಮವರ್ಗಕ್ಕೆ ಸೇರಿದವು. ಈ ಕುಟುಂಬಗಳ ಜತೆ ನಾವು ಮಾತಾಡಿದೆವು. ಜತೆ ಕುಳಿತು ಉಂಡೆವು. ಅಲ್ಲಿ ನಮಗೆ ನಾಲ್ಕು ಬಗೆಯ ದಾಂಪತ್ಯಗಳು ಕಂಡವು.

1. ಇಡಿಯಾಗಿ ಧಮ್ಮೀಕರಣಗೊಂಡಿರುವ ದಾಂಪತ್ಯಗಳು. ಇಲ್ಲಿ ದಂಪತಿಗಳಲ್ಲಿ ಸತಿಪತಿಗಳೊಂದಾದ ಭಕ್ತಿಯ ಸಾಮರಸ್ಯವಿತ್ತು. ಸಮಾನಮನಸ್ಕತೆ ಸಾಧ್ಯವಾಗಿತ್ತು. ಹಳೆಯ ಸಂಪ್ರದಾಯಗಳು ಕೈಬಿಟ್ಟು ಹೋಗಿದ್ದವು. ಮಕ್ಕಳಿಗೆ ಬೌದ್ಧ ಹೆಸರುಗಳನ್ನು ಇಡುವುದೇ ಮುಂತಾಗಿ ಬೌದ್ಧ ಆಚರಣೆಗಳು ಆಚರಣೆಗೆ ಬಂದಿದ್ದವು. ಇವು ದೀಕ್ಷೆಗೊಂಡು ದಶಕಗಳನ್ನೆ ಕಳೆದಿರುವ ಕುಟುಂಬಗಳು. ಗುಲ್ಬರ್ಗದ ಬುದ್ಧ ವಿಹಾರದಲ್ಲಿದ್ದ ಶ್ರೀಮತಿ ಖರ್ಗೆಯವರಲ್ಲಿ, ಮಲ್ಲಿಕಾರ್ಜುನ ಖರ್ಗೆಯವರಷ್ಟೇ ಧರ್ಮದ ಉಮೇದಿತ್ತು. ಆದರೂ ಇಲ್ಲಿ ಹೆಚ್ಚಿನ ಕಡೆ ಗಂಡನೇ ಸಾಧಕನಾಗಿದ್ದು, ಮಡದಿ ಅವನಿಗೆ ಸಹಚರಳಾಗಿ ಹಿಂಬಾಲಿಸಿದಂತೆ ಇತ್ತು.

2. ಇನ್ನೂ ಹೊಂದಾಣಿಕೆಯ ಪ್ರಕ್ರಿಯೆಯಲ್ಲಿರುವ ದಾಂಪತ್ಯಗಳು. ಇಲ್ಲಿ ಹೊಸ ಧರ್ಮದ ಬಗ್ಗೆ ಪೂರಾ ಒಪ್ಪಿಗೆ ಸಾಧ್ಯವಾಗಿರಲಿಲ್ಲ. ಆದರೂ. ಹಳತರ ಜತೆಗೆ ಒಂದು ಬಗೆಯ ಸಾಮರಸ್ಯ ಮಾಡಲು ಯತ್ನ ನಡೆದಿತ್ತು. ಉದಾ.ಗೆ. ಒಂದು ಮನೆಯಲ್ಲಿ ಹೊರ ಬಾಗಿಲ ಮೇಲೆ ಕೆತ್ತಲಾಗಿದ್ದ ಬುದ್ಧಮೂರ್ತಿಯ ಹಣೆಗೆ ವಿಭೂತಿಯನ್ನು ಬಳಿಯಲಾಗಿತ್ತು. ಅದು ಬುದ್ಧನನ್ನು ಪಳಗಿಸುತ್ತ ಸ್ಥಳೀಕರಿಸುತ್ತಿರುವ ಯತ್ನದಂತೆ ತೋರಿತು; ಇನ್ನೊಂದು ಮನೆಯ ದೇವರ ಕೋಣೆಯಲ್ಲಿ ಬುದ್ಧನ ಮೂರ್ತಿಯ ಜತೆಗೆ ಅಂಬೇಡ್ಕರ್ ಮತ್ತು ಮಲೆಮಾದೇಶ್ವರನ ಫೋಟೊಗಳನ್ನೂ ಭೇದವಿಲ್ಲದೆ ಇಡಲಾಗಿತ್ತು. ಇವೆಲ್ಲ ಧಮ್ಮ ದೀಕ್ಷೆ ಪಡೆದು ಒಂದೆರಡು ವರ್ಷಗಳಾಗಿದ್ದ ಕುಟುಂಬಗಳು.

3. ಸಾಮರಸ್ಯ ಸಾಧ್ಯವಾಗಿರದೆ ತೊಳಲಾಟ ನಡೆಯುತ್ತಿರುವ ಕುಟುಂಬಗಳು. ಇಲ್ಲಿ ಧಮ್ಮ ಸ್ವೀಕಾರದ ವಿಷಯದಲ್ಲಿ ಸತಿಪತಿಗಳು ಸಮಾನ ಮನಸ್ಕರಾಗಿರಲಿಲ್ಲ. ಹೊಸ ಧಮ್ಮದ ವಿಷಯದಲ್ಲಿ ಗಂಡ ಉತ್ಸಾಹಿಯಾಗಿದ್ದರೆ, ಮಡದಿಯ ಮೊಗದಲ್ಲಿ ಮ್ಲಾನತೆಯಿತ್ತು. ಗಂಡನಿಗೆ ಬೇಸರವಾಗಬಾರದೆಂದೂ ಅಥವಾ ಭಿನ್ನಮತವನ್ನು ಬಂದವರೆದುರು ತೋರಬಾರದೆಂದೂ ಆಕೆ 'ಅಳುವೇ ತುಟಿಗೆ ಬಂದಂತೆ' ಮೌನವಹಿಸಿದಂತೆ ಕಾಣುತ್ತಿತ್ತು. ಗಂಡನ ಮುಖದಲ್ಲಿ ಮನೆಯಲ್ಲಿ ನೆಲೆಸುತ್ತಿರುವ ಧಮ್ಮಸಂಸ್ಕೃತಿಯ ಬಗ್ಗೆ ಸಂತೋಷದ ಭಾವವಿದ್ದರೆ, ಆಕೆಯ ಮುಖದಲ್ಲಿ ಆತಂಕವಿತ್ತು. ಆಕೆ ಗಂಡನ ಒತ್ತಡಕ್ಕೆ ಬೌದ್ಧ ಆಚರಣೆಗಳನ್ನು ಅನಿವಾರ್ಯವಾಗಿ ಯಾಂತ್ರಿಕವಾಗಿ ಮಾಡುತ್ತಿರುವಂತೆ ತೋರಿತು.

3. ಸಾಮರಸ್ಯ ಸಾಧ್ಯವೇ ಆಗದೆ ಸಂಬಂಧ ಕುಸಿದುಬಿದ್ದಿರುವ ಕುಟುಂಬಗಳು. ಇಲ್ಲಿ ಮಹಿಳೆಯರಿಗೆ ತಾವು ಹುಟ್ಟಿ ಬೆಳೆದು ಬಂದ ಪಾರಂಪರಿಕ ಧಾರ್ಮಿಕ ಸಂಸ್ಕೃತಿಯನ್ನು ಬಿಟ್ಟುಕೊಡುವುದು ಸಾಧ್ಯವಾಗಿರಲಿ. ಅವರಿಗೆ ಬುದ್ಧನ ಬಗ್ಗೆ ಅಸಹನೆಯೇನಿರಲಿಲ್ಲ. ಆದರೆ ತನ್ನನ್ನು ತನ್ನವರ ದೈವಗಳಿಂದ ಬಿಡಿಸುತ್ತಿರುವ ಮತ್ತು ಬುದ್ಧನನ್ನು ಹೇರುತ್ತಿರುವ ಗಂಡನ ಬಗ್ಗೆ ಅಸಮಾಧಾನವಿತ್ತು. ನಮ್ಮ ಧಾರ್ಮಿಕ ಸ್ವಾತಂತ್ರ್ಯಕ್ಕೆ ಮನ್ನಣೆಯಿಲ್ಲವಲ್ಲ ಎಂಬ ಕೊರಗು ಒಳಗೊಳಗೇ ಆವಿಗೆಯ ಬೆಂಕಿಯಂತೆ ಸುಳಿಯುತ್ತಿತ್ತು. ಇದು ಒಂದು ಕಡೆ ಲಾವಾರಸದಂತೆ ಆಸ್ಫೋಟಗೊಂಡಿತು ಕೂಡ. ಕರ್ನಾಟಕದ ಲೀವಿಂಗ್ ಬುದ್ಧಿಸಂನ ಅಧ್ಯಯನಕ್ಕೆ ಹೊರಟ ನಮಗೆ ಇದು ಹೊಸದೊಂದು ತಿಳಿವಿನ ಕೋನವನ್ನು ನೀಡಿತು.

ಈ ಆಸ್ಫೋಟ ಸಂಭವಿಸಿದ್ದು ಒಂದು ದಲಿತ ಕುಟುಂಬದಲ್ಲಿ. ಇಲ್ಲಿ ಗಂಡ ಹೆಂಡತಿಯಿಬ್ಬರೂ ಉನ್ನತ ಶಿಕ್ಷಣ ಪಡೆದವರು. ಇವರಲ್ಲಿ ಗಂಡ ಧಮ್ಮದೀಕ್ಷೆ ಸ್ವೀಕರಿಸಿದ್ದರು. ಮಾತ್ರವಲ್ಲ. ಕಾವಿಧರಿಸಿ, ತಮ್ಮ ಹೆಸರನ್ನು ಬದಲಿಸಿಕೊಂಡು ಭಂತೆ ಕೂಡ ಆಗಿದ್ದರು. ಧಮ್ಮ ಪ್ರಸಾರದಲ್ಲಿ ಅತಿ ಉಮೇದಿನಲ್ಲಿ ತೊಡಗಿಸಿಕೊಂಡಿದ್ದರು. ಅವರನ್ನು ಕಾಣುವುದು ನಮ್ಮ ಉದ್ದೇಶವಾಗಿತ್ತು. ಆದರೆ ಅವರು ಮನೆಯಲ್ಲಿ ಇಲ್ಲವೆಂದೂ ಬಿಹಾರದ ಬೌದ್ಧಗಯಾಕ್ಕೆ ಹೋಗಿದ್ದಾರೆಂದೂ ಅವರ ಶಿಷ್ಯರು ತಿಳಿಸಿದರು. ಆದರೂ ಮನೆಗೆ ತೆರಳಿ, ಅವರ ಮಡದಿಯ ಅಭಿಪ್ರಾಯವನ್ನು ಪಡೆಯೋಣವೆಂದು ಹೊರಟೆವು. ಸಂಜೆ ಏಳರ ಹೊತ್ತು. ಭಿಕ್ಕು ಅವರ ಮನೆಗೆ ಹೋಗಿ ಬಾಗಿಲನ್ನು ತಟ್ಟಿದೆವು. ಒಳಗಿಂದ ಒಬ್ಬರು ಮಹಿಳೆ ಬಾಗಿಲನ್ನು ಅರೆತೆಗೆದು ಏನು ಬೇಕಿತ್ತು ಎಂಬಂತೆ ಹುಬ್ಬುನಿರಿಗೆ ಮಾಡಿಕೊಂಡು ನಮ್ಮನ್ನು ನೋಡಿದರು.

ಅವರ ಹಣೆಯಲ್ಲಿ ವಿಭೂತಿಯಿತ್ತು. "ನಾವು ಬೌದ್ಧಧರ್ಮದ ಅಧ್ಯಯನ ಮಾಡುವುದಕ್ಕೆ ಬಂದವರು. ಭಂತೇಜಿಯಿದ್ದರೆ ಅವರ ಜತೆ ಮಾತಾಡಬೇಕಿತ್ತು" ಎಂದೆವು. 'ಬೌದ್ಧ' 'ಭಂತೆ' ಎಂಬ ಶಬ್ದಗಳನ್ನು ಕೇಳುತ್ತಿದ್ದಂತೆ ಆಕೆಯ ಮುಖ ಬಿರುಸಾಯಿತು. ಕಣ್ಣು ಕನಲಿದವು. ಗಡುಸಾದ ದನಿಯಲ್ಲಿ "ನಿಮ್ಮ ಭಂತೇಜಿ ಮನೆಬಿಟ್ಟು ಯಾವುದೋ ದೇಶಕ್ಕೆ ಬುದ್ಧನ್ನ ಹುಡಕ್ಕೊಂಡು ಹೋಗಿದಾರೆ. ಅವರು ಬಂದ್ಮೇಲೆ ಹೊರಗಡೆ ಎಲ್ಲಾದರೂ ಕುಂತು ಮಾತಾಡಿಕೊಳ್ಳಿ ಸಾ. ಈ ಮನೇಲಿ ಅವರ ಸುದ್ದಿ ಮಾತ್ರ ತಗೀಬೇಡಿ. ಬುದ್ಧನ ವಿಷಯ ಎತ್ತಬೇಡಿ. ದಯವಿಟ್ಟು ಹೊರಟುಹೋಗಿ' ಎಂದು ಹೇಳಿದರು. ನಮಗೆ ಎದೆಗೆ ಒದ್ದಂತಾಯಿತು.

ಸೂಕ್ಷ್ಮಮನಸ್ಸಿನ ಡಾ.ಸಂಜೀವ್ ಗಾಬರಿಯಿಂದ "ಗೋವಿಂದಯ್ಯ, ಕಮಾನ್, ಲೆಟಸ್ ಗೋಬ್ಯಾಕ್' ಎಂದರು. ಆದರೆ ಗೋವಿಂದಯ್ಯನವರು ಅದನ್ನು ಕಿವಿಗೆ ಹಾಕಿಕೊಳ್ಳದೆ "ಮೇಡಂ, ಬೇಜಾರ್ ಮಾಡಕೋಬೇಡಿ. ನಿಮ್ಮ ಯಜಮಾನರು ಇಲ್ಲದೇ ಹೋದರೆ ಏನಂತೆ? ನೀವಿದ್ದೀರಲ್ಲ. ನಿಮ್ಮ ಜೊತೇಲೆ ಮಾತಾಡ್ತೀವಿ. ಈ ಬೌದ್ಧ ಧರ್ಮದಿಂದ ನಿಮಗೆ ಏನು ಕಷ್ಟವಾಗಿದೆ. ಅದನಾರೂ ಒಸಿ ಹೇಳಿ. ತಿಳಕೊಳ್ಳುವ" ಎಂದು ನಮ್ರವಾಗಿ ಹೇಳಿದರು. ಆ ಮಹಿಳೆಯ ಕ್ಯಾಣ ಇಳಿದಿರಲಿಲ್ಲ. "ಇಲ್ಲ ಸಾ, ನೀವು ಕೇಳೋದು ಬ್ಯಾಡ. ನಾನು ಹೇಳೋದೂ ಬ್ಯಾಡ. ಬುದ್ಧನ ಹೆಸರು ಹೇಳಿಕೊಂಡು ಬರೋ ಯಾರಹತ್ರಾನೂ ನಂಗೆ ಮಾತಾಡೋಕೆ ಇಷ್ಟವಿಲ್ಲ' ಎಂದರು. ಅದಕ್ಕೆ ಗೋವಿಂದಯ್ಯ "ಅಮ್ಮಾ, ನನ್ನ ಜತೆ ದೂರದಿಂದ ಬಂದಿರೊ ವಿದ್ವಾಂಸರು ಲೇಖಕರು ಅವರೆ. ಒಂದೈದು ನಿಮಿಷ ನಿಮ್ಮ ಜೊತೆ ಮಾತಾಡ್ತೀವಿ" ಎಂದು ವಿನಂತಿಸಿದರು. ಫಾಯದೆಯಾಗಲಿಲ್ಲ. "ನಿಮ್ಮ ಲೇಖಕರನ್ನ ವಿದ್ವಾಂಸರನ್ನ ಕಟ್ಕೊಂಡು ನನಗೇನು ಆಗಬೇಕಿದೆಯಪ್ಪ? ಆ ಬುದ್ಧನಿಂದ ನನ್ನ ಸಂಸಾರವೇ ಹಾಳಾಗಿದೆ.

ನಮ್ಮ ಪಾಡಿಗೆ ಬದುಕಲು ನಮಗೆ ಬಿಡಿ. ಈಗ ತಾವು ದಯಮಾಡಿ" ಎಂದು ತಣ್ಣಗೆ ಆದರೆ ಆಕ್ರೋಶದಿಂದ ಹೇಳಿದರು. ಈಗ ಸಂಜೀವ್‌ಗೆ ತಡೆಯಲು ಆಗಲಿಲ್ಲ. "ತರಿಕೆರಿ, ಏನ್ರೀ ಇದು? ಆ ಹೆಣಮಗಳು ಇಂಡೈರೆಕ್ಟಾಗಿ ನಮಗ ಗೆಟ್‌ಔಟ್ ಅಂತಿದಾರ. ಆದರೂ ನಾವು ಮಾತಾಡ್ತೀವಿ ಅನಲಿಕ್ಕೆ ಹತ್ತಿದೀವಿ. ಅವರಿಗ ತ್ರಾಸ ಕೊಡಬಾರದು. ಗೋವಿಂದಯ್ಯ. ಪ್ಲೀಸ್ ಕಂಬ್ಯಾಕ್" ಎಂದು ಚಡಪಡಿಸಿದರು. ಆದರೆ ಗೋವಿಂದಯ್ಯ ಬರಲಿಲ್ಲ. ಛಲ ಬಿಡದ ತ್ರಿವಿಕ್ರಮನಂತೆ ಆಕೆಯನ್ನು ಒಲಿಸುತ್ತ "ಆಯ್ತು ಮೇಡಂ, ನೀವು ನಮ್ಮ ಜೊತ ಮಾತಾಡ್ದೆ ಇದ್ದರೂ ಪರವಾಯಿಲ್ಲ. ಒಂದು ಲೋಟ ನೀರಾದರೂ ಕೊಡಿ ಮತ್ತೆ" ಎಂದರು. ನಾನು ಬೈಸಿಕೊಂಡಾದರೂ ಸರಿ, ಈ ಸೋದರಿಯ ಅಳಲಿನ ಮರ್ಮವೇನೆಂದು ಅರಿತೇ ಹೋಗಬೇಕೆಂದು ಭಂಡನಾಗಿ ನಿಂತಿದ್ದೆ.

ನಮ್ಮ ಗದ್ದಲಕ್ಕೆ ಬೀದಿಯ ಕೆಲವು ಕಿಟಕಿ ಮತ್ತು ಬಾಗಿಲು ಮೆಲ್ಲಗೆ ತೆರೆದುಕೊಂಡು ಗೋಣುಗಳು ಹೊರ ಚಾಚಿಕೊಂಡವು. ಕೆಲವರು ಸಕೆಗೆಂಬಂತೆ ಹೊರಬಂದು ಗಾಳಿ ಹಾಕಿಕೊಳ್ಳುತ್ತ ಅಂಗಳದಲ್ಲಿ ನಿಂತು ಮಸುಗು ಕತ್ತಲೆಯಲ್ಲಿ ನಮ್ಮತ್ತ ನೋಡತೊಡಗಿದರು. ಅಷ್ಟುಹೊತ್ತು ಹೊರಗೇ ನಿಲ್ಲಿಸಿ ಮಾತಾಡಿದ ಆ ಮಹಿಳೆ, ಗೋವಿಂದಯ್ಯನವರ ನೀರ ಬೇಡಿಕೆ ಈಡೇರಿಸಲು, ಒಳಗೆ ಹೋದರು. ಅದೇ ಹೊತ್ತಲ್ಲಿ ನಾವು ಒಳಗೆ ನುಸುಳಿಕೊಂಡೆವು. ಆಕೆ ಚೊಂಬಿನಲ್ಲಿ ತಂದ ನೀರನ್ನು ಒಂದು

**ಸೂಕ್ಷ್ಮಮನಸ್ಸಿನ ಡಾ.ಸಂಜೀವ್ ಗಾಬರಿಯಿಂದ "ಗೋವಿಂದಯ್ಯ, ಕಮಾನ್, ಲೆಟಸ್ ಗೋ ಬ್ಯಾಕ್" ಎಂದರು. ಆದರೆ ಗೋವಿಂದಯ್ಯನವರು ಅದನ್ನು ಕಿವಿಗೆ ಹಾಕಿಕೊಳ್ಳದೆ "ಮೇಡಂ, ಬೇಜಾರ್ ಮಾಡಕೋಬೇಡಿ. ನಿಮ್ಮ ಯಜಮಾನರು ಇಲ್ಲದೇ ಹೋದರೆ ಏನಂತೆ? ನೀವಿದ್ದೀರಲ್ಲ. ನಿಮ್ಮ ಜೊತೇಲೆ ಮಾತಾಡ್ತೀವಿ. ಈ ಬೌದ್ಧ ಧರ್ಮದಿಂದ ನಿಮಗೆ ಏನು ಕಷ್ಟವಾಗಿದೆ. ಅದನಾರೂ ಒಸಿ ಹೇಳಿ. ತಿಳಕೊಳ್ಳುವ" ಎಂದು ನಮ್ರವಾಗಿ ಹೇಳಿದರು. ಆ ಮಹಿಳೆಯ ಕ್ಯಾಣ ಇಳಿದಿರಲಿಲ್ಲ. "ಇಲ್ಲ ಸಾ, ನೀವು ಕೇಳೋದು ಬ್ಯಾಡ. ನಾನು ಹೇಳೋದೂ ಬ್ಯಾಡ. ಬುದ್ಧನ ಹೆಸರು ಹೇಳಿಕೊಂಡು ಬರೋ ಯಾರಹತ್ರಾನೂ ನಂಗೆ ಮಾತಾಡೋಕೆ ಇಷ್ಟವಿಲ್ಲ' ಎಂದರು. ಅದಕ್ಕೆ ಗೋವಿಂದಯ್ಯ "ಅಮ್ಮಾ, ನನ್ನ ಜತೆ ದೂರದಿಂದ ಬಂದಿರೊ ವಿದ್ವಾಂಸರು ಲೇಖಕರು ಅವರೆ. ಒಂದೈದು ನಿಮಿಷ ನಿಮ್ಮ ಜೊತೆ ಮಾತಾಡ್ತೀವಿ" ಎಂದು ವಿನಂತಿಸಿದರು.**

ಟೋಪಿಕೆ ಬಗ್ಗೆ ಕೇಳಿದ.

ಅವರ ಪತ್ನಿಗಳನ್ನು ಬಾಯಾರಿಕೆ ಇಲ್ಲದ್ದರೂ ಕುಡಿದೆವು. ನಂತರ ತಮ್ಮ ಮನೆಗೆ ಹೋದನದ ಎಳೆ ಮರೆ.. ಅಕೆ ತಮ್ಮ ಕಷ್ಟದ ಜೀವಿತದ ಒಂದು ಸಣ್ಣ ಅಧ್ಯಾಯವನ್ನು ತೆಗೆದರು. "ಸಾ. ನನ್ನ ಕಷ್ಟಾವ ಏನೂಂತ ಹೇಳಲಿ? ನಮ್ಮ ಮನೇವರು ದೀಕ್ಷೆ ತಕ್ಕಂಡ ಮೇಲೆ ಮನೆ ಪರಿಸ್ಥಿತಿಯ ಬದಲಾಗದೆ. ಅವರು ನಮ್ಮನ್ನ ಜೀಟಿಪಾಲು ಮಾಡಿ ತಿರಗಾಟಕ್ಕೆ ಹೋಗವರೆ. ಮನೇನ ನಾನೊಬ್ಬಳೇ ಸಂಭಾಳಸಬೇಕು. ನೀ ಸತ್ತಾ ಬದುಕಿದೆಯಾ ಅಂತ ಕೇಳಲ್ಲ. ಜರೋಮೊಂದು ಈ ಕೂಸಿಗೆ ಏನು ಓದ್ತೀದಿಯಾ ಅಂತ ಕೇಳಕೂ ಅವರಿಗ ಪುರುಸೊತ್ತಿಲ್ಲ. ಯಾವಾಗಲೂ ಬುದ್ಧ ಧಮ್ಮ ದೀಕ್ಷೆ ಅಂತ ಓಡಾಡ್ತವರೆ. ನನ್ನ ಮೇಲೂ ಬುದ್ಧನ್ನ ಹೇರತಾ ಅವರೆ. ನನಗೆ ಅವರ ಬುದ್ಧಬೇಡ. ನನಗೆ ನನ್ನ ಮಂಟೆಸ್ವಾಮೀನೇ ಸಾಕು. ನನಗ ನನ್ನ ಮಾದೇಶ್ವರ ಬೇಕು. ನನಗೂ ನನ್ನದೇ ಧರ್ಮ ಇಲ್ಲವಾ? ನನಗೆ ಮನಸ್ಶಾಂತಿ ಕೊಡೋ ದೇವರ ಪೂಜೆ ಮಾಡುವ ಹಕ್ಕಿಲ್ಲವಾ? ನನಗೂ ಎಲ್ಲರ ಹಾಗೆ ಸಂಸಾರ ಮಾಡಬೇಕು ಅನ್ನೋ ಆಸೆಯಿಲ್ಲವಾ?" ಎಂದು ಆವೇಶ ಬಂದ ಮಾತಾಡತೊಡಗಿದರು. ಅವರಿಗೆ ಅರಿಯದಂತೆ ಕಣ್ಣಲ್ಲಿ ನೀರು ದಳದಳ ಇಳಿಯತೊಡಗಿತು.

ಯಾಕೊ ನನಗೆ ಬುದ್ಧನು ಹೇಳದೆ ಬಿಟ್ಟುಹೋದ ಬಳಿಕ ಶೋಕಿಸಿರಬಹುದಾದ ಯಶೋಧರೆಯ ನೆನಪಾಯಿತು. ಈ ಯಶೋಧರೆಗೆ ಹೊಸ ಧಮ್ಮವು ತನ್ನಿಂದ ತನ್ನ ಗಂಡನನ್ನೂ ತನ್ನ ಮಗುವಿನಿಂದ ಅದರ ತಂದೆಯನ್ನೂ ಕಿತ್ತುಕೊಂಡಿದೆ. ಪರಂಪರೆಯಿಂದ ಬಂದ ದೈವಗಳ ಸಂಬಂಧವನ್ನೂ ಅದು ಕಿತ್ತುಕೊಳ್ಳುತ್ತಿದೆ ಎಂಬ ನೋವಿತ್ತು. ಬಹುಶಃ ಇಸ್ಲಾಮೊ ಕ್ರೈಸ್ತವೊ ಎಲ್ಲ ಹೊಸ ಧರ್ಮಗಳ ಸ್ವೀಕಾರದ ಮೊದಲ ಘಟ್ಟದಲ್ಲಿ ಇಂತಹದೊಂದು ಮಾನಸಿಕ ಭಗ್ನತೆ, ಕೌಟುಂಬಿಕ ಛಿದ್ರತೆ ಸಂಭವಿಸುತ್ತದೆ ಎಂದು ಕಾಣುತ್ತದೆ. ಶರಣ ಧರ್ಮವೂ ಈ ಭಗ್ನತೆಯನ್ನು ಅನುಭವಿಸಿತ್ತು. ಇದನ್ನು ಬಸವಣ್ಣನ ವಚನವೊಂದು ಸೂಚಿಸುತ್ತದೆ:

"ಗಂಡ ಶಿವಭಕ್ತ, ಹೆಂಡತಿ ಮಾರಿಮಸಣಿಯ ಭಕ್ತೆ; ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆಮಾಂಸ"; ಸಾಮಾಜಿಕ ಮುಂಚಲನೆಯನ್ನು ನೀಡುವ ಧರ್ಮಗಳನ್ನು ಸಾಮಾನ್ಯವಾಗಿ ಮೊದಲು ಸ್ವೀಕರಿಸುವವರು ಗಂಡಸರೇ ಯಾಕಾಗಿರುತ್ತಾರೆಯೊ? 'ಮಲೆಗಳಲ್ಲಿ ಮದುಮಗಳ'ಲ್ಲೂ ದೇವಯ್ಯನೇ ಕ್ರಿಸ್ತನಾಗಲು ಹೊರಟು ಮನೆ ಪ್ರಕ್ಷುಬ್ಧವಾಗುತ್ತದೆ. ಗಂಡು ಮುಖ್ಯವಾಗಿರುವ ನಮ್ಮ ಸಮಾಜದಲ್ಲಿ ನಿರ್ವಾಹವಿಲ್ಲದೆ ಅವರ ಹಿಂದೆ ಮಹಿಳೆಯರು ಹಿಂಬಾಲಿಸಬೇಕು ಇಲ್ಲವೇ ಪ್ರತಿರೋಧ ತೋರಬೇಕು. ಪುರುಷರ ಈ ಏಕಪಕ್ಷೀಯ ನಡತೆ ಧರ್ಮದ ವಿಷಯದಲ್ಲಿ ಮಾತ್ರವಲ್ಲ, ಎಲ್ಲ ಹೊಸ ಆಚರಣೆಗಳ ಸಂದರ್ಭದಲ್ಲೂ ಸಂಭವಿಸುತ್ತದೆ. ಸಸ್ಯಾಹಾರದ ಹಿನ್ನೆಲೆಯಿಂದ ಬಂದ ಮೇಲ್ಜಾತಿ ಗಂಡಸರು, ಮಾಂಸಾಹಾರದ ಅಭ್ಯಾಸ ಮಾಡಿಕೊಂಡ ಬಳಿಕ, ತಮ್ಮ ಹೊಸ ಆಹಾರಪದ್ಧತಿಗೆ ನೈತಿಕ ಸಮರ್ಥನೆ ಒದಗಿಸಿಕೊಳ್ಳಲೆಂದು ಅದನ್ನು ಮಡದಿಯರ ಮೇಲೂ ಹೇರುವುದುಂಟು; ಇದಕ್ಕೆ ಪ್ರತಿಯಾಗಿ, ಮೇಲ್ಜಾತಿಯ ಹುಡುಗಿಯನ್ನು ಕಟ್ಟಿಕೊಂಡ ದಲಿತರು ಮಡದಿಗಾಗಿ ಮಾಂಸಾಹಾರ ಬಿಟ್ಟಿರುವ ನಿದರ್ಶನಗಳೂ ಉಂಟು. ಆದರೆ ಇಂತಹ ನಿದರ್ಶನಗಳು ಕಡಿಮೆ.

ಆಹಾರ ಧರ್ಮ ಉಡುಗೆ ಇವುಗಳ ವಿಷಯದಲ್ಲಿ ಏಕಪಕ್ಷೀಯವಾದ ಒತ್ತಾಯವು ವಿಚಿತ್ರ ಪ್ರತಿರೋಧಗಳನ್ನು ಹುಟ್ಟಿಸುತ್ತದೆ. ಸದಾಶಯವಿದ್ದರೂ, ಅದನ್ನು ಜಾರಿಗೆ ತರುವ ವಿಧಾನವು ಅಸೂಕ್ಷ್ಮವಾಗಿದ್ದರೆ ವ್ಯತಿರಿಕ್ತ ಪರಿಣಾಮಗಳನ್ನೇ ತರುತ್ತದೆ. ಆದರೂ ಸಾಮಾನ್ಯವಾಗಿ ಮಹಿಳೆಯರು ಗಂಡ ಸ್ವೀಕರಿಸಿದ ಧರ್ಮವನ್ನು ಕುರುಡಾಗಿ ಅನುಸರಿಸಲು ಒಪ್ಪದೆ, ತಮ್ಮ ಪಾರಂಪರಿಕ ದೈವ ಧರ್ಮಗಳನ್ನು ಉಳಿಸಿಕೊಂಡಿರುವ ನಿದರ್ಶನಗಳುಂಟು. ಅಕಬರನನ್ನು ವರಿಸಿದರೂ ಜೋಧಾಬಾಯಿ ತನ್ನ ಧಾರ್ಮಿಕತೆಯನ್ನು ಬದಲಿಸಿಕೊಳ್ಳಲಿಲ್ಲ. ರಾಮಾನುಜರ ಪ್ರೇರಣೆಯಿಂದ ಶ್ರೀವೈಷ್ಣವ ಧರ್ಮವನ್ನು ಹೊಯ್ಸಳ ದೊರೆ ಬಿಟ್ಟಿದೇವನು ಸ್ವೀಕರಿಸಿದರೂ, ಮಡದಿ ಶಾಂತಲೆ ಶೈವಧರ್ಮದಲ್ಲೇ ಮುಂದುವರೆದಳು. ಜೈನಧರ್ಮದಲ್ಲೂ ಹೀಗೆ ಆಯಿತು.

ಜೈನನಾದ ಗಂಡ ಜೈನಳಾಗದ ಮಡದಿ ಇರುವ ಕುಟುಂಬಗಳ ಬಗ್ಗೆ ಕವಿ ಧರ್ಮಶಿವ ತನ್ನ 'ಸಮಯ ಪರೀಕ್ಷೆ'ಯಲ್ಲಿ ಅಸಹನೆಯಿಂದ ಪ್ರಸ್ತಾಪ ಮಾಡುತ್ತಾನೆ. ಲಂಕೇಶರ 'ಸಂಕ್ರಾಂತಿ' ನಾಟಕದಲ್ಲಿ ಲಿಂಗದೀಕ್ಷೆ ಸ್ವೀಕರಿಸಿ ಬದಲಾಗಿರುವ ತನ್ನ ಪ್ರಿಯಕರನ್ನು ತಿರಸ್ಕರಿಸುವ ಹೆಣ್ಣಿನ ಪಾತ್ರವೂ; ಕುಲಧರ್ಮವನ್ನು ಬಿಟ್ಟು ಶಿಷ್ಟಧರ್ಮವನ್ನು ಸೇರಿದ ಮಗನನ್ನು ಒಪ್ಪದ ತಂದೆಯ ಪಾತ್ರವೂ ಇದೆ. ಈ ಪಾತ್ರಗಳ ಮೂಲಕ ನಾಟಕವು ಸಾಮಾಜಿಕವಾಗಿ ಕ್ರಾಂತಿಕಾರಕವಾದ ಧರ್ಮವು ತನ್ನ ಜಾರಿಯಾಗುವಿಕೆಯಲ್ಲಿ ಮಾಡುತ್ತಿರುವ ವ್ಯಕ್ತಿಗತ ಭಾವನೆಗಳ ಘಾಸಿಯನ್ನು ಚಿತ್ರಿಸುತ್ತದೆ. ನಾಟಕದ ಮಹತ್ವವಿರುವುದು ಅದರ ಕಲಾತ್ಮಕ

**ಹೊಸಧರ್ಮವು ಜನರ ದೈವಪದ್ಧತಿಯನ್ನು ಮಾತ್ರವಲ್ಲ ಉಡುವ ಉಣ್ಣುವ ಪದ್ಧತಿಯನ್ನು ಬದಲಾಯಿಸುತ್ತದೆ; ಆಲೋಚನಾ ವಿಧಾನವನ್ನು ಬದಲಿಸುತ್ತದೆ. ಮೊದಲ ಹಂತದಲ್ಲಿ ಅದು ಸಮುದಾಯದ ಜತೆ ವ್ಯಕ್ತಿಗೆ ಇರುವ ಸಾವಯವ ಆಪ್ತ ಸಂಬಂಧವನ್ನು ಭಗ್ನಗೊಳಿಸುತ್ತದೆ; ವೈಚಾರಿಕ ಪ್ರಜ್ಞೆಯುಳ್ಳ ಗಂಡಸರು ಈ ಬಗೆಯ ಸಂಬಂಧ ನಷ್ಟವನ್ನು ಕೆಲಮಟ್ಟಿಗೆ ಸಹಿಸಬಲ್ಲರು. ಸಾರ್ವಜನಿಕ ಬದುಕಿನಲ್ಲಿರುವ ಅವರಿಗೆ ಪರ್ಯಾಯ ಸಂಬಂಧಗಳು ಸೃಷ್ಟಿಯಾಗುವ ಕಾರಣ, ಇದು ಅಷ್ಟು ದೊಡ್ಡ ಸಮಸ್ಯೆಯೆನಿಸುವುದಿಲ್ಲ. ಆದರೆ ಮನೆ ಮತ್ತು ಕೇರಿಗಳ ಪುಟ್ಟಜಗತ್ತಿನಲ್ಲೇ ಹೆಚ್ಚು ಸಮಯ ಕಳೆಯುವ ಅಷ್ಟೊಂದು ವೈಚಾರಿಕ ಸಿದ್ಧತೆಯಿಲ್ಲದ ಮಹಿಳೆಯರಿಗೆ, ಹೀಗೆ ಸಂಬಂಧ ಕಡಿದುಕೊಂಡು ಬದುಕುವುದು ಕಷ್ಟವಾಗುತ್ತದೆ.**



ಯಶಸ್ಸಿನಲ್ಲಿ ಮಾತ್ರವಲ್ಲ; ಇಂತಹ ಸಾಂಸ್ಕೃತಿಕ ಸಂಕಟಗಳನ್ನು ಪರಿಭಾವಿಸಿರುವುದರಲ್ಲಿ ಕೂಡ.

ಹೊಸಧರ್ಮಗಳ ಸ್ವೀಕಾರವು ಅಸಮಾನತೆಯುಳ್ಳ ಸಮಾಜದಲ್ಲಿ ವ್ಯಕ್ತಿಯ ವೈಯಕ್ತಿಕ ಬೇಕುಬೇಡಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಅದು ದಮನಿತ ಸಮುದಾಯಗಳಿಗೆ ಸಾಮಾಜಿಕ ಚಲನಶೀಲತೆಯನ್ನು ಕೊಟ್ಟಿದೆ; ಆಧ್ಯಾತ್ಮಿಕ ಸಮಾನತೆಯ ಹಂಬಲವನ್ನು ಈಡೇರಿಸುವ ಮಾಧ್ಯಮವಾಗಿದೆ. ಆದರೂ ಹೊಸಧರ್ಮವನ್ನು ಒಳಗೆ ಬಿಟ್ಟುಕೊಳ್ಳುವಲ್ಲಿ ಮಹಿಳೆಯರು ಮತ್ತು ವಯಸ್ಸಾದ ಜನ ಯಾಕೆ ಹಿಂಜರಿಕೆ ತೋರುತ್ತಾರೆ? ಹಳೆಯ ಧರ್ಮವನ್ನು ಬಿಟ್ಟುಕೊಡಲಾಗದ ಜಿಗುಟುತನ ಪ್ರದರ್ಶಿಸುತ್ತಾರೆ? ಅಥವಾ 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು' ಎಂಬಲ್ಲಿರುವ ಅಪೇಕ್ಷೆಯೇ ತಪ್ಪಾಗಿದೆಯೊ?

ಹೊಸಧರ್ಮವು ಜನರ ದೈವಪದ್ಧತಿಯನ್ನು ಮಾತ್ರವಲ್ಲ ಉಡುವ ಉಣ್ಣುವ ಪದ್ಧತಿಯನ್ನು ಬದಲಾಯಿಸುತ್ತದೆ; ಆಲೋಚನಾ ವಿಧಾನವನ್ನು ಬದಲಿಸುತ್ತದೆ. ಮೊದಲ ಹಂತದಲ್ಲಿ ಅದು ಸಮುದಾಯದ ಜತೆ ವ್ಯಕ್ತಿಗೆ ಇರುವ ಸಾವಯವ ಆಪ್ತ ಸಂಬಂಧವನ್ನು ಭಗ್ನಗೊಳಿಸುತ್ತದೆ; ವೈಚಾರಿಕ ಪ್ರಜ್ಞೆಯುಳ್ಳ ಗಂಡಸರು ಈ ಬಗೆಯ ಸಂಬಂಧ ನಷ್ಟವನ್ನು ಕೆಲಮಟ್ಟಿಗೆ ಸಹಿಸಬಲ್ಲರು. ಸಾರ್ವಜನಿಕ ಬದುಕಿನಲ್ಲಿರುವ ಅವರಿಗೆ ಪರ್ಯಾಯ ಸಂಬಂಧಗಳು ಸೃಷ್ಟಿಯಾಗುವ ಕಾರಣ, ಇದು ಅಷ್ಟು ದೊಡ್ಡ ಸಮಸ್ಯೆಯೆನಿಸುವುದಿಲ್ಲ. ಆದರೆ ಮನೆ ಮತ್ತು ಕೇರಿಗಳ ಪುಟ್ಟಜಗತ್ತಿನಲ್ಲೇ ಹೆಚ್ಚು ಸಮಯ ಕಳೆಯುವ ಅಷ್ಟೊಂದು ವೈಚಾರಿಕ ಸಿದ್ಧತೆಯಿಲ್ಲದ ಮಹಿಳೆಯರಿಗೆ, ಹೀಗೆ ಸಂಬಂಧ ಕಡಿದುಕೊಂಡು ಬದುಕುವುದು ಕಷ್ಟವಾಗುತ್ತದೆ. ಅದರಲ್ಲೂ ತಾವು ನಂಬಿದ ದೈವವನ್ನು ಕೈಬಿಡಲು ಏನು ಕೇಡಾಗುತ್ತದೆಯೊ ಎಂದು ಮನಸ್ಸು ಅಳುಕುತ್ತದೆ.

ಹಾಗೆಂದು ಮಹಿಳೆಯರು ಹೊಸಧರ್ಮ ಹೊಸ ದೈವಗಳ ವಿರೋಧಿಗಳಲ್ಲ. ಅವರ ಧಾರ್ಮಿಕ ಉದಾರತೆಗೆ ಮುಸ್ಲಿಮರಲ್ಲದ ಮಹಿಳೆಯರು ದರ್ಗಾ ಮತ್ತು ಮೊಹರಂ ಆಚರಣೆಗಳಲ್ಲಿ ತೊಡಗಿರುವುದು ಅಥವಾ ಗ್ರಾಮೀಣ ಮುಸ್ಲಿಂ ಮಹಿಳೆಯರು ಸ್ಥಳೀಯ ಸಂಪ್ರದಾಯಗಳನ್ನು ಅನುಸರಿಸುವುದು ಸಾಕ್ಷಿ. ಅವರು 'ಅನ್ಯ' ದೈವಗಳನ್ನು ಹಳತರ ಜತೆಗೇ ಸ್ವೀಕರಿಸಿಯಾರು; ಆದರೆ ಹಳೆಯವನ್ನು

ಪೂರಾ ಕೈಬಿಟ್ಟು ಸ್ವೀಕರಿಸಬೇಕೆಂದಾಗ, ಹೊಸಧರ್ಮವು ತಮ್ಮ ನಂಬಿಕೆಯ ಬೇರುಗಳನ್ನು ಅಲುಗಿಸಿದಾಗ, ಅವರಿಗೆ ಕಷ್ಟವಾಗುತ್ತದೆ.

ಧಮ್ಮದೀಕ್ಷೆಯಿಂದ ಬಂಧುಗಳ ಸಾಮಾಜಿಕ ಸಂಬಂಧ ಮತ್ತು ಧಾರ್ಮಿಕ ನಂಬಿಕೆಗಳಲ್ಲಿ ಹುಟ್ಟುವ ಬಿರುಕುಗಳನ್ನು ನಿರ್ವಹಿಸುವ ಬೇಕಾದ ಸಾಮಾಜಿಕ ಮತ್ತು ಮಾನಸಿಕ ಮೆಕ್ಯಾನಿಸಂ ಕರ್ನಾಟಕದಲ್ಲಿನ್ನೂ ರೂಪು ಗೊಂಡಂತೆ ಕಾಣುವುದಿಲ್ಲ. ಯಾಕೆಂದರೆ, ಮಹಿಳೆಯರು ಮೊದಲಿಗರಾಗಿ ಹೊಸಧಮ್ಮ ಸ್ವೀಕರಿಸಿ, ಅದನ್ನು ತಮ್ಮ ಪುರುಷರು ಅನುಸರಿಸುವಂತೆ ಮಾಡಿರುವ ನಿದರ್ಶನವೇ ನಮಗೆ ಸಿಗಲಿಲ್ಲ. ಆದರೆ ದೀಕ್ಷೆ ತೆಗೆದುಕೊಂಡ ಪುರುಷರು, ತಮ್ಮಂತೆ ಉಳಿದವರೂ ಧಮ್ಮವನ್ನು ಒಪ್ಪಿಕೊಳ್ಳಬೇಕು ಎಂಬ ಒತ್ತಾಯ ಮಾಡುತ್ತಿರುವುದು ಕಂಡಿತು. ಈ ಒತ್ತಾಯದ ಹಿಂದೆ ಅವರು ಪುರುಷರಾಗಿರುವ, ಯುವಕರಾಗಿರುವ, ನೌಕರಸ್ಥರಾಗಿರುವ, ಅಕ್ಷರಸ್ಥರಾಗಿರುವ, ಪ್ರಜ್ಞಾವಂತರಾಗಿರುವ ಇಗೋಗಳು ಕೆಲಸ ಮಾಡುತ್ತಿದ್ದವು. ಈ ಇಗೋಗಳು ಪರೋಕ್ಷವಾಗಿ ಉಳಿದವರಲ್ಲಿ ಬೌದ್ಧದ್ವೇಷವನ್ನು ಹುಟ್ಟಿಸಿದಂತಿದ್ದವು. ಅದರಲ್ಲೂ ಧಮ್ಮಕ್ಕೆ ಬಾರದ ಹಿರಿಯ ತಲೆಮಾರಿನವರು ಧಮ್ಮವಂತರಾಗಿರುವ ಮಕ್ಕಳಿಂದ ದೂರವಾಗಿ ಹೊಸ ಅಸ್ಪೃಶ್ಯತೆ ಮತ್ತು ಅನಾಥಪ್ರಜ್ಞೆ ಅನುಭವಿಸುತ್ತಿರುವರೆಂದೂ, ಧಮ್ಮ ಸ್ವೀಕರಿಸಿರುವ ತಲೆಮಾರು ಸ್ವೀಕರಿಸದವರ ಜತೆ ಸಹನೆಯಿಂದ ಒಡನಾಟ ಮಾಡುತ್ತಿಲ್ಲವೆಂದೂ ತೋರಿತು.

ಈ ಬಗೆಯ ಸಾಮಾಜಿಕ ಮಾನವೀಯ ಸಂಬಂಧಗಳ ಬಿರುಕು ಕೇವಲ ಕುಟುಂಬಗಳ ಒಳಗೆ ಮಾತ್ರವಲ್ಲ, ಹೊಸಧರ್ಮ ಸ್ವೀಕಾರ ಮಾಡಿದ ಕುಟುಂಬದ ಜತೆ, ಹಾಗೆ ಸ್ವೀಕಾರ ಮಾಡದೆ ಉಳಿದಿರುವ ಸಮುದಾಯದ ನಡುವೆ ಕೂಡ ಕಾಣಿಸಿತು. ಈಗಾಗಲೇ ಆಧುನಿಕ ತಲೆಮಾರಿನವರ ಶಿಕ್ಷಣ, ಸರ್ಕಾರಿ ಉದ್ಯೋಗ, ನಗರವಾಸ ಮತ್ತು ಮಧ್ಯಮವರ್ಗಕ್ಕೆ ಏರುಪೇರುಗಳು, ಅನಕ್ಷರಸ್ತ ಗ್ರಾಮೀಣ ಕೆಳವರ್ಗದ ದಲಿತರ ಜತೆಗೆ ಒಂದು ಸಣ್ಣ ಬಿರುಕನ್ನು ಹುಟ್ಟಿಸಿವೆ;

ಈ ಬಿರುಕು ಹೊಸಧರ್ಮ ಸ್ವೀಕಾರದ ಜತೆಗೆ ಮತ್ತಷ್ಟು ಅಗಲವಾಗುತ್ತಿದೆ. ಅನೇಕ ಕಡೆ ಧಮ್ಮಸ್ವೀಕಾರ ಮಾಡಿರುವ ಶಿಷ್ಟ ದಲಿತರು, ಪಾರಂಪರಿಕ ಮತಗಳಲ್ಲೇ ಉಳಿದ ತಮ್ಮ ಬಂಧುಗಳ ಬಗ್ಗೆ ಅವರು ಅಜ್ಞಾನಿಗಳು ಎಂಬ ದನಿಯಲ್ಲಿ ಅನಾದರದಿಂದ ಮಾತಾಡುತ್ತಿದ್ದರು. ತಮ್ಮ ಹಿರೀಕರು ಮಾರಮ್ಮ ಊರಮ್ಮಗಳಿಗೆ ನಡೆದುಕೊಳ್ಳುವುದು, ಕೋಳಿ ಕೋಣ ಬಲಿಕೊಡುವುದು, ಮಾಂಸಾಹಾರ ಮದ್ಯಪಾನ ಮಾಡುವುದು ಇತ್ಯಾದಿಯನ್ನು ಅವರು ಅಸಹನೆಯಿಂದ ಕಾಣುತ್ತಿದ್ದರು. ಇದಕ್ಕೆ ತಕ್ಕಂತೆ ಕೆಲವು ದಲಿತ ಭಂತೆಗಳು ಮಾಂಸಾಹಾರ ಸೇವನೆ ಮತ್ತು ಕುಡಿತಗಳನ್ನು ಹೀನ ಆಚರಣೆಗಳೆಂದೂ ಅವನ್ನು ದಲಿತರು ಬಿಟ್ಟುಬಿಡಬೇಕೆಂದೂ ಪ್ರತಿಪಾದಿಸುತ್ತಿದ್ದರು.

ಧಮ್ಮಸ್ವೀಕಾರದಿಂದ ಹುಟ್ಟಿದ ಈ ಬಿರುಕು, ಹೈದರಾಬಾದ್ ಕರ್ನಾಟಕದ ಊರುಗಳಲ್ಲಿ ಇನ್ನೊಂದು ತರನಾಗಿ ಕೆಲಸಮಾಡುತ್ತಿತ್ತು. ಅಲ್ಲಿ ಧಮ್ಮದೀಕ್ಷೆಯನ್ನು ಕೇವಲ ಚಲುವಾದಿಗಳು (ಬಲಗೈ ಹೊಲೆಯರು) ಮಾಡಿದ್ದರು. ಧಮ್ಮದೀಕ್ಷೆ ಸ್ವೀಕರಿಸಿದ ಬಳಿಕ ಮಲ್ಲಿಕಾರ್ಜುನ ಖರ್ಗೆಯವರು ಗುಲ್ಬರ್ಗದಲ್ಲಿ ದೊಡ್ಡದೊಂದು ಬೌದ್ಧ ಚೈತ್ಯಾಲಯ ನಿರ್ಮಿಸಿದ್ದರು. ಬೀದರ್ ಗುಲ್ಬರ್ಗ ಜಿಲ್ಲೆಗಳಲ್ಲಿ ಬಲಗೈಯವರು ಧಮ್ಮದೀಕ್ಷೆ ಪಡೆಯಲು, ಮಹಾರರೇ ಪ್ರಮುಖವಾಗಿರುವ ಮಹಾರಾಷ್ಟ್ರದ ರಿಪಬ್ಲಿಕನ್ ಪಾರ್ಟಿಯೂ ಒಂದು ಕಾರಣ. ಪಾರ್ಟಿಯು ಧಮ್ಮದೀಕ್ಷೆ ಪಡೆದ ಅಂಬೇಡ್ಕರ್ ಅವರನ್ನು ರಾಜಕೀಯ ಸಾಂಸ್ಕೃತಿಕ ನಾಯಕನೆಂದು ಭಾವಿಸಿತು. ಇದು ದಲಿತರ ಎಡಗೈ ಬಣವನ್ನು ಮತ್ತೊಂದು ಬಗೆಯಲ್ಲಿ ಸಂಘಟಿತವಾಗಲು ಪ್ರಚೋದಿಸಿತು. ಒಡೆದ ಬಣಗಳು ದಾಯಾದಿಗಳಂತೆ ಇದ್ದವು.

ಬಲಗೈನವರು ಅಂಬೇಡ್ಕರ್ ಅವರನ್ನು ನಾಯಕರನ್ನಾಗಿಸಿಕೊಂಡು ಧಮ್ಮಸ್ವೀಕಾರ ಮಾಡಿದರೆ, ಎಡಗೈವರು ಜಗಜೀವನರಾಮರನ್ನು ನಾಯಕರಾಗಿಸಿಕೊಂಡು ಕ್ರೈಸ್ತ ಧರ್ಮದತ್ತ ಚಲಿಸಿದ್ದರು. ಹೀಗೆ ಕುಟುಂಬ, ಸಮುದಾಯ ಮತ್ತು ಕೇರಿಗಳ ನಡುವೆ ಧಮ್ಮವು ಬೇರೊಂದು ಬಗೆಯಲ್ಲಿ ಬಿರುಕಿಗೆ ಕಾರಣವಾದಂತೆ ತೋರಿತು.

ಹೊಸ ಧರ್ಮಗಳು ಎಷ್ಟೇ ನಾಗರಿಕವಾಗಿರಲಿ, ದಮನಿತರಿಗೆ ಸಾಮಾಜಿಕ ಚಲನಶೀಲತೆ ಕೊಡುವಂತಹದ್ದಾಗಿರಲಿ, ಅವನ್ನು ಮಾನಸಿಕ ಸಿದ್ಧತೆಯಿಲ್ಲದ ಜನರ ಮೇಲೆ ಹೇರಿದಾಗ ಅವು ಹಿಂಸಾತ್ಮವಾಗಿ ರೂಪಾಂತರಗೊಳ್ಳುತ್ತವೆ. ಯಾವುದೇ ಕ್ರಾಂತಿಕಾರಿ ಸಿದ್ಧಾಂತವನ್ನು ಸಹ ಅತ್ಯವಸರದಲ್ಲಿ ಉತ್ಸಾಹದಲ್ಲಿ ಹೇರಿಕೊಂಡಾಗ ಅನೇಕ ಮಾನವೀಯ ಸೂಕ್ಷ್ಮತೆಗಳು ಕಳೆದುಹೋಗಿಬಿಡುತ್ತವೆ. ಈಗಿನ ಮುಸ್ಲಿಮರಲ್ಲಿ ಬಹಳ ಪ್ರಭಾವಶಾಲಿಯಾಗಿರುವ ತಬ್ಲೀಕ್ ಎಂಬ ನವ ಇಸ್ಲಾಮಿಕ್ ಚಳವಳಿಯಿಂದ ಸಾವಿರಾರು ಕುಟುಂಬಗಳಲ್ಲಿ ಸತಿಪತಿಗಳೊಂದಾಗದ ಭಕ್ತಿಯು ಏರ್ಪಟ್ಟು, ಮಾನವೀಯ ಸಂಬಂಧಗಳು ಕಂಗೆಟ್ಟಿವೆ. ಧರ್ಮಪ್ರಸಾರಕ್ಕೆ ತಮ್ಮನ್ನು ಬಿಟ್ಟು ತಿಂಗಳು ಗಟ್ಟಲೆ ಹೋಗುವ, ಯಾವಾಗಲೂ ಮಸೀದಿಗಳಲ್ಲಿ ಬೀಡುಬಿಟ್ಟಿರುವ ಗಂಡಂದಿರ ವರ್ತನೆಯಿಂದ ಅನೇಕ ಮಹಿಳೆಯರು, ಖಿನ್ನತೆಯಿಂದ ನರಳುತ್ತಿದ್ದಾರೆ. ಕೆಲವರು, ದೇವರ ದಾರಿಯಲ್ಲಿ ಹೋದ ಗಂಡನನ್ನು ಬಿಟ್ಟು ಹೊಸ ಪುರುಷನನ್ನು ಹುಡುಕಿ ಹೋಗಿರುವುದೂ ಉಂಟು.

ಕರ್ನಾಟಕದಲ್ಲಿ ಸಾಮೂಹಿಕ ಧಮ್ಮದೀಕ್ಷೆ ನೀಡುವ ಕಾರ್ಯಕ್ರಮಗಳು ನಡೆಯುತ್ತಿವೆ. ಅದು ಕರ್ನಾಟಕ ಸಾಮಾಜಿಕ ಸಮೀಕರಣವನ್ನು ಬದಲಿಸುವಷ್ಟು ಶಕ್ತವೂ ಅಲ್ಲವೂ, ಅಸ್ಪೃಶ್ಯತೆಯ ಕಾಯಿಲೆಗೆ ಯಾವ ಬಗೆಯ ಮದ್ದೂ ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಇದಕ್ಕಾಗಿ ಬೆಲೆ ತೆರುತ್ತಿರುವವರು ಮಾತ್ರ ಮಹಿಳೆಯರಾಗಿದ್ದಾರೆ. ಧಮ್ಮದೀಕ್ಷೆ ನೀಡುತ್ತಿರುವವರು ಈ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಪರಿಭಾವಿಸಿದಂತಿಲ್ಲ. ಹೀಗಾಗಿ ನಾವು ಕಂಡ ಬಹುತೇಕ ಯಶೋಧರೆಯರಲ್ಲಿ ಬುದ್ಧನ ಬಗ್ಗೆ ಕೋಪವಿತ್ತು. ಇದಕ್ಕೆ ಕಾರಣವಾಗಿದ್ದು ಧಮ್ಮವಲ್ಲ. ಧಮ್ಮವನ್ನು ನೆಲೆಗೊಳಿಸುತ್ತಿರುವ ವಿಧಾನ.

ನಮ್ಮ ಬೌದ್ಧಯಾನದಲ್ಲಿ ಅನೇಕ ದಲಿತ ಕುಟುಂಬಗಳಲ್ಲಿ ಧಮ್ಮ ಸ್ವೀಕಾರವು ಹೊಸ ಆತ್ಮಾಭಿಮಾನವನ್ನು ಹೊಸ ಬದುಕಿನ ಕ್ರಮವನ್ನು ತಂದಿತ್ತಿರುವ ಹಲವಾರು ನಿದರ್ಶನಗಳನ್ನು ನಾವು ಕಂಡೆವು. ಆದರೆ ಎಲ್ಲ ಬಗೆಯ ಪರಿವರ್ತನೆಗಳ ಹೊತ್ತಲ್ಲಿ ಪ್ರತಿರೋಧ ಹತಾಶೆ ಅಸಹಾಯಕತೆ ಕಂಡೆವು. ನಮಗೆ ಬೌದ್ಧಧರ್ಮಕ್ಕೆ ಸೇರಿದ ಶಾಸನ, ವಿಗ್ರಹ ಚೈತ್ಯಾಲಯಗಳು ಭಗ್ನಾವಸ್ಥೆಯಲ್ಲಿ ಇದ್ದುದು ಕಂಗೆಡಿಸಲಿಲ್ಲ; ಧಮ್ಮಸ್ವೀಕಾರದ ವಿಷಯವು ಮನುಷ್ಯರ ಮತ್ತು ಕುಟುಂಬಗಳ ನಡುವೆ ಭಗ್ನತೆ ಹತಾಶೆ ತಂದಿರುವುದು ಕಂಗೆಡಿಸಿತು. ಯಶೋಧರೆಯರ ಕಷ್ಟಗಳಿಗೆ ಕೊನೆಯಿಲ್ಲವೆನಿಸಿತು. □

(ಸೌಜನ್ಯ: ಅಕ್ಕರೆಯ ಕಡಲು)

# ಸಂವಾದ



## ಲೇಖಕರದಲ್ಲಿ ಮನವಿ

**'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.**

**ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.**

**ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.**

**–ಸಂಪಾದಕ**

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

# ಲೋಹಿಯಾವಾದಿ ಸಾಂಸ್ಕೃತಿಕ ಪರಂಪರೆಯೂ, ತರೀಕೆರೆಯವರ ಮೆಳ್ಳೆಗಣ್ಣಿನ ನೋಟವೂ...

**ಡಿ. ಎಸ್. ನಾಗಭೂಷಣ**

**ರಹಮತ್, ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೆ ಲೋಹಿಯಾವಾದಿಗಳ ಕೊಡುಗೆಯನ್ನು ವಿವರಿಸುವವರ ಹಾಗೆ ಲೇಖನವನ್ನು ಆರಂಭಿಸಿರುವರಾದರೂ, ಯಾವುದೇ ನಿರ್ದಿಷ್ಟ ಕೊಡುಗೆಯನ್ನೂ ಆಳವಾಗಿ ಚರ್ಚಿಸಿ ಗುರುತಿಸದೆ;ಅದು ಹುಟ್ಟು ಹಾಕಿದ್ದೆಂದು ಅವರು ಹೇಳುವ ಕೆಲವು ಗೊಂದಲ-ಜಗಳಗಳನ್ನಷ್ಟೇ ಪ್ರಸ್ತಾಪಿಸುತ್ತಾ, ತಾವು ನಂಬಿದ ರಾಜಕೀಯ ತಾತ್ವಿಕತೆಯ ಆಧಾರದ ಮೇಲೆ ತಮ್ಮದೇ ಆದ ಕೆಲವು ರಾಜಕೀಯ ತೀರ್ಮಾನಗಳಿಗೆ ಬಂದಿದ್ದಾರೆ. ಇದಕ್ಕಾಗಿ, ಲೋಹಿಯಾವಾದದ ವಿಶ್ಲೇಷಣೆಯ ಹೆಸರಿನಲ್ಲಿ ಆಯ್ದ ಕೆಲವು ಲೋಹಿಯಾವಾದಿಗಳ ಅಥವಾ ಅವರು ಹಾಗೆಂದು ಭಾವಿಸಿದವರ ವೈಯಕ್ತಿಕ ವರ್ತನೆಗಳನ್ನು ಉದಾಹರಣೆಗಳಾಗಿ ನೀಡುತ್ತಾ ತನ್ನ ವಾದವನ್ನು ಕಟ್ಟಿಕೊಂಡಿರುವ ಈ ಲೇಖನ, ಎಲ್ಲೂ ಲೋಹಿಯಾ ಚಿಂತನೆಯನ್ನು ತಾತ್ವಿಕವಾಗಿ ಮುಖಾಮುಖಿ ಮಾಡಿಕೊಂಡಿಲ್ಲ.**

ಇತ್ತೀಚೆಗೆ ರಾಯಚೂರಿನ ಭೀಮನಗೌಡ ಇಟಗಿ ಅವರ ಪ್ರಧಾನ ಸಂಪಾದಕತ್ವ ಮತ್ತು ಡಾ॥ ದಸ್ತಗೀರ್ ಸಾಬ್ ದಿನ್ನಿ ಅವರ ಸಂಪಾದಕತ್ವಗಳಲ್ಲಿ 'ಕನಸು ಪ್ರಕಾಶನ'ವು 'ಎಲ್ಲಾ ಕಾಲದ ಬೆಳಕು' ಎಂಬ ಲೋಹಿಯಾ ವ್ಯಕ್ತಿತ್ವ-ವಿಚಾರಗಳನ್ನು ಕುರಿತ ಪುಸ್ತಕವೊಂದನ್ನು ಹೊರತಂದಿದೆ. ಇದರಲ್ಲಿ ಡಾ॥ ರಹಮತ್ ತರೀಕೆರೆ ಅವರ 'ಕರ್ನಾಟಕ ಸಂಸ್ಕೃತಿ ಮತ್ತು ಲೋಹಿಯಾವಾದ' ಎಂಬ ಲೇಖನ ಹಲವು ಕಾರಣಗಳಿಗಾಗಿ ವಿಶೇಷ ಗಮನ ಸೆಳೆಯುತ್ತದೆ. ನಮ್ಮ ನಡುವಿನ ಸೂಕ್ಷ್ಮ ಚಿಂತಕರೂ, ಸಮರ್ಥ ವಿಮರ್ಶಕರೂ ಎಂದು ಹೆಸರಾಗಿರುವ ರಹಮತ್ ಈ ಲೇಖನದಲ್ಲಿ ಪ್ರದರ್ಶಿಸಿರುವ ಬೇಜವಾಬ್ದಾರಿತನ, ಉಡಾಫೆಗಳು, ಮಾಡಿರುವ ಸುಲಭ ತೀರ್ಮಾನಗಳು ಮತ್ತು ನೀಡಿರುವ ತಪ್ಪು ಮಾಹಿತಿ ಗಾಬರಿ ಹುಟ್ಟಿಸುವಂತಿವೆ. ಒಮ್ಮೊಮ್ಮೆ ಇದು ಲೋಹಿಯಾ ಚಿಂತನೆಯನ್ನು ತಮ್ಮ ವಿರೋಧಿ ರಾಜಕೀಯ ಚಿಂತನೆಯೆಂದು ಭಾವಿಸಿ ಮಾಡಲಾಗಿರುವ ಉದ್ದೇಶಪೂರ್ವಕ ಅಪಪ್ರಚಾರವೋ ಎಂಬಷ್ಟು ರೂಕ್ಷವಾಗಿಯೂ, ಜಿಗುಪ್ಸೆಕರವಾಗಿಯೂ ಇದೆ. ಈ ಜಿಗುಪ್ಸೆಯ ಫಲವೇ ಈ ಲೇಖನ.

ರಹಮತ್, ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೆ ಲೋಹಿಯಾವಾದಿಗಳ ಕೊಡುಗೆಯನ್ನು ವಿವರಿಸುವವರ ಹಾಗೆ ಲೇಖನವನ್ನು ಆರಂಭಿಸಿರುವರಾದರೂ, ಯಾವುದೇ ನಿರ್ದಿಷ್ಟ ಕೊಡುಗೆಯನ್ನೂ ಆಳವಾಗಿ ಚರ್ಚಿಸಿ ಗುರುತಿಸದೆ; ಅದು ಹುಟ್ಟು ಹಾಕಿದ್ದೆಂದು ಅವರು ಹೇಳುವ ಕೆಲವು ಗೊಂದಲ-ಜಗಳಗಳನ್ನಷ್ಟೇ ಪ್ರಸ್ತಾಪಿಸುತ್ತಾ, ತಾವು ನಂಬಿದ ರಾಜಕೀಯ ತಾತ್ವಿಕತೆಯ ಆಧಾರದ ಮೇಲೆ ತಮ್ಮದೇ ಆದ ಕೆಲವು ರಾಜಕೀಯ ತೀರ್ಮಾನಗಳಿಗೆ ಬಂದಿದ್ದಾರೆ. ಇದಕ್ಕಾಗಿ, ಲೋಹಿಯಾವಾದದ ವಿಶ್ಲೇಷಣೆಯ ಹೆಸರಿನಲ್ಲಿ ಆಯ್ದ ಕೆಲವು ಲೋಹಿಯಾವಾದಿಗಳ ಅಥವಾ ಅವರು ಹಾಗೆಂದು ಭಾವಿಸಿದವರ ವೈಯಕ್ತಿಕ ವರ್ತನೆಗಳನ್ನು ಉದಾಹರಣೆಗಳಾಗಿ ನೀಡುತ್ತಾ ತನ್ನ ವಾದವನ್ನು ಕಟ್ಟಿಕೊಂಡಿರುವ ಈ ಲೇಖನ, ಎಲ್ಲೂ ಲೋಹಿಯಾ ಚಿಂತನೆಯನ್ನು ತಾತ್ವಿಕವಾಗಿ ಮುಖಾಮುಖಿ ಮಾಡಿಕೊಂಡಿಲ್ಲ ಎಂಬುದು ಈ ಲೇಖನದ ಟೊಳ್ಳುತನವನ್ನು ತೋರಿಸುವುದಷ್ಟೇ ಅಲ್ಲ. ಅದರ ಪ್ರಾಮಾಣಿಕತೆಯನ್ನೂ ಅನುಮಾನಾಸ್ಪದಗೊಳಿಸಿದೆ.



ಲೋಹಿಯಾವಾದ (ಈ ಪ್ರಯೋಗವನ್ನೇ ನಾನು ಇಷ್ಟಪಡುವುದಿಲ್ಲವೆಂಬುದು ಬೇರೆ ಮಾತು) – ಲೋಹಿಯಾ ವಾದಿಗಳನ್ನು ಟೀಕಿಸುವುದು ಅಥವಾ ವಿಮರ್ಶೆಗೊಳಪಡಿಸುವುದು ಅಪರಾಧವೇನಲ್ಲ. ಅದನ್ನು ನಾನೇ ಹಲವಾರು ಬಾರಿ ಮಾಡಿ, ಸ್ಥಾಪಿತ ಲೋಹಿಯಾವಾದಿಗಳ ಕೆಂಗಣ್ಣಿಗೆ ಗುರಿಯಾಗಿದ್ದೇನೆ. ಯಾವುದೇ ಚಿಂತನೆ ಬೆಳೆಯುವುದು, ಸಕಾಲಿಕವಾಗುತ್ತಾ ಹೋಗುವುದು ಇಂತಹ ಟೀಕೆ ವಿಮರ್ಶೆಗಳಿಂದಲೇ. ಆದರೆ ಎಲ್ಲೋ ಕೇಳಿದ 'ಕಥೆ'ಗಳ ಆಧಾರದ ಮೇಲೆ, ಆಧಾರವಿಲ್ಲದ ಊಹಾ ಪೋಹಗಳ, ವದಂತಿಗಳ ಆಧಾರದ ಮೇಲೆ, ಯಾರೋ ಯಾವುದೋ ಕಾರಣಕ್ಕೆ ರೂಢಿಸಿದ ಅಭಿಪ್ರಾಯಗಳು – ನಿಲುವುಗಳ ಆಧಾರದ ಮೇಲೆ ಸಾರಾಸಗಟಾಗಿ ಕರ್ನಾಟಕದ ಲೋಹಿಯಾ ಸಾಂಸ್ಕೃತಿಕ ಪರಂಪರೆಯ ವೈರುಧ್ಯಗಳೆಂದು ತಾವು ಕರೆಯುವ ವಿದ್ಯಮಾನದ ಬಗ್ಗೆ ರಹಮತ್ ಬೀದಿ ಬದಿಯ ಹರಟೆಯಂತೆ ಸುಲಭ ಶೈಲಿಯ ಭಾಷಣ ಹೊಡಕೊಂಡು ಹೋಗಿದ್ದಾರೆ. ಅಲ್ಲದೆ, ಇದು ಮೂಲತಃ ಸಾಹಿತ್ಯ ಅಕಾಡೆಮಿಯ ವಿಚಾರ ಸಂಕಿರಣ ವೊಂದರಲ್ಲಿ ಮಾಡಿದ ಭಾಷಣದ ಬರಹ ರೂಪವೆಂದು ಕೇಳಿ ದಂಗಾಗಿದ್ದೇನೆ.

ರಹಮತ್ ಕರ್ನಾಟಕದಲ್ಲಿ ಲೋಹಿಯಾ ರಾಜಕೀಯ ಪರಂಪರೆಯ ಚರಿತ್ರೆಯನ್ನು ನಿರೂಪಿಸತೊಡಗುವ ಮೊದಲ ಪಜ್ಞೆಯಲ್ಲೇ ತಮ್ಮ ಬೇಜವಾಬ್ದಾರಿತನವನ್ನು ಪ್ರದರ್ಶಿಸಿದ್ದಾರೆ. ಅವರ ಪ್ರಕಾರ ಲೋಹಿಯಾ ಕರ್ನಾಟಕಕ್ಕೆ ಪರಿಚಯವಾದದ್ದು 50ರ ದಶಕದಲ್ಲಿ 'ಕಾಣಿಸಿಕೊಂಡ'(!) ಕಾಗೋಡು ಭೂ ಹೋರಾಟದ ಮೂಲಕ. ನಂತರ ಲೋಹಿಯಾ ಚಿಂತನೆಯನ್ನು ಕರ್ನಾಟಕದಲ್ಲಿ ಪಸರಿಸುತ್ತಾ ಬಂದವರು ಕಿಷನ್ ಪಟ್ನಾಯಕ್! ಕರ್ನಾಟಕದ ಸಮಾಜವಾದಿ ಚರಿತ್ರೆಯ ಬಗ್ಗೆ ಸಂಪೂರ್ಣ ಅಜ್ಞಾನ ಹೊಂದಿದವರು ಮಾತ್ರ ಇಷ್ಟು ಧೈರ್ಯವಾಗಿ ಇಂತಹ ಹೇಳಿಕೆಯನ್ನು ದಾಖಲಿಸಬಲ್ಲರು.

ಲೋಹಿಯಾ ಜೊತೆಯಲ್ಲಿಯೇ ಮತ್ತು ಆನಂತರ ಕಮಲಾದೇವಿ ಚಟ್ಟೋಪಾಧ್ಯಾಯ, ಸದಾಶಿವ ಕಾರಂತ, ಗೋಪಾಲ ಗೌಡ, ಎಸ್.ವೆಂಕಟರಾಂ, ಜೆ.ಎಚ್.ಪಟೇಲ, ನೀಲಗಂಗಯ್ಯ ಪೂಜಾರ, ಪದಕಿ ವಕೀಲರು, ಎಂ.ನಾಗಪ್ಪ, ಕೆ.ಜಿ.ಮಹೇಶ್ವರಪ್ಪ, ಟಿ.ಎನ್. ನಾಗರಾಜ್, ಎಸ್.ಎಸ್.ಕುಮಟಾ, ಪಟ್ಟಾಭಿರಾಮ ರೆಡ್ಡಿ ದಂಪತಿಗಳು, ಎಂ.ಡಿ. ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಯು.ಆರ್.ಅನಂತಮೂರ್ತಿ, ಕೆ.ರಾಮದಾಸ್ ಇತ್ಯಾದಿ ಅನೇಕರು ಕಾಲಾನುಕಾಲಕ್ಕೆ ಕರ್ನಾಟಕದಲ್ಲಿ ಸಂಘಟನೆ, ಹೋರಾಟ, ಚರ್ಚೆ, ಪ್ರಕಟಣೆ ಇತ್ಯಾದಿಗಳ ಮೂಲಕ (ಲೋಹಿಯಾ)ಸಮಾಜವಾದದ ಅಡಿಗಲ್ಲುಗಳನ್ನು ಹಾಕಿದವರು. ಎಪ್ಪತ್ತರ ದಶಕದಲ್ಲಷ್ಟೇ, ಅದೂ ಲೋಹಿಯ ನಿಧನಾನಂತರ ಸಮಾಜವಾದಿ ಪಕ್ಷದಲ್ಲುಂಟಾದ ಬಿರುಕಿನ ಫಲವಾಗಿ, ಕಿಷನ್ ಪಟ್ನಾಯಕ್ ಪಕ್ಷದ ಒಂದು ತಾತ್ವಿಕ ಧಾರೆಯ ಪ್ರತಿಪಾದಕರಾಗಿ ಕರ್ನಾಟಕದಲ್ಲಿ ಬೆಂಬಲ ಮತ್ತು ನೆಲೆಯನ್ನು ಕಂಡುಕೊಂಡದ್ದು. ಆನಂತರ ಅವರು ಆಗಾಗ್ಗೆ ರಾಜ್ಯಕ್ಕೆ ಭೇಟಿ ನೀಡುತ್ತಾ, ಚದುರಿ ಹೋಗಿದ್ದ ಸಮಾಜವಾದಿಗಳನ್ನೂ, ಸಮಾಜವಾದಿ ಚಿಂತನೆಯನ್ನೂ ಒಗ್ಗೂಡಿಸುವ ಪ್ರಯತ್ನವನ್ನು ತಮ್ಮ ಕೊನೆಯ ದಿನಗಳವರೆಗೂ

ಮಾಡಿದರಷ್ಟೆ.

'ಜಾತಿ ಪದ್ಧತಿ, ಕಾಂಗ್ರೆಸ್ ಪಕ್ಷದ ಜಡತೆ, ನೆಹರೂ ಆಡಳಿತ ಮತ್ತು ಇಂಗ್ಲಿಷ್ ಹೇರಿಕೆಗಳನ್ನು ವಿರೋಧಿಸುವುದು. ದೇಶೀಭಾಷೆ, ಗಾಂಧೀವಾದಗಳ ಒಲವು, ಸಾಂಸ್ಕೃತಿಕ ಸೂಕ್ಷ್ಮತೆ, ಸಾಹಿತ್ಯ ಸಂಗೀತಗಳ ಅಭಿರುಚಿ ಹೊಂದಿರುವುದು ಲೋಹಿಯಾವಾದಿ ಚಿಂತನೆಯ ಪ್ರಮುಖ ತಾತ್ವಿಕ ರಾಜಕೀಯ ಸಾಮಾಜಿಕ ನಿಲುವುಗಳಾಗಿದ್ದವು' ಎಂದು ಇಡೀ ಲೋಹಿಯಾ ಚಿಂತನೆಯನ್ನು ಬಹು ಸುಲಭವಾಗಿ ಪರಿಚಯಿಸಿಬಿಡುವ ರಹಮತ್ ಅವರ ಧೈರ್ಯ ಅವರು ಬಂಡಾಯದಲ್ಲಿ ಕಲಿತ ಭಂಡತನದಿಂದಲೇ ಬಂದಿರಬಹುದು! ಅವರು ಮುಂದುವರೆದು, 'ಅದರಲ್ಲೂ ಆಗ ಆಧುನಿಕ ಶಿಕ್ಷಣ ಹಾಗೂ ಸಾಮಾಜಿಕ ಎಚ್ಚರವನ್ನು ಪಡೆದು ನಗರವಾಸಕ್ಕೆ ಬಂದಿದ್ದ ಭೂಮಾಲೀಕ ಶೂದ್ರ ಜಾತಿಗಳ ತರುಣರ ತುಡಿತಗಳ ಜತೆ ಲೋಹಿಯಾವಾದವು ಆಪ್ತವಾಗಿ ಬೆರೆಯಿತು' ಎಂದು 50–60ರ ದಶಕದಲ್ಲಿ ಸಮಾಜವಾದಿ ಚಳವಳಿಗೆ ಯಾರಾರು ಆಕರ್ಷಿತರಾಗಿದ್ದರು ಎಂಬುದರ ಅರಿವೇ ಇಲ್ಲದೆ ಅಪ್ಪಣೆ ಕೊಡಿಸುತ್ತಾರೆ.

ಆದರೆ ಉದಾಹರಣೆಗೆ ಸಮಾಜವಾದಿಗಳ ತವರೆನಿಸಿದ ಶಿವಮೊಗ್ಗ ಜಿಲ್ಲೆಯನ್ನೇ ತೆಗೆದುಕೊಂಡರೆ, ಗೋಪಾಲಗೌಡರ ಹೊರತಾಗಿ(ಇವರು ಭೂಮಾಲಿಕರೂ ಅಲ್ಲ, ಹಳ್ಳಿ ಬಿಟ್ಟು ನಗರವಾಸಕ್ಕೆ ಹೋದವರೂ ಅಲ್ಲ) ಸಮಾಜವಾದಿ ಪಕ್ಷಕ್ಕೆ ಆಧಾರವಾಗಿದ್ದವರು ಭೂರಹಿತ ಅವಿದ್ಯಾವಂತ ಕೆಳಜಾತಿಗಳವರು. ಮುಂದೆ ಸಮಾಜವಾದಿ ಪಕ್ಷದಿಂದ ಗೆದ್ದು ಶಾಸಕರಾದವರೂ ಇವರೇ. ಇನ್ನು ಬೇರೆ ಜಿಲ್ಲೆಗಳಲ್ಲಿ ಲೋಹಿಯ ಚಿಂತನೆಗಳಿಂದ ಆಕರ್ಷಿತರಾಗಿ ಯಾವ ಪ್ರತಿಫಲ ನಿರೀಕ್ಷೆಯೂ ಇಲ್ಲದೆ, ಸಮಾಜವಾದಿ ಹೋರಾಟಗಳಲ್ಲಿ ಭಾಗವಹಿಸಿದ ರಾಚಪ್ಪ ಬೆಟ್ಟೂರ್, ರಾಚಪ್ಪ ಹಡಪದ, ಅಜ್ಜಿಗೇರಿ ವಿರೂಪಾಕ್ಷಪ್ಪ, ವೀರಣ್ಣ ತಿಮ್ಮಾಜಿ, ಎಲಿಗಾರ ತಿಮ್ಮಪ್ಪ, ಕಣ್ಣನ್, ಮುದ್ದಾಚಾರ್, ಕೃಷ್ಣ ಗೋಪಾಲ, ಶ್ರೀರಾಮಯ್ಯ, ಸಂಜೀವ, ಸುಬ್ರಹ್ಮಣ್ಯ, ಹನುಮಂತಪ್ಪ, ಹೊನ್ನೂರಪ್ಪ, ಮಾಧವನ್, ಮಾಣಿಕ್ಯಂ, ಬಾಬೂ ಸಾಹೇಬ, ಅಮರಸಿಂಗ್ ರಾಠೋಡ, ವಲಿ, ದ್ಯಾವಪ್ಪ, ಮುನಿವೆಂಕಟರಮಣ, ಆರ್.ಬಿ.ಸ್ವಾಮಿ, ವೀರಪ್ಪ ಸವದಿ, ಬಸಪ್ಪ ಸೋಗಿ, ಕಲ್ಲಪ್ಪ ಬಾಳಪ್ಪ ಇತ್ಯಾದಿಗಳು ಯಾವ ಶೂದ್ರ ಜಾತಿಯ ಎಂತಹ ಭೂಮಾಲೀಕರು ಎಂಬುದನ್ನು, ವಿಶ್ವವಿದ್ಯಾಲಯವೊಂದರಲ್ಲಿ ಅನೇಕ ಸಂಶೋಧನಾ ಯೋಜನೆಗಳ ಸೌಲಭ್ಯ ಪಡೆದಿರುವ ರಹಮತ್ ಅವರೇ ಸಂಶೋಧಿಸಿ ಹೇಳಬೇಕು.

ನೆಹರೂ ಅವರಂತಹ ಜನಪ್ರಿಯತೆಯ ತುತ್ತತುದಿಯಲ್ಲಿದ್ದ ನಾಯಕರ ರಾಜಕಾರಣದ ವಿಶ್ವಾಸಾರ್ಹತೆಯನ್ನೇ ಭಂಗಗೊಳಿಸಿ ಅದು ತತ್ತರಿಸುವಂತೆ ಮಾಡಿದ ರಾಜಕೀಯ ಚಿಂತನೆಯೊಂದನ್ನು ಅದು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಆಧರಿಸಿದ ರಾಜಕೀಯ ಹೋರಾಟ ಮಾತ್ರವೆಂಬಂತೆ ಸರಳೀಕರಿಸಿ ಇಷ್ಟು ಹಗುರಾಗಿ ಪ್ರಸ್ತುತಪಡಿಸುವುದು ಯಾವುದೇ ರೀತಿಯಲ್ಲೂ ಗಂಭೀರ ಚಿಂತನೆ ಎನಿಸಿಕೊಳ್ಳಲಾರದು ಮತ್ತು ಯಾವುದೇ ಗಂಭೀರ ಚರ್ಚೆಯನ್ನು ಹುಟ್ಟು ಹಾಕಲಾರದು.

ಸಾಕಷ್ಟು ಕಾಲ ವಿಶ್ವವಿದ್ಯಾಲಯವೊಂದರ ಲೋಹಿಯಾ ಅಧ್ಯಯನ ಪೀಠದ ಸಂಚಾಲಕರೂ ಆಗಿದ್ದ ರಹಮತ್, ಆ ಕಾರಣಕ್ಕಾದರೂ ಲೋಹಿಯಾ ಚಿಂತನೆಯ ಮತ್ತು ಅದರ ರಾಜಕೀಯ ಚರಿತ್ರೆಯ ಪ್ರಾಥಮಿಕ

**ರಹಮತ್ ಅವರ ಜಡ ಮಾರ್ಕ್ಸ್‌ವಾದಿ ಮನಸ್ಸು ತೇಜಸ್ವಿ – ಲಂಕೇಶ್ ಮೂಲತಃ ಸೃಜನಶೀಲ ಲೇಖಕರು, ಲೇಖಕರಿಗೆ ತಮ್ಮದೇ ಆದ ತಳಮಳದ ನೆಲೆಯೊಂದಿರುತ್ತದೆ ಎಂಬುದನ್ನೇ ಮರೆಸಿದಂತೆ ಕಾಣುತ್ತದೆ. ಹಾಗೆ ನೋಡಿದರೆ, ಮಾರ್ಕ್ಸ್‌ವಾದದ ತಲಸ್ಪರ್ಶಿ ಜ್ಞಾನದ, ಪಾಂಡಿತ್ಯದ ನೆಲೆಯಂತಿರುವ ಬಂಗಾಳದ ಮಾರ್ಕ್ಸ್‌ವಾದಿ ರಾಜಕಾರಣಿಗಳೇ ಜಾಗತೀಕರಣ ಕುರಿತು ತಮ್ಮ ನಿಲುವುಗಳನ್ನು ಸ್ಪಷ್ಟಗೊಳಿಸಿಕೊಳ್ಳಲಾಗದೆ ಸಿಂಗೂರು ಮತ್ತು ನಂದಿಗ್ರಾಮಗಳಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದಾರೆ. ಅಭಿವೃದ್ಧಿಯ ವಿವಿಧ ಹಂತಗಳಿಗನುಗುಣವಾಗಿ ವಿದೇಶೀ ಬಂಡವಾಳ ಬಹುರಾಷ್ಟ್ರೀಯ ಕಂಪನಿಗಳು ಅಗತ್ಯವೆಂದು ಹೇಳುತ್ತಿದ್ದಾರೆ!**

ಪರಿಚಯದ ಪ್ರಯತ್ನ ಮಾಡಬೇಕಿತ್ತು. ಆದರೆ ಹಾಗೇನೂ ಮಾಡದೆ ಈ ಚಿಂತನೆಯ ಬಗ್ಗೆ ಹಲವು ಕಡೆ ವ್ಯಾಖ್ಯಾನಗಳನ್ನು ಮಾಡಹೋಗಿ ಪ್ರಾಥಮಿಕ ತಪ್ಪುಗಳನ್ನು ಎಸಗಿದ್ದಾರೆ. ನನ್ನ ಗಮನಕ್ಕೆ ಬಂದೆಡೆಯಲ್ಲೆಲ್ಲಾ ನಾನು ಅವನ್ನು ತಿದ್ದಿದ್ದೇನೆ. ಆದರೆ ಇದಾವುದನ್ನೂ ಲೆಕ್ಕಿಸದ ರಹಮತ್ ಇಲ್ಲಿ ತಮ್ಮ ಮನ ಬಂದಂತೆ ವಾದ ಮಾಡುತ್ತಾ, ವ್ಯಾಖ್ಯಾನ ಮಾಡುತ್ತಾ ಹೋಗಿದ್ದಾರೆ. ಅವರ ಪ್ರಕಾರ ಲೋಹಿಯಾವಾದಿಗಳು ಮಾರ್ಕ್ಸ್‌ವಾದವನ್ನು ಟೀಕಿಸುವುದು(ಅದನ್ನು ಬರೀ ಟೀಕೆಯೆಂದಷ್ಟೇ ಪರಿಗಣಿಸುವುದಾದರೆ) ಕಮ್ಯೂನಿಸ್ಟರು ಇಂದಿರಾ ಕಾಂಗ್ರೆಸ್ ಜೊತೆ ಸೇರಿಕೊಂಡ ಕಾರಣಕ್ಕಂತೆ! ಇದನ್ನು ಇವರು ಎಲ್ಲಿ ಏನು ಓದಿ ತಿಳಿದುಕೊಂಡರೋ ಅಥವಾ ಬರೀ ಊಹೆಯೋ ಗೊತ್ತಾಗದು.

ಲೋಹಿಯಾ ಚಿಂತನೆ ಆಧುನಿಕ ನಾಗರೀಕತೆ ಕುರಿತ ಒಂದು ಸೃಜನಶೀಲ ಅನ್ವೇಷಣೆಯಾಗಿದ್ದು, ಅದು ಈ ಮುನ್ನ ಇದೇ ಕೆಲಸ ಮಾಡಿದ ಗಾಂಧೀವಾದವನ್ನು ಆದರ್ಶವಾದಿ ನೆಲೆಯಿಂದ ಕಾರ್ಯಸಾಧ್ಯ ವ್ಯಾವಹಾರಿಕ ನೆಲೆಗೆ(ಅದೂ ಈಗ ಆದರ್ಶವಾದಿ ನೆಲೆಯೇ ಎನ್ನಿಸಿಕೊಂಡುಬಿಟ್ಟಿದೆ ಎಂಬುದು ಬೇರೆ ವಿಷಯ!) ಒಯ್ಯುವ ಪ್ರಯತ್ನ ಮಾಡುತ್ತದೆ. ಆ ಮೂಲಕ ಗಾಂಧೀವಾದವನ್ನು ತನ್ನದೇ ವಿಮರ್ಶೆ ಮತ್ತು ವಿಸ್ತರಣೆಗಳ ಮೂಲಕ ಕ್ರಾಂತಿಕಾರಿಯನ್ನಾಗಿ ಮಾಡುವ ಪ್ರಯತ್ನ ಮಾಡುತ್ತದೆ. ಈ ಅನ್ವೇಷಣೆಯ, ಪ್ರಯತ್ನದ ಭಾಗವಾಗಿಯೇ ಅದು ಆಧುನಿಕ ನಾಗರೀಕತೆಯ ಹೊಸ ಅಸ್ತ್ರವೆನಿಸಿದ್ದ ಮಾರ್ಕ್ಸ್‌ವಾದವನ್ನು(ಇದನ್ನು ಲೋಹಿಯಾ, ಪಶ್ಚಿಮವು ಕ್ರಿಶ್ಚಿಯನ್ ಧರ್ಮದ ನಂತರ ಪೂರ್ವದ ಮೇಲೆ ಪ್ರಯೋಗಿಸಿರುವ ಇತ್ತೀಚಿನ ಅಸ್ತ್ರವೆಂದೂ ಬಣ್ಣಿಸುತ್ತಾರೆ) ಕುರಿತಂತೆ ತನ್ನ ತಾತ್ವಿಕ ವಿಮರ್ಶೆಯನ್ನು ಸವಿವರವಾಗಿ ಪ್ರಸ್ತುತಪಡಿಸುತ್ತದೆ. ಇದರಲ್ಲಿ, ಮಾರ್ಕ್ಸ್‌ವಾದ ಜಗತ್ತಿನಾದ್ಯಂತ ಹುಟ್ಟಿಸಿದ ಸಮಾನತೆಯ ಹೊಸ ಹಂಬಲ ಮತ್ತು ಬದಲಾವಣೆಯ ಕ್ರಿಯಾಶೀಲತೆಯ ಉತ್ಸಾಹಗಳನ್ನು ಗುರುತಿಸಿ ತಮ್ಮ ಚಿಂತನೆಯಲ್ಲಿ ಮೇಳೈಸಿಕೊಂಡುದುದೂ ಸೇರುತ್ತದೆ. ಇದೆಲ್ಲದರ ಭಾಗವಾಗಿಯಷ್ಟೇ ಅದು ಜಾತಿ, ಧರ್ಮ, ಲಿಂಗ, ಭಾಷೆ, ಸಂಸ್ಕೃತಿ, ತಂತ್ರಜ್ಞಾನ ಕುರಿತ ತನ್ನ ನಿಲುವುಗಳನ್ನು ರೂಪಿಸಿಕೊಂಡು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದ.

ಆದರೆ ಭಾರತೀಯ ರಾಜಕಾರಣದ ಮೇಲ್ಮೈ ಅರಿವನ್ನಷ್ಟೇ ಹೊಂದಿರುವಂತೆ ತೋರುವ ರಹಮತ್, ತಮ್ಮ ಈ ಮೇಲ್ಮೈ ಅರಿವನ್ನೇ ಆಧರಿಸಿ ದೊಡ್ಡ ದೊಡ್ಡ ತಾತ್ವಿಕ ತೀರ್ಮಾನಗಳನ್ನು ಕೊಡಲುದ್ಯುಕ್ತರಾಗುತ್ತಾರೆ. ಉದಾಹರಣೆಗೆ ಇವರ ಪ್ರಕಾರ, ಇಂತಹ 'ಮಾರ್ಕ್ಸ್‌ವಾದದ ವಿರೋಧ'ವು ಲೋಹಿಯಾವಾದಿ ಚಳವಳಿಗಾರರ–ಲೇಖಕರ(ಇವರಿಬ್ಬರ ಬಗ್ಗೆ ಹೀಗೆ ಒಟ್ಟಿಗೆ ಮಾತಾಡುವುದೇ ಅಸೂಕ್ಷ್ಮವಾದರೂ) ರಾಜಕೀಯ ಪ್ರಜ್ಞೆಯನ್ನೇ ಪರಿಮಿತಿಗೆ ಒಳಪಡಿಸಿತಂತೆ! ಇದಕ್ಕೆ ಉದಾಹರಣೆಯಾಗಿ ಅವರು, ತೇಜಸ್ವಿ ಮತ್ತು ಲಂಕೇಶ್ ಜಾಗತೀಕರಣದ ಬಗ್ಗೆ ಗೊಂದಲಕಾರಿ ವಿಶ್ಲೇಷಣೆ ಮಂಡಿಸಿದರೆಂದೂ, ನಂಜುಂಡಸ್ವಾಮಿಯವರು ಮಾತ್ರ ತಮ್ಮ ಮಾರ್ಕ್ಸ್‌ವಾದಿ ಸೈದ್ಧಾಂತಿಕ ತಿಳುವಳಿಕೆಯಿಂದಾಗಿ ಸರಿಯಾದ ನಿಲುವು ತಳೆದರೆಂದೂ ಹೇಳುತ್ತಾರೆ.

ರಹಮತ್ ಅವರ ಜಡ ಮಾರ್ಕ್ಸ್‌ವಾದಿ ಮನಸ್ಸು ತೇಜಸ್ವಿ ಮತ್ತು ಲಂಕೇಶ್ ಮೂಲತಃ ಸೃಜನಶೀಲ ಲೇಖಕರು, ಲೇಖಕರಿಗೆ ತಮ್ಮದೇ ಆದ ತಳಮಳದ ನೆಲೆಯೊಂದಿರುತ್ತದೆ ಎಂಬುದನ್ನೇ ಮರೆಸಿದಂತೆ ಕಾಣುತ್ತದೆ. ಹಾಗೆ ನೋಡಿದರೆ, ಮಾರ್ಕ್ಸ್‌ವಾದದ ತಲಸ್ಪರ್ಶಿ ಜ್ಞಾನದ, ಪಾಂಡಿತ್ಯದ ನೆಲೆಯಂತಿರುವ ಬಂಗಾಳದ ಮಾರ್ಕ್ಸ್‌ವಾದಿ ರಾಜಕಾರಣಿಗಳೇ ಜಾಗತೀಕರಣ ಕುರಿತು ತಮ್ಮ ನಿಲುವುಗಳನ್ನು ಸ್ಪಷ್ಟಗೊಳಿಸಿಕೊಳ್ಳಲಾಗದೆ ಸಿಂಗೂರು ಮತ್ತು ನಂದಿಗ್ರಾಮಗಳಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದಾರೆ. ಅಭಿವೃದ್ಧಿಯ ವಿವಿಧ ಹಂತಗಳಿಗನುಗುಣವಾಗಿ ವಿದೇಶೀ ಬಂಡವಾಳ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಅಗತ್ಯವೆಂದು ಹೇಳುತ್ತಿದ್ದಾರೆ!

ಹೀಗಿರುವಾಗ, ನಂಜುಂಡಸ್ವಾಮಿ ಮಾರ್ಕ್ಸ್‌ವಾದಿ ತಿಳುವಳಿಕೆಯಿಂದಾಗಿ ಜಾಗತೀಕರಣ ಕುರಿತು ಸರಿಯಾದ ನಿಲುವು ತೆಗೆದುಕೊಂಡರೆಂದು ಹೇಳುವುದು ಹಾಸ್ಯಾಸ್ಪದವಾಗಿದೆ! ನಂಜುಂಡಸ್ವಾಮಿ ಅವರಿಗೆ ಬಂಡವಾಳಶಾಹಿ ಕುರಿತ ಮಾರ್ಕ್ಸ್‌ವಾದಿ ವಿಶ್ಲೇಷಣೆಯ ಅಪಾಯಗಳ ಬಗ್ಗೆ ಲೋಹಿಯಾ ಮಾಡಿದ್ದ ಟೀಕೆಗಳ ಅರಿವಿತ್ತು. ಹಾಗಾಗಿಯೇ ಅವರು ಸರಿಯಾದ ನಿಲುವು ತೆಗೆದುಕೊಂಡರು ಎಂದು ಹೇಳಿದರೆ ರಹಮತ್ ಏನು ಹೇಳುವರು? ಬಂಡವಾಳಶಾಹಿ ಮತ್ತು ಮಾರ್ಕ್ಸ್‌ವಾದ ಒಂದೇ ಮನಸ್ಸಿನ ಎರಡು ಕವಲುಗಳು ಎಂಬುದು ಲೋಹಿಯಾ ಚಿಂತನೆಯ ಮುಖ್ಯ ತಿರುಳಾಗಿತ್ತು ಮತ್ತು ಬಂಡವಾಳಶಾಹಿ ತನ್ನ ಭವಿಷ್ಯದ ರೂಪಗಳಲ್ಲಿ(ಉದಾ: ಆಗಲೇ ತಲೆ ಎತ್ತುತ್ತಿದ್ದ ಕಾರ್ಪೋರೇಟ್‌ಶಾಹಿ ರೂಪದಲ್ಲಿ) ಮಾರ್ಕ್ಸ್‌ವಾದಿ ತರ್ಕವನ್ನು ಧಿಕ್ಕರಿಸಿ ಬೆಳೆಯುವ ಅಪಾಯದ ಬಗ್ಗೆ ಲೋಹಿಯಾ ಎಚ್ಚರಿಕೆ ನೀಡಿದ್ದರು ಎಂಬುದನ್ನು ಇಲ್ಲಿ ರಹಮತ್ ಅವರ ಗಮನಕ್ಕೆ ತರಬಯಸುವೆ.

ಇನ್ನು ಲೋಹಿಯಾ ಚಿಂತನೆಯ ಜಾತಿ ನೀತಿಯನ್ನು ರಹಮತ್, ಕರ್ನಾಟಕದಲ್ಲಿ ಮೊದಲಿಂದಲೂ ಇರುವ ದ್ವಿಜ ಶ್ರೇಷ್ಠತೆಯ ನಿರಾಕರಣೆಯ ಜತೆ ಅನ್ಯೋನ್ಯವಾಗಿ ಸೇರಿಕೊಂಡಿತು ಎಂದು ಸುಲಭವಾಗಿ; ಅದನ್ನು

ಜಾತಿಯ ವಿರೋಧಿ ನೀತಿ ಎಂಬಂತೆ ಪರಿಚಯಿಸುತ್ತಾ, ಮುಂದೆ ತಮ್ಮ ಅನೇಕ ಅಸಂಬದ್ಧ ತೀರ್ಮಾನಗಳಿಗೆ ದಾರಿ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲೇ ದ್ವಿಜ ಶ್ರೇಷ್ಠತೆಯ ವಿರುದ್ಧ ಅನೇಕ ನೆಲೆಗಳ ಆಂದೋಲನಗಳು ನಡೆದಿವೆ. ಆದರೆ ಅದೇ ವೇಳೆಯಲ್ಲಿ ದ್ವಿಜ ಶ್ರೇಷ್ಠತೆಯನ್ನು ಪರೋಕ್ಷವಾಗಿ ಒಪ್ಪಿಕೊಳ್ಳುವುದು(ಅಂದರೆ ಅವರನ್ನು ಉದಾಹರಣೆಯಾಗಿ ಅನುಸರಿಸುವುದು) ಎಲ್ಲ ಜಾತಿಗಳ ಪಾಡೇ ಆಗಿತ್ತು ಎಂಬುದನ್ನು ಮರೆಯುವಂತಿಲ್ಲ. ಆದರೆ ಜಾತಿ ಕುರಿತ ಲೋಹಿಯಾ ವಿಶ್ಲೇಷಣೆ, ಈ ದ್ವಿಜ ಶ್ರೇಷ್ಠತೆಯ ವ್ಯಸನಕ್ಕೆ ಮತ್ತು ಆಧುನಿಕ ಕಾಲದ ಈ 'ಸಂಸ್ಕೃತೀಕರಣ' ಪ್ರವೃತ್ತಿಗೆ ಜಾತಿ ವ್ಯವಸ್ಥೆಯ ಹಿಂದಿನ ರಾಜಕೀಯ ತಾತ್ವಿಕತೆಯೇ ಕಾರಣವೆಂಬುದನ್ನು ಜಾಗತಿಕ ಇತಿಹಾಸದ ಹಿನ್ನೆಲೆಯಲ್ಲಿ ಗುರುತಿಸಿದ್ದರು. ಹಾಗೇ ಇದನ್ನು ಇಡಿಯಾಗಿ ಜಾತಿವ್ಯವಸ್ಥೆಯನ್ನೇ ಮುಖಾಮುಖಿ ಮಾಡಿಕೊಳ್ಳುವ ಮೂಲಕವೇ ಎದುರಿಸಬೇಕಾಗುತ್ತದೆ ಎಂದು ಪ್ರತಿಪಾದಿಸಿದ್ದರು. ಜಾತಿ ಪದ್ಧತಿಯಿಂದಾಗಿ ದ್ವಿಜ, ಶೂದ್ರರಿಬ್ಬರೂ ಅರೆ ಸತ್ತು ಬಿದ್ದಿದ್ದಾರೆಂದು ಅವರು ಸೂಚಿಸಿದ್ದರು.

ಹಾಗಾಗಿಯೇ ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದಾದ್ಯಂತ ಅನೇಕ ಪ್ರಗತಿಶೀಲ ದ್ವಿಜರು(ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ) ಸಮಾಜವಾದಿ ಪಕ್ಷದ ಸದಸ್ಯರಾಗಿ ಜಾತಿ ವಿರೋಧಿ ಆಂದೋಲನದಲ್ಲಿ ಪಾಲ್ಗೊಂಡರು ಮತ್ತು ವಿಭಿನ್ನ ಶ್ರೇಣಿಗಳ ಶೂದ್ರ ನಾಯಕತ್ವವನ್ನು ಬೆಳೆಸಿದರು. ಇಂತಹ ಬೆಳವಣಿಗೆ ಯಾವ ರಾಜಕೀಯ ಆಂದೋಲನದಿಂದ ಸಾಧ್ಯವಾಗಿದೆ ಎಂಬುದನ್ನು, ಶೂದ್ರ-ದಲಿತರ ಹಿತವನ್ನು ದ್ವಿಜರೇ ನೋಡಿಕೊಳ್ಳಬಲ್ಲರೆಂದು ಇತ್ತೀಚಿನವರೆಗೆ ತಣ್ಣಗೆ ಹೇಳುತ್ತಿದ್ದ ಮಾರ್ಕ್ಸ್‌ವಾದಿ ರಾಜಕಾರಣಿಗಳ ತಾತ್ವಿಕ ವಕ್ತಾರರಂತೆ ವಾದಿಸುವ ರಹಮತ್ ಅವರೇ ಹೇಳಬೇಕು! ಹಾಗೇ ಲೋಹಿಯಾ ಚಿಂತನೆಯ ಭಾಗವಾದ ಜಾತಿ ವಿನಾಶದ ಕಾರ್ಯಕ್ರಮವಾಗಿ ಕರ್ನಾಟಕದಲ್ಲಿ 'ಸಮಾಜವಾದಿ ಯುವಜನ ಸಭಾ' ಆರಂಭಿಸಿದ ಎಲ್ಲ ರೀತಿಯ ಮಿಶ್ರಣಗಳ ಅಂತರ್ಜಾತಿ ಮತ್ತು ಅಂತರ್ಧರ್ಮೀಯ ವಿವಾಹಗಳ ಚಳವಳಿಯು ಕುವೆಂಪು ಅವರ 'ಮಂತ್ರ ಮಾಂಗಲ್ಯ'ದ ಪರಿಕಲ್ಪನೆಯೊಂದಿಗೆ ಸೇರಿ ರಾಜ್ಯಾದ್ಯಂತ ಉಂಟು ಮಾಡಿದ ಸಾಮಾಜಿಕ ತಳಮಳವನ್ನೂ, ಎಚ್ಚರವನ್ನೂ ಇನ್ಯಾವ ಆಂದೋಲನ ಮಾಡಿದೆಯೆಂಬುದನ್ನೂ ಹೇಳಬೇಕು.

ಆದರೆ ರಹಮತ್ ಅವರಿಗೆ ಲೋಹಿಯಾವಾದಿಗಳ ಜಾತಿ ನೀತಿ ಮಿತಿಯುಳ್ಳದ್ದಾಗಿ ಕಾಣುತ್ತದೆ. ಅವರ ಪ್ರಕಾರ, 'ದಲಿತರ ಮೇಲಣ ದಮನಕ್ಕಿಂತ ಶೂದ್ರರ ಸಾಂಸ್ಕೃತಿಕ ಹಕ್ಕುಗಳನ್ನು ಬ್ರಾಹ್ಮಣ ವಿರೋಧಿ ನೆಲೆಯಲ್ಲಿ ಮಂಡಿಸುತ್ತಿದ್ದ ಲೋಹಿಯಾವಾದಿಗಳ ಮಿತಿಗಳು ಗೊತ್ತಾಗಿದ್ದೇ ದಲಿತ ಚಳವಳಿ ಬಂದ ಬಳಿಕ. ಲೋಹಿಯಾವಾದಿಗಳ ಜಾತಿ ವಿನಾಶ ಚಳವಳಿಯಲ್ಲಿ ದಲಿತರ ಭಾಗವಹಿಸುವಿಕೆಯಿಲ್ಲ ಎಂಬುದು ಗಮನಾರ್ಹ. ಕರ್ನಾಟಕದ ಲೋಹಿಯವಾದಿಗಳಲ್ಲಿ ದೇವನೂರ ಮಹದೇವರ ಹೆಸರು ಏಕೈಕವೆಂದು ತೋರುವುದು.' ಇದು ಸಮಾಜವಾದಿ – ದಲಿತ ಚಳವಳಿಯ ಹುಟ್ಟು ಬೆಳವಣಿಗೆಗಳ ಪ್ರಾಥಮಿಕ ಪರಿಚಯವೂ ಇಲ್ಲದವರು ಮಾತ್ರ ಆಡು ವಂತಹ ಮಾತು ಎಂದು ವಿಷಾದದಿಂದ ಹೇಳಬೇಕಿದೆ.

ಗಾಂಧೀಜಿ ಕಾಲದ ಹರಿಜನೋದ್ಧಾರ ಚಳವಳಿ ಮತ್ತು ಉತ್ತರ ಕರ್ನಾಟಕದ ಮಹಾರಾಷ್ಟ್ರ ಗಡಿಯ ಕೆಲವೇ ಕೆಲವು ಭಾಗಗಳಲ್ಲಿನ ಅಂಬೇಡ್ಕರ್ ಪ್ರಭಾವದ ಸಣ್ಣಪುಟ್ಟ ಸಂಚಲನಗಳನ್ನು ಬಿಟ್ಟರೆ, ಎಪ್ಪತ್ತರ ದಶಕದವರೆಗೆ ಕರ್ನಾಟಕದಲ್ಲಿ ಯಾವುದೇ ಸಾಮಾಜಿಕ ಚಳುವಳಿಯಲ್ಲಿ ದಲಿತರ ಸಕ್ರಿಯ ಭಾಗವಹಿಸುವಿಕೆ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ ಇದ್ದಾಗ, ಹೆಚ್ಚು ದಲಿತರು ತಮ್ಮ ಅಸ್ಮಿತೆಯ ಎಚ್ಚರದೊಂದಿಗೆ ಭಾಗವಹಿಸಿದ್ದು ಸಮಾಜವಾದಿಗಳ ಜಾತಿ ವಿನಾಶ ಚಳುವಳಿಯಲ್ಲಿ ಮತ್ತು ಇದರ ಫಲವಾಗಿಯೇ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಹುಟ್ಟಿದ್ದು ಕೂಡಾ ಎಂಬುದನ್ನು ಇಲ್ಲಿ ರಹಮತ್ ಅವರ ಗಮನಕ್ಕೆ ತರಬಯಸುವೆ.

ಕರ್ನಾಟಕದ ದಲಿತ ಚಳವಳಿಯ ದೊಡ್ಡ ಹೆಸರುಗಳಾದ ದೇವನೂರ ಮಹಾದೇವ ಮಾತ್ರವಲ್ಲ, ಎಚ್. ಗೋವಿಂದಯ್ಯ, ಕೆ.ಬಿ.ಸಿದ್ಧಯ್ಯ ಈಗಲೂ ಗುರುತಾಗಿರುವುದು ಲೋಹಿಯಾವಾದಿಗಳೆಂದೇ. ಇವರಲ್ಲದೆ, ದಲಿತ ಚಳವಳಿಯ ತಂದೆಯಂತಿದ್ದ ಬಿ.ಕೃಷ್ಣಪ್ಪ, ಹಿರಿಯ ನಾಯಕರಾದ ಕೆ.ನಾರಾಯಣಸ್ವಾಮಿ, ಕೋಲಾರದ ವೆಂಕಟೇಶ್, ಹಾಸನದ ಚಂದ್ರಪ್ರಸಾದ್ ತ್ಯಾಗಿ ಮುಂತಾದವರು ಮೂಲತಃ ಲೋಹಿಯಾವಾದದಿಂದ ಪ್ರಭಾವಿತರಾದವರು. ಸಮಾಜವಾದಿ ಚಳವಳಿ ಮಂಕಾಗುತ್ತಿದೆ ಎನಿಸಿದಾಗ ಅಂಬೇಡ್ಕರರೆಡೆಗೆ ಆಕರ್ಷಿತರಾಗಿ ದಲಿತ ಸಂಘ ಕಟ್ಟಿದವರು. ಇತ್ತೀಚೆಗೆ ದಸಂಸದ ಈಚಿನ ತಲೆಮಾರಿನ ನಾಯಕರಾದ ಲಕ್ಷ್ಮೀನಾರಾಯಣ ನಾಗವಾರ ಅವರು ನನ್ನೊಂದಿಗೆ ಮಾತನಾಡುತ್ತಾ, ಕರ್ನಾಟಕದಲ್ಲಿನ ಲೋಹಿಯಾ ಸಮಾಜವಾದದ ದಟ್ಟ ಪ್ರಭಾವವೇ ದಲಿತರನ್ನು ಅವರು ನಕ್ಸಲೀಯರಾಗುವ ಅಪಾಯದಿಂದ ರಕ್ಷಿಸಿದೆ ಎಂದಾಗ ಅದು ನಿಜವಾಗಿ ಆಳದ ಸತ್ಯ ಎನಿಸಿತು.

(ಈ ದೃಷ್ಟಿಯಿಂದ ಕೆಲವರ ಕಣ್ಣಲ್ಲಿ ಲೋಹಿಯಾ ಮತ್ತು ಲೋಹಿಯಾವಾದಿಗಳು ಖಳನಾಯಕರಾಗಿದ್ದಲ್ಲಿ ಆಶ್ಚರ್ಯವಿಲ್ಲ!) ಏಕೆಂದರೆ, ಈ ದಲಿತ ಚಳವಳಿಯನ್ನು ತಾವು ಹೊರಗಿನವರು ಎಂದು ತಿಳಿಯದೇ, ಹೊರಗಿನಿಂದ ಅನೇಕ ರೀತಿಯಲ್ಲಿ ಪೋಷಿಸಿದವರು, ಪ್ರೋತ್ಸಾಹಿಸಿದವರು ಸಮಾಜವಾದಿಗಳೇ. ನಂಜುಂಡಸ್ವಾಮಿ,ಲಂಕೇಶ್, ತೇಜಸ್ವಿ, ಅನಂತಮೂರ್ತಿ, ರಾಮದಾಸ್, ಕಡಿದಾಳು ಶಾಮಣ್ಣ, ಚಂಪಾ, ರಾಜಶೇಖರ ಕೋಟಿ, ಕಾಳೇಗೌಡ ನಾಗವಾರರಿಂದ ಹಿಡಿದು ಕೆ.ಟಿ.ಶಿವಪ್ರಸಾದ, ಮಂಗ್ಳೂರ ವಿಜಯ, ಎಸ್.ಎಸ್.ಶಂಕರ್, ವೈ.ಮಹೇಶ್, ಆರ್.ಪಿ. ವೆಂಕಟೇಶಮೂರ್ತಿ, ಮಂಜುನಾಥ ದತ್ತ, ಅರೇಹಳ್ಳಿ ರಾಜೇಗೌಡ, ಹಿ.ಶಿ. ರಾಮಚಂದ್ರೇಗೌಡ, ಕುಂಪೀ, ಎಂ.ಚಂದ್ರಶೇಖರಯ್ಯ, ಬಿ.ರಾಜಣ್ಣ, ನಿಸಾರ್ ಅಹ್ಮದ್, ದಿವಾಕರ ಹೆಗ್ಡೆ, ಬಿ.ಚಂದ್ರೇಗೌಡರವರೆಗೆ ಈ ಹೆಸರುಗಳು ಹಬ್ಬಿವೆ. ಈ ಹಿನ್ನೆಲೆಯಲ್ಲಿ, 'ಗಾಂಧಿಯನ್ನು ಕಟುವಾಗಿ ವಿಮರ್ಶಿಸುವ ಅಂಬೇಡ್ಕರ್ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ಹುಟ್ಟಿ ಬೆಳೆದ ದಲಿತ ಚಳವಳಿಯು, ಈ ಕಾರಣಕ್ಕಾಗಿ ಲೋಹಿಯಾವಾದಿಗಳ ಜತೆ ಹೆಚ್ಚು ಸಾಮೀಪ್ಯ ಪಡೆಯಲು ಆಗಲಿಲ್ಲ' ಎಂಬ ರಹಮತ್ ಅವರ ಮಾತು ವಾಸ್ತವ ಗೊತ್ತಿಲ್ಲದಿದ್ದರೂ ಆಡುವ ಉಡಾಫೆಯ ಮಾತು ಎನಿಸುತ್ತದೆ.

ಹಾಗೇ ರಹಮತ್, ದಸಂಸ ಬಹಿಷ್ಕರಿಸಿದ್ದ 'ಗಾಂಧಿ' ಚಿತ್ರವನ್ನು ದೇವನೂರ ಮಹಾದೇವ ನೋಡಿ ಪ್ರಶಂಸಿದ್ದನ್ನು ಅನೇಕ ದಲಿತರು ಒಪ್ಪದಿದ್ದಕ್ಕೂ, ಲೋಹಿಯಾವಾದದ ಗಾಂಧೀವಾದಿ ಸಾಮೀಪ್ಯವೆಂದು ಪರೋಕ್ಷವಾಗಿ ಸೂಚಿಸುತ್ತಾರೆ. ಆದರೆ ದೇವನೂರರು 'ಗಾಂಧಿ' ಚಿತ್ರ ನೋಡಿ ಲೇಖನ ಬರೆದ ಮೇಲೆ ಕ್ರಮೇಣ ದಸಂಸದ ಸಾಮಾನ್ಯ ಕಾರ್ಯಕರ್ತರಲ್ಲಿ ಹಲವರು ಹೇಗೆ ಕದ್ದುಮುಚ್ಚಿ ಮತ್ತು ಕೆಲವರು ರಾಜಾರೋಷವಾಗಿ ಆ ಚಿತ್ರವನ್ನು ನೋಡಿ ಬಂದರೆಂಬುದು, ಮೂಲ ದಸಂಸದ ಸಹವಾಸವನ್ನೇ ಮಾಡದಂತೆ ತೋರುವ ರಹಮತ್‌ರಾದರೂ ಹೇಗೆ ಬಲ್ಲರು? ಇನ್ನು ರೈತ ಸಂಘಕ್ಕೆ ದಲಿತರು ಬರಲೇ ಇಲ್ಲವೆಂದು ಹೇಳುವ ಇವರು, ಇದಕ್ಕೆ ಕಾರಣ ಅದು ದಲಿತರ ದಮನಕ್ಕೆ ಕಾರಣರಾಗಿದ್ದ ಭೂಮಾಲಿಕ ಒಕ್ಕಲಿಗ-ಲಿಂಗಾಯಿತ ಜಾತಿಗಳಿಗೆ ಪ್ರಿಯವಾದ ಲೋಹಿಯಾವಾದವೇ ಕಾರಣವೆಂದು ಸೂಚಿಸುತ್ತಾರೆ.

ಇದು ವಾಸ್ತವದ ಪರಿವೆಯೇ ಇಲ್ಲದ, ಅಲ್ಲಿಲ್ಲಿ ಓದಿಕೊಂಡ ಮಳೆಗಣ್ಣಿನ ಮಾರ್ಕ್ಸ್‌ವಾದಿ ಪುಢಾರಿತನದ ವಿಶ್ಲೇಷಣೆಯ ಪರಿಣಾಮವಲ್ಲದೆ ಮತ್ತೇನಲ್ಲ. ಏಕೆಂದರೆ, ರೈತ ಸಂಘಕ್ಕೆ ದಲಿತರು ಬರಲೇ ಇಲ್ಲ ಎಂದು ಹೇಳಲಾಗುವುದಿಲ್ಲ. ರೈತಸಂಘದ ಪರವಾಗಿ ಕಡಿದಾಳು ಶಾಮಣ್ಣನವರನ್ನೂ, ದಸಂಸದ ಪರವಾಗಿ ಕೆ.ಬಿ.ಸಿದ್ಧಯ್ಯನವರನ್ನೂ ಕೇಳಿದರೆ ವಾಸ್ತವ ಗೊತ್ತಾಗುತ್ತದೆ. ಎಂದೂ ರೈತ ಸಂಘ ಸಂಪೂರ್ಣವಾಗಿ ಲೋಹಿಯಾವಾದಿಯೂ ಆಗಿರಲಿಲ್ಲ – ದಸಂಸ ಎಂದೂ ಸಂಪೂರ್ಣ ಅಂಬೇಡ್ಕರ್‌ವಾದಿಯೂ ಆಗಿರಲಿಲ್ಲ. ಅವುಗಳ ಕೆಲವು ನಾಯಕರ ಮೇಲೆ ಈ ಚಿಂತನೆಗಳ ದಟ್ಟ ಪ್ರಭಾವವಿತ್ತಷ್ಟೆ.

ರೈತ ಸಂಘ ಶುರುವಾಗುವ ಹೊತ್ತಿಗೆ ದಸಂಸ ಭದ್ರವಾಗಿ ನೆಲೆಯೂರಿದ್ದರಿಂದಾಗಿ, ಸಂಘಟನೆಯ ಗೊಂದಲಗಳು ದಲಿತರು ರೈತಸಂಘದಿಂದ ದೂರವುಳಿಯಲು ಒಂದು ಕಾರಣವೆಂದು ನನಗನ್ನಿಸಿದೆ. ಇನ್ನೊಂದು ಕಾರಣ, ರೈತ ಸಂಘ ಮೂಲತಃ ಭೂಮಿಯುಳ್ಳವರ ಸಮಸ್ಯೆಗಳ ಪರಿಹಾರಕ್ಕಾಗಿ ('ಮಲೆನಾಡು ಸಣ್ಣ ಬೆಳೆಗಾರರ ಸಂಘ'ದಿಂದ)ಹುಟ್ಟಿಕೊಂಡ ಸಂಘಟನೆ. ಹಾಗಾಗಿ ಅದು ಭೂರಹಿತ ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಬಹು ಮುಖ್ಯವೆಂಬಂತೆ ಕೈಗೆತ್ತಿಕೊಳ್ಳಲಿಲ್ಲ ಎಂಬುದೂ ಆಗಿದೆ. ಆದರೆ ಅದು ಎಂದೂ ದಲಿತರ ಹಿತಾಸಕ್ತಿಗಳ ವಿರುದ್ಧ ಕೆಲಸ ಮಾಡಲಿಲ್ಲ ಎಂಬುದೂ ಅಷ್ಟೇ ಸತ್ಯ. ಹಲವೆಡೆ ರೈತ ಸಂಘ ಮತ್ತು ದಸಂಸ ಒಟ್ಟಿಗೆ ಸೇರಿ ಹೋರಾಟ

**ರೈತ ಸಂಘ ಶುರುವಾಗುವ ಹೊತ್ತಿಗೆ ದಸಂಸ ಭದ್ರವಾಗಿ ನೆಲೆಯೂರಿದ್ದರಿಂದಾಗಿ, ಸಂಘಟನೆಯ ಗೊಂದಲಗಳು ದಲಿತರು ರೈತಸಂಘದಿಂದ ದೂರವುಳಿಯಲು ಒಂದು ಕಾರಣವೆಂದು ನನಗನ್ನಿಸಿದೆ. ಇನ್ನೊಂದು ಕಾರಣ, ರೈತ ಸಂಘ ಮೂಲತಃ ಭೂಮಿಯುಳ್ಳವರ ಸಮಸ್ಯೆಗಳ ಪರಿಹಾರಕ್ಕಾಗಿ ('ಮಲೆನಾಡು ಸಣ್ಣ ಬೆಳೆಗಾರರ ಸಂಘ'ದಿಂದ)ಹುಟ್ಟಿಕೊಂಡ ಸಂಘಟನೆ. ಹಾಗಾಗಿ ಅದು ಭೂರಹಿತ ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಬಹು ಮುಖ್ಯವೆಂಬಂತೆ ಕೈಗೆತ್ತಿಕೊಳ್ಳಲಿಲ್ಲ ಎಂಬುದೂ ಆಗಿದೆ.**

ಮಾಡಿವೆ. ಜಾತೀಯತೆ, ಅಸ್ಪೃಶ್ಯತೆ, ದುಂದು ವೆಚ್ಚದ ವಿವಾಹ, ಗಣಿಗಾರಿಕೆ, ಭೂಮಾಲೀಕರ ದೌರ್ಜನ್ಯ ಇತ್ಯಾದಿಗಳ ವಿರುದ್ಧ ಸಾಮಾಜಿಕ ಆಂದೋಲನ ಸಂಘಟಿಸಿವೆ.

ಇವೆರಡೂ ಸೇರಿ ಗ್ರಾಮ ಆಂದೋಲನ ಶುರು ಮಾಡಿದರೆ ಅದು ಒಂದು ಸಮಾಜವಾದಿ ಆಂದೋಲನ ವಾದೀತೆಂದು, ಎರಡೂ ಕಡೆಯ ಕೆಲವು ನಾಯಕರು ಬಯಸಿದರಾದರೂ, ಆ ಹೊತ್ತಿಗೆ ಎರಡೂ ಸಂಘಟನೆಗಳಲ್ಲಿ ಬೆಳೆದು ನಿಂತಿದ್ದ ಸ್ಥಾಪಿತ ಹಿತಾಸಕ್ತಿಗಳು ಈ ಪ್ರಯತ್ನ ಸಫಲವಾಗದಂತೆ ನೋಡಿಕೊಂಡರಷ್ಟೆ. ಇದು ಎರಡೂ ಸಂಘಟನೆಗಳು ಇನ್ನೂ ಸಾಕಷ್ಟು ಮಾಗಿಲ್ಲ ಎಂಬುದನ್ನು ತೋರಿಸಿತಷ್ಟೆ. ಬಹುಶಃ ಇದನ್ನರಿಯದ ರಹಮತ್ ತಾವು ಅಲ್ಲಿಲ್ಲಿ ಓದಿದ್ದನ್ನು, ಅವರಿವರಿಂದ ಕೇಳಿದ್ದನ್ನು ತಮ್ಮ ಶಾಸ್ತ್ರದ ನಿಯಮಗಳಿಗೆ ಅಳವಡಿಸುವ ಆತುರದಲ್ಲಿ ಕರ್ನಾಟಕದ ಎರಡು ದೊಡ್ಡ ಚಳವಳಿಗಳ ಚರಿತ್ರೆಯನ್ನೇ ಸರಳೀಕರಿಸುವ ಮೂಲಕ ಅಶ್ಲೀಲೀಕರಿಸಿ ಬಿಟ್ಟಿದ್ದಾರೆ.

ರಹಮತ್ ಅವರ ಮುಂದಿನ ಆಕ್ಷೇಪಣೆ ಎಂದರೆ, ಲೋಹಿಯಾ ರಾಜಕಾರಣ ಮತ್ತು ಚಳವಳಿಯಲ್ಲಿ ಮುಸ್ಲಿಮರು ಭಾಗವಹಿಸಲಿಲ್ಲ ಎಂಬುದು. ಆದರೆ ಮುಸ್ಲಿಮರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ರಾಜಕಾರಣಗಳ ಹೊರತಾಗಿ ಇನ್ಯಾವ ರಾಜಕಾರಣದಲ್ಲಿ(ಈಗ ಜೆಡಿ, ಅವರು ಭಾಗವಹಿಸುತ್ತಿರುವ ಇನ್ನೂ ಹಲವಾರು ರೀತಿಯ ರಾಜಕಾರಣಗಳು ಹುಟ್ಟಿಕೊಂಡಿವೆ!) ಭಾಗವಹಿಸಿದ್ದಾರೆ? ಮಾರ್ಕ್ಸ್‌ವಾದಿ ರಾಜಕಾರಣ? ಹಾಗೆ ನೋಡಿದರೆ, ರಾಜ್ಯದಲ್ಲಿ ಮುಸ್ಲಿಮರು ಪ್ರತಿಭಟನಾತ್ಮಕ ರಾಜಕಾರಣದಲ್ಲಿ ಭಾಗವಹಿಸಲಾರಂಭಿಸಿದ ಕಾಲಕ್ಕೆ ಯಾವುದಾದರೂ ಪಕ್ಷ ಮುಸ್ಲಿಮನೊಬ್ಬನನ್ನು ತನ್ನ ಅಧ್ಯಕ್ಷನನ್ನಾಗಿ ಆರಿಸಿಕೊಂಡಿದ್ದರೆ, ಅದು ಸಮಾಜವಾದಿ ಪಕ್ಷ. ಅರವತ್ತರ ದಶಕದ ಕೊನೆಯಲ್ಲಿ ಅಜೀಜ್ ಸೇಟ್ ಕರ್ನಾಟಕದ (ಸಂಯುಕ್ತ) ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದರು ಎಂಬುದು ರಹಮತರಿಗೆ ಗೊತ್ತೆ?( ಈ ಸೇಟ್ ಅವರು ನಂತರ ಪಕ್ಷಾಂತರ ಮಾಡಿ, ಗೋಪಾಲಗೌಡರ ಕೈಯಲ್ಲಿ 'ದೊಣ್ಣೆ ಸೇವೆ' ಮಾಡಿಸಿಕೊಂಡರು ಎಂದೂ ಕೇಳಿರುವ)

ಈ ಪುರಾಣವನ್ನೆಲ್ಲ ಬಿಚ್ಚಲು ನನಗೇ ಮುಜುಗರವಾಗುತ್ತದೆಯಾದರೂ, ರಹಮತ್ ಅವರಿಗೆ ನಮ್ಮ ಸಾಂಸ್ಕೃತಿಕ ವಲಯದಲ್ಲಿ ಸಾಕಷ್ಟು ವಿಶ್ವಾಸಾರ್ಹತೆ ಇರುವುದರಿಂದ, ಯುವ ಆಸಕ್ತರ ಪಾಲಿಗೆ ಅವರ ಇಂತಹ ಮಾತುಗಳೇ ಸತ್ಯವಾಗಿ ಮಾರ್ಪಾಡಾಗಬಾರದೆಂದು ಇದನ್ನೆಲ್ಲ ಹೇಳಬೇಕಾಗಿದೆ. ಜೊತೆಗೆ ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಅಥವಾ ಆಂದೋಲನದ ಚರಿತ್ರೆಯೇ ಸಾಕ್ಷ್ಯಗಳೊಂದಿಗೆ ವ್ಯವಸ್ಥಿತವಾಗಿ ದಾಖಲಾಗದೆ ಅಸ್ಪಷ್ಟವಾಗಿರುವುದರಿಂದ, ಇಂತಹ ಅಡ್ಡ ಮಾತುಗಳಿಗೆ ಉತ್ತರ ಕೊಡುವುದು ಕಷ್ಟ. ಅದೂ ಯಾವುದೇ ಸಂಸ್ಥೆಯ – ಯೋಜನೆಯ ಅಥವಾ ಕನಿಷ್ಠ ಸುಸಜ್ಜಿತ ಗ್ರಂಥಾಲಯದ ಸೌಲಭ್ಯವಿಲ್ಲದ ನನ್ನಂಥವನಿಗೆ. ಆದರೂ ಇಷ್ಟು ಹೇಳಬಹುದು: ಸಮಾಜವಾದಿ ಆಂದೋಲನ ಮುಸ್ಲಿಮರನ್ನೂ ಅಪಾರವಾಗಿಯಲ್ಲದಿದ್ದರೂ, ಗಣನೀಯವಾಗಿ ಸೆಳೆದಿತ್ತು. ಇಲ್ಲದೇ ಹೋದರೆ, ಎಪ್ಪತ್ತರ ದಶಕದ ಹೊತ್ತಿಗೆ ಉಮರಬ್ಬ, ನಂತರ ಹಸನಬ್ಬರಂತಹ ಧೀಮಂತ ಮುಸ್ಲಿಂ ಯುವ ನಾಯಕರನ್ನು ಪಡೆಯಲು ಆಗುತ್ತಿರಲಿಲ್ಲ. ಹಾಗೇ ಅಬ್ದುಲ್ ನಜೀರ್ ಸಾಬರಂತಹ ಲೋಹಿಯಾವಾದಿ ರಾಜಕಾರಣಿಯನ್ನು ಜನಮಧ್ಯದಿಂದ ಹೊಮ್ಮಿಸಲು ಸಾಧ್ಯ

**ಲೋಹಿಯಾ ಅವರ ಭಾಷಾ ಚಿಂತನೆ, ಗಾಂಧಿಯ ಮಾತೃಭಾಷಾ ಚಿಂತನೆಯಿಂದ ಹುಟ್ಟಿದುದು ಎಂದು ಅದನ್ನು ಒಂದೇ ಮಾತಿನಲ್ಲಿ ನಿಕಾಲೆ ಮಾಡುವ ರಹಮತ್ ಅವರಿಗೆ, ಲೋಹಿಯಾ ಅವರ ಭಾಷಾ ಚಿಂತನೆ ಹೇಗೆ ಒಂದು ದೊಡ್ಡ ರಾಜಕೀಯ ಪ್ರಶ್ನೆಯೂ ಆಗಿತ್ತು ಮತ್ತು ಅದು ಅವರ ರಾಷ್ಟ್ರ ಪುನರ್ನಿರ್ಮಾಣದ ಕಲ್ಪನೆಯ ಅವಿಭಾಜ್ಯ ಅಂಗವಾಗಿ ಅನೇಕ ಇತರ ರಾಷ್ಟ್ರೀಯ ಸಮಸ್ಯೆಗಳೊಂದಿಗೆ ತಳುಕು ಹಾಕಿಕೊಂಡಿತ್ತು.**

ವಾಗುತ್ತಿರಲಿಲ್ಲ.

ರಹಮತ್ ಒಮ್ಮೆ ಗೋಪಾಲ ಗೌಡರ ದಿನಚರಿಯನ್ನು ತಿರುವಿ ಹಾಕಿದರೆ ಸಮಾಜವಾದಿ ಹೋರಾಟಗಳಲ್ಲಿ ಭಾಗವಹಿಸಿದ ಇನ್ನೂ ಹಲವಾರು ಮುಸ್ಲಿಮರ ಹೆಸರುಗಳನ್ನು ಅದರಲ್ಲಿ ಕಂಡು ಸಂತೋಷ ಅಥವಾ ದುಃಖ ಪಡಬಹುದು. ಏಕೆಂದರೆ, ಇಷ್ಟು ಸಾರಾಸಗಟು ಆಪಾದನೆ ಮಾಡಲು ಮುಂದಾಗುವವರು ಇದನ್ನೆಲ್ಲ ಓದಿ ಮಾತಾಡಿದರೆ ಚೆನ್ನ. ಈ ಸಂಬಂಧ ರಹಮತ್ ಕೊನೆಯಲ್ಲಿ ಮುಟ್ಟುವ ತೀರ್ಮಾನ ಅವರು ಯಾವ ಮನೋಸ್ಥಿತಿಯಲ್ಲಿ ಇದನ್ನೆಲ್ಲ ಬರೆದಿದ್ದಾರೆ ಎಂಬುದನ್ನು ಸೂಚಿಸುತ್ತದೆ: ಮುಸ್ಲಿಮರು ಲೋಹಿಯಾವಾದದಿಂದ ಆಕರ್ಷಿತರಾಗದಿರಲು, ಲೋಹಿಯಾವಾದಿಗಳೊಡನೆ ಬಲಪಂಥೀಯರಿದ್ದುದಂತೆ! ಹಾಗಾದರೆ ಇವರ ಪ್ರಕಾರ, ಮುಸ್ಲಿಮರು ಹುಟ್ಟು ಎಡಪಂಥೀಯರು! ಇದೀಗ ಎಡಪಂಥೀಯತೆಯನ್ನು ಪುನರ್ವ್ಯಾಖ್ಯಾನಿಸುವ ಹೊಣೆ ನಮ್ಮದಾಗಿದೆ!

ಇನ್ನು ಲೋಹಿಯಾ ಅವರ ಭಾಷಾ ಚಿಂತನೆ, ಗಾಂಧಿಯ ಮಾತೃಭಾಷಾ ಚಿಂತನೆಯಿಂದ ಹುಟ್ಟಿದುದು ಎಂದು ಅದನ್ನು ಒಂದೇ ಮಾತಿನಲ್ಲಿ ನಿಕಾಲೆ ಮಾಡುವ ರಹಮತ್ ಅವರಿಗೆ, ಲೋಹಿಯಾ ಅವರ ಭಾಷಾ ಚಿಂತನೆ ಹೇಗೆ ಒಂದು ದೊಡ್ಡ ರಾಜಕೀಯ ಪ್ರಶ್ನೆಯೂ ಆಗಿತ್ತು ಮತ್ತು ಅದು ಅವರ ರಾಷ್ಟ್ರ ಪುನರ್‌ನಿರ್ಮಾಣದ ಕಲ್ಪನೆಯ ಅವಿಭಾಜ್ಯ ಅಂಗವಾಗಿ ಅನೇಕ ಇತರ ರಾಷ್ಟ್ರೀಯ ಸಮಸ್ಯೆಗಳೊಂದಿಗೆ ತಳುಕು ಹಾಕಿಕೊಂಡಿತ್ತು ಎಂಬುದರ ಪರಿವೆ ಇದ್ದಂತಿಲ್ಲ. ಕರ್ನಾಟಕದ ಲೋಹಿಯಾವಾದಿಗಳ ಇಂಗ್ಲಿಷ್ ವಿರೋಧ, ಅವರು ಇಂಗ್ಲಿಷ್ ಕಲಿಯಲು ಮತ್ತು ಅವರಲ್ಲಿ ಕೆಲವರು ಇಂಗ್ಲಿಷ್ ಅಧ್ಯಾಪಕರಾಗಿ ಪಡುತ್ತಿದ್ದ ಕಷ್ಟವೇ ಕಾರಣವಿದ್ದೀತು ಎಂಬ ಪರೋಕ್ಷ ಸೂಚನೆಯ ಮಟ್ಟಕ್ಕೆ ಇಲ್ಲಿಯ ವಿಶ್ಲೇಷಣೆ ಇಳಿದಿದೆ ಎಂದರೆ ಈ ಬಗ್ಗೆ ಮುಂದೆ ಮಾತನಾಡುವ ಅಗತ್ಯವೇನಿದೆ?

ಸ್ತ್ರೀ ಕುರಿತ ಲೋಹಿಯಾ ಚಿಂತನೆ ಬಗೆಗೆ ರಹಮತ್ ಈ ಸಂಬಂಧದ ಲೋಹಿಯಾ ಅವರು ಎರಡು ಜನಪ್ರಿಯ ಲೇಖನಗಳನ್ನು ಉಲ್ಲೇಖಿಸುತ್ತಾ, ಅವುಗಳ ಬಗ್ಗೆ ಒಳ್ಳೆಯ ಮಾತುಗಳನ್ನಾಡುವ ಅನಿವಾರ್ಯತೆಗೆ ಸಿಕ್ಕಿ ತಳಮಳಿಸಿದವರಂತೆ 'ಕರ್ನಾಟಕದ ಅನೇಕ ಲೋಹಿಯಾವಾದಿಗಳು ಮಹಿಳೆಯರನ್ನು ಸಂಗಾತಿಯನ್ನಾಗಿ ನೋಡುವುದರ ಹಾಗೂ ಅವರನ್ನು ಲೈಂಗಿಕ ವಸ್ತುವಾಗಿ ಗ್ರಹಿಸುವುದರ ನಡುವೆ ವ್ಯತ್ಯಾಸ ಮಾಡಿಕೊಳ್ಳಲಿಲ್ಲ. ಅನೇಕರು ಹೆಣ್ಣನ್ನು ದೇಹಪ್ರಧಾನವಾಗಿ ನೋಡುವ ಮಿತಿಯಿಂದ ತಪ್ಪಿಸಿಕೊಳ್ಳಲಿಲ್ಲ' ಎಂದು ಸಾರಾಸಗಟಾಗಿ ಬಡಬಡಿಸುತ್ತಾ ಹೋಗಿದ್ದಾರೆ. ಅವರು ಮುಂದುವರೆದು, ಲೋಹಿಯಾವಾದಿಗಳೆನಿಸಿಕೊಂಡ ಲೇಖಕರಾದ ತೇಜಸ್ವಿ ಮತ್ತು ಅನಂತಮೂರ್ತಿಯಂಥವರು ಸಬಲ ಸ್ತ್ರೀಪಾತ್ರಗಳನ್ನು ಕಡೆಯುವುದಕ್ಕೆ ಆಗಲಿಲ್ಲ ಎಂದು ದೂರುತ್ತಾರೆ. ಪಟೇಲರ ಹೆಣ್ಣಿನ ಹುಚ್ಚು ಒಂದು ದಂತ ಕಥೆಯಾಯಿತೆಂದು ಆರೋಪಿಸುತ್ತಾರೆ.

ಹೀಗಲ್ಲ ಬರೆಯುವ ರಹಮತ್ ಎಷ್ಟು ಜನ ಲೋಹಿಯಾವಾದಿಗಳ ವೈಯಕ್ತಿಕ ಜೀವನವನ್ನು ಹತ್ತಿರದಿಂದ ಕಂಡಿದ್ದಾರೆ? ಇವರರ್ಥದಲ್ಲಿ ಹೆಣ್ಣನ್ನು ಕೀಳಾಗಿ ಕಾಣುವ ಒಬ್ಬ ಲೋಹಿಯಾವಾದಿಯ ಹೆಸರನ್ನು ಹೇಳಿದರೆ, ಅದಕ್ಕೆ ಪ್ರತಿಯಾಗಿ ನಾನು ಮಾರ್ಕ್ಸ್‌ವಾದಿಗಳೂ ಸೇರಿದಂತೆ ಇತರರ ಹತ್ತು ಹೆಸರುಗಳನ್ನು ಹೇಳಬಲ್ಲೆ. ರಹಮತ್ ಎಲ್ಲ ಆದರ್ಶಗಳನ್ನೂ ಲೋಹಿಯಾವಾದಿಗಳಿಂದ ಮಾತ್ರ ನಿರೀಕ್ಷಿಸಿ ಅವರನ್ನು ಯಾವುದೇ ಸಾಕ್ಷಿಯಿಲ್ಲದೆ, ಕಟಕಟೆಯಲ್ಲಿ ನಿಲ್ಲಿಸಬಯಸಿದಂತೆ ಕಾಣುತ್ತದೆ. ಅಂತರ್ಜಾತಿ ವಿವಾಹಗಳನ್ನು ಒಂದು ಆಂದೋಲನವಾಗಿ ಬೆಳೆಸಿ (ಗಂಡಿಗೆ ಹೋಲಿಸಿದಂತೆ ಹೆಚ್ಚಿನ ರೀತಿಯಲ್ಲಿ ಬಂಧನದಲ್ಲಿದ್ದ)ಹೆಣ್ಣಿಗೆ ಒಂದು ನೆಲೆಯ ಬಿಡುಗಡೆ ಹಾದಿಯನ್ನು ತೆರೆದವರು ಲೋಹಿಯಾ ಸಮಾಜವಾದಿಗಳು. ತಂತಮ್ಮ ಜಾತಿ-ಧರ್ಮಗಳಲ್ಲೇ 'ಸುರಕ್ಷಿತ'ವಾಗಿ ಮದುವೆ ಮಾಡಿಕೊಂಡು, ಮಕ್ಕಳನ್ನೂ ಆ ಪರಿಧಿಯಲ್ಲೇ ಸುರಕ್ಷಿತವಾಗಿ ಬೆಳೆಸಿ, ಕ್ರಾಂತಿಯ ಶಾಸ್ತ್ರ ಹೇಳುವ ಬಹಳ ಜನರನ್ನು ಈ ದೇಶ ಕಂಡಿದೆ.

ಜೆ.ಎಚ್.ಪಟೇಲ್ ಹೆಣ್ಣಿನ ಹುಚ್ಚನಂತೆ. ಇದನ್ನು ಸಮರ್ಥಿಸದೆ ಹೇಳುವುದಾದರೆ, ಇದನ್ನು ಪ್ರಶ್ನಿಸುವ ಹಕ್ಕು ಅವರ ಪತ್ನಿಯ ಹೊರತಾಗಿ ಇನ್ನಾರಿಗೂ ಇಲ್ಲ ಮತ್ತು ಈ ಹುಚ್ಚನ್ನು ಸಾರ್ವಜನಿಕವಾಗಿ ಪ್ರಕಟಪಡಿಸಿದ ಪಟೇಲ್‌ಗೆ ನನ್ನ ನಮನ ಸಲ್ಲುತ್ತದೆ. ಪಟೇಲರಂತೆ ಸಾರ್ವಜನಿಕವಾಗಿ ಪ್ರಕಟಪಡಿಸದೇ ಆ ಹುಚ್ಚಿನಲ್ಲಿ ಒಳಗೊಳಗೇ ಕೊಳೆತು ನಾರುತ್ತಿರುವವರ ಬಗ್ಗೆ ರಹಮತ್ ಸಂಶೋಧನೆ ಮಾಡಿ, ಇವರಲ್ಲಿ ಯಾವ ಯಾವ ರಾಜಕೀಯ ಧಾರೆಯವರು ಎಷ್ಟೆಷ್ಟು ಜನರಿದ್ದಾರೆಂದು ವಿಶ್ಲೇಷಣೆ ಮಾಡಿ ಹೇಳಿಯೇ ತಮ್ಮ ಅಗ್ಗದ ಮಾತುಗಳ ಕೊಳೆಯನ್ನು ತೊಳೆದುಕೊಳ್ಳಬಹುದಾಗಿದೆ. ಅವು ಅಷ್ಟು ಅಸಭ್ಯತೆ ಮತ್ತು ಅತಿ ಬೇಜವಾಬ್ದಾರಿತನದಿಂದ ಕೂಡಿವೆ.

ಲೋಹಿಯಾವಾದಿ ಲೇಖಕರೆನಿಸಿಕೊಂಡ ತೇಜಸ್ವಿ ಮತ್ತು ಅನಂತಮೂರ್ತಿ ಸಬಲ ಸ್ತ್ರೀಪಾತ್ರಗಳನ್ನೇ ಕಡೆದಿಲ್ಲ ಎನ್ನುವ ರಹಮತ್‌ರ ಮಾತು ಅವರ ಸಾಹಿತ್ಯ ಓದಿನ ರೀತಿ ನೀತಿಗಳನ್ನೇ ಪ್ರಶ್ನಿಸುವಂತೆ ಮಾಡುತ್ತದೆ. ಹಾಗೇ ತೇಜಸ್ವಿ ಸಾಹಿತ್ಯದಲ್ಲಿ ವರ್ಗ ಹೋರಾಟ ಮಾಡುವವರನ್ನು ವ್ಯಂಗ್ಯ ಚಿತ್ರಗಳಂತೆ ನಿರೂಪಿಸಿದ್ದಾರೆ ಎಂಬ ಅವರ ಮಾತು ಕೂಡಾ. ಇದು ಯಾರದೇ ಸಾಹಿತ್ಯವನ್ನು ನೋಡುವ ಕ್ರಮವೇ ಅಲ್ಲ. ಶ್ರೇಷ್ಠ ಲೇಖಕರಾರೂ ಬರೆಯುವಾಗ ಯಾವ ವಾದಿಯೂ ಆಗಿರುವುದಿಲ್ಲ ಮತ್ತು ರಾಜಕೀಯ ಸಿದ್ಧಾಂತವಾದಿಗಳ ಲೆಕ್ಕಾಚಾರಕ್ಕೆ ತಕ್ಕಂತೆ ಬರೆಯುವುದೂ ಇಲ್ಲ. ಅವರು ಅನುಭವಿಸಿದ್ದರ ಮೂಲಕ 'ಕಂಡ' ಬದುಕಿನಲ್ಲಿ ಯಾರಾರ ಪಾತ್ರ ಎಷ್ಟೆಷ್ಟಿರುತ್ತದೋ, ಹೇಗೆ ಹೇಗೆ ಇರುತ್ತದೋ ಹಾಗೆ ಅವರ ಪಾತ್ರಗಳು

ಕಟ್ಟಲ್ಪಡುತ್ತವೆ. ಇವರ ಓದಿನ ರಾಚನಿಕತೆ ಒಟ್ಟಾರೆ ಕೃತಿಯಲ್ಲಿ ಸಹಜವಾಗಿ ಮೂಡಿದೆಯೋ ಇಲ್ಲವೋ ಎಂಬುದರ ವಿವೇಚನೆಯಷ್ಟೇ ಸಾಹಿತ್ಯ ವಿಮರ್ಶೆಯ ಮಾನದಂಡಗಳಾಗಬೇಕು.

ಏಕೆಂದರೆ, ಆ ಸಹಜತೆಯಲ್ಲಿ ಮೂಡುವ ಸೌಂದರ್ಯದಲ್ಲೇ ನಿಜವಾದ ಮಾನವತೆ ಅರಳುವುದು ಕೂಡಾ. ಮಿಕ್ಕಂತೆ ಅರಳುವುದು ವಿಧಾನ ಸೌಧಕ್ಕೆ ದಾರಿ ಮಾಡಿಕೊಡುವಂತಹ ಅಗ್ಗದ ಜನಪ್ರಿಯತೆಯ ಮಾನವತೆ ಮಾತ್ರ. ಹಾಗಾಗಿ, ಇಲ್ಲಿ ಮಡಿಯುವ ವರ್ಗಗಳ ಬಗೆಗೆ ಕಾಳಜಿ ಇಲ್ಲ, ವರ್ಗ ಹೋರಾಟವಿಲ್ಲ, ದಲಿತರ ನಾಯಿಯನ್ನು ಸುಂದರವಾಗಿ ಚಿತ್ರಿಸಿಲ್ಲ, ದಲಿತರನ್ನು ಕೊಳಕರಂತೆ ಚಿತ್ರಿಸಲಾಗಿದೆ(ಇಲ್ಲಿ ಕುವೆಂಪು ಕಾದಂಬರಿಗಳ ಬಗ್ಗೆ ಜಿ.ಕೃಷ್ಣಪ್ಪನವರು ಎತ್ತಿದ ಪ್ರಶ್ನೆಗಳು ನೆನಪಿಗೆ ಬಂದರೆ ಕ್ಷಮೆ ಇರಲಿ) ಇತ್ಯಾದಿ ಚಿಲ್ಲರೆ ಪ್ರಶ್ನೆಗಳು ಸಾಹಿತ್ಯವನ್ನು ಚಿಲ್ಲರೆ ಮಾಡುತ್ತವಷ್ಟೆ. ನಮ್ಮ ಸುತ್ತಮುತ್ತ ನಡೆದ ಮತ್ತು ನಡೆದಿರುವ 'ವರ್ಗ ಹೋರಾಟ'ದ ಮಾದರಿಗಳನ್ನೂ, ಅವುಗಳ ಪರಿಣಾಮಗಳನ್ನೂ ನೋಡಿದರೆ, ಅವನ್ನು ವಿಧಾನ ಸೌಧದ ಕಡೆ ಮುಖ ಮಾಡಿಕೊಂಡವರ ಹೊರತಾಗಿ ಇನ್ಯಾವ ಲೇಖಕರೂ ಅವನ್ನು ಗಂಭೀರ ಸಾಹಿತ್ಯದ ವಸ್ತುವನ್ನಾಗಿ ಮಾಡಿಕೊಳ್ಳಲಾರ.

ತೇಜಸ್ವಿ ಕಾರ್ಮಿಕ ಚಳವಳಿಗಳಂತಹ ವರ್ಗ ಹೋರಾಟದ ಮಾದರಿಗಳನ್ನಷ್ಟೇ ಅಲ್ಲ, ಸಮಾಜವಾದಿಗಳ ಅಂತರ್ಜಾತಿ ವಿವಾಹ, ವಿಚಾರವಾದಿ ಚಳುವಳಿ ಮತ್ತು ರೈತ ಸಂಘದ ಹೋರಾಟಗಳನ್ನೂ ಕಂಡಿರುವುದೂ ಲಘು ಶೈಲಿಯಲ್ಲೇ. ಅವರ ಬರವಣಿಗೆಯ ತಂತ್ರವದು. ಆ ತಂತ್ರದ ಮೂಲಕವೇ ಅವರು ತಮ್ಮ ಕೃತಿಯ ಆತ್ಯಂತಿಕ ಪರಿಣಾಮವನ್ನೂ ಸೃಷ್ಟಿಸಲು ಪ್ರಯತ್ನಿಸುವುದು. ಹಾಗಾಗಿ ಇದರ ಸಾಧುತ್ವವನ್ನು, ಸೋಲು ಗೆಲವುಗಳನ್ನು ಸಾಹಿತ್ಯಕ ಪರಿಭಾಷೆಯಲ್ಲಿ ಚರ್ಚಿಸಬೇಕೇ ಹೊರತು ಸಾಹಿತ್ಯ ಪಠ್ಯದ ಹೊರಗೆ ನಿಂತಲ್ಲ. ಏಕೆಂದರೆ ಸಾಹಿತ್ಯಕ್ಕೆ ತನ್ನದೇ ಆದ ಸ್ವಾಯತ್ತತೆ ಇದೆ. ಅದೊಮ್ಮೆ ಭಂಗಿತವಾದರೆ, ಚರ್ಚಿಸಲು, ಪ್ರಶ್ನಿಸಲು, ಕಟ್ಟಲು ಏನೂ ಉಳಿಯುವುದಿಲ್ಲ.

ಇಷ್ಟೆಲ್ಲ ಹೇಳಿದ ಮೇಲೂ, ಅನಂತಮೂರ್ತಿ ಮತ್ತು ತೇಜಸ್ವಿ ಸಬಲ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿಲ್ಲ ಎಂಬ ರಹಮತ್ ಮಾತನ್ನು ಒಪ್ಪುವುದು ಕಷ್ಟ. ಇಲ್ಲಿ ವಿವರಗಳಿಗೆ ಹೋಗುವುದು ಸಾಧ್ಯವಿಲ್ಲವಾದರೂ, ಈ ಲೇಖಕರ ಕಥೆ-ಕಾದಂಬರಿಗಳಲ್ಲಿ ಆಧುನಿಕ ಸ್ತ್ರೀವಾದಿ ನಾಯಕಿಯರಿಲ್ಲದಿದ್ದರೂ, ಗಂಡು ಪಾತ್ರಗಳಿಗೆ ಸರಿ ಸಮವಾದ, ಕೆಲವೊಮ್ಮೆ ಗಂಡು ಪಾತ್ರಗಳನ್ನು ಎದುರಿಸಿ, ಹೆದರಿಸಿ ಕೂಡಾ ಕಟ್ಟಿಕೊಳ್ಳುವ ಪಾತ್ರಗಳು ಶಕ್ತಿಯುತವಾಗಿಯೇ ಮೂಡಿವೆ. ಆದರೆ ಲೋಹಿಯಾವಾದಿ ಲೇಖಕರ ಸ್ತ್ರೀ ನೀತಿಯನ್ನು ಚರ್ಚಿಸುವಾಗ ರಹಮತ್ ಅವರಿಗೆ ಈ ಇಬ್ಬರು ಲೇಖಕರು ಮಾತ್ರ ನೆನಪಾಗಿರುವುದು ಏಕೋ ತಿಳಿಯದಾಗಿದೆ! ಲಂಕೇಶ್, ದೇವನೂರು, ಶ್ರೀಕೃಷ್ಣ ಆಲನಹಳ್ಳಿ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕುಂವೀ ಅವರು ಏಕೆ ಇವರ ವಿಶ್ಲೇಷಣೆಗೆ ಒಳಪಡಲಿಲ್ಲವೋ?

ಬಸವಣ್ಣ-ಕುವೆಂಪು ಪರಂಪರೆಯುಳ್ಳ ಕರ್ನಾಟಕದ ಪ್ರಜ್ಞಾವಂತರು ಲೋಹಿಯಾ ಚಿಂತನೆಗಳನ್ನು ಒಪ್ಪಿಕೊಂಡಿದ್ದು ಸಹಜವೇ ಎಂದು ಸರಿಯಾಗಿಯೇ ಹೇಳುವ ರಹಮತ್, ಅದಕ್ಕೆ ಲೋಹಿಯಾ ಚಿಂತನೆಯು ಜಾತಿ ಕುರಿತು ಮಂಡಿಸಿದ ಮೀಮಾಂಸೆ ಮಾತ್ರ ಕಾರಣವೆಂಬಂತೆ ತಮ್ಮ ವಾದವನ್ನು ಪ್ರಸ್ತುತಪಡಿಸುವುದು ವಿಷಾದಕರ. ಇದನ್ನು ಬಳಸಿಕೊಂಡು ಅವರು ಕೆಲವರ ವೈಯಕ್ತಿಕ ವರ್ತನೆಗಳ ಉದಾಹರಣೆ ನೀಡಿ, ಅವಕ್ಕೆಲ್ಲ ಲೋಹಿಯಾವಾದದ ದೌರ್ಬಲ್ಯವೇ ಕಾರಣವೆಂದು ಹೇಳುವುದು ಕೇವಲ ಅಪಪ್ರಚಾರದ ಪ್ರಯತ್ನವೆನಿಸುತ್ತದೆ. ಹೊರಗಿನಿಂದ ಪ್ರಭಾವಿಸುವ ರಾಜಕೀಯ ಸಿದ್ಧಾಂತವೊಂದು ಮನುಷ್ಯನ ಸಕಲ ಆಳಗಳನ್ನೂ ಆವರಿಸುತ್ತದೆಂದೂ, ಆವರಿಸಬೇಕೆಂದೂ ನಂಬುವುದು ಮನುಷ್ಯ ಚೈತನ್ಯದ ಸ್ವಾಯತತ್ತೆಯನ್ನೇ ಪ್ರಶ್ನಿಸಲು ಮಾಡುವ ಪ್ರಯತ್ನ. ಇದಕ್ಕೆ ಎಲ್ಲವೂ ಹೊರಗಿನ ಪ್ರಭಾವದಿಂದಲೇ ಆಗುವುದು ಎಂಬ (ದ್ವಂದ್ವಮಾನ)ಭೌತವಾದಿ ನಂಬಿಕೆಯೇ ಕಾರಣವಿರಬಹುದು. ಹಾಗಾಗಿಯೇ ರಹಮತ್, ನಂಜುಂಡಸ್ವಾಮಿ-ಲಂಕೇಶ್, ತೇಜಸ್ವಿ-ಲಂಕೇಶ್ ಮತ್ತು ಅನಂತಮೂರ್ತಿ-ತೇಜಸ್ವಿ ನಡುವಣ 'ಜಗಳ'ಗಳ ಹಿಂದೆ ಲೋಹಿಯವಾದವನ್ನಷ್ಟೇ ಕಾಣಲು ಹೋಗುವುದು.

**ತೇಜಸ್ವಿ ಕಾರ್ಮಿಕ ಚಳವಳಿಗಳಂತಹ ವರ್ಗ ಹೋರಾಟದ ಮಾದರಿಗಳನ್ನಷ್ಟೇ ಅಲ್ಲ, ಸಮಾಜವಾದಿಗಳ ಅಂತರ್ಜಾತಿ ವಿವಾಹ, ವಿಚಾರವಾದಿ ಚಳವಳಿ ಮತ್ತು ರೈತ ಸಂಘದ ಹೋರಾಟಗಳನ್ನೂ ಕಂಡಿರುವದೂ ಲಘು ಶೈಲಿಯಲ್ಲೇ. ಅವರ ಬರವಣಿಗೆಯ ತಂತ್ರವದು. ಆ ತಂತ್ರದ ಮೂಲಕವೇ ಅವರು ತಮ್ಮ ಕೃತಿಯ ಆತ್ಯಂತಿಕ ಪರಿಣಾಮವನ್ನೂ ಸೃಷ್ಟಿಸಲು ಪ್ರಯತ್ನಿಸುವುದು.**

ಹೀಗೇ ಮುಂದುವರೆದ ರಹಮತ್, ನಂಜುಂಡಸ್ವಾಮಿ ಕಟ್ಟಿದ ರೈತಸಂಘದಲ್ಲಿ ಅವರ ಬಹುಕಾಲದ ಸಂಗಾತಿ ಕಡಿದಾಳು ಶಾಮಣ್ಣ ಇರಲಿಲ್ಲ ಎಂಬ ಅಚ್ಚರಿಯ (ತಪ್ಪು)ಮಾಹಿತಿಯನ್ನೂ ನೀಡುವ ಮೂಲಕ, ಇವರು ತಮ್ಮ ಪುಸ್ತಕವೊಂದಕ್ಕಾಗಿ ಈ ಇಬ್ಬರು ಗೆಳೆಯರೊಂದಿಗೆ ನಡೆಸಿದ ಸಂದರ್ಶನಗಳು ಬರೀ ಬುರ್ನಾಸು ಎಂಬುದನ್ನು ಸಾಬೀತು ಪಡಿಸುತ್ತಾರೆ. ಶಾಮಣ್ಣ ಆರಂಭದಿಂದ ಈವರೆಗೂ ರೈತ ಸಂಘದ ಅವಿಭಾಜ್ಯ ಅಂಗವಾಗಿದ್ದು, ರೈತ ಸಂಘ ಮತ್ತು ದಸಂಸ ಒಟ್ಟಿಗೆ ಸೇರಿ ರಾಜಕೀಯ ಶಕ್ತಿಯೊಂದನ್ನು ರೂಪಿಸುವ ವಿಷಯವಾಗಿ ಭಿನ್ನಾಭಿಪ್ರಾಯ ಮೂಡಿದ ಸಂದರ್ಭದಲ್ಲಿ ನಂಜುಂಡಸ್ವಾಮಿಯವರ ಸಿಟ್ಟಿಗೆ ಸಿಕ್ಕಿ, ಕೆಲ ಕಾಲ ರಾಜ್ಯ ಸಮಿತಿಯಿಂದ ಅಮಾನತ್ತುಗೊಂಡಿದ್ದರಷ್ಟೆ. ಅನತಿ ಕಾಲದಲ್ಲೇ ಎಲ್ಲ ಮಾಮೂಲಾಯಿತಷ್ಟೇ ಅಲ್ಲ, ನಂಜುಂಡಸ್ವಾಮಿ ಶಾಮಣ್ಣನವರನ್ನು ವಿಧಾನಸಭಾ ಚುನಾವಣೆಗಳಲ್ಲಿ ತೀರ್ಥಹಳ್ಳಿ ಕ್ಷೇತ್ರದಿಂದ ರೈತ ಸಂಘದ ಅಭ್ಯರ್ಥಿಯನ್ನಾಗಿ ಮಾಡಲು ಪ್ರಯತ್ನಿಸಿದರು! ಇನ್ನು ಗೋಪಾಲಗೌಡರ ಬಗ್ಗೆ ರಹಮತ್ ಹೇಳಿರುವ ಸಂಗತಿ ಆಘಾತಕಾರಿಯಾಗಿದೆ.

ಅವರು ಕೊನೆಯ ದಿನಗಳಲ್ಲಿ ಭೂಮಾಲೀಕರ ಸಂಬಂಧ ಹೊಂದಿ ಸಂಗಾತಿಗಳಿಂದ ದೂರವಾಗಬೇಕಾಯಿತಂತೆ! ಗೌರವಾನ್ವಿತ ಹಿರಿಯ ನಾಯಕನೊಬ್ಬರ ಬಗ್ಗೆ ಇಂತಹ ಗುರುತರ ಆರೋಪ ಮಾಡುವ ಮುನ್ನ-ಇದನ್ನು ಇವರ ಕಿವಿಗೆ ಯಾರೇ ಹಾಕಿರಲಿ-ರಹಮತ್ ಎರಡು ಬಾರಿ ಯೋಚಿಸಬೇಕಿತ್ತು. ಘಟನೆಯ-ಅಂದರೆ ಯಾವ ಭೂಮಾಲೀಕರ, ಎಂತಹ ಸಂಬಂಧ ಮತ್ತು ದೂರವಾದ ಸಂಗಾತಿಗಳು ಯಾರು ಎಂಬ-ವಿವರ ನೀಡದೆ, ಹೀಗೆ ದುಂಡು ದುಂಡಾಗಿ ಮಾತನಾಡುವುದು, ಆಗದವರ ಮೇಲೆ ಬೀದಿಯಲ್ಲಿ ಕಲ್ಲೆಸೆದು ಓಣಿಯಲ್ಲಿ ಓಡಿಹೋಗುವ ಕಿಡಿಗೇಡಿತನಕ್ಕಿಂತ ಕಡಿಮೆಯಾದ ಹೀನ ಕೃತ್ಯವೇನಲ್ಲ.

ರಹಮತ್ ಆಧುನಿಕ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು(ಕನಿಷ್ಠ ಇಲ್ಲಿ ವ್ಯಕ್ತವಾಗಿರುವಂತೆ) ಕೇವಲ ವದಂತಿ, ಕಾಡು ಹರಟೆ, ಊಹೆ ಮತ್ತು ರಾಜಕೀಯ ಚಾಡಿಕೋರರ ಮಾತುಗಳನ್ನಷ್ಟೇ ಕೇಳಿ ಕಲ್ಪಿಸಿಕೊಂಡಂತಿದೆ. ಹಾಗಾಗಿಯೇ ಅವರು ಘಟನೆಗಳನ್ನು ಕಲಸುಮೇಲೋಗರ ಮಾಡಿಕೊಂಡು ತಾವು ಕಲಿತ ರೀತಿಯ ಮಾರ್ಕ್ಸ್‌ವಾದಿ ದೃಷ್ಟಿಕೋನಕ್ಕೆ ತಕ್ಕಂತೆ ಕಥೆ ಹೆಣೆಯುತ್ತಾ ಹೋಗಿದ್ದಾರೆ. ಜಾತಿ ವಿನಾಶ ಸಮ್ಮೇಳನ, ಒಕ್ಕೂಟದ ಸಮಾವೇಶ ನಡೆದದ್ದು, ಅಡಿಗರು ಮೊದಲ ಬಾರಿಗೆ ಜನಸಂಘದಿಂದ ಚುನಾವಣೆಗೆ ನಿಂತು ಸೋತ ಮೇಲೆ. ಅಷ್ಟೇ ಅಲ್ಲ, ಈ ಚುನಾವಣೆ ನಡೆದದ್ದು ಜೆಪಿ ಚಳವಳಿಯ ಮುನ್ನ, 1971ರಲ್ಲಿ. ಇದನ್ನು ಏಕೆ ಸ್ಪಷ್ಟಪಡಿಸಲಾಗುತ್ತಿದೆಯೆಂದರೆ, ಇದಕ್ಕೂ ಇವರು ಉಲ್ಲೇಖಿಸುವ 1977ರ ಜನತಾ ಪಕ್ಷದ ಸರ್ಕಾರಕ್ಕೂ ಗಂಟು ಹಾಕಿ, ಲೋಹಿಯಾವಾದಿಗಳು ಕೋಮುವಾದಿಗಳೊಂದಿಗೆ ಸೇರಿ ಸರ್ಕಾರ ರಚಿಸಿದರೆಂದು ರಹಮತ್ ಆಪಾದಿಸುತ್ತಾರೆ.

ಆದರೆ ಆಗ ಇದ್ದುದು ಸಮಾಜವಾದಿ ಪರಂಪರೆಯ ನಾಯಕ ಜೆಪಿ ರೂಪಿಸಿದ ಜನತಾ ಪಕ್ಷ. ಅದು ಗಾಂಧಿವಾದಿ ಸಮಾಜವಾದವನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದ ಪಕ್ಷ. ಅದರಲ್ಲಿ ಕೋಮುವಾದಿ ಧೋರಣೆ ಕಾಣಿಸಿಕೊಂಡೊಡನೆ ಅದರಿಂದ ಸಮಾಜವಾದಿಗಳು ಹೊರಬಂದರು. ಇದನ್ನು ರಹಮತ್ ಹೇಳುವುದಿಲ್ಲ. ಏಕೆಂದರೆ ಅವರು ಇದನ್ನು ಮತ್ತೆ ಜಾರ್ಜ್ ಫರ್ನಾಂಡೀಸ್ ಮತ್ತವರ ಕೆಲವು ಗೆಳೆಯರು ಬಿಜೆಪಿಯೊಂದಿಗೆ ಸ್ನೇಹ ಬೆಳೆಸಿದ್ದಕ್ಕೆ ಗಂಟು ಹಾಕಲು ಬಳಸಿಕೊಳ್ಳುತ್ತಾರೆ. ಇಂತಹ ಬಳಕೆದಾರಿಕೆ ಜಾಣತನದ ಪ್ರದರ್ಶನವಾಗಬಹುದೇ ಹೊರತು ಸತ್ಯ ಶೋಧನೆಗೆ ನೆರವಾಗುವುದಿಲ್ಲ.

ಜಾರ್ಜ್ ಮತ್ತು ಅವರ ಗೆಳೆಯರ ನಿಲುವನ್ನು ಸಮರ್ಥಿಸದೇ ಹೇಳುವುದಾದರೆ, ಅವರು ಬಿಜೆಪಿಯ ಸಖ್ಯ ಮಾಡುವ ಹೊತ್ತಿಗೆ ಸಮಾಜವಾದಿ ಚಳವಳಿ ಪಕ್ಷವಿಲ್ಲದೇ ಹರಿದು ಹಂಚಿಹೋಗಿ ಬಹಳ ದಿನಗಳಾಗಿದ್ದುವು. ಅವರಲ್ಲ ಇತರ ಕೆಲವರೊಂದಿಗೆ ಸೇರಿ ಕಟ್ಟಿದ್ದ ಜನತಾ ಪರಿವಾರ ಹಲವರ ಕೌಟುಂಬಿಕ ರಾಜಕಾರಣದ ಪಾಳೆಯವಾಗಿ ಹೋಗಿ ಅಲ್ಲಿ ಅವರಿಗೆ ಉಸಿರುಗಟ್ಟುವ ವಾತಾವರಣ ಸೃಷ್ಟಿಯಾಗಿತ್ತು. ಅದೇ ಹೊತ್ತಿಗೆ, ಜನಸಂಘವು ಕೆಲವು ಮುಸ್ಲಿಂ ನಾಯಕರೂ ಸೇರಿದಂತೆ ಹಲವು ರಾಜಕೀಯ ಧಾರೆಗಳ ಜನರನ್ನು ತನ್ನೆಡೆಗೆ ಸೆಳೆದುಕೊಂಡು ಬಿಜೆಪಿಯಾಗಿ ಮಾರ್ಪಾಡಾಗಿ ಗಾಂಧಿ ಸಮಾಜವಾದವನ್ನು ತಾತ್ವಿಕಯಾಗಿಯಾದರೂ ಒಪ್ಪಿತ್ತು. ಇಂತಹ ದೊಡ್ಡ ಗೊಂದಲದ ಸಂದರ್ಭದಲ್ಲಿ ತಮ್ಮ ರಾಜಕೀಯ ಉಳಿವು ಎಲ್ಲಿ ಸಾಧ್ಯವೋ ಅಲ್ಲಿಗೆ ಕೆಲವರು ವಲಸೆ ಹೋದರು.

ಆ ಸಂದರ್ಭದಲ್ಲಿ, ಪಕ್ಷದ ಅಂಕುಶವಿಲ್ಲದ ಅವರು ಎಷ್ಟರ ಮಟ್ಟಿಗೆ ಸಮಾಜವಾದಿಗಳಾಗಿ ಉಳಿದಿದ್ದರು, ಉಳಿಯಲಾಗದಿದ್ದರೆ ಕಾರಣಗಳೇನು ಎಂಬುದನ್ನು ಅವರನ್ನು ವೈಯಕ್ತಿಕವಾಗಿ ಕೇಳಿಯೇ ಸ್ಪಷ್ಟಪಡಿಸಿಕೊಳ್ಳಬೇಕೇ ಹೊರತು, ಸಾರಾ ಸಗಟು ತೀರ್ಮಾನಗಳನ್ನು ಕೊಡಲಾ

ಗುವುದಿಲ್ಲ. ಏಕೆಂದರೆ, ಸಮಾಜವಾದಿ ಆಂದೋಲನದೊಂದಿಗೆ ಗುರುತಿಸಿಕೊಂಡಿದ್ದ ನಿತೀಶ್ ಕುಮಾರ್ ಈಗ ಬಿಹಾರದಲ್ಲಿ ಬಿಜೆಪಿ ಸಹಯೋಗದಲ್ಲಿ ಮುಖ್ಯಮಂತ್ರಿಯಾಗಿ ಒಳ್ಳೆಯ ಆಡಳಿತಕ್ಕೆ ಹೆಸರುವಾಸಿಯಾಗಿದ್ದಾರೆ. ಬಿಜೆಪಿ ಕೋಮುವಾದಿ ಬಾಲ ಬಿಚ್ಚದಂತೆ ಎಲ್ಲ ಎಚ್ಚರ ಮತ್ತು ಧೈರ್ಯಗಳನ್ನು ತೋರಿಸುತ್ತಿದ್ದಾರೆ.

ಹಾಗಾಗಿ, ಎಲ್ಲವೂ ಹಸೆಗೆಟ್ಟು ತಲೆಕೆಳಗಾಗುತ್ತಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಭಾರತದ ರಾಜಕಾರಣವನ್ನು ಹಳೆಯ ತಾತ್ವಿಕ ಎರಕಗಳಲ್ಲಿ ವಿಂಗಡಿಸಿ ನೋಡುವುದಕ್ಕಿಂತ ಅದನ್ನೊಂದು ಪ್ರಕ್ರಿಯೆಯಂತೆ ಗಮನಿಸುತ್ತಾ, ವಿಷಯಾಧಾರಿತವಾಗಿ ವಿಮರ್ಶಿಸುವುದೇ ಹೆಚ್ಚು ಉಚಿತವೂ, ಪ್ರಯೋಜನಕಾರಿಯೂ ಮತ್ತು ಆರೋಗ್ಯಕರ ರಾಜಕಾರಣವನ್ನು ರೂಪಿಸುವ ಉತ್ತಮ ದಾರಿಯೆಂದೂ ನನಗನ್ನಿಸಿದೆ.

ಹಾಗೆ ನೋಡಿದರೆ, ರಾಜಕೀಯ ತಾತ್ವಿಕತೆ ಉತ್ತುಂಗದಲ್ಲಿದ್ದ ಕಾಲದಲ್ಲೇ ಭಾರತದಲ್ಲಿನ ಮಾರ್ಕ್ಸ್‌ವಾದದ ಸೈದ್ಧಾಂತಿಕ ನಾಯಕರೆನಿಸಿದ್ದ ನಂಬೂದರಿಪಾದರೇ ತಮ್ಮ ಸರ್ಕಾರ ಉಳಿಸಿಕೊಳ್ಳಲು ಕೇರಳದಲ್ಲಿ ಮುಸ್ಲಿಂ ಲೀಗ್‌ನ ಒತ್ತಾಯಕ್ಕೆ ಮಣಿದು ಮುಸ್ಲಿಂ ಪ್ರಾಬಲ್ಯದ ಮಲಪ್ಪುರಂ ಜಿಲ್ಲೆ ನಿರ್ಮಿಸಿದರಲ್ಲದೆ, ಮುಸ್ಲಿಂ ಲೀಗನ್ನು ತಮ್ಮ ಸರ್ಕಾರದಲ್ಲಿ ಸೇರಿಸಿಕೊಂಡು ಅದಕ್ಕೊಂದು ಮಾನ್ಯತೆ ನೀಡಿದರು. ಈಗಲೂ ಕೂಡಾ ಅಲ್ಲಿನ ಮಾರ್ಕ್ಸ್‌ವಾದಿ ಸರ್ಕಾರ ಕಳೆದ ಚುನಾವಣೆಗಳ ಸಂದರ್ಭದಲ್ಲಿ ಕೋಮು ವಾದಿ ಭಾಷಣ ಮಾಡಿ ಮೂರು ವರ್ಷಗಳ ಕಾಲ ಚುನಾವಣೆಗಳಿಂದ ಬಹಿಷ್ಕರಿಸಲ್ಪಟ್ಟಿದ್ದ ಕೇರಳ ಕಾಂಗ್ರೆಸ್ ಎಂಬ ಪುಡಿ ಪಕ್ಷದ ನಾಯಕರೊಬ್ಬರನ್ನು ಕ್ರಿಶ್ಚಿಯನ್ ಮತಗಳ ಮೇಲೆ ಕಣ್ಣಿಟ್ಟು ತನ್ನ ಸರ್ಕಾರಕ್ಕೆ ಸೇರಿಸಿಕೊಳ್ಳಲು ಮುಂದಾಗಿದೆ.

ಇನ್ನು ಕಾಡು ಸೇರಿರುವ ಅತಿ ಕ್ರಾಂತಿಕಾರಿ ಮಾರ್ಕ್ಸ್‌ವಾದಿಗಳು ಹಲವು ಮುಸ್ಲಿಂ ಉಗ್ರವಾದಿ ಗುಂಪುಗಳೊಂದಿಗೆ ಸಂಪರ್ಕದಲ್ಲಿವೆ ಎಂದು ಅವರ ವಕ್ತಾರರೇ ಬಹಿರಂಗವಾಗಿ ಹೇಳಿಕೊಂಡು, ಈ ಗುಂಪುಗಳ ಚಟುವಟಿಕೆಗಳಿಗೆ ತಮ್ಮ ಬೆಂಬಲವಿದೆಯೆಂದು ಘೋಷಿಸಿದ್ದಾರೆ. ಎಷ್ಟರಮಟ್ಟಿಗೆ ಎಂದರೆ, 26/11 ಮುಂಬೈ ದಾಳಿಯನ್ನು ಅವರು ಸ್ವಾಗತಿಸಿದ್ದಾರಲ್ಲದೆ, ಆಗ ಮುಸ್ಲಿಂ ಭಯೋತ್ಪಾದಕರು ಶಿವಾಜಿ ರೈಲ್ವೆ ನಿಲ್ದಾಣದಲ್ಲಿ ಮುಸ್ಲಿಮರನ್ನು ಕೊಲ್ಲಬಾರದಿತ್ತು ಎಂದು ಪರಿತಪಿಸುತ್ತಾ ತಾವು ತಲುಪಿರುವ ರಾಜಕೀಯ ವಿಕ್ಷಿಪ್ತತೆಯ ಪರಿಚಯ ಮಾಡಿದ್ದಾರೆ. ಕೋಮುವಾದವೆಂದರೆ ಬರೀ ಹಿಂದೂ ಕೋಮುವಾದವೆಂದೇನಲ್ಲವಲ್ಲ? ನಮ್ಮ ಎಲ್ಲ ರಾಜಕೀಯ ವಿಶ್ಲೇಷಣೆಗಳ ತೊಂದರೆ ಇರುವುದು ಇಲ್ಲೇ. 'ಸೆಕ್ಯುಲರ್' ಎಂಬ ನೀತಿಗೆ ನಾವು ನಮ್ಮ ರಾಜಕೀಯ ಹಿತಾಸಕ್ತಿಗನುಗುಣವಾಗಿ ಒಂದು ಅರ್ಥ ಕಟ್ಟಿಕೊಂಡು; ಅದರಲ್ಲಿ ನಾವೇ ಬಂಧಿತರಾಗಿ, ಜನರನ್ನು ದಿಕ್ಕೆಡಿಸುವಂತಹ ರಾಜಕೀಯ ಚರ್ಚೆಗಳನ್ನು ಬೆಳೆಸುತ್ತಿದ್ದೇವೆ. ಅದರ ಫಲವನ್ನು ಕರ್ನಾಟಕದಲ್ಲಿ ಇಂದು ಅನುಭವಿಸುತ್ತಿದ್ದೇವೆ.

ಅದೇನೇ ಇರಲಿ, ಇಂತಹ ಸಂದರ್ಭದಲ್ಲಿ ರಹಮತ್ ತರೀಕೆರೆಯವರಂತಹ ವಿದ್ವಾಸರಿಂದ, ಬುದ್ಧಿಜೀವಿಗಳಿಂದ ಜನತೆ ಇನ್ನಷ್ಟು ವಿಶ್ವಾಸಾರ್ಹವಾದ, ಗಂಭೀರವಾದ, ಸಮಚಿತ್ತದ ಮತ್ತು ಜವಾಬ್ದಾರಿಯುತವಾದ ರಾಜಕೀಯ ವಿಶ್ಲೇಷಣೆಗಳನ್ನು ನಿರೀಕ್ಷಿಸುತ್ತದೆ. □

# ಮಾಧ್ಯಮ ಸ್ವಾತಂತ್ರ್ಯ ಮತ್ತು ಪೋಲೀಸ್ ರಾಜ್ಯ

(17ನೇ ಪುಟದಿಂದ)

ತ್ತೇನೆ."ಎಂದು ಹೇಳಿದ್ದ. ಆದರೆ, ತರಗೆಲೆಗಳಂತೆ ಉದುರುವ ಸರಕಾರ ಮತ್ತು ರಾಜಕಾರಣಿಗಳಿಗೆ ಇದು ಅರ್ಥವಾಗಬೇಕಾಗಿದೆ.

**ಮಾಧ್ಯಮದ ಜವಾಬ್ದಾರಿ**

ಪತ್ರಿಕಾ ಸ್ವಾತಂತ್ರ್ಯ ಕೆಲವು ಸಾರಿ ಎಡವಟ್ಟುಗಳನ್ನು ಸೃಷ್ಟಿಸಿದೆ. ಸರಕಾರಕ್ಕೆ ಮುಜುಗುರ ಉಂಟಾಗುಂತಹ ವರದಿ ಮಾಡಿರಬಹುದು. ಬ್ರೆಕಿಂಗ್ ನ್ಯೂಸ್ ಕೊಡುವ ಬರಾಟೆಯಲ್ಲಿ – ಆದಾಯ ಹೆಚ್ಚಿಸಿಕೊಳ್ಳುವ ಧಾವಂತದಲ್ಲಿ ಕೆಲವು ಅತಿರಂಜಿತ, ಅಶ್ಲೀಲ ಹಾಗೂ ಕಪೋಲಕಲ್ಪಿತ ವರದಿಗಳನ್ನು ಮಾಡಿವೆ. ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವ ಪ್ರಕರಣಗಳ ಕುರಿತು ವರದಿಮಾಡಿ ಅನರ್ಥಗಳನ್ನು ಸೃಷ್ಟಿ ಮಾಡಿವೆ. ಅದು ಕೇವಲ ತಮ್ಮ ಪ್ರಸಾರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ, ಆ ಮೂಲಕ ತಮ್ಮ ಉಳಿವಿನ ಮತ್ತು ಬೆಳವಣಿಗೆಯ ಸವಾಲುಗಳನ್ನು ಎದುರಿಸುವ ಸಲುವಾಗಿ ಮಾಧ್ಯಮ ಆ ರೀತಿಯ ತಪ್ಪುಗಳನ್ನು ಮಾಡಿರಬಹುದು. ಇಂದಿನ ಜಾಗತೀಕರಣದ ಸನ್ನಿವೇಶದಲ್ಲಿ ಇಂತಹ ದೋಷಗಳು ಘಟಿಸುವುದು ಸಹಜ.

ಉದಾರೀಕರಣ ಹಾಗೂ ಜಾಗತೀಕರಣದ ಪ್ರಭಾವಕ್ಕೆ ಒಳಗಾದ ಮಾಧ್ಯಮ ಬಂಡಾವಾಳಶಾಹಿಗಳ ತೆಕ್ಕೆಗೆ ಸಿಕ್ಕು ಒಂದು ಉದ್ಯಮದ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಆಧುನಿಕ ತಂತ್ರಜ್ಞಾನದ ಬಳಕೆ ಹಾಗೂ ದರಸಮರದ ಪರಿಣಾಮವಾಗಿ ಪತ್ರಿಕೆಗಳು ಹೆಚ್ಚು ಆಕರ್ಷಣೆಯ ಮತ್ತು ಅಪೇಕ್ಷಣೀಯ ಬಲವುಗಳನ್ನು ಪಡೆಯ ತೊಡಗಿದವು. 1970ರ ದಶಕದಲ್ಲಿ ಸಾವಿರ ಜನರಿಗೆ 15 ರಷ್ಟಿದ್ದ ಪತ್ರಿಕೆಗಳ ಸಂಖ್ಯೆ ಈಗ 35ರಷ್ಟಾಗಿದೆ.

ಪತ್ರಿಕೆಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಅನಾರೋಗ್ಯಕರ ಪೈಪೋಟಿ ಮಾಧ್ಯಮ ವಲಯದಲ್ಲಿ ಸೃಷ್ಟಿಯಾಯಿತು. ಪತ್ರಿಕೆಯ ಖರ್ಚು–ವೆಚ್ಚವನ್ನು ನಿಭಾಯಿಸಲು ಜಾಹೀರಾತುಗಳ ಮೊರೆ ಹೋಗಬೇಕಾಯಿತು. ಅಲ್ಲದೆ, ಪ್ರಭಲ ಪತ್ರಿಕೆಗಳು ಪ್ರಾದೇಶಿಕ ಆವೃತ್ತಿಗಳನ್ನು ಆರಂಭಿಸಿದ್ದರಿಂದ, ಸ್ಥಳೀಯ ಸಣ್ಣ ಪುಟ್ಟ ಪತ್ರಿಕೆಗಳು ಪೈಪೋಟಿಯನ್ನು ಎದುರಿಸಲಾಗದೆ ಕಣ್ಣು ಮುಚ್ಚಬೇಕಾಯಿತು.

ನ್ಯೂಸ್ ಪ್ರಿಂಟ್‌ನ ದುಬಾರಿಯಿಂದ ಒಂದು ಪತ್ರಿಕೆಯ ಖರ್ಚು 8ರಿಂದ 10ರೂ. ಗಳಿಗೆ ಏರಿತು. ಒಬ್ಬ ಸಾಮಾನ್ಯ ಓದುಗ ಇಷ್ಟು ಮೊತ್ತವನ್ನು ಕೊಟ್ಟು ಪತ್ರಿಕೆಯನ್ನು ಖರಿದಿಸಲು ಸಾಧ್ಯವೇ? ಹೀಗಾಗಿ, ಪತ್ರಿಕೆಗಳು ಜಾಹೀರಾತುಗಳನ್ನು ಆಶ್ರಯಿಸಬೇಕಾಯಿತು. ಜಾಹಿ ರಾತುಗಳಿಂದ ಬರುವ ಆದಾಯದಿಂದ ಪತ್ರಿಕೆಗಳು ನಡೆಯುತ್ತಿವೆ. 'ಪತ್ರಿಕೆಗಳು ಮಾಲೀಕರನ್ನು ಹೊಂದಿದರೆ, ಮಾಲೀಕರು ಜಾಹೀ ರಾತುದಾರರನ್ನು ಹೊಂದಿರಬೇಕಾಗುತ್ತದೆ' ಎಂಬ ಮಾಧ್ಯಮ ತಜ್ಞ ರಾಬಿನ್ ಜಾಫ್ರೀಯ ಮಾತು ಪತ್ರಿಕೆಗಳಿಗೆ ಜಾಹೀ ರಾತಿನ ಅಗತ್ಯತೆಯ ಎಷ್ಟು ಎಂಬುದನ್ನು ಹೇಳುತ್ತದೆ.

ಆದರೆ, ಜಾಹಿ ರಾತುಗಳು ಓದುಗರ ಮೇಲೆ ಹಾಗೂ ಒಟ್ಟಾರೆ ಸಮಾಜದ ಸ್ವಾಸ್ಥ್ಯದ ಮೇಲೆ ಯಾವ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ನಿರ್ಲಕ್ಷಿಸಲಾಯಿತು. ಇದರಿಂದಾಗಿ, ಪತ್ರಿಕೆಗಳು ಹೆಚ್ಚು ಓದುಗರನ್ನು ಸೃಷ್ಟಿಸಿ ಅವರನ್ನು ಜಾಹೀ ರಾತುದಾರರ ಉತ್ಪನ್ನಗಳ ಗ್ರಾಹಕರನ್ನಾಗಿ ಮಾಡುವಂತಹ ದಲ್ಲಾಳಿಗಳಂತೆ ಕಾಣತೊಡಗಿದವು. ಜಾಹೀ ರಾತುದಾರರು ಹಾಗೂ ಅವರ ಉದ್ದೇಶ – ಉತ್ಪನ್ನಗಳು ಮಾರಕವೆಂದು ಅನಿಸಿದರೂ ಸಹ ಅವುಗಳ ವಿರುದ್ಧ ಧ್ವನಿ ಎತ್ತದಂತಹ ಜಾಣ ಕಿವುಡತನವನ್ನು ಪತ್ರಿಕೆಗಳು ಅನಿವಾರ್ಯವಾಗಿ ಅನುಸರಿಸಬೇಕಾಯಿತು. ಇಲ್ಲದಿದ್ದರೆ, ಜಾಹೀ ರಾತುಗಳಿಂದ ಬರುವ ಆದಾ ಯವನ್ನು ಕಳೆದುಕೊಳ್ಳಬೇಕಾಗುತ್ತದೆ.

ಇತ್ತೀಚೆಗೆ ಪ್ರಾಯೋಜಕತ್ವದ ಸುದ್ದಿಗಳ ಬರಾಟೆ, ಕಾಸಿಗಾಗಿ ಸುದ್ದಿ ಎಂಬ ಹೊಸ ಪ್ರಯೋಗಗಳ ಮುಖಾಂತರ ಹಣ ಮಾಡುವಂತಹ ಪ್ರವೃತ್ತಿ ಕಂಡು ಬರುತ್ತಿದೆ. ಬ್ರೆಕಿಂಗ್ ನ್ಯೂಸ್ ಕೊಡುವ ಬರಾಟೆಯಲ್ಲಿ ಆ ಮೂಲಕ ಟಿ.ಆರ್.ಪಿ.ದರವನ್ನು ಏರಿಸಿಕೊಳ್ಳುವ ಧಾವಂತದಲ್ಲಿ ಕೆಲಸಕ್ಕೆ ಬಾರದ, ಮುಜುಗರ ಪಡಿಸುವ, ಹಾಗೂ ಚಾರಿತ್ರ್ಯವಧೆ ಮಾಡುವಂತಹ ಸುದ್ದಿ ಮತ್ತು ಚಿತ್ರಗಳನ್ನು ಪ್ರಕಟಿಸುವಂತಹ ಪ್ರವೃತ್ತಿಗಳು ಹೆಚ್ಚಾಗುತ್ತಿವೆ. 'ಕ್ರೈಮ್, ಸೆಕ್ಸ್ ಆ್ಯಂಡ್ ಪೊಲಿಟಿಕ್ಸ್'ಗಳ ಸುತ್ತ ಗಿರಿಕಿಹೊಡೆಯುತ್ತಿರುವ ಮಾಧ್ಯಮಗಳು ಸಾಂಸ್ಕೃತಿಕ, ಶೈಕ್ಷಣಿಕ, ಸಾಹಿತ್ಯಿಕ ಮತ್ತು ಪ್ರಾದೇಶಿಕ ಸುದ್ದಿಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದು ಕೊಳ್ಳುತ್ತಿವೆ.

ಪತ್ತೆದಾರಿ ಪತ್ರಿಕೋದ್ಯಮದ ಹೆಸರಿನಲ್ಲಿ, ಭ್ರಷ್ಟಾಚಾರ ಮತ್ತು ಹಗರಣಗಳನ್ನು ಬಯಲಿಗೆಳೆಯಲು ಹೋಗುವ ಹಲವಾರು 'ಟ್ಯಾಬ್‌ಲಾಯ್ಡ್'ಗಳು ಸ್ವತಹ ಭ್ರಷ್ಟಾಚಾರಕ್ಕೆ ಇಳಿಯುತ್ತಿವೆ. ಸರಕಾರಿ ಅಧಿಕಾರಿಗಳಿಂದ, ಪೋಲೀಸ್‌ರಿಂದ, ಕಾಂಟ್ರಾಕ್ಟರುಗಳಿಂದ, ರಾಜಕಾರಣಿಗಳಿಂದ 'ಮಾಮೂಲಿ' ವಸೂಲಿ ಮಾಡುವ ದಂಧೆಯನ್ನು ಕೆಲವು ಪತ್ರಕರ್ತರು ಹವ್ಯಾಸವಾಗಿ ಮಾಡಿಕೊಂಡಿದ್ದಾರೆ. ಇಂತಹ 'ಕಪ್ಪುಕುರಿ' ಗಳನ್ನು ನಿಗ್ರಹಿಸಬೇಕಾಗಿದೆ.

2005ರಲ್ಲಿ ಮಾಧ್ಯಮದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅನುಮತಿ ನೀಡಲಾಯಿತು. ಹೀಗಾಗಿ ಪತ್ರಿಕೋದ್ಯಮದ ಬೆಳವಣಿಗೆ ತೀವ್ರಗತಿಯಲ್ಲಿ ಸಾಗಿದೆ. ಅಭಿವೃದ್ಧಿಯ ವೇಗ ವರ್ಧಕವಾಗಿ, ಸಾಮಾಜಿಕ ಸ್ವಾಸ್ಥ್ಯ ಸಲುವಾಗಿ ಹಾಗೂ ಸಂವಿಧಾನದ ಮೂರು ಅಂಗಗಳು ನಿಷ್ಕ್ರಿಯಗೊಂಡಾಗ ಜನತೆಯನ್ನು ಎಚ್ಚರಿಸುವ, ಜವಾಬ್ದಾರಿಯನ್ನು ಮೂಡಿಸುವ ಹೊಸ ಮನ್ವಂತರಕ್ಕೆ ಪತ್ರಿಕೆಗಳು ಸಾಕ್ಷಿಯಾಗುತ್ತಿವೆ.

1843ರ ಜುಲೈ 1ರಂದು ಕನ್ನಡದ ಮೊಟ್ಟ ಮೊದಲ ಪತ್ರಿಕೆ 'ಮಂಗಳೂರ ಸಮಾಚಾರ' ಆರಂಭವಾಯಿತು. ಧರ್ಮ ಪ್ರಚಾರಕ್ಕಾಗಿ ಹರ್ಮನ್ ಮೊಗ್ಲಿಂಗ್ ಎಂಬ ಕ್ರೈಸ್ತ ಪಾದ್ರಿ ಅದನ್ನು ಆರಂಭಿಸಿದ. ಅಂದಿನಿಂದ ಇಂದಿನವರೆಗೆ ಪತ್ರಿಕೆಗಳು ಹಲವಾರು ಸವಾಲುಗಳನ್ನು ಎದುರಿಸಿ ಹೊಸ–ಹೊಸ ರೂಪಾಂತರದಿಂದ ಮುನ್ನಡೆಯುತ್ತಿವೆ. ಇಂದಿಗೆ ಕನ್ನಡ ಪತ್ರಿಕೋದ್ಯಮ 168ನೆಯ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಆದರೆ, ಓದುಗರ ಸಂಖ್ಯೆ ಮಾತ್ರ 30 ಲಕ್ಷದ ಗಡಿಯನ್ನು ದಾಟಿಲ್ಲ. ಕನ್ನಡಕ್ಕಿಂತ ಕಡಿಮೆ ಪರಿಮಿತಿಯನ್ನು ಹೊಂದಿದ ಭಾರತದ ಹಲವಾರು ಭಾಷೆಯ ಪತ್ರಿಕೆಗಳು ಹೆಚ್ಚು ಓದುಗರನ್ನು ಹೊಂದಿವೆ. ಪತ್ರಿಕೆಗಳ ಪ್ರಸಾರ ಸಂಖ್ಯೆಯು ಆ ಭಾಷೆಯ ಸುಶಿಕ್ಷಿತರ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಒಂದು ಭಾಷೆಯ ಪ್ರಸಾರ ಮತ್ತು ಅಕ್ಷರಸ್ಥರ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಪತ್ರಿಕೆಗಳ ಪಾತ್ರ ಬಹು ಮುಖ್ಯವಾಗಿದೆ. □

# ಪೂರ್ಣತೆಯೆಂಬ ಕರುಳ ಮಿಡಿತ



-೨-

**ಜ್ಯೋತಿ ಗುರುಪ್ರಸಾದ್**

ಆ ಮಗುವಿನ ಹೆಸರು 'ಪೂರ್ಣ' ಅದಕ್ಕೆ ಮುಗ್ಧತೆಯ ಎಲ್ಲ ಸೊಬಗೂ ಸೇರಿಕೊಂಡ ಒಂದು ಮನಸ್ಸಿತ್ತು. ಅದಕ್ಕೇ ಅದು ಮಗು; ಅದಕ್ಕೇ ಅದು ಪೂರ್ಣ! ಅದು 'ಅವನಾದರೂ' ಅಥವಾ 'ಅವಳಾದರೂ' ಪೂರ್ಣತೆಯ ಆ ಅರ್ಥದಲ್ಲಿ ವ್ಯತ್ಯಾಸವಾಗಲಾರದು, ಅಲ್ಲವೇ? ಅದಕ್ಕೇ ಅದು ಮಗು; ಅದಕ್ಕೇ ಅದು ಮಗು ಮನಸ್ಸು.

ಬೃಹದಾರಣ್ಯಕೋಪನಿಷತ್ತಿನ 'ಶಾಂತಿಪಾಠ'ದ ಮಂತ್ರ ಹೀಗಿದೆ:

ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ

ಎಂದರೆ ಅದು (ಪರಬ್ರಹ್ಮವು) ಪೂರ್ಣವು ಇದು (ವ್ಯಕ್ತವಾದ ಜಗತ್ತು) ಪೂರ್ಣವು; ಪೂರ್ಣದಿಂದ (ಪರಬ್ರಹ್ಮದಿಂದ) ಪೂರ್ಣವು (ಜಗತ್ತು) ಹೊರಟು ಬಂದಿದೆ; ಪೂರ್ಣದ (ಜಗತ್ತಿನ) ಪೂರ್ಣತ್ವವನ್ನು (ಬ್ರಹ್ಮತ್ವವನ್ನು) ತೆಗೆದ ಮೇಲೆ (ಗ್ರಹಿಸಿದ ಮೇಲೆ) ಪೂರ್ಣವೇ (ಪರಬ್ರಹ್ಮವೇ) ಉಳಿಯುತ್ತದೆ ಎಂಬುದು ಈ ಮಂತ್ರದ ಅರ್ಥ ವಿವರಣೆ. 'ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ' ಎಂಬ ಮಾತಿದೆ. ಅಂಥ ಗಾದೆಗಳಿಗೆ ಸಮಾನವಾದುದು ಈ ವೇದಕ್ಕಿಂತಲೂ ಪೂರ್ವದಲ್ಲಿದ್ದ ಉಪನಿಷತ್ ಮಂತ್ರಗಳ ಮೂಲ. ಋಷಿ ಸದೃಶ ಮನುಷ್ಯರ ಬಾಯಿಯಿಂದ ಅವರ ಅನುಭವ ಜನ್ಯ ಚೈತನ್ಯವೆಲ್ಲಾ ಸೇರಿಕೊಂಡು ಆಧ್ಯಾತ್ಮದ ತಿರುಳಿನ ಸತ್ಯವಾಗಿ ಹೊಮ್ಮಿದಂಥ ನುಡಿಗಳು ಯಾವುದೇ ಜಾನಪದ ಸಿರಿ ನುಡಿಗೆ ತತ್ಸಮಾನವಾದ ಸರಳತೆಯನ್ನು ಬಿಂಬಿಸುವ ಆಣಿ ಮುತ್ತುಗಳು.

ಸಮಸ್ಯೆ ಉಂಟಾದುದು ಸರಳತೆ ಸಂಕೀರ್ಣತೆಯಾಗಿ ಹೋಗಿ ಮಂತ್ರಗಳು ಮನುಷ್ಯತ್ವ ಮರೆತು ಕಾಣದ ದೇವರನ್ನು ಸ್ವಾರ್ಥಕ್ಕಾಗಿ ಸೃಷ್ಟಿಸಿ ಮಂತ್ರಗಳನ್ನು ವ್ಯಾಪಾರ ಮಾಡಿಕೊಂಡು ಲಾಭಕೋರತನ ಸೃಷ್ಟಿಯಾದಾಗ ಎನಿಸುತ್ತದೆ. ಇಲ್ಲದಿದ್ದರೆ ಸಂಸ್ಕೃತದ ಅರ್ಥ ಹಾಗೆಯೇ ಕನ್ನಡಕ್ಕೂ ಬಂದು ಕನ್ನಡದ ಪ್ರಗತಿಗೆ ಕಾರಣವಾಗಿ ಪೂರಕವಾಗಿರುತ್ತಿತ್ತೇ ವಿನಃ ಶ್ಲೋಕಗಳೊಳಗೆ ಪ್ರತಿಷ್ಠೆಯಾಗಿ, ಚಮತ್ಕಾರವಾಗಿ, ನಿಗೂಢವಾಗಿ ಉಳಿದು ಸೀಮಿತ ವರ್ಗದವರ ಸ್ವತ್ತಾಗುತ್ತಿರಲಿಲ್ಲ; ನೇರ ನಡೆ-ನುಡಿಯ ಸ್ಫಟಿಕ ಶಲಾಕೆ ಯಾಗುತ್ತಿತ್ತು.

ಇದೇ ಮಂತ್ರದ ಅರ್ಥವನ್ನು ಅರಿವಿನ ಪರಿಧಿಗೆ ಒಗ್ಗಿಸಿಕೊಂಡು ವಿಶ್ಲೇಷಿಸುವುದಾದರೆ ಶೂನ್ಯದಿಂದಲೇ ಪೂರ್ಣವು ಹೊರಟು ಬಂದಿದೆ. ಪೂರ್ಣದ ಪೂರ್ಣತ್ವವನ್ನು ತೆಗೆದ ಮೇಲೆ ಉಳಿಯುವ ಶೂನ್ಯವೂ ಪೂರ್ಣವೇ! 0-0=0. ಏನು ಇಲ್ಲದ ಸ್ಥಿತಿಯಿಂದ ಏನೋ ಇರುವ ಸ್ಥಿತಿ ಸಂಭವಿಸಿ ಮತ್ತೆ ಅದು ಇಲ್ಲವಾಗುವಾಗಲೂ ಉಳಿವ ಸ್ಥಿತಿ-ಇರುವ ಸ್ಥಿತಿ, ನನಗೆ ದಕ್ಕಿರುವ ಪೂರ್ಣತೆಯ ಅರ್ಥ; ಅರ್ಥಾತ್ 'ಪೂರ್ಣ' ಎಂಬ ಮಗುವಿನ ಅಥವಾ 'ಮಗು' ಎಂಬ ಪೂರ್ಣನ ಚೈತನ್ಯದ ಅರ್ಥ. ಕೆ.ವಿ.ಪು. 'ಪೂರ್ಣದೃಷ್ಟಿ' ಎನ್ನುತ್ತಾರಲ್ಲ ಆ ದೃಷ್ಟಿಯ ಅಚ್ಚ ಹೊಸ ನೋಟ. ಆ ನೋಟದಲ್ಲಿ ಎಳ್ಳಷ್ಟೂ ಪಕ್ಷಪಾತವಿರುವುದಿಲ್ಲ; ಸಂಕುಚಿತತೆಯಿರುವುದಿಲ್ಲ; ಕುದುರೆಗೆ ಲಗಾಮು ಹಾಕಿ ಮುಂದಿನ ದಾರಿ ಮಾತ್ರ ನೋಡುವಂಥ ಸೀಮಿತ ನೋಟ ಅದಲ್ಲ. ಅಲ್ಲಿ ಸ್ವಚ್ಛ ಹೃದಯವಿರುತ್ತದೆ. ಪೂರ್ವಗ್ರಹಪಿಲ್ಲದ – ವಿದ್ಯೆಯ ಭಾರವಿಲ್ಲದ ಆದರೆ ಜ್ಞಾನವನ್ನು ಪ್ರತಿಫಲಿಸುವ ಜೀವದ ಕೌತುಕವಿರುತ್ತದೆ.

ಇಂಥದೇ ಒಂದು ಜೀವ ನನ್ನುದರದಲ್ಲಿ ಮಗುವಾಗಿ ಜನಿಸಿ ಬಂದು ಪ್ರಪಂಚದ ಎಲ್ಲ ತಾಯಂದಿರಿಗೆ ಉಂಟಾಗುವ ವಿಸ್ಮಯವನ್ನೊದಗಿಸಿತ್ತು ಅದು ನನ್ನ ಮೊದಲ ಮಗುವೇನಲ್ಲ. ಎರಡನೆಯ ಮಗು. ಆದರೂ ತಾಯಿಯಾದವಳಿಗೆ ಪ್ರತಿ ಮಗುವಿನ ಹೆರಿಗೆಯಾದಾಗಲೂ ಒಂದು ವಿಸ್ಮಯವೇ. ಒಂದು ಹೊಸ ಜನ್ಮವೇ. ತಂದೆಯಾದವನು ಮಾನಸಿಕವಾಗಿ ಮಾತ್ರ ಹೊಸದಾಗಿ ಹುಟ್ಟಿದರೆ ಸಹಜ ಹೆರಿಗೆ ನೋವನನುಭವಿಸಿ ತಾಯಿಯಾಗುವ ಹೆಣ್ಣು ದೈಹಿಕವಾಗಿ – ಮಾನಸಿಕವಾಗಿ ಎರಡು ಬಗೆಯಲ್ಲೂ ಮತ್ತೆ ಮತ್ತೆ ಹುಟ್ಟುತ್ತಾಳೆ. ಅದಕ್ಕೆ ಹೆಣ್ಣು ಜನ್ಮ ದೊಡ್ಡದು. ಹೆಣ್ಣಿನ ಶಕ್ತಿ ದೊಡ್ಡದು. ಇಂಥ ಹೆಣ್ಣು ಮಗುವೇ ಹುಟ್ಟಲಿ ಎಂದು ನಾವು ತಂದೆ-ತಾಯಿಗಳು ಎರಡು ಮಕ್ಕಳು ಹುಟ್ಟುವ ಮೊದಲೂ ಅಂದುಕೊಂಡಿದ್ದೆವು. ಆದರೆ ಅದು ನಮ್ಮಿಚ್ಛೆಯೇ? ಎರಡೂ ಗಂಡಾದವು. ಗಂಡಾದುದಕ್ಕೆ ಹೆಚ್ಚು ಖುಷಿಯಾಗದಿದ್ದರೂ ಅವು ನಮ್ಮ ಮಕ್ಕಳೆಂಬ ಖುಷಿ. ಅವು ಆರೋಗ್ಯವಾಗಿ ಹುಟ್ಟಿರುವುವೆಂಬ ಖುಷಿ.

ಎರಡನೆಯ ಮಗುವಾಗುವಾಗ ಒದಗಿ ಬರುವ ಒಂದು ಪ್ಲಸ್ ಪಾಯಿಂಟ್ ಎಂದರೆ ಮೊದಲನೆಯ ಮಗುವನ್ನು ಹೆತ್ತು ಬೆಳೆಸಿದ ಅನುಭವ ನಮ್ಮ ಪಾಲಿಗಿರುತ್ತದೆ. ಮಗುವನ್ನು ಪಾಲಿಸುವ ತಿಳಿವಳಿಕೆ ಜಾಸ್ತಿ ಆಗಿರುತ್ತದೆ. ಇಂಥ ತಿಳಿವಳಿಕೆಯ ನೆರಳಲ್ಲೇ ಹುಟ್ಟಿದ ಮಗು ಅವನು- ಪೂರ್ಣ. ಆಗಸ್ಟ 3. 1991 ಶನಿವಾರ ರಾತ್ರಿ 8.12 ಕ್ಕೆ ಕಾರ್ಕಳದ ಮಲ್ಯ ನರ್ಸಿಂಗ್ ಹೋಂನಲ್ಲಿ ಹುಟ್ಟಿದ. ಹೆಣ್ಣು ಮಗುವಾದರೆ 'ಪ್ರಜ್ಞಾ' ಎಂದು ಹೆಸರಿಡಬೇಕೆಂದು ನಮ್ಮಾಸೆಯಾಗಿತ್ತು. ಅವನು ಹುಟ್ಟುವ ಮೊದಲು ತೆಗೆದುಕೊಂಡ ಪಾತ್ರೆ-ಸೌಟು-ಲೋಟಗಳ ಮೇಲೆಲ್ಲಾ 'ಪ್ರಜ್ಞಾ' ಎಂಬ ಹೆಸರೇ ಉಳಿದಿದೆ! ಹುಟ್ಟುವ ಮಗು ಪ್ರಜ್ಞಾವಂತವಾಗಿ ಇರಲೆಂಬ ಕಾಳಜಿ ಮಾತ್ರ ಈ ಹೆಸರಿಡುವ ಆಸೆಯ ಹಿಂದೆ ಕೆಲಸ ಮಾಡಿತ್ತು. ಇವನು ಹುಟ್ಟುವ ಮೂರು ವರ್ಷ ಮೊದಲು ಹುಟ್ಟಿದ ಅವನಣ್ಣನಿಗೂ ಬುದ್ಧ ಪೂರ್ಣಿಮೆಯ ಸಂದರ್ಭದಲ್ಲೇ ಹುಟ್ಟಿದ್ದರಿಂದ ನಮ್ಮ ಪ್ರೀತಿಯ ಗೌತಮ ಬುದ್ಧನ ಹೆಸರನ್ನೇ ಇಟ್ಟಿದ್ದೆವು.

ಹಾಗೆಯೇ ಇವನು ಹುಟ್ಟಿದ ಸ್ವಲ್ಪ ಹೊತ್ತಿಗೇ ಮಗು ಎದೆ ಹಾಲು ಕುಡಿಯುತ್ತಿರು ವಾಗಲೇ ಇವನ ಹೆಸರು 'ಪೂರ್ಣಪ್ರಜ್ಞ'ನಾಗಲಿ ಅನಿಸಿತ್ತು. ಆದರೆ ಅದು ಆ ಹೆಸರಿನ ಅರ್ಥವ್ಯಾಪ್ತಿಗಾಗಿ ಮಾತ್ರ. ಬೇರೆ ಯಾವ ಪೂರ್ವಗ್ರಹವೂ ಈ ಹೆಸರಿಡುವ ಹಿಂದೆ ಇರಲಿಲ್ಲ. ಹೀಗೆ ಇವನು ನಮ್ಮ ಪಾಲಿನ 'ಪೂರ್ಣನಾದ'. ಪೂರ್ತಿ ಹೆಸರು ಕರೆಯುವುದಕ್ಕಿಂತ 'ಪೂರ್ಣ' ಎಂದು ಸುಖ –ಎಂಥ ಆನಂದ! ಅವನು ಹೊಟ್ಟೆಯಲ್ಲಿರುವಾಗಲೇ

**ಸಮಸ್ಯೆ ಉಂಟಾದುದು ಸರಳತೆ ಸಂಕೀರ್ಣತೆಯಾಗಿ ಹೋಗಿ ಮಂತ್ರಗಳು ಮನುಷ್ಯತ್ವ ಮರೆತು ಕಾಣದ ದೇವರನ್ನು ಸ್ವಾರ್ಥಕ್ಕಾಗಿ ಸೃಷ್ಟಿಸಿ ಮಂತ್ರಗಳನ್ನು ವ್ಯಾಪಾರ ಮಾಡಿಕೊಂಡು ಲಾಭ ಕೋರತನ ಸೃಷ್ಟಿ ಯಾದಾಗ ಎನಿಸುತ್ತದೆ. ಇಲ್ಲದಿದ್ದರೆ ಸಂಸ್ಕೃತದ ಅರ್ಥ ಹಾಗೆಯೇ ಕನ್ನಡಕ್ಕೂ ಬಂದು ಕನ್ನಡದ ಪ್ರಗತಿಗೆ ಕಾರಣವಾಗಿ ಪೂರಕವಾಗಿರುತ್ತಿತ್ತೇ ವಿನಃ ಶ್ಲೋಕಗಳೊಳಗೆ ಪ್ರತಿಷ್ಠೆಯಾಗಿ, ಚಮತ್ಕಾರವಾಗಿ, ನಿಗೂಢವಾಗಿ ಉಳಿದು ಸೀಮಿತ ವರ್ಗದವರ ಸ್ವತ್ತಾಗುತ್ತಿರಲಿಲ್ಲ; ನೇರ ನಡೆ-ನುಡಿಯ ಸ್ಫಟಿಕ ಶಲಾಕೆ ಯಾಗುತ್ತಿತ್ತು. ಇದೇ ಮಂತ್ರದ ಅರ್ಥ ವನ್ನು ಅರಿವಿನ ಪರಿಧಿಗೆ ಒಗ್ಗಿಸಿ ಕೊಂಡು ವಿಶ್ಲೇಷಿಸುವುದಾದರೆ ಶೂನ್ಯ ದಿಂದಲೇ ಪೂರ್ಣವು ಹೊರಟು ಬಂದಿದೆ.**

# ಪೂರ್ಣನ ಗರಿಗಳು

### ಕೋಗಿಲೆ ಮತ್ತು ಕಾಗೆ

ಕೋಗಿಲೆಯನ್ನು ಮಾತ್ರ
ಎಷ್ಟು ಗಾನ ಚಂದ ಅಂತ
ಹೇಳುತ್ತಾರೆ. ಆದರೆ
ಕಾಗೆಯ ಗಾನ ಚೆನ್ನಾಗಿಲ್ಲ
ಎಂದು ಹೇಳುತ್ತಾರೆ.
ಅದು ತಪ್ಪು
ಕಾಗೆ ಪಾಪ
ಕೋಗಿಲೆ ಕೇಡಿ.

### ರಾಕ್ಷಸ

ರಾಕ್ಷಸನನ್ನು ಸಾಯಿಸುವುದು
ಬಹಳ ಸುಲಭ
ಒಂದು ಇರುವೆ ಕಚ್ಚಿದರೆ ಸಾಕು
ಅವನು ಬಿದ್ದು ಹೋಗುತ್ತಾನೆ
ಆಗ ನಾವೆಲ್ಲರೂ ಸೇರಿಕೊಂಡು
ಹೊಡೆಯಬಹುದು
ಐದು ವರ್ಷದ ಮಗು ಕೂಡ
ಹೊಡೆಯಬಹುದು
ಅದರೆ ಬುದ್ಧಿ ಇರಬೇಕು ಅಷ್ಟೆ

### ಸಸ್ಯಾಹಾರಿ

ಸಸ್ಯಾ ತಿನ್ನುವವರಿಗೆ ಸಸ್ಯ
ಒಳ್ಳೆಯದು ಆದರೆ
ಮಾಂಸ ತಿನ್ನುವವರಿಗೆ
ಅದೇ ಒಳ್ಳೆಯದು



ಪೂರ್ಣಪ್ರಜ್ಞ

### ಮೇಣದಬತ್ತಿ

ಮೇಣದಬತ್ತಿ ಬೆಳಕು
ಕೊಡುತ್ತದೆ ನಿಜ
ಆದರೆ ಅದಕ್ಕೆ ತಕ್ಕ ಹಾಗೆ
ನಾವು ಬರೆಯಬೇಕು
ಇಲ್ಲ ಅಂದ್ರೆ ಆ ಮೇಣದಬತ್ತಿಯು
ಚಿಕ್ಕದಾಗುತ್ತ ಬಂದು
ಬೆಳಕು ಆರಿಹೋಗುತ್ತದೆ. ಅಲ್ಲವೆ?

### ಪೆನ್ ಬಗ್ಗೆ

ಪೆನ್ ಬರೆಯುತ್ತೆ ನಿಜ
ಇಂಕ್ ಮುಗಿದುಹೋದಾಗ
ಬೇಜಾರು

### ಡೈರಿ

ಡೈರಿಯಲಿ ನಮಗೆ
ಏನು ಅನಿಸುತ್ತದೋ
ಅದು ಬರಿಯಬೇಕು
ಬರೆಯಲಿಲ್ಲ ಎಂದರೆ
ಅದು ಡೈರಿ ಅಲ್ಲ

### ಇರುವೆ

ಇರುವೆ ತಿಂಡಿ ತಿನ್ನುತ್ತದೆ ಸರಿ
ಚೂರು ತಿಂಡಿ ಸಿಕ್ಕಿದರೆ
ಅದು ಖುಷಿಯಿಂದ ಮನೆಗೆ ಹೋಗಿ
ಅದರ ಹೆಂಡತಿ ಮಕ್ಕಳಿಗೆ
ಕೊಟ್ಟು ತಿನ್ನುತ್ತದೆ

### ಕವಿತೆ

ಎಲ್ಲರೂ ಖುಷಿ ಆಗಿ ಇದ್ದರೆ ಮಾತ್ರ
ನಾನು ಕವಿತೆ ಬರೆಯುವುದು
ಇಲ್ಲ ಎಂದರೆ ಕವಿತೆ ಇಲ್ಲ

ಮಗು ಚಲಿಸುವ- ಒದೆಯುವ ಸಂಭ್ರಮವನ್ನು ಅವನಣ್ಣನಿಗೆ ಹೇಳುತ್ತ ಅವನಿಂದಲೂ ಹೊಟ್ಟೆಯನ್ನು ಮುಟ್ಟಿಸಿ ತನ್ನ ತಂಗಿಯೋ-ತಮ್ಮನೋ ಅಮ್ಮನ ಹೊಟ್ಟೆಯೊಳಗೆ ಬೆಳೆ ಯುತ್ತಿದ್ದಾನೆ ಎಂಬ ಸಹೋದರ ಭಾವದ ದೀಪ್ತಿ ಅವನಣ್ಣ ಗೌತಮನಲ್ಲಿ ಸಂಚಾರ ವಾಗುತ್ತಿತ್ತು.

ಅದು ಎಷ್ಟು ಸುಭದ್ರವಾಗಿತ್ತೆಂದರೆ ನನಗೆ ಒಂಭತ್ತು ತಿಂಗಳು ಸಮೀಪಿಸುತ್ತ ಹೆರಿಗೆ ನೋವು ಕಾಣಿಸಿಕೊಂಡ ಸಂಜೆ ಗೌತಮನ ತಂದೆ ಇನ್ನೂ ಕಛೇರಿಯಿಂದ ಹಿಂದಿರುಗಿರಲಿಲ್ಲ. ಪಕ್ಕದ ಮನೆಯವರ ಸಹಾಯದಿಂದ ಆಸ್ಪತ್ರೆಗೆ ಹೋಗಬೇಕಾಗಿದ್ದ ಪರಿಸ್ಥಿತಿಯಲ್ಲಿದ್ದ ನನ್ನೊಡನೆ ಗೌತಮ ಎಷ್ಟು ಚೆನ್ನಾಗಿ ಸಹಕರಿಸಿದ ಅಂದರೆ ಬೀರು ತೆಗೆದು ತನ್ನ ಅಂಗಿ-ಚಡ್ಡಿಯನ್ನು ತಾನೇ ಏರಿಸಿಕೊಂಡು ನನ್ನೊಡನೆ ಧೈರ್ಯ ನೀಡುವ ಬಂಧುವಿನಂತೆ 'ಅಮ್ಮನಿಗೀಗ ಮಗು ವಾಗುತ್ತದೆ' ಎಂಬ ನಂಬಿಕೆಯಲ್ಲಿ ಆಸ್ಪತ್ರೆಗೆ ಹೊರಟು ನಿಂತಿದ್ದ. ಅವನ ನಂಬಿಕೆ ಹುಸಿಯಾಗದಂತೆ ಸ್ವಲ್ಪ ಹೊತ್ತಿಗೇ 'ಪೂರ್ಣ' ಎಂಬ ಅವನ ತಮ್ಮ ಧರೆಗೆ

**'ಎಲ್ಲರೂ ಖುಷಿ ಆಗಿದ್ರೆ ಕವಿತೆ ಬರೀತೀನಿ. ಇಲ್ಲ ಅಂದ್ರೆ ಕವಿತೆ ಇಲ್ಲ' ಎನ್ನುವುದು ಪೂರ್ಣನ ಮನಸ್ಸಿನ ಧೋರಣೆ. ಇದನ್ನು ಅವನು ತನ್ನ ತಪ್ಪು ಕಾಗುಣಿತದಲ್ಲಿ ಒಂದನೇ ತರಗತಿಯಲ್ಲೇ ಬರೆದಿದ್ದ. ಹಾಗೆಯೇ ನೋಡಿದ್ದನ್ನು- ಕೇಳಿದ್ದನ್ನು ತನ್ನದಾಗಿಸಿಕೊಂಡು ಬರಹಕ್ಕಿಳಿಸುವ ಅವನ ಎದೆಯ ಒರತೆಗಳು ಕೇರೆ ಹಾವನ್ನು ಗಮನಿಸಿ, ಕಾಗೆಯ ಕಥೆ ಕೇಳಿ-ಕೋಗಿಲೆ ಸ್ವರ ಕೇಳಿದರೂ ವಿಚಲಿತನಾಗದೆ ಕಾಗೆಯ ಗುಣದಿಂದಾಗಿ ಕಾಗೆಯನ್ನು ಮೆಚ್ಚಿಕೊಳ್ಳುವ ಗ್ರಹಿಕೆ.**

ಅವತರಿಸಿದ್ದ. ಅಣ್ಣನ ಅಚ್ಚರಿ-ಸಂಭ್ರಮ-ಸ್ಪರ್ಶದ ತವಕವನ್ನು ಹೇಳತೀರದು! ಇಂಥ ಸಂಭ್ರಮದ ವಾತಾವರಣದಲ್ಲಿ ಪೂರ್ಣ ನಮ್ಮ ಬಾಳನ್ನು ಪ್ರವೇಶಿಸಿದ. ಆರೋಗ್ಯವಾಗಿದ್ದ ಒಂದು ಸಾಧಾರಣ ಮುದ್ದು ಮಗು. ಕಣ್ಣುಗಳಲ್ಲಿ ಮಾತ್ರ ಮಿಂಚಿನ ಬೆಳಕು.

ಹುಟ್ಟುವಾಗಲೇ ನಗೆಯನ್ನು ಪೇಟೆಂಟ್ ಹಕ್ಕಾಗಿ ಹೊತ್ತುಕೊಂಡು ಹುಟ್ಟಿದ್ದಾನೇನೋ ಎನ್ನುವಂತೆ ಆರು ತಿಂಗಳ ಮಗು ನಮ್ಮೊಡನೆ ಸಂವಾದಿಸುವ ತುಂಬು ನಗೆಯ ಅಕ್ಕರೆ. ಆಗ ತೆಗೆದ ಅವನ ಭಾವಚಿತ್ರ ನಮ್ಮ ಮನೆಯ ಹತ್ತಿರವಿದ್ದ ಕೆಲವು ಗರ್ಭಿಣಿ ತಾಯಿಯರಿಗೆ ಸ್ಫೂರ್ತಿಯಾಗುವುದೆಂದು ತೆಗೆದುಕೊಂಡು ಹೋಗುತ್ತಿದ್ದರು. ಅವರುಗಳು ಪೂರ್ಣನ ಹಾಗೆಯೇ ನಮಗೂ ಮಗು ಹುಟ್ಟಲಿ ಎಂಬ ಕೋರಿಕೆಯಲ್ಲಿ ನಿತ್ಯವೂ ಪೂರ್ಣನ Photo ನೋಡುತ್ತ ಖುಷಿಯಲ್ಲಿ ಮಗು ಹೆತ್ತರಂತೆ. ಪೂರ್ಣನ ನಗುಮುಖದ ಚೆಂದ ಅವನ ವ್ಯಕ್ತಿತ್ವದ ಭಾಗವಾಗಿ ಸ್ಥಾಯಿಯಾಗಿ ಮುಂದುವರೆಯಿತು. ನಗುವಿಲ್ಲದೆ ಪೂರ್ಣನಿಲ್ಲ. ಹಸನ್ಮುಖವೇ ಅವನ ವಿಳಾಸ. ಎಲ್ಲ ಮಕ್ಕಳಂತೆ ಸಕಾರಣಕ್ಕಾಗಿ ಅತ್ತೂ ಅಳುಮುಂಜಿಯಾಗಿ

ರಲಿಲ್ಲ. ಬೇಗನೆ ಸಾವರಿಸಿಕೊಂಡು ನಕ್ಕು ಬಿಡುತ್ತಿದ್ದ! ಅವರಣ್ಣ ಗೌತಮ ಬಹಳ ಗಂಭೀರ. ಅಪರೂಪದ ನಗು, ಮಿತಭಾಷಿ. ಆದರೆ ತಮ್ಮ ಪೂರ್ಣ ಅಣ್ಣನನ್ನು ಪ್ರಶ್ನಿಸುತ್ತ ತಿಳಿದುಕೊಳ್ಳಲು- ತನ್ನ ಕುತೂಹಲ ತಣಿಸಿಕೊಳ್ಳಲು ಮುಂದುವರಿಯಲೆಂದೇ ಹುಟ್ಟಿರುವಂತೆ ಮಾತು ಕಲಿಯುತ್ತಿದ್ದ- ಮಾತಾಡುತ್ತಿದ್ದ!

ಅಣ್ಣ ಸ್ಲೇಟು ಬಳಪ ಹಿಡಿದರೆ ತಾನೂ ಹಿಡಿಯಬೇಕು. ಅಣ್ಣ ಪುಸ್ತಕ ಹಿಡಿದರೆ ತಾನೂ ಹಿಡಿಯಬೇಕು. ಒಟ್ಟಿನಲ್ಲಿ ಅಣ್ಣ ಮಾಡಿದ್ದನ್ನೆಲ್ಲಾ ತಾನೂ ಮಾಡಬೇಕು ಎಂಬ ಅವನ ಸ್ವ ಇಚ್ಛೆಯಿಂದಾಗಿ ಅವನ ವಿದ್ಯಾಭ್ಯಾಸವೆಂಬುದು ಖುಷಿಯಿಂದ ಅವನೇ ಆಡಲು ಆರಿಸಿಕೊಂಡ ಆಟದಂತಿತ್ತು. ಅಚ್ಚ ಕನ್ನಡ ನುಡಿಯ ಓದು-ಬರಹ-ಮಾತು ಪೂರ್ಣನದ್ದು. ಮಕ್ಕಳ ಕನ್ನಡ ಶಾಲೆಗೆಂದೇ ಶಾಲೆಯ ಹತ್ತಿರದ ರಸ್ತೆಯಲ್ಲಿ ಮನೆ ಮಾಡಿದೆವು. ಮಕ್ಕಳಿಬ್ಬರೂ ಹೋಗುತ್ತಿದ್ದುದು ಇಲ್ಲಿಯ ಸರ್ಕಾರಿ ಕನ್ನಡ ಮಾದರಿ ಶಾಲೆಗೇ. ಪೂರ್ಣ ಒಂದನೇ ತರಗತಿಯಲ್ಲಿದ್ದರೆ ಗೌತಮ ಅದೇ ಶಾಲೆಯ ನಾಲ್ಕನೇ ತರಗತಿ. ಅಣ್ಣ-ತಮ್ಮ ಒಟ್ಟಿಗೇ ಹೋಗಿ ಒಟ್ಟಿಗೆ ಬರುತ್ತಿದ್ದರು. ಒಂದೇ ಕಪ್ಪು-ಬಿಳುಪು ಯೂನಿಫಾರಂ ಒಂದೇ ರೀತಿಯ ಚೀಲ. ಆಕಾರದಲ್ಲಿ- ವಯಸ್ಸಿನಲ್ಲಿ ಮಾತ್ರ ವ್ಯತ್ಯಾಸ. ಕ್ರಿಕೆಟ್-ಫೈಟಿಂಗ್ ಏನೇನೋ ಅವರ ನಡುವೆ ಆಟಗಳು-ಜಗಳ ಎಲ್ಲಾ.

ಆದರೂ ಎಲ್ಲವೂ ಕೊನೆಗೆ ಪ್ರೀತಿಯಲ್ಲೇ ಮುಕ್ತಾಯವಾಗುತ್ತ ಅಮ್ಮನ ಹಾಡು- ಅಪ್ಪನ ಕಥೆ ಕೇಳಿಕೊಂಡು ಸುಖವಾಗಿ ನಿದ್ರೆ ಹೋಗುತ್ತಿದ್ದ ನಿಷ್ಕಲ್ಮಶ ಮನದ ಮುದ್ದು ಮಕ್ಕಳು. ಸಾಹಿತ್ಯದ ಪುಸ್ತಕಗಳದ್ದೂ ಒಂದು ಪಾತ್ರವಾದ ನಮ್ಮ ಮನೆಯಯಲ್ಲಿ ಮಕ್ಕಳಿಗೆ ಪುಸ್ತಕಗಳತ್ತ ನಾವು ಓದುವ ಪತ್ರಿಕೆಗಳತ್ತ ಗಮನ ಹರಿದುದು ಸಹಜವೆನಿಸಿತೇ ಹೊರತು ಹೆಚ್ಚುಗಾರಿಕೆಯೇನಲ್ಲ. ನಾವಿರುವಂತೆ – ಪರಿಸರದಂತೆ ಮಕ್ಕಳು. ನಮ್ಮಲ್ಲಿ ಆಗುವ ವ್ಯತ್ಯಾಸ ಅವರಲ್ಲೂ ಪ್ರತಿಫಲಿಸುತ್ತದೆ. ನಮ್ಮದೇ ಕುಡಿಗಳಲ್ಲವೇ ಅವರು? ಅವರನ್ನು ವ್ಯಕ್ತಿಯಾಗಿ ಗೌರವಿಸುವ ಸಂಯಮ-ಗಾಂಭೀರ್ಯ ನಮಗೆ ದೊಡ್ಡವರಿಗೆ ಬಂದಾಗ ಮಾತ್ರ ಮಕ್ಕಳ ಜೀವನ ನಿರಾತಂಕವಾಗಿ ಸಶಕ್ತವಾಗಿರುತ್ತದೆಂದು ನನ್ನ ಅಭಿಮತ ಹಾಗೂ ಅನುಭವಜನ್ಯ ನಂಬಿಕೆ-ಪೂರ್ಣ ನಂಬಿಕೆ.

ಪೂರ್ಣನಿಗೆ ಅಕ್ಷರದ ಗೆರೆ ಎಳೆಯುವುದು -ಬರೆಯುವುದು ಒಂದು ಅಭೂತಪೂರ್ವ ಕ್ರಿಯಾಶೀಲ ಪ್ರಯೋಗವಾಗಿತ್ತು. ಆ ಅಕ್ಷರದ ಆಕಾರಗಳು -ಅದರಿಂದ ಹೊಮ್ಮುವ ಅರ್ಥಗಳು ಅವನ ಮುದ್ದು ಮನಸ್ಸಿನಿಂದ ಅವನನ್ನು ಬೇರೆ ಮಾಡದಂಥ ಋಜುವಿನ ಪ್ರತಿರೂಪವಾಗಿತ್ತು. ಇದನ್ನೇ ಜಯಂತ ಕಾಯಣಿಯವರು ಅವನ ಪದ್ಯಗಳಲ್ಲಿ ಗುರುತಿಸಿ 'ಕವನವೇ ಅವನಿಗೊಂದು ಯೋಚನೆಯ ವಿಧಾನ. ಬರೆಯುತ್ತ ಬರೆಯುತ್ತಲೇ ಈ ಪೋರ ಯೋಚಿಸುತ್ತಾನೆ. ಮಗುವಿನ ಮುಗ್ಧ ಬೆರಗಿನ ನೋಟದ ಜತೆಗೇ ಅಷ್ಟೇ ಮುಗ್ಧವಾದ ಮುಕ್ತವಾದ ಚಿಂತನ ಕ್ರಮವೊಂದನ್ನು ಪೂರ್ಣನ ರಚನೆಗಳು ಹೊಳೆಸುತ್ತವೆ' ಎಂದು 'ಪೂರ್ಣನ ಗರಿಗಳು' ಪುಸ್ತಕದ ಮುನ್ನುಡಿಯಲ್ಲಿ ಬರೆದಿದ್ದಾರೆ. ಜಯಂತ್ ಅವರು ಪೂರ್ಣನನ್ನು ಪ್ರತ್ಯಕ್ಷ ಕಂಡು ಅವನ ನಡೆ- ನುಡಿಗಳನ್ನು ತಮ್ಮ ವಿಶಾಲ ನೋಟದಲ್ಲಿ ಗಮನಿಸಿ ಅವನ ರಚನೆಗಳಿಗೆ 'ಕವಿತೆ' ಎಂದು ಹೆಸರಿಟ್ಟವರು. ಅವರ ಸಂಪಾದಕತ್ವದ 'ಭಾವನಾ'ದಲ್ಲಿ ಪೂರ್ಣ ನೆಂಬ ಮಗುವೂ ಒಬ್ಬ ಲೇಖಕನಾಗಿ ಸೇರಿ ಹೋದುದು ಈಗ ಒಂದು ದಂತಕಥೆ. ಇದಕ್ಕೆ ಸಾಕ್ಷಿಯೆಂಬಂತೆ ಇದೀಗ ಈ ವರ್ಷ ಪೂರ್ಣನ ರಚನೆಗಳ 'ಪೂರ್ಣನ ಗರಿಗಳು' ಎಂಬ ಪುಸ್ತಕ ಛಂದ ಪುಸ್ತಕ ಪ್ರಕಾಶನದಿಂದ ಮುದ್ರಣವಾಗಿ ಅವನು ಬರೆದ ಹತ್ತು ವರ್ಷಗಳ ನಂತರವೂ ಆ ಸಾಲುಗಳ ಜೀವಂತಿಕೆಯಲ್ಲಿ ಅವನ ರೂಪವನ್ನು ತೋರುತ್ತಿವೆ.

'ಎಲ್ಲರೂ ಖುಷಿ ಆಗಿದ್ರೆ ಕವಿತೆ ಬರೀತೀನಿ. ಇಲ್ಲ ಅಂದ್ರೆ ಕವಿತೆ ಇಲ್ಲ' ಎನ್ನುವುದು ಪೂರ್ಣನ ಮನಸ್ಸಿನ ಧೋರಣೆ ಇದನ್ನು ಅವನು ತನ್ನ ತಪ್ಪು ಕಾಗುಣಿತದಲ್ಲಿ ಒಂದನೇ ತರಗತಿಯಲ್ಲೇ ಬರೆದಿದ್ದ. ಹಾಗೆಯೇ ನೋಡಿದ್ದನ್ನು- ಕೇಳಿದ್ದನ್ನು ತನ್ನದಾಗಿಸಿಕೊಂಡು ಬರಹಕ್ಕಿಳಿಸುವ ಅವನ ಎದೆಯ ಒರತೆಗಳು ಕೇರೆ ಹಾವನ್ನು ಗಮನಿಸಿ, ಕಾಗೆಯ ಕಥೆ ಕೇಳಿ-ಕೋಗಿಲೆ ಸ್ವರ ಕೇಳಿದರೂ ವಿಚಲಿತನಾಗದೆ ಕಾಗೆಯ ಗುಣದಿಂದಾಗಿ ಕಾಗೆಯನ್ನು ಮೆಚ್ಚಿಕೊಳ್ಳುವ ಗ್ರಹಿಕೆ 'ಮೇಣದ ಬತ್ತಿ' ಪದ್ಯದ ಸಾಲುಗಳನ್ನು ಬರೆಯುವ ಮುನ್ನ ಅವನು ನಡೆದುಕೊಂಡ ರೀತಿ ಅಚ್ಚಳಿಯದೆ ನೆನಪಿದೆ. ಕರೆಂಟ್ ಹೋದ ಸಂಜೆ. ಕೋಣೆಯ ಟೇಬಲ್ ಮೇಲೆ ಮೇಣದ ಬತ್ತಿ ಹಚ್ಚಿಟ್ಟಿದ್ದೆ. ಅವನಿಗೋ ಅವನ ಹೋಂವರ್ಕ್ ಮಾಡಿ ಮುಗಿಸಬೇಕೆಂಬ ತವಕ. ಆ ಬೆಳಕಿನಲ್ಲೇ ಕೂತು ಹೋಂವರ್ಕ್ ಮಾಡಿ ಮುಗಿಸಿ ಮೇಣದ ಬತಿಗೆ ಕೃತಜ್ಞತೆ ಹೇಳುವಂತೆ ಆ ಪದ್ಯದ ಸಾಲುಗಳನ್ನು ಬರೆದು ತೋರಿಸಿದ್ದ. ನೋಡುವಾಗ ಮೇಣದ ಬತ್ತಿ ಕರಗಿ ಮುಗಿಯುತ್ತಾ ಬಂದಿತ್ತು. ಆದರೆ ಪೂರ್ಣನ ಮುಖದಲ್ಲಿ ಆ ಬೆಳಕನ್ನು ಸದುಪಯೋಗ ಪಡಿಸಿಕೊಂಡ ಖುಷಿಯಲ್ಲಿ ಆ ಬೆಳಕು ಬೇರೆಲ್ಲೂ ಹೋಗದೆ ಅವನ ಮುಖದ ಮೇಲೆ ಲಾಸ್ಯಮಾಡುತ್ತಿದ್ದಂತಿತ್ತು.

ನಾವು ಸಸ್ಯಾಹಾರಿಗಳಾಗಿದ್ದರೂ ಆಹಾರದ ಬಗ್ಗೆ ಅವನ ಸಹಾನುಭೂತಿಯ ಚಿಂತನೆಯನ್ನು ವ್ಯಕ್ತಪಡಿಸಿ ಅವನು ಬರೆದಿದ್ದು 'ಸಸ್ಯಾಹಾರ ತಿನ್ನುವವರಿಗೆ ಸಸ್ಯಹಾರ ಒಳ್ಳೆಯದು. ಮಾಂಸಾಹಾರ ತಿನ್ನುವವರಿಗೆ ಅದೇ ಒಳ್ಳೆಯದು' ಈ ಸಾಲುಗಳು ನನ್ನನ್ನು ಬೆಚ್ಚಿ ಬೀಳಿಸಿ ಅವನ ಪೂರ್ಣ ದೃಷ್ಟಿಯನ್ನು ಖಾತ್ರಿಗೊಳಿಸಿತ್ತು. ಅವನ ಬಗ್ಗೆ ಹೀಗೆ ಬರೆಯುತ್ತಾ ಹೋದರೆ ಮುಗಿಯುವುದೇ ಇಲ್ಲ. ಅವನನ್ನು ಕಂಡವರಲ್ಲಿ -ಕಾಣದವರಲ್ಲೆಲ್ಲಾ ತನ್ನ 'ಗರಿ'ಗಳ ಮೂಲಕ ಹೃದಯದಲ್ಲಿ ಮನೆಮಾಡಿ ಕೂತು ಹಕ್ಕಿಯಾಗಿ ಹಾರುತ್ತ ಅನುಪಸ್ಥಿತಿಯಲ್ಲೂ ಉಪಸ್ಥಿತಿಯ ಪೂರ್ಣತೆಯಾಗಿದ್ದಾನೆ. ವಚನವನ್ನು -ಮಂತ್ರವನ್ನು -ಹಾಡನ್ನು ಚೆನ್ನಾಗಿ ಅರ್ಥ ಮಾಡಿಸಿ ಕೇಳಿಕೊಂಡು ಧ್ಯಾನದಲ್ಲಿ ಪ್ರಾರ್ಥಿಸುತ್ತಿದ್ದವನು. ಪೂರ್ಣ

ತನ್ನ ಜೊತೆಯವರ ಒಳಿತನ್ನೇ ಸದಾ ಬಯಸಿದವನು. 10. 2. 2001. ರ ಬೆಳ್ಳಿಗ್ಗೆ 10.30.ರ ಸಮಯದಲ್ಲಿ ಕಾರ್ಕಳದ ರಾಮಸಮುದ್ರದ ಕೆರೆಯಲ್ಲಿ ಮುಳುಗಿದ ತನ್ನ ಸಂಗಡಿಗರು ಮೇಲೆ ಬರಲು ಆಸರೆ ಕೊಟ್ಟು ಅವರುಗಳು ಇವನು ಮೇಲೆ ಬರಲು ಕೈ ನೀಡದೆ ಓಡಿ ಹೋಗುವಾಗಲೂ ಧೃತಿಗೆಡದೆ ಅದೂ ಒಂದು ಲೋಕವೆಂಬಂತೆ ಅಚ್ಚರಿಯಿಂದ ಕಣ್ಣುಚ್ಚಿ ತನ್ನ ಪ್ರಾಣ ಪಕ್ಷಿಯನ್ನೇ ಹಾರಲು ಬಿಟ್ಟವನು. ತನಗೆ ಎಲ್ಲಾ ಬರುತ್ತದೆಂದು ಅಹಂಕಾರ ಪಡದೆ ಜೊತೆಯವರೂ ತನ್ನ ಸಮಕ್ಕೆ ಸಾಗಬೇಕೆಂದು ಅವರಿಗೆ ಹೆಗಲು ಕೊಟ್ಟು ನಿಂತವನು. ಇವನನ್ನು 'ಪೂರ್ಣಯುಷ್ಯ' ವೆಂದು ಹೇಗೆ ಕರೆಯದೇ ಇರಲಿ?

ಅವನದೇ ವಯಸ್ಸಿನ ಅವನು ನಂಬಿದ್ದ ಗೆಳೆಯರು ಅವನನ್ನು ಮುಳುಗಲು ಬಿಟ್ಟು "ಅವನು ದೇವಸ್ಥಾನದಲ್ಲಿದ್ದಾನೆ" ಎಂದು ಸುಳ್ಳು ಹೇಳಿ ಮನೆಗೆ ಬಂದು ಪುಸ್ತಕಗಳನ್ನು ತೆಗೆದುಕೊಂಡು ಓಡಿ ಹೋದರು. ಅವರ ಈ ಹೇಡಿತನ ನನ್ನನ್ನು ಭಾದಿಸುತ್ತದೆ. ಪೂರ್ಣತೆಯೆಂಬುದು ಕರುಳ ವಚನವಾಗಿ ಮಿಡಿಯುತ್ತದೆ. □

# ಆ ೩೦ ದಿನಗಳ ಗೋಳು..?

(15ನೇ ಪುಟದಿಂದ)

ಸುತ್ತಲೇ ಬದುಕಿದ ಝುಹರಾಗೆ ಜೀವಂತವಿರುವಾಗಲೇ ನರಕದ ಪರಿಚಯವಾಗಿತ್ತು.

ಝುಹರಾ ಆರ್ಷದ್ ಅವರ ಅತ್ಯಂತ ಆತ್ಮೀಯ ವಿದ್ಯಾರ್ಥಿನಿ. ಅವರು ಮನೆಯಲ್ಲಿ ರೂಪಿಸಿಕೊಂಡ ಗ್ರಂಥಾಲಯವನ್ನು ವೀಕ್ಷಿಸಲು ಬಂದದ್ದೇ ದೊಡ್ಡ ತಪ್ಪು ಎನ್ನುವ ಹಾಗೆ ಆ ಅಧಿಕಾರಿ ಪ್ರಶ್ನೆ ಮಾಡುತ್ತಿದ್ದ. ಸುಖಾಸುಮನೇ ಅವರಿಬ್ಬರ ಮಧ್ಯೆ ಅನೈತಿಕ ಸಂಬಂಧ ಇರುವ ಬಗ್ಗೆ ಮತ್ತೆ ಮತ್ತೆ ಹೇಳುತ್ತಿದ್ದ. ಇದೆಲ್ಲವನ್ನೂ ಸಹಿಸಿಕೊಂಡು ಹಿಂಸೆಯನ್ನು ಅನುಭವಿಸುತ್ತಿರುವ ಝುಹರಾಗೆ ತನ್ನ ನೆಚ್ಚಿನ ಫ್ರೊಫೆಸರ್ ಅವರನ್ನು ಆತ ಅತ್ಯಂತ ತುಚ್ಛವಾಗಿ ಬೈಯ್ಯುವಾಗ ಆಕೆಗೆ ಸಹಿಸಲಾಗಲಿಲ್ಲ. ಸಿಟ್ಟು ತಡೆಯಲಾಗದೇ ಟಪಾರ್..! ಎಂದು ಆ ಅಧಿಕಾರಿಯ ಕೆನ್ನೆಗೆ ಒಂದೇಟು ಬಿಟ್ಟಳು. ಆತನ ಮುಖಕ್ಕೆ ರಕ್ತ ಮೆತ್ತಿದಂತಾಯಿತು. ಆಕೆಯ ಕುತ್ತಿಗೆಯನ್ನು ಜೋರಾಗಿ ಹಿಡಿದು ಎದುರಲ್ಲಿರುವ ಟೆಬಲ್ ಅಂಚಿಗೆ ಬಡ್.. ಎಂದು ಜಜ್ಜಿದ. ಝುಹರಾಳ ಕೆನ್ನೆ ಸೀಳಿ ರಕ್ತ ಚಿಲ್..! ಎಂದು ಚಿಮ್ಮಿತು. ಆ ಧಡೂತಿ ಅಧಿಕಾರಿ ಬರಬರ ನಡೆದವನೇ ಸ್ವಲ್ಪ ಹೊತ್ತಿನಲ್ಲಿ ಸೈತಾನನಾಗಿ ಪ್ರತ್ಯಕ್ಷವಾದ.

ಕೈಯಲ್ಲಿ ಹಿಡಿದು ತಂದ ಕತ್ತರಿಯಿಂದ ಆಕೆಯ ತಲೆ ಗೂದಲನ್ನು ಹೇಗಂದರೆ ಹಾಗೆ ಕತ್ತರಿಸಲು ಶುರು ಮಾಡಿದ. ಆ ಘಳಿಗೆ ಅವನ ವರ್ತನೆ ಯಾವ ವಿಕ್ಷಿಪ್ತನಿಗೂ, ಹುಚ್ಚನಿಗೂ ಕಡಿಮೆಯಿರಲಿಲ್ಲ. ಕೂದಲಿನೊಂದಿಗೆ ಆಕೆಯ ಚರ್ಮವೂ ಕಿತ್ತುಬರುವಂತೆ ಅತ್ಯಂತ ಕ್ರೂರವಾಗಿ ವರ್ತಿಸಿದ. ಝುಹರಾ ತಲೆಯಿಂದ ರಕ್ತ ವಸರುತ್ತಿದ್ದರೂ ಆ ಧೂರ್ತ ಅಧಿಕಾರಿ ಬಿಡಲಿಲ್ಲ. ಬೂಟು ಗಾಲಿಂದ ಒದೆಯುತ್ತಲೇ ಅವಳನ್ನು ಹಿಂಸಿಸಿದ ರೀತಿ ಅತ್ಯಂತ ಅಮಾನವೀಯವಾಗಿತ್ತು ಎನ್ನುವುದನ್ನು ಸ್ವತ: ಅವಳೇ ಒಂದು ಆಂಗ್ಲ ಪತ್ರಿಕೆಗೆ ಹೇಳುತ್ತಾಳೆ. ಸುಮಾರು ಮೂವತ್ತು ದಿನಗಳ ಕಾಲ ಯಾವುದೋ ಒಂದು ಪೂರ್ವಾಗ್ರಹದ ಹಿನ್ನೆಲೆಯಲ್ಲಿ ಝುಹರಾಳನ್ನು ಮತ್ತು ಆಕೆಯ ಸ್ನೇಹಿತರನ್ನು, ಪ್ರಾಧ್ಯಾಪಕ ಅರ್ಷದ್ ಅವರನ್ನು ಹಿಂಸಿಸಿದ ರೀತಿ ಅತ್ಯಂತ ಭೀಭತ್ಸವಾಗಿತ್ತು.

ಮೂವತ್ತು ದಿನಗಳ ನಂತರ ಅವಳನ್ನು ತೆಹ್ರಾನ್‌ನ ಹೊರವಲಯದಲ್ಲಿ ಬಿಟ್ಟಾಗ ನೆಟ್ಟಗೆ ನಡೆಯಲೂ ಬರುತ್ತಿರಲಿಲ್ಲ. ಮುಖದ ಮೇಲೆ ಎಲ್ಲೆಂದರಲ್ಲಿ ಕಚ್ಚುಗಳು, ಕುತ್ತಿಗೆಯ ಹಿಂದೆ ಆರದ ಗಾಯ, ಪರಪರನೇ ಕಿತ್ತಿದಂತಿರುವ ತಲೆಗೂದಲುಗಳನ್ನು ಕಂಡರೆ ಯಾರಿಗಾದರೂ ಹೆದರಿಕೆಯಾಗುತ್ತಿತ್ತು. ಆಕೆಯ ತಂದೆ ಒಬ್ಬ ನಿವೃತ್ತ ಆರ್ಮಿ ಆಫೀಸರ್, ಮನೆಗೆ ಪೋನ್ ಮಾಡಿ ಮಾತನಾಡಲು ಕೈಯಲ್ಲಿ ಒಂದೇ ಒಂದು ಕಾಯಿನ್ ಇಲ್ಲ. ಆ ಟೆಲಿಪೋನ್‌ಬೂತ್ ಎದುರಲ್ಲಿ ಬರಹೋಗುವ ಎಲ್ಲರ ಮುಖವನ್ನು ಮಿಕಿಮಿಕಿ ನೋಡುತ್ತ, ಕೊನೆಗೂ ಒಬ್ಬನ ಮುಂದೆ ಒಂದು ಕಾಯಿನ್‌ಗಾಗಿ ಕೈ ಚಾಚುತ್ತಾಳೆ. ತಂದೆಯೊಂದಿಗಿನ ಮಾತಿನಲ್ಲಿ ಅಳುವೇ ಹೆಚ್ಚಿಗೆ ತುಂಬಿಕೊಂಡಂತಿತ್ತು. ತನ್ನ ನೆಚ್ಚಿನ ಪ್ರೊಫೆಸರ್ ಮತ್ತು ತನ್ನ ಸಹಪಾಠಿ ಮಿತ್ರರನ್ನು ನೆನೆದು, ಒಂದೆಡೆ ಕುಳಿತು ಮುಖ ಮುಚ್ಚಿಕೊಂಡು ಗೋಳೋ ಎಂದು ಅಳುತ್ತಿದ್ದಳು. ಆಕೆಯ ಕೈಯಲ್ಲಿಯ ಬ್ರೆಡ್ ತುಂಡು ಹಸಿಯಾಗಿ ಮತ್ತೆ ಹಿಟ್ಟಾಗಿತ್ತು. □

# ಗೋಮುಖ ವ್ಯಾಘ್ರರ ಜಾನುವಾರು ಹತ್ಯೆ ನಿಷೇಧ ಕಾಯಿದೆ

**ವೈ. ಮರಿಸ್ವಾಮಿ**

ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ರಾಜ್ಯದಲ್ಲಿ ಅಧಿಕಾರ ಚುಕ್ಕಾಣಿಯನ್ನು ಹಿಡಿದಿರುವ ಬಿಜೆಪಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಗಿಂತಲೂ ಕೆಟ್ಟ ಹಾಗೂ ಭ್ರಷ್ಟ ಆಡಳಿತವನ್ನು ನೀಡುವುದರ ಮೂಲಕ ರಾಜ್ಯದ ಜನರ ಬದುಕನ್ನು ಮೂರಾಬಟ್ಟೆ ಮಾಡಿದೆ. 2 ರೂಪಾಯಿಗೆ ಕೇಜಿ ಅಕ್ಕಿ ಕೊಡುವ, ದಿನದ 24ಗಂಟೆ ರೈತರಿಗೆ ವಿದ್ಯುತ್ ಪೂರೈಸುವಂತಹ ಚುನಾವಣಾ ಪ್ರಣಾಳಿಕೆಗಳಿಗೆ ಎಂದೋ ಎಳ್ಳು ನೀರು ಬಿಡಲಾಗಿದೆ. ಆಡಳಿತ ಪಕ್ಷದ ಶಾಸಕರು -ಸಚಿವರುಗಳು ರಾಜ್ಯದ ನೆಲ ಜಲ ಸಂಪನ್ಮೂಲವನ್ನು ಹುರಿದು ಮುಕ್ಕರಿಸುತ್ತಿದ್ದಾರೆ.

ಅಸಮರ್ಥ ಆಡಳಿತ ಮತ್ತು ಜನವಿರೋಧಿ ಯೋಜನೆಗಳಿಂದ ಭವಿಷ್ಯದಲ್ಲಿ ರಾಜ್ಯದ ಮತದಾರರು ಬಿಜೆಪಿಗೆ ಬೆಂಬಲಿಸಲಾರರೆಂಬ ನಗ್ನಸತ್ಯ ಅರಿತಿರುವ ಪಕ್ಷದ ಮುಖಂಡರು ಹಾಗೂ ಆರ್‌ಎಸ್‌ಎಸ್, ಜನರನ್ನು ಲೂಟಿ ಮಾಡುವ ಮತ್ತು ಸಂಘಪರಿವಾರದ ಅಜೆಂಡಗಳನ್ನು ಜಾರಿಗೊಳಿಸುವ ಕಾರ್ಯಕ್ಕೆ ಕೈಹಾಕಿದ್ದಾರೆ. ಈ ಹಿನ್ನಲೆಯಲ್ಲಿಯೇ-ಉನ್ನತ ಶಿಕ್ಷಣ ಸಚಿವಾಲಯದ ಮೂಲಕ ನಡೆದ ಭಯೋತ್ಪಾದನೆಯ ವಿರುದ್ಧದ ವಿದ್ಯಾರ್ಥಿಗಳ ಆಂದೋಲನ, ಸಂಸ್ಕೃತ ವಿಶ್ವವಿದ್ಯಾಲಯದ ಸ್ಥಾಪನೆಯ ಯತ್ನ, ಕೃಷ್ಣದೇವರಾಯ ಪಟ್ಟಾಭಿಷೇಕದ 500ನೇ ವರ್ಷಾಚರಣೆ, ವಿಜಯನಗರ ಪುನಶ್ಚೇತನ ಟ್ರಸ್ಟ್‌ಗೆ ಕೊಡಲು ಹಂಪಿ ಕನ್ನಡ ವಿಶ್ವವಿದ್ಯಾಲಯದ 80 ಎಕರೆ ಭೂಮಿಗೆ ಕೈ ಹಾಕಿದ ಪ್ರಕರಣಗಳನ್ನು ನೋಡಬೇಕಾಗಿದೆ. ಗೋಹತ್ಯೆ ನಿಷೇಧ ಕಾಯಿದೆ ಜಾರಿಗಾಗಿ ನಡೆಯುತ್ತಿರುವ ಪಿತೂರಿಯೊಕೂಡ ಸಂಘ ಪರಿವಾರದ ಒಡೆದಾಳುವ ಕೋಮುವಾದಿ ರಾಜಾಕಾರಣದ ಅಜೆಂಡವಾಗಿದೆ.

ಭಾರತ ಬಹುಮುಖಿ ಸಂಸ್ಕೃತಿಯನ್ನು ಹೊಂದಿರುವ ದೇಶ, ಇಲ್ಲಿನ ಜನರು ವೈವಿಧ್ಯಮಯ ಸಂಸ್ಕೃತಿ ಮತ್ತು ಆಹಾರ ಪದ್ಧತಿಯನ್ನು ಹೊಂದಿದ್ದಾರೆ. ಸಸ್ಯಾಹಾರವಿರಲಿ, ಮಾಂಸಾಹಾರವಿರಲಿ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದ ಮನುಷ್ಯ ವಿವಿಧ ರೀತಿಯ ಆಹಾರ ಪದ್ಧತಿಯನ್ನು ಬೆಳೆಸಿಕೊಂಡಿದ್ದಾನೆ. ವಿವಿಧ ಜಾತಿ, ಭಾಷೆ, ಧರ್ಮ ಮತ್ತು ಸಂಪ್ರದಾಯಗಳನ್ನೊಳಗೊಂಡಿರುವ ಭಾರತೀಯರಲ್ಲಿ -ಹಸು, ಕುರಿ, ಮೇಕೆ, ಹಂದಿ, ನಾಯಿ, ಹಾವು, ಉಡ, ಓತಿಕ್ಯಾತ, ಮಳೆಹುಳು, ಕೆಂಜಿಗೆ, ಇರುವೆ, ಇಲಿ, ಹೆಗ್ಗಣ, ಬೆಕ್ಕು, ಮೊಲ, ನರಿ, ಕಾಡುಹಂದಿ, ಜಿಂಕೆ, ಮುಳ್ಳುಹಂದಿ, ನವಿಲು, ಗೀಜಿಗ, ಮುಂಗುಸಿ ಇತ್ಯಾದಿಗಳನ್ನು ಮಾಂಸಾಹಾರಕ್ಕೆ ಉಪಯೋಗಿಸುವ ಜನರಿದ್ದಾರೆ.

ಗೋವಿನ ಮಾಂಸ ಭಕ್ಷಣೆಯ ವಿರುದ್ಧ ಮಾತ್ರ ತಗಾದೆ ತೆಗೆಯುವ ಬಿಜೆಪಿ ಮತ್ತು ಸಂಘಪರಿವಾರದವರು ಇತರೆ ಪ್ರಾಣಿ, ಪಕ್ಷಿ ಮತ್ತು ಜಲಚರಗಳ ಹತ್ಯೆಯ ಕುರಿತು ಚಕಾರ ಎತ್ತುವುದಿಲ್ಲ. ಗೋಹತ್ಯೆಯನ್ನು ನಿಷೇಧ ಮಾಡಲು ಕೆಲವು ಕಾರಣಗಳನ್ನು ಇವರು ಮುಂದಿಡುತ್ತಾರೆ. ಅವುಗಳಲ್ಲಿ ಕೆಲವು ಕಾರಣಗಳನ್ನು ತಾರ್ಕಿಕ ಹಿನ್ನಲೆಯಲ್ಲಿ ನೋಡೋಣ.

**ಗೋವು ಹಿಂದುಗಳ ಪವಿತ್ರ ಮತ್ತು ಪೂಜ್ಯನೀಯ ಪ್ರಾಣಿಯಾಗಿರುವುದರಿಂದ, ಗೋಹತ್ಯೆ ಮಾಡಬಾರದು**



**ಭಾರತ ಬಹುಮುಖಿ ಸಂಸ್ಕೃತಿಯನ್ನು ಹೊಂದಿರುವ ದೇಶ, ಇಲ್ಲಿನ ಜನರು ವೈವಿಧ್ಯಮಯ ಸಂಸ್ಕೃತಿ ಮತ್ತು ಆಹಾರ ಪದ್ಧತಿಯನ್ನು ಹೊಂದಿದ್ದಾರೆ. ಸಸ್ಯಾಹಾರವಿರಲಿ, ಮಾಂಸಹಾರವಿರಲಿ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದ ಮನುಷ್ಯ ವಿವಿಧ ರೀತಿಯ ಆಹಾರ ಪದ್ಧತಿಯನ್ನು ಬೆಳೆಸಿಕೊಂಡಿದ್ದಾನೆ. ವಿವಿಧ ಜಾತಿ, ಭಾಷೆ, ಧರ್ಮ ಮತ್ತು ಸಂಪ್ರದಾಯಗಳನ್ನೊಳಗೊಂಡಿರುವ ಭಾರತೀಯರಲ್ಲಿ -ಹಸು, ಕುರಿ, ಮೇಕೆ, ಹಂದಿ, ನಾಯಿ, ಹಾವು, ಉಡ, ಓತಿಕ್ಯಾತ, ಮಳೆಹುಳು, ಕೆಂಜಿಗೆ, ಇರುವೆ, ಇಲಿ, ಹೆಗ್ಗಣ, ಬೆಕ್ಕು, ಮೊಲ, ನರಿ, ಕಾಡುಹಂದಿ, ಜಿಂಕೆ, ಮುಳ್ಳುಹಂದಿ, ನವಿಲು, ಗೀಜಿಗ, ಮುಂಗುಸಿ ಇತ್ಯಾದಿಗಳನ್ನು ಮಾಂಸಹಾರಕ್ಕೆ ಉಪಯೋಗಿ**

ಭಾರತದಲ್ಲಿ ಕೆಲವು ಪ್ರಾಣಿಗಳು ಕೆಲವರಿಗೆ ಪೂಜ್ಯನೀಯವಾದರೆ,ಅದೇ ಪ್ರಾಣಿಗಳು ಮತ್ತೆ ಕೆಲವರಿಗೆ ಭಕ್ಷಣೀಯವಾಗಿವೆ. ಪೂಜ್ಯನೀಯವಾದ ಹಸುವನ್ನು ಹಿಂದೂಗಳು ತಿಂದರೆ ಅಪಚಾರ ಅಪವಿತ್ರವಾಗುತ್ತದೆ ಎಂದು ಒಪ್ಪಬಹುದು. ಆದರೆ ಹಿಂದೂಗಳಲ್ಲದ ದಲಿತ, ಮುಸ್ಲಿಂ, ಕ್ರೈಸ್ತ ಮುಂತಾದ ಸಮುದಾಯಗಳಿಗೆ ಪವಿತ್ರವೂ ಅಲ್ಲ. ಪೂಜನೀಯ ಪ್ರಾಣಿಯೂ ಅಲ್ಲ, ಇಂತಹ ಸಮುದಾಯಗಳ ಮೇಲೆ ಹಿಂದುತ್ವವಾದಿಗಳು ತಮ್ಮ ಅಭಿಪ್ರಾಯವನ್ನು ಹೇರುವುದು ಸಮಂಜಸವೇ?

ಹಿಂದುಗಳು ಎಂದರೆ ವೈದಿಕ ಮೌಲ್ಯಗಳನ್ನು ಅನುಸರಿಸುವ, ಬ್ರಾಹ್ಮಣ್ಯದ ಗುಲಾಮರಾಗಿರುವ ಶೇ.15ರಷ್ಟು ಜನ ಮಾತ್ರ.

ಈ ಅಲ್ಪ ಸಂಖ್ಯಾತರು ಈ ದೇಶದ ಬಹುಸಂಖ್ಯಾತ ಜನರು ಗೋಮಾಂಸ ತ್ಯಜಿಸಿ, ಅದನ್ನು ಪೂಜಿಸಬೇಕೆಂದು ಅಪೇಕ್ಷಿಸುವುದು ಸರಿಯೇ? ಅದೇ ರೀತಿಯಲ್ಲಿ ಗೋಮಾಂಸ ತಿನ್ನುವವರು, ಪಕ್ಕಾ ಸಸ್ಯಾಹಾರಿಗಳೆಂದು ಕರೆದು ಕೊಳ್ಳುವವರು ಕುಂಬಳಕಾಯಿ ತಿನ್ನಬೇಡಿ ಎಂದು ಎಂದಾದರೂ ಆಗ್ರಹಿಸಿದ್ದಾರೆಯೇ? ಭಾರತದ ಸಂವಿಧಾನವು ಆಯ್ಕೆಯ ಸ್ವಾತಂತ್ರ್ಯವನ್ನು ಆಹಾರದ ಹಕ್ಕನ್ನು ಪ್ರತಿಯೊಬ್ಬ ನಾಗರೀಕನಿಗೂ ಕೊಟ್ಟಿರುವಾಗ, ಗೋವಿಗೆ ಪೂಜ್ಯನೀಯ ಸ್ಥಾನ ಕಲ್ಪಿಸಿ, ಬಹುಸಂಖ್ಯಾತರ ಆಯ್ಕೆಯ – ಆಹಾರದ ಹಕ್ಕನ್ನು ಹೊಸಕಿ ಹಾಕಲು ಹೊರಟಿರುವುದು ಫ್ಯಾಸಿಸ್ಟ್ ಧೋರಣೆಯಾಗಿದೆ.

**ಗೋಮಾಂಸ ತಿನ್ನುವುದು ಸಾಮಾಜಿಕವಾಗಿ –ಸಾಂಸ್ಕೃತಿಕವಾಗಿ ಕೀಳು ಪದ್ಧತಿ. ಇದರ ಸೇವನೆಯಿಂದ ಮನುಷ್ಯ ಕ್ರೂರಿಯಾಗುತ್ತಾನೆ.**

ಈ ಕಾರಣಗಳಿಂದ ಗೋಮಾಂಸ ಸೇವನೆಯನ್ನು ವರ್ಜಿಸಬೇಕು ಎನ್ನುವುದು ಗೋಪುತ್ರರ ವಾದ. ಗೋಮಾಂಸ, ದನದ ಮಾಂಸ, ದನದ ಬಾಡು, ದೊಡ್ಡ ಬ್ಯಾಟಿ, ಬಡಾಗೋಷ್, Beef ಎಂದು ಕರೆಯಿಸಿ ಕೊಳ್ಳುವ– ಗೋಮಾಂಸವನ್ನು ಸೇವಿಸುವುದನ್ನು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಕೀಳು ಎಂದು ಅದನ್ನು ಸೇವಿಸುವ ಸಮುದಾಯಗಳು ಎಂದೂ Feel ಮಾಡಿಲ್ಲ. ಅದರ ಬದಲು ಹೆಮ್ಮೆಯ ಮನೋಭಾವನೆಯನ್ನು ಬೆಳಸಿಕೊಂಡಿವೆ.

ದಷ್ಟ ಪುಷ್ಟವಾಗಿರುವವರನ್ನು ದನ ಬೆಳೆದಂತೆ ಬೆಳೆದಿದ್ದಾನೆಂದೂ, ಮುನ್ನುಗ್ಗುವ ಸ್ವಾಭಾವದವರನ್ನು ಗೂಳಿಯಂತೆ ನುಗ್ಗುವವರೆಂದೂ, ಹೆಚ್ಚು ಊಟ ಮಾಡುವವರನ್ನು ದನದಂತೆ ತಿನ್ನುವವರೆಂದೂ ಹೆಚ್ಚು ಭಾರ ಹೊರುವವರನ್ನು ದನದಂತೆ ತೂಕ ಹೋರುವವರೆಂದೂ ಹೋಲಿಕೆ ಮಾಡಿ ಸಂಭ್ರಮಿಸುವ ಪರಿಪಾಟ ಈಗಲೂ ತಳ ಸಮುದಾಯಗಳಲ್ಲಿದೆ. ದನದ ಮಾಂಸದ ಸೇವನ ಶೌರ್ಯ, ಪುರುಷತ್ವ ಮತ್ತು ಸಾಂಸ್ಕೃತಿಕ ಹಿರಿಮೆಯನ್ನಾಗಿ ಈ ಸಮುದಾಯಗಳು ಕಾಣುತ್ತವೆ.

ದನದ ಮಾಂಸ–Beef ಅಂತರರಾಷ್ಟ್ರೀಯ ಆಹಾರ ಪದ್ಧತಿಯೂ ಹೌದು. ಕ್ರೈಸ್ತ, ಇಸ್ಲಾಮ್ ಮತ್ತು ಬುದ್ಧಿಸ್ಟ್ ದೇಶಗಳಲ್ಲಿ Beef ಒಂದು Luxuriou ಆಹಾರ ಪದ್ಧತಿಯಾಗಿದೆ. ಹಾಗೆಯೇ ದನದ ಮಾಂಸ ಸೇವನೆ–ಮುಂದುವರಿದ ರಾಷ್ಟ್ರಗಳ ಪ್ರಮುಖ ಆಹಾರ, ಉದಾಹರಣೆಗೆ– ಅಮೇರಿಕಾ. Beef item ಇಲ್ಲದೇ ಯಾವುದೇ ಊಟ ತಿಂಡಿ–ತಿನಿಸನ್ನು ಅಲ್ಲಿ ಕಲ್ಪನೆ ಮಾಡಿಕೊಳ್ಳಲಿಕ್ಕೂ ಸಾಧ್ಯವಿಲ್ಲ.

**ದೊಡ್ಡ ದೊಡ್ಡ ಕೈಗಾರಿಕೆಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ, ನೈಸ್‌ನಂತಹ ದಗಾಕೋರ ಕಾರಿಡಾರ್‌ಗಳಿಗೆ, ವಿಶೇಷ ಆರ್ಥಿಕ ವಲಯದಂತಹ–ವಿಶೇಷ ಶೋಷಕ ವಲಯಗಳಿಗೆ, ಐಟಿಬೀಟಿ ಲೂಟಿಕಾರರಿಗೆ, ಮಠಾಧಿಪತಿಗಳಿಗೆ ಮನಬಂದಂತೆ ರೈತರ ಕೃಷಿಭೂಮಿ ಯನ್ನು ಕಸಿದು ಹಂಚುತ್ತಿರುವ ಬಿಜೆಪಿ ಸರ್ಕಾರ ಕೃಷಿಯನ್ನು ನಿರ್ನಾಮ ಮಾಡುತ್ತಿದೆ. ಇದರ ಪರಿಣಾಮವಾಗಿ ಬೆಂಗಳೂರು ಸುತ್ತಮುತ್ತ ಶೇ.35ರಷ್ಟು ಕೃಷಿ ಚಟುವಟಿಕೆಗಳು ಕುಂಟಿತಗೊಂಡಿವೆ.ಗಣಿಗಾರಿಕೆಯಿಂದ ಬಳ್ಳಾರಿ, ತುಮಕೂರು, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಕೃಷಿ ವಲಯ ಬತ್ತಿ ಹೋಗುತ್ತಿದೆ.**

ಗೋಮಾಂಸ ಸೇವನೆಯಿಂದ ಮನುಷ್ಯ ಕ್ರೂರಿಯಾಗುತ್ತಾನೆ ಎಂದು ಪ್ರತಿಪಾದನೆ ಮಾಡುತ್ತಿರುವ ಮನುವಾದಿಗಳಿಗಿಂತಲೂ ಕ್ರೂರಿಗಳು ಪ್ರಪಂಚದಲ್ಲಿ ಇನ್ಯಾರಾದರೂ ಇದ್ದಾರೆಯೇ? ಇಡೀ ಸಮಾಜವನ್ನೇ ಶ್ರೇಣೀಕೃತ ಜಾತಿ ಪದ್ಧತಿಯಡಿ ಛಿದ್ರಗೊಳಿಸಿ, ದಲಿತ, ಹಿಂದುಳಿದ ಮತ್ತು ಶೂದ್ರ ಸಮುದಾಯಗಳಿಗೆ ಸ್ವಾಭಿಮಾನ, ಘನತೆಯನ್ನು ನಿರಾಕರಿಸಿದವರು–ಕೇವಲ ಸಸ್ಯಾಹಾರಿಗಳು ಎಂದಮಾತ್ರಕ್ಕೆ ಮಾನವೀಯತೆಯ ಪ್ರತೀಕವಾಗುವರೇ? ತಮ್ಮನ್ನು ತಾವು ಶುದ್ಧ ಶಾಖಾಹಾರಿಗಳು ಸಸ್ಯಾಹಾರಿಗಳು ಎಂದು ಕರೆದು ಕೊಳ್ಳುವ ಬ್ರಾಹ್ಮಣ,ಬನಿಯಾ,ಮಾರ್ವಾಡಿ,ಜೈನ ಮುಂತಾದ ಜಾತಿಗಳಿಗೆ ಸೇರಿದ ಸಸ್ಯಾಹಾರಿಗಳು ಇಂದಿಗೂ ಹೇಗೆ ಈ ನೆಲದ ಬಡವರ ಶ್ರಮವನ್ನು –ರಕ್ತವನ್ನು ಹೀರುತ್ತಿದ್ದಾರೆ ಎಂಬುದನ್ನು ನೆನಪಿಸಿಕೊಂಡರೆ, ನಿಜವಾದ ಕ್ರೂರಿಗಳು ಯಾರು ಎಂದು ಸ್ಪಷ್ಟವಾಗಿ ಗೋಚರಿಸುತ್ತದೆ.

**ದನದ ಮಾಂಸ ಸೇವನೆಯಿಂದ ಬೌದ್ಧಿಕ ಬೆಳವಣಿಗೆ ಯಾಗುವುದಿಲ್ಲ.**

ಪ್ರತಿಭೆ–ಬೌದ್ಧಿಕ ಬೆಳವಣಿಗೆಯನ್ನು ಗೋಮಾತೆ ಪುತ್ರರು ತಮ್ಮ ಪೇಟೆಂಟ್ ಎಂದು ತಿಳಿದುಕೊಂಡಿದ್ದಾರೆ. ವಿಶ್ವದ ಪ್ರಾಚೀನ ನಾಗರೀಕತೆಗಳಲ್ಲಿ ಒಂದಾದ ಹರಪ್ಪ–ಮೊಹೆಂಜಾದಾರೋ ನಾಗರೀಕತೆಯ ವಾರಸುದಾರರಿಗೆ–ನೀವು ದನದ ಮಾಂಸ ತಿನ್ನುವುದರಿಂದ ದಡ್ಡರಾಗುತ್ತಿದ್ದೀರೆಂದು ಹೇಳುತ್ತಿದ್ದಾರೆ! ಎಣ್ಣೆ ತೆಗೆಯುವ ಗಾಣಿಗರು, ಉಪ್ಪು ತಯಾರಿಸುವ ಉಪ್ಪಾರರು, ಚಪ್ಪಲಿ ತಯಾರಿಸುವ ಚಮ್ಮಾರರು, ಕಟ್ಟಡ ಕಟ್ಟುವ ವಡ್ಡರು, ಕೂದಲು ಕತ್ತರಿಸುವ ಸವಿತಾ ಸಮಾಜದವರು ಹೊಂದಿರುವ ಪ್ರತಿಭೆಯಲ್ಲಿ, ಯಾವುದಾದರೂ ಒಂದು ಪ್ರತಿಭೆಯನ್ನು –ಕೌಶಲ್ಯವನ್ನು (Merit skill) ಈ ಸಸ್ಯಾಹಾರಿ ಮೆರಿಟ್‌ವಾಲಾಗಳು ಹೊಂದಿದ್ದಾರೆಯೇ? ಮೆರಿಟ್ ಕುರಿತು ಗಂಟೆಗಟ್ಟಲೆ ಕೊರೆಯುವ ಮನುವಾದಿಗಳಿಂದ ಈ ದೇಶಕ್ಕೆ ಸಂವಿಧಾನ ನೀಡಿದ ಡಾ॥ ಬಾಬಾಸಾಹೇಬ್ ಅಂಬೇಡ್ಕರರಂತಹ ಒಬ್ಬ ಮಹಾನ್ ಪ್ರತಿಭೆಯನ್ನು ರೂಪಿಸಲು ಏಕೆ ಸಾಧ್ಯವಾಗಿಲ್ಲ?

ದನದ ಮಾಂಸ ತಿನ್ನುವುದಕ್ಕೂ ಬೌದ್ಧಿಕ ಬೆಳವಣಿಗೆಗೂ, ಕ್ರೂರತ್ವಕ್ಕೂ ಯಾವ ರೀತಿಯ ಸಂಬಂಧವಿದೆ? ದನದ ಮಾಂಸದಿಂದ ವ್ಯಕ್ತಿಯ ಬೆಳವಣಿಗೆ ಮತ್ತು ಆರೋಗ್ಯಕ್ಕೆ ಯಾವ ರೀತಿಯ ಪ್ರಯೋಜನವಿದೆ ಎನ್ನುವುದನ್ನು ಆಹಾರ ತಜ್ಞರು, ವಿಜ್ಞಾನಿಗಳು ಮತ್ತು ವೈದ್ಯರು ಬಾಯಿ ಬಿಡಬೇಕು. ಅದರ ಬದಲು ಅವೈಜ್ಞಾನಿಕ ಪ್ರತಿಗಾಮಿ ವಿಚಾರಗಳನ್ನೇ ತಲೆಯಲ್ಲಿ ತುಂಬಿಕೊಂಡಿರುವ ಮಠಾಧಿಪತಿಗಳು ಈ ಎಲ್ಲಾ ವಿಷಯಗಳ ವಕ್ತಾರರಂತೆ ವರ್ತಿಸುತ್ತಿರುವುದು ಹಾಸ್ಯಾಸ್ಪದವಾಗಿದೆ.

**ಗೋಹತ್ಯೆ ನಿಷೇಧಿಸುವುದರಿಂದ ಕೃಷಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ.**

ದೊಡ್ಡ ದೊಡ್ಡ ಕೈಗಾರಿಕೆಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ, ನೈಸ್‌ನಂತಹ ದಗಾಕೋರ ಕಾರಿಡಾರ್‌ಗಳಿಗೆ, ವಿಶೇಷ ಆರ್ಥಿಕ ವಲಯದಂತಹ–ವಿಶೇಷ ಶೋಷಕ ವಲಯಗಳಿಗೆ, ಐಟಿ ಬೀಟಿ ಲೂಟಿಕಾರರಿಗೆ, ಮಠಾಧೀಪತಿಗಳಿಗೆ ಮನಬಂದಂತೆ ರೈತರ ಕೃಷಿ, ಭೂಮಿಯನ್ನು ಕಸಿದು ಹಂಚುತ್ತಿರುವ ಬಿಜೆಪಿ ಸರ್ಕಾರ. ಕೃಷಿಯನ್ನು ನಿರ್ನಾಮ ಮಾಡುತ್ತಿದೆ. ಇದರ ಪರಿಣಾಮವಾಗಿ ಬೆಂಗಳೂರು ಸುತ್ತಮುತ್ತ ಶೇ.35ರಷ್ಟು ಕೃಷಿ ಚಟುವಟಿಕೆಗಳು ಕುಂಟಿತಗೊಂಡಿವೆ. ಗಣಿಗಾರಿಕೆಯಿಂದ ಬಳ್ಳಾರಿ, ತುಮಕೂರು, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಕೃಷಿವಲಯ ಬತ್ತಿ ಹೋಗುತ್ತಿದೆ. ಇದರಿಂದ ತರಕಾರಿ ಮತ್ತು ಆಹಾರ ಧಾನ್ಯಗಳನ್ನು ಬೆಳೆಯುವ ಭೂಮಿಯ ವಿಸ್ತೀರ್ಣ ಕುಗ್ಗಿ, ಜನಸಾಮಾನ್ಯರ ಕೈಗೆಟುಕವ ರೀತಿಯಲ್ಲಿ ತರಕಾರಿ ಮತ್ತು ಆಹಾರ ಧಾನ್ಯಗಳ ಬೆಲೆಗಳು ತಾರಕಕ್ಕೇರಿವೆ.

ಮತ್ತೊಂದು ಕಡೆ ಇಂದಿನ ಕೃಷಿ ಕ್ಷೇತ್ರ ಯಾಂತ್ರೀಕರಣಗೊಂಡಿದೆ. ವಿಶೇಷವಾಗಿ ಕಬ್ಬು–ಭತ್ತ ಬೆಳೆಯುವ ಪ್ರದೇಶಗಳಲ್ಲಂತೂ ಎತ್ತುಗಳಿಂದ ಕೃಷಿ ಚಟುವಟಿಕೆಗಳನ್ನು ಮಾಡುವ ಪದ್ಧತಿ ಶೇ.80ರಷ್ಟು ಕಡಿಮೆಯಾಗಿದೆ. ಕೃಷಿ ಕ್ಷೇತ್ರ ಯಾಂತ್ರೀಕರಣಕ್ಕೆ ಒಳಗಾಗುವುದಕ್ಕೆ ಮುಂಚೆಯೇ ಗೋಹತ್ಯೆ–ಗೋಮಾಂಸ ಭಕ್ಷಣೆಯಿಂದ ಕೃಷಿ ಚಟುವಟಿಕೆಗಳಿಗೆ ಯಾವುದೇ ಹೊಡೆತ ಬೀಳಲಿಲ್ಲ. ಇಂದು ಕೃಷಿ ಕ್ಷೇತ್ರ ಬಹುತೇಕ ಯಾಂತ್ರೀಕರಣಕ್ಕೊಳಗಾಗಿರುವಾಗ ಗೋಹತ್ಯೆಯಿಂದ ಅದು ಹೇಗೆ ಕೃಷಿ ಚಟುವಟಿಕೆಗಳಿಗೆ ಹೊಡೆತ ಬೀಳುತ್ತದೆ? ಗೋಹತ್ಯೆ ನಿಷೇಧದಿಂದ ಹೇಗೆ ಪ್ರೋತ್ಸಾಹ ನೀಡಿದಂತಾಗುತ್ತದೆ?

**ಗೋಮಾತೆಯ ಒಡಲಲ್ಲಿ 33ಕೋಟಿ ದೇವಾನು ದೇವತೆಗಳು ವಾಸಿಸುತ್ತಾರೆ. ಗೋಹತ್ಯೆಗಿಂತ ಮಿಗಿಲಾದ ಪಾಪ ಬೇರಿನ್ಯಾವುದಿಲ್ಲ.**

ಈ ವಿತಂಡವಾದದಲ್ಲಿ ಯಾವುದೇ ಹುರುಳಿಲ್ಲ. 37ವರ್ಷದ ನನ್ನ ಜೀವನದಲ್ಲಿ ಇದುವರೆಗೂ ಸಾವಿರಾರು ಹಸುಗಳ ಮಾಂಸವನ್ನು ಸವಿದಿದ್ದೇನೆ. ನಾನು ಊಟ ಮಾಡುವಾಗ ಗೋವಿನ ಮಾಂಸ ಮೂಳೆಯಲ್ಲಿ ಯಾವುದೇ ದೇವ ದೇವತೆ ವಾಸವಾಗಿರುವ ಕುರುಹು ಸಿಕ್ಕಿಲ್ಲ. ಮಾಂಸ ಅಗಿದು ತಿನ್ನುವಾಗ ಯಾವ ದೇವರೂ ಹಲ್ಲಿಗೆ ಸಿಕ್ಕಿಹಾಕಿಕೊಂಡಿಲ್ಲ! ಇದು ಕೇವಲ ನನ್ನೊಬ್ಬನ ಅನುಭವವಲ್ಲ. ದನದ ಮಾಂಸ ತಿನ್ನುವ ಎಲ್ಲರ ಅನುಭವವೂ ಇದೇ ಆಗಿರುತ್ತದೆ ಎಂದುಕೊಂಡಿದ್ದೇನೆ.

'ಜೀವ' ಎನ್ನುವುದು ಕೇವಲ ಪ್ರಾಣಿ,ಪಕ್ಷಿ ಮತ್ತು ಮಾನವ ಕುಲಕ್ಕೆ ಸೀಮಿತವಾಗಿಲ್ಲ. ಭಾರತದ ಸಸ್ಯ ಶಾಸ್ತ್ರದ ವಿಜ್ಞಾನಿ ಸರ್. ಜಗದೀಶ್ ಚಂದ್ರಬೋಸ್‌ರವರು ಸಸ್ಯಗ

ಳಿಗೂ ಜೀವವಿದ ಎಂಬ ಸಂಶೋಧನೆಯಿಂದ ಜಗದ್ವಿಖ್ಯಾತರಾದುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ. ಸಸ್ಯಗಳಿಗೂ ಜೀವವಿರುವುದರಿಂದ್ಲ ಅವುಗಳನ್ನು ಕಟಾವು ಮಾಡಿದರೆ ಪಾಪ ಕಟ್ಟಿಕೊಂಡಂತಾಗುತ್ತದೆ ಎಂದು ಕೈ ಕಟ್ಟಿಕೊಂಡು ಕುಳಿತರೆ, ಮನುಷ್ಯಪ್ರಾಣಿಗೆ ಉಳಿಗಾಲವಿದೆಯೇ?

ಇನ್ನು ಗೋವಿಗೆ ಹುಲ್ಲು ಮೇವಿನ ಬದಲು ಏನು ಹಾಕಬೇಕು? ಮನುವಾದಿಗಳು ತಮ್ಮ ಹಣೆಯ ಮೇಲೆ ಧರಿಸುವ ವಿವಿಧ ಗಾತ್ರ ಮತ್ತು ನಮೂನೆಯ ನಾಮಗಳನ್ನು ಬಳಿದುಕೊಳ್ಳಲು ಬೇಕಾದ, ವಿಭೂತಿಯನ್ನು ತಯಾರಿಸುವುದು ಹೇಗೆ?

ಸಸ್ಯಗಳಿಗೆ ಜೀವವಿದೆ- ಅವು ಉಸಿರಾಡುತ್ತವೆ ಎನ್ನುವುದರ ಜೊತೆಗೆ ಅವು ಸಂಕೇತ ಭಾಷೆಯಲ್ಲಿ ಮಾತನಾಡುತ್ತವೆ ಎನ್ನುವ ವಿಷಯದ ಕುರಿತು ಪೆನ್ಸಿಲ್ವೇನಿಯಾದ ಎಬರ್ಟ್ ಕಾಲೇಜಿನ ಭಾರತೀಯ ಮೂಲದ ರಮೇಶ್ ರೈನಾ ಎಂಬ ವಿಜ್ಞಾನಿ ಸಂಶೋಧನೆ ನಡೆಸಿದ್ದಾರೆ. ಸಸ್ಯಗಳ ಯಾವ ಅಂಗಾಂಶದಿಂದ ಎಂಥ ಸಂಕೇತ ಹೊರ ಹೊಮ್ಮುತ್ತದೆ ಎಂಬುದನ್ನು ಸಸ್ಯಗಳ ಜೀವಕೋಶದ ವಿಚ್ಛೇದನೆಯಿಂದ ಅಧ್ಯಯನ ಮಾಡಿದ್ದಾರೆ. ವಿಜ್ಞಾನ ಇಷ್ಟೊಂದು ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವಾಗ ಪಾಪ- ಪುಣ್ಯ-ಕರ್ಮದಂತಹ ಅವೈಜ್ಞಾನಿಕ ವಿಚಾರಗಳಿಗೆ ಜೋತು ಬಿದ್ದು, ರಾಜ್ಯದ ಜನತೆಯನ್ನು ಸಾವಿರಾರು ಶತಮಾನಗಳ ಹಿಂದಕ್ಕೆ ಎಳೆದೊಯ್ಯುವ ಭಾರವನ್ನು ಹಸುವಿನ ಹೆಗಲಿಗೇರಿಸಿರುವುದು ಸರಿಯೇ?

**ಸ್ವತಹ ಅಂಬೇಡ್ಕರರೇ ಸಂವಿಧಾನದಲ್ಲಿ ಗೋಹತ್ಯೆ ನಿಷೇಧಕ್ಕೇ ಅವಕಾಶ ಮಾಡಿಕೊಟ್ಟಿದ್ದಾರೆ**

ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಡಾ.ಬಾಬಾಸಾಹೇಬ್ ಅಂಬೇಡ್ಕರರ ವಿಚಾರ ಮತ್ತು ನಿಲುವುಗಳಿಗೆ ವಿರುದ್ಧವಾಗಿ ಅನೇಕ ವಿಷಯಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಅವುಗಳಲ್ಲಿ ಜಾನುವಾರು ಸಂರಕ್ಷಣಾ ಕಾಯಿದೆಯೂ ಒಂದು (ಪರಿಚ್ಛೇದ 48) ಈ ಕಾಯಿದೆಯ ಅನುಷ್ಠಾನದ ಕುರಿತು ಅಪಾರ ಕಳಕಳಿ ವ್ಯಕ್ತಪಡಿಸುತ್ತಿರುವ ಮನುವಾದಿಗಳು-ರಾಷ್ಟ್ರದ ಉದ್ದಗಲಕ್ಕೆ ರಾಜಾರೋಷವಾಗಿ ನಡೆಯುತ್ತಿರುವ ಅಸ್ಪೃಶ್ಯತೆಯ ಆಚರಣೆ, ಸಾಮಾಜಿಕ ಬಹಿಷ್ಕಾರ, ದಲಿತರ ಕಗ್ಗೊಲೆ, ದಲಿತ ಮಹಿಳೆಯರ ಮೇಲಿನ ಅತ್ಯಾಚಾರಗಳಿಗೆ ತಮ್ಮ ಪಂಚೇಂದ್ರಿಯಗಳನ್ನು ಮುಚ್ಚಿಕೊಂಡಿರುವುದೇಕೆ?

ಅಂಬೇಡ್ಕರರು ರಚಿಸಿದ ಭಾರತದ ಸಂವಿಧಾನದಲ್ಲಿನ ಜೀವಿಸುವ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕು ಮುಂತಾದ ಮೂಲಭೂತ ಹಕ್ಕುಗಳ ಉಲ್ಲಂಘನೆ ಸರ್ವವ್ಯಾಪಿಯಾಗಿರುವಾಗ, ಈ ಹಕ್ಕುಗಳ ರಕ್ಷಣೆಗಾಗಿ ಏಕೆ ಪರಿಣಾಮಕಾರಿಯಾಗಿ ಕಾನೂನನ್ನು ಜಾರಿಗೊಳಿಸಲು ಆಸಕ್ತಿ ತೋರಿಸುತ್ತಿಲ್ಲ.?

ದಲಿತರು ಹಿಂದೂಗಳಲ್ಲ, ದಲಿತರು ಒಂದು ಪ್ರತ್ಯೇಕ ಜನಾಂಗ ಎಂದು ಪ್ರತಿಪಾದಿಸಿದ ಅಂಬೇಡ್ಕರರು, ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ದಲಿತರು ಹಿಂದೂಗಳಿಗಿಂತ ಪ್ರತ್ಯೇಕ ಸಮುದಾಯ ಎಂದು ನಿರೂಪಿಸಲು, ಹಿಂದೂಗಳು ಗೋವನ್ನು ಪೂಜಿಸಿದರೆ-ದಲಿತರು ಗೋಮಾಂಸವನ್ನು ಸೇವಿಸುತ್ತಾರೆ ಎಂದು ದಾಖಲಿಸಿದಾರೆ.

ಅಂಬೇಡ್ಕರರ ದೃಷ್ಟಿಕೋನದಲ್ಲಿ ಹಿಂದೂಗಳೇ ಅಲ್ಲದ ದಲಿತರನ್ನು ಹಿಂದೂಗಳನ್ನಾಗಿ ಮತಾಂತರ ಮಾಡಲು ಬಿಜೆಪಿ ಮತ್ತು ಸಂಘಪರಿವಾರ 'ಗೋಮುಖಿ ಸಾಂಸ್ಕೃತಿಕ ರಾಜಕಾರಣದ ದಾಳ ಉರುಳಿಸಿವೆ. ಈ ದೇಶದ ಮೂಲ ನಿವಾಸಿಗಳ ಸಂಸ್ಕೃತಿಯ ಮೇಲೆ ವೈದಿಕ ಸಂಸ್ಕೃತಿಯ ಆಕ್ರಮಣ ನಡೆಸಿವೆ. ಒಂದು ಕಾಲದಲ್ಲಿ ಬ್ರಾಹ್ಮಣ್ಯದ ವಿರುದ್ಧ ಬಂಡಾಯ ರೂಪದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಜೈನ ಮತ್ತು ಲಿಂಗಾಯತ ಪರಂಪರೆಯ ಮಠಗಳು, ಇಂದು ತಮ್ಮ ಮೂಲ ಸಿದ್ಧಾಂತವನ್ನೇ ಧಿಕ್ಕರಿಸಿ ವೈದಿಕ ಶಾಹಿಯ ಚಾಕರಿಗಿಳಿದಿರುವುದು ಚಾರಿತ್ರಿಕ ದುರಂತವಾಗಿದೆ.

ಈಗಾಗಲೇ ಭಾರತದ ಸಂವಿಧಾನಕ್ಕೆ ಸುಮಾರು 90 ಸಲ ತಿದ್ದುಪಡಿಯಾಗಿರುವುದರಿಂದ, ಕೇಂದ್ರದ ಯು.ಪಿ.ಎ. ಸರ್ಕಾರ ಜಾನುವಾರು ಸಂರಕ್ಷಣಾ ಕಾಯಿದೆಗೆ ಸಮಗ್ರ ತಿದ್ದುಪಡಿ ತರಬೇಕು ಇಲ್ಲವೇ ಸಂಪೂರ್ಣವಾಗಿ ಸಂವಿಧಾನದಿಂದ ತೆಗೆದು ಹಾಕಬೇಕು.

**ರೋಗಿಷ್ಠ ಕರ್ನಾಟಕ ಕಟ್ಟುವತ್ತ -ಬಿಜೆಪಿ ಚಿತ್ತ**

2001ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆ 5ಕೋಟಿ 28ಲಕ್ಷ ಇದರಲ್ಲಿ ಶೇ.40ರಷ್ಟು (ಸುಮಾರು 2ಕೋಟಿ 16ಲಕ್ಷ) ಮಕ್ಕಳು 0-18ವರ್ಷದೊಳಗಿನ ಮಕ್ಕಳಾಗಿದ್ದಾರೆ 1.29.651 ಮಕ್ಕಳು ವಿಕಲಚೇತನರಾಗಿದ್ದಾರೆ. ಇವರಲ್ಲಿ ಶೇ.43ರಷ್ಟು 3ವರ್ಷದೊಳಗಿನ ಮಕ್ಕಳು ಕಡಿಮೆ ತೂಕ ಹೊಂದಿದ್ದಾರೆ. ಶೆ.52ರಷ್ಟು ಮಕ್ಕಳು ತೀವ್ರ ರೀತಿಯ ಅಪೌಷ್ಟಿಕತೆಯಿಂದ ನರಳುತ್ತಿದ್ದು, ಈ ಸಂಖ್ಯೆ ದಕ್ಷಿಣ ಭಾರತದ ಇತರೆ ರಾಜ್ಯಗಳಿಗಿಂತ ಅತ್ಯಧಿಕವಾಗಿದೆ ಎಂದು 2005-06ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಧೃಡಪಡಿಸಿದೆ.

ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮಕ್ಕಳಿಗೆ ಮೊಟ್ಟೆ ವಿತರಿಸುವ ಕೇಂದ್ರ ಸರ್ಕಾರದ ಯೋಜನೆಗೆ ಈಗಾಗಲೇ ಕಲ್ಲು ಹಾಕಿರುವ ರಾಜ್ಯ ಸರ್ಕಾರ ಈಗ ಜಾನುವಾರು ಹತ್ಯೆ ನಿಷೇಧ ಕಾಯಿದೆ ಜಾರಿಗೆ ತಂದು, ಶೋಷಿತ ಸಮುದಾಯದ ಮಕ್ಕಳಿಗಿರುವ ಏಕೈಕ ಪೌಷ್ಟಿಕ ಆಹಾರದ ಸಂಪನ್ಮೂಲವನ್ನು ಕಸಿದುಕೊಂಡು ಭವಿಷ್ಯದಲ್ಲಿ ರೋಗಿಷ್ಠ ಕರ್ನಾಟಕವನ್ನು ಕಟ್ಟಲು ಹೊರಟಿದೆ!

**ಗೋಮಾಂಸವೇಕೆ ಶ್ರೇಷ್ಠ?**

"ಹುಳು ತಿನ್ನುವ ಕೋಳಿಗಿಂತ, ಮಲ ತಿನ್ನುವ ಹಂದಿಗಿಂತ ಹುಲ್ಲು ಮತ್ತು ತೌಡು ತಿನ್ನುವ ಹಸು ಕೇವಲವೇ? ಬೆಳ್ಳಿಗ್ಗೆಯಿಂದ ಸಂಜೆಯವರೆಗೆ ಬೀದಿಯಲ್ಲಿ ಹಂದಿ-ಕೋಳಿ ಏನೇನು ತಿನ್ನುತ್ತವೆ ಎಂದು ನೋಡಿಕೊಂಡಿರುತ್ತೇವೆ. ಅವುಗಳು ಬೀದಿಯಲ್ಲಿ, ಸಂದಿಗೊಂದಿಗಳಲ್ಲಿ ಧಾರಾಳವಾಗಿ ತಿರುಗಾಡಿಕೊಂಡಿರಲು ಅನುಮತಿ ಕೊಡುತ್ತೇವೆ. ಆದರೆ, ಅವುಗಳ ಮಾಂಸ ತಿನ್ನುವವರಿಗೆ ಅಸ್ಪೃಶ್ಯತೆ-ಹೇಸಿಗೆ ಎನಿಸುವುದಿಲ್ಲ. ಆದರೆ, ಹಸಿರು ಹುಲ್ಲು ತಿನ್ನುವ ದನದ ಮಾಂಸ ತಿನ್ನುವವರ ಮಾತ್ರ ಏಕೆ ಅಸ್ಪೃಶ್ಯತೆ-ಹೇಸಿಗೆ ಬರುತ್ತದೆ?" ಎಂದು ತಂದೆ ಪೆರಿಯಾರ್‌ರವರು ದನದ ಮಾಂಸದ ಶ್ರೇಷ್ಠತೆ ಯನ್ನು ಎತ್ತಿ ಹಿಡಿದಿದ್ದಾರೆ.

ಜಾನುವಾರು ಹತ್ಯೆ ನಿಷೇಧ ಕಾಯಿದೆಯನ್ನು ಜಾರಿಗೊಳಿಸುವುದರ ಮೂಲಕ ಸಮಾಜವನ್ನು ಸಸ್ಯಾಹಾರಿಗಳು V/S ಮಾಂಸಾಹಾರಿಗಳು ಎಂದು ವಿಭಜಿಸಿ ಸಮಾಜದ ವಾಸ್ತವಕ್ಕೆ ಕೊಳ್ಳಿಯಿಡಲು ಹೊರಟಿರುವ ಅಲ್ಪಸಂಖ್ಯಾತ ಮನುವಾದಿಗಳ ಕೋಮುವಾದಿ ರಾಜಕಾರಣಕ್ಕೆ ವಿರುದ್ಧ, ರಾಜ್ಯದ ದಲಿತ, ರೈತ ಮತ್ತಿತರ ಜಾತ್ಯತೀತ ಚಳುವಳಿಗಳು ಮತ್ತಷ್ಟು ಸಂಘಟಿತವಾಗಿ ತೊಡೆ ತಟ್ಟುವುದರ ಮೂಲಕ ಈ ಕಾಯಿದೆಯನ್ನೇ ನಿಷೇಧಿಸಬೇಕಾಗಿದೆ. □





ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

# ಸೂಪರ್ ಮಾರ್ಕೆಟ್‌ಗಳು ಹಾಗೂ ಕೊಗ್ಗ ಕಾಮತರ ದಿನಸಿ

ಇತ್ತೀಚೆಗೆ ಕೇಂದ್ರ ಸರಕಾರ ತಂದ ಸಗಟು ವ್ಯಾಪಾರದಲ್ಲಿ ೧೦೦ ಶೇಕಡಾದಷ್ಟು ವಿದೇಶಿ ಬಂಡವಾಳದ ನೀತಿ ಮೂರು ರೂಪದ ಚರ್ಚೆಗೆ ದಾರಿ ಮಾಡಿಕೊಟ್ಟಿದೆ. ಒಂದನೇದಾಗಿ ಈ ನೀತಿಗೆ ಯಾರು ಕಾರಣರು - ಸರಕಾರವೇ? ಜಾಗತೀಕರಣವೇ? ಅಥವಾ ಬಹುರಾಷ್ಟ್ರೀಯ ಸಗಟು ಕಂಪೆನಿಗಳೇ? ಎರಡನೇದಾಗಿ ಸಗಟು ವ್ಯಾಪಾರದಿಂದ ನಮ್ಮೂರಿನ ಶೆಟ್ಟರ ಅಥವಾ ಕೊಗ್ಗ ಕಾಮತರ ಚಿಲ್ಲರೆ ಅಥವಾ ದಿನಸಿ ಅಂಗಡಿಗಳೇನಾಗಬಹುದು? ಕೊನೆಯದಾಗಿ, ಇದು ಯಾವ ರೂಪಕವನ್ನು ಪ್ರತಿನಿಧಿಸಬಹುದು.

ಸಗಟು ವ್ಯಾಪಾರದಲ್ಲಿ ವಿದೇಶಿ ಬಂಡವಾಳದ ಕುರಿತು ಬಂದಿರುವ ಚರ್ಚೆಗಳು ಹಾಗೂ ವಿರೋಧಗಳು ಹೊಸತೇನಲ್ಲ. ಯುಪಿಎ–ಅಧಿಕಾರದ ಅವಧಿಯಲ್ಲಿ ಇದನ್ನು ಎಡಪಕ್ಷ ಹಾಗೂ ಬಿಜೆಪಿ ವಿರೋಧಿಸಿದ್ದವು. ಮುರಳಿ ಮನೋಹರ್ ಜೋಶಿ ನೇತೃತ್ವದ ಪಾರ್ಲಿಮೆಂಟರಿ ಕಮಿಟಿ ಸಗಟು ವ್ಯಾಪಾರದಲ್ಲಿ ನೂರು ಶೇಕಡಾ ವಿದೇಶಿ ಬಂಡವಾಳಕ್ಕೆ ಸಂಪೂರ್ಣ ನಿಷೇಧವನ್ನು ಹಾಗೂ ಪ್ರತಿಬಂಧಕವನ್ನು ಹಾಕಬೇಕೆಂದು ಶಿಫಾರಸ್ಸನ್ನು ಈ ಮೊದಲೇ ಮಾಡಿತ್ತು. ಈ ಸಲ ಎಡ ಪಕ್ಷಗಳು ಯುಪಿಎ ಸರಕಾರದೊಂದಿಗೆ ಇಲ್ಲದಿದ್ದ ಕಾರಣ ವಿದೇಶಿ ಬಂಡವಾಳ ನೀತಿಯನ್ನು ಜಾರಿಗೆ ತರಲು ಸರಕಾರಕ್ಕೆ ಯಾವುದೇ ಕಷ್ಟವಾಗಲಿಲ್ಲ ಹಾಗೂ ತಕರಾರುಗಳು ಬರಲಿಲ್ಲ.

ಇದರ ಹಿಂದೆ ಸರಕಾರಕ್ಕಿಂತ ನಾಲ್ಕು ಬಹುರಾಷ್ಟ್ರೀಯ ಸಗಟು ವ್ಯಾಪಾರ ಕಂಪೆನಿಗಳ ಅದರಲ್ಲೂ ಸೂಪರ್ ಮಾರ್ಕೆಟ್‌ಗಳ ಒತ್ತಡ ಇರು ವುದು ನಿಚ್ಚಳ. ಅದರಲ್ಲಿ ಇಂಗ್ಲೆಂಡಿನ ಟೆಸ್ಕೋ, ಪ್ರಾನ್ಸ್‌ನ ಕಾರ್ರೆಪೋರ್' ಜರ್ಮನಿಯ ಮೆಟ್ರೊ ಹಾಗೂ ಅಮೇರಿಕಾದ ವಾಲ್ ಮಾರ್ಟ್ ಪ್ರಮುಖವಾದವು. ಇವುಗಳಲ್ಲಿ ವಾಲ್‌ಮಾರ್ಟ್‌ನ ಪಾತ್ರ ಹಿರಿದು. ಇದೊಂದು ಬಹು ಬ್ರಾಂಡ್‌ಗಳನ್ನು ಒಳಗೊಂಡ ಅಂತಾರಾಷ್ಟ್ರೀಯ ಕಂಪೆನಿ. ಜಗತ್ತಿನ ೧೦ ಅತೀ ದೊಡ್ಡ ಸಗಟು ವ್ಯಾಪಾರ ಕಂಪೆನಿಗಳಲ್ಲಿ ೫ ಕಂಪೆನಿಗಳು ಅಮೇರಿಕಾದಲ್ಲಿವೆ. ಉಳಿದ ಐದು ಕಂಪೆನಿಗಳು ಐರೋಪ್ಯದಲ್ಲಿವೆ. ಕಳೆದ ವರುಷ ಆರ್ಥಿಕ ಹಿಂಜರಿತದ ನಡುವೆಯೂ ಈ ಕಂಪೆನಿಗಳು ಮಾಡಿದ ಒಟ್ಟು ವ್ಯಾಪಾರದ ಮೊತ್ತವೇ ಅಗಾಧ- ೧.೧೫ ಟ್ರಿಲಿಯನ್ ಡಾಲರ್- ಇವುಗಳಲ್ಲಿ ವಾಲ್-ಮಾರ್ಟ್ ಮೊದಲ ಸ್ಥಾನದಲ್ಲಿದೆ. ಎರಡನೇ ಸ್ಥಾನದಲ್ಲಿ ಪ್ರಾನ್ಸ್‌ನ ಕಾರ್ರೆಪೋರ್, ಜರ್ಮನಿಯ ಮೆಟ್ರೊ ಮೂರನೇ ಸ್ಥಾನದಲ್ಲಿದೆ.

ವಾಲ್ ಮಾರ್ಟ್‌ನ ಹೆಸರು ಕೇಳಿದ್ದಾಗಲೆಲ್ಲಾ ಖ್ಯಾತ ಅರ್ಥಶಾಸ್ತ್ರಜ್ಞ ಶುಂಪೀಟರ್ ಹೇಳಿದ "ಕ್ರಿಯಾತ್ಮಕ ನಾಶ" ನೆನಪಿಗೆ ಬರುತ್ತದೆ. ಅದು "ಅತ್ಯಂತ ಹೊಸತು" ಎಂಬ ವಾದವನ್ನು ಮುಂದಿಟ್ಟು ಜಾಗತೀಕ ಮಟ್ಟದಲ್ಲಿ ಉತ್ಪಾದನೆ,ಆಯ್ಕೆ ಹಾಗೂ ವಿತರಣಾ ಮಟ್ಟದಲ್ಲಿ ಹೊಸ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ. ವಾಲ್‌ಮಾರ್ಟ್ ಹುಟ್ಟಿದ್ದು ೧೯೬೨ರಲ್ಲಿ. ೪೪ ದೇಶಗಳಲ್ಲಿ ೪೬೦೦ಕ್ಕೂ ಹೆಚ್ಚು ಮಳಿಗೆಗಳಿರುವ ಈ ಕಂಪೆನಿಯ ಆದಾಯ ಹತ್ತುಹಲವು ದೇಶಗಳಿಂತಲೂ ಅಧಿಕ. - ಒಂದು ಟ್ರಿಲಿಯನ್ ಡಾಲರ್, ಇದು ೪೦-೫೦ ಬಡದೇಶಗಳ ವಾರ್ಷಿಕ ಆದಾಯಕ್ಕಿಂತಲೂ ಹೆಚ್ಚು. ಅದೊಂದು ಸ್ವತಂತ್ರ ದೇಶವಾಗಿದ್ದರೆ ಬಹುಷಃ ಚೀನಾದ ವಸ್ತುಗಳಿಗೆ ಎಂಟನೇ ಅತೀ ದೊಡ್ಡ ನಿರ್ಯಾತ ದೇಶವಾಗುತ್ತಿತ್ತು.

ಭಾರತಕ್ಕೆ ಸಗಟು ವ್ಯಾಪಾರದ ಮುಖಾಂತರ ನುಸುಳಲು ವಾಲ್ ಮಾರ್ಟ್ ಕೆಲವು ವರುಷಗಳಿಂದಲೇ ಪ್ರಯತ್ನಿಸುತ್ತಾ ಬಂದಿತು. ಅದಕ್ಕಾಗಿ ಅಮೇರಿಕಾದ ಕಾಂಗ್ರೆಸ್ ಸದಸ್ಯರೊಂದಿಗೆ, ಸರಕಾರದ ವಾಣಿಜ್ಯ ಮಂಡಲಿ ಹಾಗೂ ಹಣಕಾಸು ವಿಭಾಗದೊಂದಿಗೆ ಲಾಬಿ ಮಾಡುತ್ತಾ ಹಾಗೂ ಒತ್ತಡ ಹಾಕುತ್ತಾ ಬಂತು. ವಾಲ್ ಮಾರ್ಟ್ ಕಳೆದ ಎರಡು ವರುಷ ಲಾಬಿಗಾಗಿ ವಿನಿಯೋಗಿಸಿದ ಹಣದ ಮೊತ್ತವೇ ೧೧ ಮಿಲಿಯನ್ ಡಾಲರ್ ಅಥವಾ ೫೨ ಕೋಟಿ. ೨೦೧೦ರಲ್ಲಿ ಅದು ಕಡಿಮೆಯೆಂದರೂ ೬ ಕೋಟಿಯನ್ನು ವೆಚ್ಚ ಮಾಡಿದೆ. ಇದನ್ನು ಜಗಜ್ಜಾಹೀರು ಮಾಡಿದವರೂ ಬೇರೆಯಾರು ಅಲ್ಲ. ಸ್ವತಃ ವಾಲ್ ಮಾರ್ಟ್ ಅಮೇರಿಕಾದ ಸೆನೆಟಿಗೆ ನೀಡಿದ ಮಾಹಿತಿಯಲ್ಲಿದೆ. ಭಾರತ ಹಾಗೂ ಅಮೇರಿಕಾದ ದ್ವಿಪಕ್ಷೀಯ ಮಾತುಕತೆ ಸಂದರ್ಭದಲ್ಲಿ ಅದರ ರಾಜಕಾರಣ ಸ್ಪಷ್ಟವಾಗಿ ಗೋಚರವಾಗಿತ್ತು. ಆ ಸಂದರ್ಭದಲ್ಲಿ ವಾಲ್ ಮಾರ್ಟ್‌ಗೆ ಎರಡು ಪ್ರಮುಖ ಧ್ಯೇಯಗಳಿದ್ದವು ಸಗಟು ವ್ಯಾಪಾರದಲ್ಲಿ ನೂರು ಶೇಕಡಾ ಹೂಡಿಕೆಗೆ ಅವಕಾಶ, ಹಾಗೂ ಭಾರತದ ಮಾರುಕಟ್ಟೆಯನ್ನು ಇನ್ನಷ್ಟು ಮುಕ್ತಗೊಳಿಸುವುದು. ಅಮೇರಿಕಾದಲ್ಲಿ ವ್ಯಾಪಾರಕ್ಕಾಗಿ ಲಾಬಿ ಮಾಡುವುದೇನು ಅನೈತಿಕವಲ್ಲ. ಆದರೆ ಭಾರತ ಹಾಗೂ ಅಮೇರಿಕಾದ ವ್ಯಾಪಾರಿ ಲಾಬಿಲ್ಲಿರುವ ಒಂದೇ ಒಂದು ವ್ಯತ್ಯಾಸವೆಂದರೆ ಅಮೇರಿಕಾದಲ್ಲಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ಕಂಪೆನಿಗಳು ತಾವು ಮಾಡಿದ ಲಾಬಿಯ ರಾಜಕಾರಣವನ್ನು ಸೆನೆಟಿಗೆ ತಿಳಿಸಬೇಕಾಗುತ್ತದೆ. ಭಾರತ ಇದಕ್ಕೆ ತೀರಾ ವಿಭಿನ್ನವಾಗಿದೆ. ಭಾರತದಲ್ಲಿ ಕಂಪೆನಿಗಳು ತಮ್ಮ ಆಸಕ್ತಿಯನ್ನು ಕುದುರಿಸಲು ಉಪಯೋಗಿಸುವ ಹಣದ ಮೊತ್ತ ಯಾವತ್ತೂ ಗೌಪ್ಯವಾಗಿರುತ್ತದೆ. ಬಹಳಷ್ಟು ಸಲ ಕಪ್ಪು ಹಣ ಇದಕ್ಕಾಗಿ ವ್ಯಯವಾಗುತ್ತದೆ.

ಇದರ ಮೊದಲು ವಾಲ್ ಮಾರ್ಟ್ ಭಾರತಕ್ಕೆ ಪ್ರವೇಶಿಸಲಿಲ್ಲವೆಂದಲ್ಲ, ಅದು ಭಾರತಿ ಕಂಪೆನಿಯೊಂದಿಗೆ ವ್ಯಾಪಾರದ ಒಡಂಬಡಿಕೆಯ ಮುಖಾಂತರ ಭಾರತಕ್ಕೆ ೨೦೦೭ಕ್ಕೆ ಬಂದರೂ ಅದಕ್ಕೆ ಸಂಪೂರ್ಣವಾಗಿ ಸಗಟು ವ್ಯಾಪಾರದಲ್ಲಿ ನೆಲೆಯೂರಲು ಸಾಧ್ಯವಾಗಲಿಲ್ಲ. ವಿದೇಶಿ ಹೂಡಿಕೆಯ ಮೇಲಿದ್ದ ಪ್ರತಿಬಂಧಕವೇ ಇದಕ್ಕೆ ಕಾರಣ. ಭಾರತಕ್ಕೆ ಬರಲು ಅದು ನೀಡಿದ ಕಾರಣಗಳು ಈ ರೀತಿ ಇವೆ: ಅಮೇರಿಕಾದ ಆರ್ಥಿಕತೆಯ ಹಿಂಜರಿತದಿಂದಾಗಿ ಹೊರಬರಬೇಕಾದರೆ ಹೊಸ ಹೊಸ ಮಾರುಕಟ್ಟೆಯ ಅನ್ವೇಷಣೆ ಇದೆ. ಈ ಹೊಸ ಮಾರುಕಟ್ಟೆ ಭಾರತದಲ್ಲಿರುವುದು ಗಮನಾರ್ಹ.

ವಾಸ್ತವವಾಗಿ ಇಲ್ಲೊಂದು ವಿಸ್ಮೃತಿಯ ರಾಜಕಾರಣವಿದೆ. ಈ ವಿಸ್ಮೃತಿಯ ರಾಜಕಾರಣದಲ್ಲಿ ಭಾರತದಲ್ಲಿರುವ ಮಧ್ಯಮ ವರ್ಗದ ಅಸ್ತಿತ್ವವನ್ನು ಕಡೆಗಣಿಸಬಾರದು. ಭಾರತದ ಸಂದರ್ಭದಲ್ಲಿ ಬಹು ದೊಡ್ಡದಾದ ಮಧ್ಯಮ ವರ್ಗ ಅಸ್ತಿತ್ವದಲ್ಲಿರುವುದನ್ನು, ಅಥವಾ ಬೆಳೆದಿರುವುದನ್ನು, ಯಾರೂ ಕೂಡ ಅಲ್ಲಗಳೆಯಲು ಸಾಧ್ಯವಿಲ್ಲ. ಇವರೆಲ್ಲ ಈ ಹೊಸ "ಮಾಲ್" ಸಂಸ್ಕೃತಿಯ ಪಾಲು

ದಾರರು. ಹೊಸ ಮಾರುಕಟ್ಟೆಯ ನಿರ್ಮಿತಿಗಳು, ಸೂಪರ್ ಮಾರ್ಕೆಟ್‌ಗಳಿಗೆ, ಮಾಲ್‌ಗಳಿಗೆ, ಬಜಾರ್‌ಗಳಿಗೆ, ಹೈಪರ್ ಅಂತಿಮ ವಿಶ್ಲೇಷಣೆಯಲ್ಲಿ ಇವರೇ ಮಾರುಕಟ್ಟೆಗಳು. ಅಲ್ಲದೇ ಜಾಗತೀಕ ಮಾರುಕಟ್ಟೆಯೊಂದಿಗೆ ತಮ್ಮನ್ನು ತಾವು ಬೆಸೆದುಕೊಳ್ಳಲು ಆತುರದಿಂದ ಕಾಯುತ್ತಾ ಕುಳಿತ ವರು. ವಾಸ್ತವವಾಗಿ ಭಾರತದ ಸಂದರ್ಭದಲ್ಲಿ ಮಧ್ಯಮ ವರ್ಗವೇ ಒಂದು ದೊಡ್ಡ ಮಾರುಕಟ್ಟೆ. ಈ ವರ್ಗ ವಾರ್ಷಿಕವಾಗಿ ೫ ರಿಂದ ೧೧ ಶೇಕಡಾ ದಷ್ಟು ಬೆಳೆಯು ತ್ತಿದೆ. ಮಧ್ಯಮ ವರ್ಗದ ಸಂಖ್ಯೆಯೇ ಭಾರತದ ಒಟ್ಟು ಜನಸಂಖ್ಯೆಯ ೩೦ ಶೇಕಡದಷ್ಟು ಇರುವಾಗ ಯಾರು ತಾನೇ ಭಾರತಕ್ಕೆ ಬರಲು ಹಿಂದೇಟು ಹಾಕುತ್ತಾರೆ?

ಈ ೪೦ ಕೋಟಿ ಸಂಖ್ಯೆ ಇಡೀ ಲ್ಯಾಟೀನ್ ಅಮೇರಿಕಾ ಖಂಡಕ್ಕೆ ಸಮ ಅಥವಾ ಆಫ್ರಿಕಾದ ೪೦ ದೇಶಗಳಿಗೆ ಸಮ. ಇಡೀ ಲ್ಯಾಟೀನ್ ಅಮೇರಿಕಾ ಖಂಡದಲ್ಲಿ ಅಥವಾ ಆಫ್ರಿಕಾದಲ್ಲಿ ಸಗಟು ವ್ಯಾಪಾರಕ್ಕೆ ತಗಲುವ ಸಮಯ, ವೆಚ್ಚ ಇತ್ಯಾದಿಗಳು ಭಾರತಕ್ಕೆ ಹೋಲಿಸಿದರೆ ಅತ್ಯಂತ ಕಡಿಮೆ. ಇಲ್ಲಿ ಲಾಭವೂ ಹೆಚ್ಚು, ವಿರೋಧಗಳೂ ಕಡಿಮೆ. ಸಾಮಾಜಿಕವಾಗಿ ಗಟ್ಟಿಯಾಗಿ ನೆಲೆಯೂರಿರುವ ಮಧ್ಯಮ ವರ್ಗವಿರುವಾಗ ಯಾರು ತಾನೇ ಲ್ಯಾಟೀನ್ ಅಮೇರಿಕಾ – ಆಫ್ರಿಕಾ ಖಂಡಕ್ಕೆ ಹೋಗಲು ಇಷ್ಟ ಪಡುತ್ತಾರೆ? ಅಥವಾ ಅಲ್ಲಿ ವ್ಯಾಪಾರ ಮಾಡಲು ರಿಸ್ಕ್ ತೆಗೆದು ಕೊಳ್ಳುತ್ತಾರೆ?

ವಿದೇಶಿ ಬಂಡವಾಳದ ಕುರಿತು ವಾದಿಸುವಾಗ ಚೀನಾ ದೇಶದ ಉದಾಹರಣೆಯನ್ನು ಮುಂದಿಡಲಾಗುತ್ತದೆ. ಅಲ್ಲಿ ಸಗಟು ವ್ಯಾಪಾರದಲ್ಲಿ ನೂರು ಶೇಕಡಾದಷ್ಟು ಅವಕಾಶವನ್ನು ನೀಡಿದರೂ, ಅದು ಸಮುದಾಯಗಳನ್ನು, ಚಿಕ್ಕ ಪುಟ್ಟ ಸಗಟು ವ್ಯಾಪಾರಿಗಳನ್ನು ಹೇಗೆ ಉಳಿಸಲು ಸಾಧ್ಯವಾಯಿತು?. ಚೀನಾ ಸಗಟು ವ್ಯಾಪಾರದಲ್ಲಿ ನೂರು ಶೇಕಡಾಕ್ಕೆ ಅವಕಾಶ ಮಾಡಿಕೊಟ್ಟದ್ದು ೨೦೦೫ರಲ್ಲಿ. ಅದರ ಮೊದಲು ಅದು ೨೬ ಶೇಕಡಾ (೧೯೯೨) ತದನಂತರ ೫೯(೨೦೦೨) ಶೇಕಡಾಕ್ಕೆ ವಿದೇಶಿ ಬಂಡವಾಳದ ಪ್ರತಿಶತ ಅಂಶವನ್ನು ಹೆಚ್ಚಿಸಿತ್ತು. ಅದರರ್ಥ ಬಹುರಾಷ್ಟ್ರೀಯ ಸಗಟು ವ್ಯಾಪಾರಕ್ಕೆ ಕಡಿವಾಣ ಹಾಕಲಿಲ್ಲವೆಂದವಲ್ಲ ಅದು ಸಗಟು ವ್ಯಾಪಾರದ ಅಂಗಡಿಗಳ ಸಂಖ್ಯೆಗೆ ಮಿತಿಯನ್ನು ಕೂಡ ನಿರ್ದಿಷ್ಟಗೊಳಿಸಿತ್ತಲ್ಲ ದೇ, ಅದರ ಭೌಗೋಳಿಕತೆಗೂ ಕಡಿವಾಣವನ್ನು ಹಾಕಿತ್ತು. ಆಸಕ್ತಿದಾಯಕ ವಿಷಯವೆಂದರೆ ವಾಲ್-ಮಾರ್ಟ್ ನಂತಹ ಸೂಪರ್ ಮಾರ್ಕೆಟ್‌ಗಳು ಕಾರ್ಮಿಕ ಸಂಘಟನೆಗಳಿಗೆ ಅವಕಾಶ ಮಾಡಿಕೊಡುವಂತೆ ಸರಕಾರ ಒತ್ತಡ ತಂದಿತು. ಇಂತಹ ರಾಜಕಾರಣವನ್ನು ನಮ್ಮ ಸರಕಾರಗಳು ಮಾಡಬಲುವೆ?

ಎರಡನೇ ವಾದವೆಂದರೆ ಸಗಟು ವ್ಯಾಪಾರದ ಹೊಸ ನೀತಿ ಮಹಾ ನಗರಗಳೊಂದಿಗೆ ಪಟ್ಟಣಗಳ ಅಭಿವೃದ್ಧಿಗೆ ಹೊಸ ದೃಷ್ಟಿ ಕೋನವನ್ನು ನೀಡುತ್ತದೆಯಲ್ಲದೇ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುತ್ತದೆ. ಅದು ಅಳವಡಿಸುವ ಹೊಸ ತಂತ್ರಜ್ಞಾನ ಕೂಡ ದೇಶದ ಬೆಳವಣಿಗೆಗೆ ಪೂರಕವಾಗಿರುತ್ತದೆ. ಅಲ್ಲದೇ ಅಂತಿಮವಾಗಿ ಅದು ಕೃಷಿ ಉದ್ಯೋಗಕ್ಕೂ ದಾರಿ ಮಾಡಿಕೊಡುತ್ತದೆ. ವಾಸ್ತವವಾಗಿ ಹೊಸತಾಗಿ ನಿರ್ಮಿಸಲ್ಪಡುವ ಮಾಲ್‌ಗಳು ಕಾಂಟ್ರ್ಯಾಕ್ಟ್ ರೈತರನ್ನು ನಿರ್ಮಿಸುವುದು ಸತ್ಯ. ರೈತರು ತಮ್ಮ ಬೆಳೆಗಳಾದ ಟಮೋಟೋ, ಸೊಪ್ಪುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಲು ಸಾಧ್ಯವಿಲ್ಲ. ಸಗಟು ವ್ಯಾಪಾರ ಕಂಪೆನಿಗಳಿಗೆ, ಸೂಪರ್ ಮಾರ್ಕೆಟ್‌ಗಳಿಗೆ ಅವರು ಮಾರಲೇಬೇಕಾಗುತ್ತದೆ. ಇದು ನೂತನ ರೂಪದ "ಕಂಪೆನಿ ಅಥವಾ ಸೂಪರ್ ಮಾರ್ಕೆಟ್ ಜಮೀನ್ದಾರ ರನ್ನು ನಿರ್ಮಿಸುವುದು ನಿರ್ವಿವಾದ.

**ವಾಸ್ತವವಾಗಿ ನಮ್ಮ ನಡುವೆ ಇರುವ ಅಸಂಘಟಿತ ಸಗಟು ವ್ಯಾಪಾರಿಗಳು ಹಾಗೂ ಕಂಪೆನಿ ಆಧಾರಿತ ಸೂಪರ್ ಮಾರ್ಕೆಟ್‌ಗಳು ಅಭಿವೃದ್ಧಿಯ ದ್ವಂದ್ವತೆಯನ್ನು ಪ್ರತಿನಿಧಿಸುತ್ತಾರೆ.**

ಸಗಟು ವ್ಯಾಪಾರದಲ್ಲಿ ವಿದೇಶಿ ಬಂಡವಾಳವನ್ನು ಆಹ್ವಾನಿಸುವಾಗ ಇನ್ನಿತರ ವಾದಗಳನ್ನು ಕೂಡ ಮುಂದಿಡಲಾಗುತ್ತಿದೆ: ಬಹುರಾಷ್ಟ್ರೀಯ ಮಳಿಗೆಗಳು ಗ್ರಾಹಕನಿಗೆ ಹೊಸ ಹೊಸ ಹಕ್ಕುಗಳನ್ನು ಅದರಲ್ಲೂ ಆಯ್ಕೆಯ, ಚೌಕಾಶಿಯ ಹಕ್ಕುಗಳನ್ನು ನೀಡುತ್ತವೆ. ಆದಕಾರಣ ಗ್ರಾಹಕ ಇಲ್ಲಿ ಯಜಮಾನ. ಇಲ್ಲಿರುವ ವಾದದ ತಾತ್ಪರ್ಯವೆಂದರೆ ಕಿರಾಣಿ – ನಮ್ಮ ದಿನಸಿ ಅಂಗಡಿಗಳಲ್ಲಿ ಅಂಗಡಿಯ ಮಾಲೀಕನೇ ಗ್ರಾಹಕರ ಆಯ್ಕೆಯನ್ನು ನಿರ್ಧರಿಸುತ್ತಾನೆ ಹೊರತು ಗ್ರಾಹಕನಲ್ಲ. ವಾಸ್ತವವಾಗಿ ಬಹುರಾಷ್ಟ್ರೀಯ ಕಂಪೆನಿಗಳ ಮಳಿಗೆಗಳು ಒಂದೇ ಸೂರಿನಡಿಯಲ್ಲಿ ಜನ ಸಾಮಾನ್ಯರಿಂದ ಹಿಡಿದು ಶ್ರೀಮಂತರ ತನಕ ಎಲ್ಲಾ ವಸ್ತುಗಳ ಆಯ್ಕೆಯನ್ನು ನೀಡಿದರೂ, (ಟಿವಿಯಿಂದ ಹಿಡಿದು, ಕಾರ್‌ವರೆಗೆ) ಅದು ಜನಸಾಮಾನ್ಯ ಗ್ರಾಹಕನನ್ನು ವಿಶಾಲವಾದ ಅಂತಾರಾಷ್ಟ್ರೀಯ ಮಾರುಕಟ್ಟೆಯ ಬಂಧಿಯಾಗಿಸಿ ಬಿಡುವುದು ಕೂಡ ಅಷ್ಟೇ ವಾಸ್ತವ. ಒಮ್ಮೆ ಜಾಗತೀಕ ಮಾರುಕಟ್ಟೆಯ ಅಂತರ್ಗತ ಭಾಗವಾದ ನಂತರ ಅಲ್ಲಿಂದ ಹೊರಬರುವುದು ಅಷ್ಟು ಸುಲಭ ಸಾಧ್ಯವಲ್ಲದ ಕೆಲಸ. ಇದರ ಪರಿಣಾಮವೆಂದರೆ ಭವಿಷ್ಯದಲ್ಲಿ ಕಂಪೆನಿಯ ಮಳಿಗೆಗಳು, ಸೂಪರ್ ಮಾರ್ಕೆಟ್‌ಗಳು, ಬಜಾರ್‌ಗಳು ಅಥವಾ ಮಾಲ್‌ಗಳು ನಮ್ಮ ಸಂಸ್ಕೃತಿಯ ರೂಪಕಗಳು, ಪ್ರತೀಕಗಳು, ಹಾಗೂ ಮಾನದಂಡಗಳಾಗುತ್ತವೆ.

ನಮ್ಮ ದೇಶ ಮೂಲತ: ಬಂಡಾರ, ಕಿರಾಣಿ ಅಥವಾ ದಿನಸಿ ಅಂಗಡಿಗಳ ದೇಶ. ಭಾರತದಲ್ಲಿ ಕಡಿಮೆಯೆಂದರೂ ೧೨ಲಕ್ಷ ಸಗಟು ಅಥವಾ ಕಿರಾಣಿ ವ್ಯಾಪಾರಸ್ಥರು ಇದ್ದಾರೆ. ಇವರೆಲ್ಲ ಸೂಪರ್ ಮಾರ್ಕೆಟ್‌ನ ಮಾಲೀಕರಿಲ್ಲ. ಅವರಿಗೆ ನಿರ್ಧಿಷ್ಟ ಸ್ಥಳ, ಪ್ರದೇಶವೆಂಬುದು ಇಲ್ಲ. ಅದು ಮನೆಯ ಮುಂದಿನ ಸ್ಥಳವೂ ಆಗಬಹುದು, ಅಥವಾ ಬಟ್ಟಬಯಲು ಆಗಬಹುದು ಇವರೆಲ್ಲ ಚಿಕ್ಕ ಪುಟ್ಟ ವ್ಯಾಪಾರಿಗಳು. ಅಲ್ಲದೇ ಅವರ್‍ಯಾರು ದೊಡ್ಡ ಬಂಡವಾಳ ಅಥವಾ ಶ್ರೀಮಂತರೂ ಕೂಡ ಅಲ್ಲ. ಇವತ್ತು ಭಾರತದಲ್ಲಿ ಹೆಚ್ಚು ಕಡಿಮೆ ೫ ಲಕ್ಷ ಕ್ಕೂ ಹೆಚ್ಚು ಸಗಟು ವ್ಯಾಪಾರದ ಅಂಗಡಿಗಳಿವೆ. ಅದಕ್ಕೆ ನಿರ್ಧಿಷ್ಟವಾದ ಗಾತ್ರವಿಲ್ಲ. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಎರಡು ಚದರ ಅಡಿಯಡಿಯಲ್ಲಿ ಸಗಟು ವ್ಯಾಪಾರ ಮಾಡುವವರ ಸಂಖ್ಯೆಯೇ ಶೇ ೯೬ಇದೆ. ಇದು ಜಗತ್ತಿನಲ್ಲಿಯೇ ಅತ್ಯಂತ ಕಡಿಮೆಯೆಂದೆ ಹೇಳಬೇಕು. ಅಲ್ಲದೆ ಸಗಟು ವ್ಯಾಪಾರಿಗಳ ಸಂಖ್ಯೆ ೮ ಶೇಕಡಾ ಜನಸಂಖ್ಯೆಗೆ ಸಮ.

ಭಾರತದ ಸಂಘಟಿತ ಹಾಗೂ ಅಸಂಘಟಿತ ಸಗಟು ವ್ಯಾಪಾರ ಜಗತ್ತೀನಲ್ಲೆ ಅತೀ ದೊಡ್ಡದು, ಅದು ಜಗತ್ತಿನಲ್ಲಿ ಐದನೇ ಸ್ಥಾನವನ್ನು ಪಡೆದಿದೆ. ಅಲ್ಲದೇ ಅತೀ ವೇಗವಾಗಿ ಬೆಳೆಯುತ್ತಿರುವ ಕೈಗಾರಿಕೆಯೂ ಹೌದು ನಲ್ಲಿ ಸಗಟು ವ್ಯಾಪಾರ ಸಂಘಟಿತ ರೂಪದಲ್ಲಿ ಬೆಳೆದದ್ದು ಇತ್ತೀಚಿನ ವರುಷಗಳಲ್ಲಿ. ವಾಸ್ತವವಾಗಿ ಸಂಘಟಿತ ಸಗಟಿನ ವ್ಯಾಪಾರದ ಇತಿಹಾಸ ನಮಗಿಲ್ಲ. ನಮಗಿರುವುದು ಅಸಂಘಟಿತ ಸಗಟಿನ ವ್ಯಾಪಾರದ ಇತಿಹಾಸ. ಒಂದು ಅಂದಾಜಿನ ಪ್ರಕಾರ ಅಸಂಘಟಿತ ಸಗಟು ವ್ಯಾಪಾರಿಗಳ ವಾರ್ಷಿಕ ವ್ಯವಹಾರದ ಮೊತ್ತವೇ ನಾಲ್ಕುಲಕ್ಷ ಕೋಟಿ ರೂಪಾಯಿ. ಸಂಘಟಿತ ಸಗಟು ವ್ಯಾಪಾರಿಗಳ ಮೊತ್ತವೇ ೨೦ಸಾವಿರ ಕೋಟಿಗಳು. ಒಂದು ಲೆಕ್ಕಚಾರದ ಪ್ರಕಾರ ಸಗಟು ವ್ಯಾಪಾರ ೨೦೦೭-೨೦೧೨ ನಡುವೆ ಪ್ರತಿಶತ ೧೦ಶೇಕಡಾದಷ್ಟು ಬೆಳೆಯುವ ಅಂದಾಜಿದೆ. ಅದೇ ರೀತಿ ೨೦೧೦ ರಲ್ಲಿ ೨೩ ಬಿಲಿಯನ್ ವ್ಯಾಪಾರದ ವಹಿವಾಟು ನಡೆಯಬಹುದು. ಆದಕಾರಣವೇ ವಾಲ್ ಮಾರ್ಟ್ ಅಂತಹ ವಿದೇಶಿ ಸಗಟು ವ್ಯಾಪಾರ ಕಂಪೆನಿಗಳು ಭಾರತವನ್ನು ಪ್ರವೇಶಿಸಲು ತುದಿಗಾಲಲ್ಲಿ ನಿಂತಿರುವುದು.

ವಾಸ್ತವವಾಗಿ ನಮ್ಮ ನಡುವೆ ಇರುವ ಅಸಂಘಟಿತ ಸಗಟು ವ್ಯಾಪಾರಿಗಳು ಹಾಗೂ ಕಂಪೆನಿ ಆಧಾರಿತ ಸೂಪರ್ ಮಾರ್ಕೆಟ್‌ಗಳು ಅಭಿವೃದ್ಧಿಯ ದ್ವಂದ್ವತೆಯನ್ನು ಪ್ರತಿನಿಧಿಸುತ್ತಾರೆ ಹಾಗೂ ಅದರ ಸಂಕೇತಗಳಾಗುತ್ತಾರೆ. ಹುಬ್ಬಳ್ಳಿಯ ಕೇಶವಪುರದಲ್ಲಿರುವ ರಿಲಯನ್ಸ್ ಫ್ರೆಶ್ ಅಂಗಡಿ ಪಕ್ಕ ರಸ್ತೆ ಬದಿಯಲ್ಲಿ ಕೃಷಿ ಉತ್ಪನ್ನಗಳನ್ನು ಮಾರುವ ಅಸಂಘಟಿತ ಸಗಟು ವ್ಯಾಪಾರಿಗಳನ್ನು ಕಲ್ಪಿಸಿದರೆ ಅಭಿವೃದ್ಧಿಯ ದ್ವಂದ್ವವನ್ನು ಅರ್ಥೈಸಬಹುದು

ಇಲ್ಲೊಂದು ಪ್ರಶ್ನೆ ಸಹಜವಾಗಿ ಮೂಡುತ್ತದೆ. ಸಗಟು ವ್ಯಾಪಾರಿಗಳ ನಡುವೆ ಭಾರತವೇಕೆ ಅತಿದೊಡ್ಡ ಶ್ರೀಮಂತ ಅಥವಾ ಬಂಡವಾಳಶಾಹಿ ದೇಶವಾಗಿ ಹೊರಹೊಮ್ಮಲಿಲ್ಲ? ಇದಕ್ಕೆ ಎರಡು ಕಾರಣಗಳನ್ನು ನೀಡಲಾಗುತ್ತದೆ: ಮೊದಲನೇದಾಗಿ, ಭಾರತದ ಪರಂಪರೆಯಲ್ಲಿ ವ್ಯಾಪಾರ ಹಾಗೂ ನೈತಿಕತೆ ಜೊತೆ ಜೊತೆಯಾಗಿ ಬೆಸೆದುಕೊಂಡದ್ದು ಒಂದು ಕಾರಣವಾದರೆ, ಎರಡನೇದಾಗಿ ವಾಣಿಜ್ಯದ ಭೂಮಿಕೆಯೊಳಗೆ ಬೆಸೆದು ಕೊಂಡಿರುವ ಜಾತೀ ವ್ಯವಸ್ಥೆ ಇನ್ನೊಂದು ಕಾರಣ. ಇಂದಿಗೂ ಕೂಡ ಸಗಟು ವ್ಯಾಪಾರಿಗಳ ಸಾಮಾಜಿಕ ತಳಹದಿಗಳು ಕೆಳಜಾತಿಗಳಲ್ಲಿ ಇಲ್ಲ.

ಭಾರತದಲ್ಲಿ ಸಗಟು ವ್ಯಾಪಾರಕ್ಕೆ ಮಳಿಗೆಗಳನ್ನು ತೆರೆದಿಡಲು ಈಗಾಗಲೇ ಹತ್ತು ಹಲವು ಕಂಪೆನಿಗಳು ತುದಿಗಾಲಲ್ಲಿ ನಿಂತಿವೆ.ಈ ವರುಷ ಹೆಚ್ಚು ಕಡಿಮೆ ೧೦,೫೦೦ ಕ್ಕೂ ಹೆಚ್ಚು ಮಳಿಗೆಳನ್ನು ತೆರೆಯಲು ವಿವಿಧ ಕಂಪೆನಿಗಳು ತಯಾ ರಾಗಿವೆ. ಅದರಲ್ಲಿ ಅತೀದೊಡ್ಡದಾಗಿರುವುದು ಸುವಿದಾ (೧೦,೦೦೦),ಟೈಟಾನ್(೨೦೦),ಡೊಮಿನೋ (೬೫) ಬಿಗ್ ಬಜಾರ್-೨೪, ಕ್ರೋಮ(೩೯)

ಈ ರೀತಿ ಯದ್ವಾತದ್ವ ಬೆಳೆಯುತ್ತಿರುವ ಸೂಪರ್ ಮಾರ್ಕೆಟ್‌ಗಳ ಮೇಲೆ ವಿವಿಧ ದೇಶಗಳು ಈಗಾಗಲೇ ಕೆಲವು ನಿಯಂತ್ರಣಗಳನ್ನು ಹೇರಿವೆ. ೧೯೯೬ರಲ್ಲಿ ಫ್ರಾನ್ಸ್ ರೆಫರಿನ್ಸ್ ಆ್ಯಕ್ಟ್‌ನ್ನು ಜಾರಿಗೆ ತಂದಿತು. ಇದರ ಪ್ರಕಾರ ಯಾವುದೇ ಸೂಪರ್ ಮಾರ್ಕೆಟ್ ೩೦೦ ಚದರ ಅಡಿಗಿಂತಲೂ ಹೆಚ್ಚು ವಿಸ್ತೀರ್ಣವಾಗಿರಬಾರದು. ಜಪಾನ್ ಇದರಿಂದ ಹಿಂದೆ ಬಿದ್ದಿಲ್ಲ. ಇದಕ್ಕಿಂತ ಸ್ವಲ್ಪ ಭಿನ್ನವಾಗಿರುವುದು ಲ್ಯಾಟೀನ್ ಅಮೇರಿಕಾದ ದೇಶಗಳು. ವಾಲ್ ಮಾರ್ಟ್ ತಮ್ಮ ದೇಶದಲ್ಲಿ ಅತೀ ಹೆಚ್ಚು ಮಳಿಗೆಗಳನ್ನು ತೆರೆಯದಂತೆ ಕೆಲವು ಕಾನೂನುಗಳನ್ನು ಮಾಡಿದವು. ಮಲೇಶಿಯಾಮಾತ್ರ ಯಾವುದೇ ವಿದೇಶಿಕಂಪೆನಿ ತನ್ನ ಸೂಪರ್ ಮಾರ್ಕೆಟ್ ತೆರೆಯಬೇಕಾದರೆ ಅದು ಭೂಮಿಪುತ್ರರ

ಮುಖಾಂತರ ಮಾತ್ರ ಸಾಧ್ಯವೆಂದು ತಾಕೀತು ಮಾಡಿತ್ತು.

ಸಗಟು ವ್ಯಾಪಾರಕ್ಕೆ ಅನುಮತಿ ನೀಡಿದ್ದಕ್ಕೆ ಯಾರಿಗೂ ಅಭ್ಯಂತರವಿಲ್ಲ. ಆದರೆ ಈ ಸಗಟು ವ್ಯಾಪಾರ ಅಂತರ ರಾಷ್ಟ್ರೀಯ ಕಂಪೆನಿಗಳ ಅಥವಾ ದೊಡ್ಡ ದೊಡ್ಡ ದೇಸಿಯ ಕಂಪೆನಿಗಳ ಮುಖಾಂತರ ಅಸಂಘಟಿತ ವ್ಯಾಪಾರಿಗಳ ಸ್ಥಳಗಳನ್ನು ಆಕ್ರಮಿಸಿದಾಗ ಆಗುವ ಹಾನಿಯನ್ನು ಯಾರಿಗೂ ತಡೆಗಟ್ಟಲು ಸಾಧ್ಯವಿಲ್ಲ. ಅಮೇರಿಕಾದಲ್ಲಿ ಒಂದು ವಾಲ್‌ಮಾರ್ಟ್ ತನ್ನ ವ್ಯಾಪಾರದ ಮಳಿಗೆಯನ್ನು ತೆರೆದ ಕೂಡಲೇ ಅಕ್ಕ ಪಕ್ಕದ ಸಗಟು ವ್ಯಾಪಾರಿಗಳು ನಾಶವಾಗುತ್ತಾ ಹೋದದ್ದು ಜಗಜ್ಜಾಹೀರ.ಅಮೇರಿಕಾದಲ್ಲಿ ಪ್ರತೀ ವಾಲ್-ಮಾರ್ಟ್ ತನ್ನ ಮಳಿಗೆಗಳನ್ನು ತೆರೆದಂತೆಲ್ಲಾ ಕಡಿಮೆಯೆಂದರೂ ಎರಡು ಸಗಟು ವ್ಯಾಪಾರದ ಮಳಿಗೆಗಳು ಮುಚ್ಚಿಹೋಗುತ್ತವೆ. ಅಮೇರಿಕಾದಲ್ಲಿ ಮುನ್ನೂರು ಸಮುದಾಯಗಳು ಈಗಾಗಲೇ ತಮ್ಮ ನಡುವೆ ವಾಲ್-ಮಾರ್ಟ್‌ನ ಸೂಪರ್ ಮಾರ್ಕೆಟ್ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿದ್ದು ತೆರೆದ ಸಂಗತಿ. ಇದರ ಪರಿಣಾಮವೇ ಇವತ್ತೂ ಕೂಡ ನ್ಯೂಯಾರ್ಕ್ ಹಾಗೂ ಲಾಸ್ ಏಂಜೆಲಿಸ್ ನಂತಹ ಮಹಾನಗರದಲ್ಲಿ ವಾಲ್‌ಮಾರ್ಟ್ ತನ್ನ ಮಳಿಗೆಗಳನ್ನು ತೆರೆಯಲು ಸಾಧ್ಯವಾಗದಿರುವುದು. ವಾಲ್ ಮಾರ್ಟ್ ಪೋರ್ಟೋರಿಕೋದಲ್ಲಿ ಮಾಡಿದ ಅವಾಂತರವೇ ಸಾಕು. ೧೯೯೩ ರಲ್ಲಿ ಆ ದೇಶವನ್ನು ಪ್ರವೇಶಿಸಿದ ವಾಲ್ ಮಾರ್ಟ್‌ನ ಪ್ರಭಾವದಿಂದಾಗಿ ೧೩೦ ಸಣ್ಣ ಸಗಟು ಮಳಿಗೆಗಳು ದಿವಾಳಿಯಾದದ್ದು ವಾಸ್ತವ. ಇದೇ ರೀತಿಯ ಸ್ಥಿತಿ ಥಾಯ್‌ಲ್ಯೆಂಡ್ ನಲ್ಲಿ ಕಂಡು ಬರುತ್ತಿದೆ.

ಈ ಸಂದರ್ಭದಲ್ಲಿ ವಾಲ್ ಮಾರ್ಟ್‌ಗೆ ಅಮೇರಿಕಾದೊಳಗೆ ಬಂದಿರುವ ವಿರೋಧವನ್ನು ಉಲ್ಲೇಖಿಸುವುದು ಉತ್ತಮ. ವಾಲ್ ಮಾರ್ಟ್‌ನ ವಿರೋಧಿಗಳ ಗುರುವೆಂದೇ ಕರೆಯಲ್ಪಡುವ ಅಲ್ ನಾರ್ಮನ್ ತನ್ನ ಹೊಸ ಪುಸ್ತಕ "ದಿ ಕೇಸ್ ಎಗೇನ್ಸ್ಟ್ ವಾಲ್ ಮಾರ್ಟ್"ನಲ್ಲಿ ವಾಲ್ ಮಾರ್ಟ್‌ನ ತಪ್ಪುಗಳನ್ನು ಈ ರೀತಿ ಪಟ್ಟಿ ಮಾಡುತ್ತಾನೆ : ಕಾರ್ಮಿಕರಿಗೆ ತಿಗತೆ ಶ್ರಮಕ್ಕೆ ಸಂಬಳ ನಿರಾಕರಿಸುವುದು, ವಿದೇಶಗಳಲ್ಲಿ ಬಾಲ ಕಾರ್ಮಿಕರನ್ನು ಬಟ್ಟೆ ತಯಾರಿಕಾ ಅಂಗಡಿಗಳಲ್ಲಿ ದುಡಿಸುವುದು, ತದ್ರೂಪಿ ವಸ್ತುಗಳನ್ನು ಮಾರುವುದು, ಪರಿಸರ ಸೂಕ್ಷ್ಮವಾಗಿರುವ ಭೂಮಿಗಳನ್ನು ನಾಶ ಮಾಡುವುದು ಇತ್ಯಾದಿ.

ಈ ಹೊಸ ನೀತಿ ಕಂಪೆನಿ ಆಧಾರಿತ ಸಂಘಟಿತ ಸಗಟು ವ್ಯಾಪಾರಿಗಳಿಗೆ ಪೂರಕವಾಗಿದೆಯೇ ಹೊರತು ಅಸಂಘಟಿತ ಅಸಂಖ್ಯಾತ ಸಗಟು ವ್ಯಾಪಾರಿಗಳಿಗಲ್ಲ. ಬೃಹತ್ ಕಂಪೆನಿಗಳ ಸಾವಿರಾರು ಸೂಪರ್ ಮಾರ್ಕೆಟ್, ಬಜಾರ್, ಮಾಲ್,ಹೈಪರ್ ಮಾರ್ಕೆಟ್ ಎದುರು ಸಾಮಾಜಿಕ ಭದ್ರತೆಗಳಿಲ್ಲದ ಅಸಂಘಟಿತ ಸಗಟು ವ್ಯಾಪಾರಿಗಳು ನಿರ್ನಾಮವಾಗುವುದು ವಾಸ್ತವ. ಅಂದರೆ ಕಿರಾಣಿ ಭಂಡಾರಗಳು, ಕಾಮತರ ದಿನಸಿ ಅಂಗಡಿಗಳು ಹಾಗೂ ಶೆಟ್ಟರ ಅಂಗಡಿಗಳು ಶಾಶ್ವತವಾಗಿ ಇತಿಹಾಸದ ಭಾಗವಾಗುವ ದಿನಗಳು ದೂರವಿಲ್ಲ. ಸುಖ ದುಃಖವನ್ನು ವಿಚಾರಿಸುತ್ತಾ, ಅಕ್ಕಪಕ್ಕದ ಕತೆಗಳೊಂದಿಗೆ, ದೇಶವನ್ನು ಕಟ್ಟುವ ಕನಸುಗಳೊಂದಿಗೆ ವ್ಯಾಪಾರ ಮಾಡುವ ಕೊಗ್ಗ ಅಥವಾ ಮರ್ತಪ್ಪ ಕಾಮತರು ಭವಿಷ್ಯತ್ತಿನಲ್ಲಿ ದೊರೆಯಲಾರರು, ಶ್ರೀನಿವಾಸ ಶೆಟ್ಟರು ಕೂಡ ಸಿಗಲಾರರು. ಅವರೆಲ್ಲ ಟ್ಯಾಗೋರ್‌ರವರ ಕತೆಯಲ್ಲಿ ಬರುವ "ಕಾಬೂಲಿವಾಲ"ನ ತರಹ ಇತಿಹಾಸದ ಭಾಗವಾಗುವ ದಿನಗಳು ದೂರವಿಲ್ಲ.. □

ಕಾವ್ಯ

## ಬೇಡ ಹರಡಿದ ಬಲೆ

ವಿಶಾಲ

ಅವನ ಕನಸಿವೆ ಅವನಿಗೆ
ಒಂದು ಗಿಳಿ, ಒಂದು ಹಕ್ಕಿ
ಒಂದೇ ಒಂದು ಹಕ್ಕಿ ಹಿಂಡು
ಒಂದು ಸಮೂಹ
ಒಂದೇ ಒಂದು ದೇಶ
ಯಾವುದಾದರೇನು ಪ್ರವೇಶ- ಅರೆದಿಟ್ಟಿದ್ದಾನೆ ಮಸಾಲೆ.
ಅವನಿಗೆ ಗೊತ್ತು
ಹಕ್ಕಿ ಬೀಳುತ್ತವೆ; ಕಾಳುಗಳಿವೆ ಒಳಗೆ
ಹಸಿವೆಯಿದೆ ಒಳಗೆ
ನಾನೆಂಬ ಹಸಿವಿದೆ.
ಬದುಕೆಂಬ ಹಸಿವಿದೆ.
ಖ್ಯಾತಿಯೆಂಬ ಹಸಿವಿದೆ.
ಬಲೆ-ಅವನಿಗೆ ಭರವಸೆ ಇದೆ.



ಬೇಡ-ಹಕ್ಕಿ
ಬೇಟೆಗಾರ-ಹುಲಿಗಳ ಜಗತ್ತು
ಬೇಟೆಗಾರನಿಗೆ ಅವನದೇ ಗತ್ತು-ಕರಾಮತ್ತು
ಇಡೀ ಜಗದೊಳಗೆ ಬಲೆ ಬಿತ್ತು.

ಹಕ್ಕಿ ಕೂರುತ್ತವೆ.
ಒಡಲ ಹಸಿವಿನಲ್ಲಿ ಎಚ್ಚರವಿರುತ್ತದೆ,
ಸ್ವಾರ್ಥದ ಹಸಿವಿನಲ್ಲಿ ಕುರುಡುತನವಿರುತ್ತದೆ
ಹಕ್ಕಿ ಬೀಳುತ್ತದೆ ಬಲೆಯೊಳಗೆ.... ಒಳಗೆ

ಹಾರಾಡುವ ಕನಸ ಹಕ್ಕಿಗಳು
ಹಾಡಬೇಕು-ಹಾರಾಡಬೇಕು ಜಗದೊಳಗೆ
ಕಲಿಸಬೇಕು ಹಾರಾಟ
ಈಸಬೇಕು-ಇದ್ದು ಜೈಸಬೇಕು, ಬೇಕು ಹೋರಾಟ
ಹಸಿವೆಯಿದೆ ಒಡಲೊಳಗೆ
ಜಗದೆಚ್ಚರವಿದೆ ಹೃದಯದೊಳಗೆ

* * * * * *

ಹೀಗೆ ಅಯಿತು
ಹಕ್ಕಿ ಸಮೂಹ ಬಲೆಯೊಳಗೆ ಸಿಕ್ಕಿ,
ಅವು ಒಡಲ ಹಸಿವಿನ ಹಕ್ಕಿ

# ಹಕ್ಕಿಯೂ ಬೇಡನೂ ನಿಶ್ಶಸ್ತ್ರ ಜೊತೆಗಾರ

○ ಸುನಿಲ್ ಎ.

ಎಚ್ಚರವಿತ್ತು.
ಹಕ್ಕಿ ಹಿಡಿಯಲು ಬೀಸಿದ ಬಲೆ
ಬಲೆಯನ್ನೇ ಹಿಡಿದು ರೆಕ್ಕೆ ಬಡಿದವು ಹಕ್ಕಿ
ಬೇಡ ಕಕ್ಕಾಬಿಕ್ಕಿ.

ನಾನೆಂಬ ಜಗದ ಹಕ್ಕಿಗೇನು ಗೊತ್ತು?
ನಗುತ್ತವೆ
ಹಾಡುವ ಸ್ವಾತಂತ್ರ್ಯವನ್ನೇ ಗೇಲಿ ಮಾಡುತ್ತವೆ !
ಹಾರಾಟವನ್ನೇ ಪುಕ್ಕಲೆನ್ನುತ್ತವೆ.
ಹೋರಾಟವನ್ನೇ ವ್ಯರ್ಥವೆನ್ನುತ್ತವೆ!
ಸ್ವಾರ್ಥದ ಹಸಿವೆಯಿಂದ ಕಾಳು ಹೆಕ್ಕಲು ಕೂತು
ತಿನ್ನುತ್ತಾ... ತಿನ್ನುತ್ತಾ...
ತಾನೂ ಬಲೆಯೊಳಗಿದ್ದೇನೆಂದೂ
ತಾನೂ ಒಂದು ಬಲಿಯೆಂದೂ
ಅದಕ್ಕೇನು ಗೊತ್ತಾ ? ಪಾಪ !

ಎಚ್ಚರವಿದ್ದವನೂ ಬಲೆಯೊಳಗೆ ಬೀಳಬಹುದು
ಆದರೆ ಬಲೆಯೊಳಗೆ ಇದ್ದಾಗಲೂ ಎಚ್ಚರವಾಗದಿದ್ದ ಹಕ್ಕಿ
ತನ್ನ ಸಮೂಹವನ್ನೇ ಕರೆಯುತ್ತದೆ ಬಲೆಯೊಳಗೆ

* * * * * * * *

ಒಡಲ ಹಸಿವಿನ ಬಿಳಿ ಕನಸಿನ ಹಕ್ಕಿಗಳು ಇವು
ಸಂದೇಶ ಬಿತ್ತರಿಸಲೂ ಪಾರಿವಾಳ
ತುಂಡರಿಸಬೇಕು ಬಲೆ

ಹಾರಿದವು
ಬಿಳಿ ಬೇಟೆಗಾರನ ಬಲಿ ಕಪ್ಪುಹಕ್ಕಿಗಳು
ವಿಯೆಟ್ನಾಂ ಹಕ್ಕಿಗಳು,
ಅಕ್ಟೋಬರ್ ಹಕ್ಕಿಗಳು, ಚುಂಗ್‌ಕಾಂಗ್ ಹಕ್ಕಿಗಳು
ಹಾರುತ್ತಲೇ ಇರುವ ಕೆಂಪುಬಣ್ಣದ ಹಕ್ಕಿಗಳು
ನೀಲಿ ಬಣ್ಣದ ಹಕ್ಕಿಗಳು
ಹಸಿರು ಹಕ್ಕಿಗಳು. ಕಾಲಿಗೆ ಬಲೆಯೆಳೆ ಸಿಕ್ಕಿದರೂ
ಕನಸ ರೆಕ್ಕೆಗೆ ಬಲವಿದೆ.
ಭೇಟಿ ಮಾಡುವ ಜಗದರಿವಿದೆ,
ಬಡಿದ ರೆಕ್ಕೆ ಮೀಟಿದ ಅಲೆ ಕತ್ತಲೆಕುಳಿಗಳಲ್ಲೆಲ್ಲ.
ಜೊತೆ ಜೊತೆಗೇ ಇರುತ್ತವೆ
ಗೇಲಿ ಮಾಡುವ ಹಕ್ಕಿಗಳೂ
ಬಣ್ಣ ಬಳಿದುಕೊಂಡ ಹಕ್ಕಿಗಳೂ
ಅವರವರದೇ ನೆಲೆಯೊಳಗೆ, ನಿಲುವೊಳಗೆ
ಬಲೆಯೊಳಗೆ !

* * * * * * *

ತಮ್ಮಾ, ಏನೂ ಆಗಬೇಡ ನೀನು ಕೊನೆಗೆ
ಬೀದಿಯಲ್ಲಿ ರಕ್ತ ಕಂಡಲ್ಲಿ ಪುಕ್ಕಲುತನವಿದ್ದಲ್ಲಿ
ಸ್ನೇಹಿತ ಹಕ್ಕಿಗೆ ಗುರಿಯಿಟ್ಟ ಬೇಡನಿಗೆ,ಸಾಲುಗಳಲಿ
ಕಾಲುಕಚ್ಚುವ ಇರುವೆಯಾದರೂ ಆಗು
ಆಗಿಲ್ಲವೆಂದರೂ ಪ್ರಣಾಮಗಳು
ಆಗಬೇಡ
ಹಕ್ಕಿಯನ್ನೇ ಗೇಲಿಮಾಡುತ್ತಾ
ಬೇಡನನ್ನು ಉತ್ತೇಜಿಸುವ
ನಿಶ್ಯಸ್ತ್ರ ಜೊತೆಗಾರ ಬೇಡ.

# ಅಭಿವೃದ್ಧಿಯ ಸಾಮಾಜಿಕ ಪ್ರಶ್ನೆ?

-೨೪-

ಡಾ. ಟಿ.ಆರ್. ಚಂದ್ರಶೇಖರ್

ನಮ್ಮಲ್ಲಿ ಸಾಮಾಜಿಕ ಬದಲಾವಣೆಯನ್ನು ಅಭಿವೃದ್ಧಿಗೆ ಸಂವಾದಿಯಾಗಿ ಬಳಸುವುದುಂಟು. ಅನೇಕ ಸಮಾಜಶಾಸ್ತ್ರಜ್ಞರು ಮತ್ತು ಅಭಿವೃದ್ಧಿ ವಿದ್ವಾಂಸರು ಅಭಿವೃದ್ಧಿಯನ್ನು ಸಾಮಾಜಿಕ ಪರಿವರ್ತನೆಯ ನೆಲೆಗಟ್ಟಿನಲ್ಲಿ ಪರಿಭಾವಿಸಿಕೊಳ್ಳುವುದು ಕಂಡುಬರುತ್ತದೆ. ನಮ್ಮ ಸಮಾಜ ಅಥವಾ ಹಾಗೆ ನೋಡಿದರೆ ಯಾವುದೇ ಸಮಾಜವಾಗಿರಲಿ ಅದು ಅಖಂಡವಾಗಿರಲು, ಒಂದು ಏಕರೂಪಿ ವ್ಯವಸ್ಥೆಯಾಗಿರುವುದು ಸಾಧ್ಯವಿಲ್ಲ. ಅದು ಅನೇಕ ಸಾಮಾಜಿಕ ಗುಂಪುಗಳಿಂದ ಕೂಡಿರುತ್ತದೆ. ಅಲ್ಲಿ ಲಿಂಗ ಸಂಬಂಧಿ ಭಿನ್ನತೆಯಿರುತ್ತದೆ. ಅಲ್ಲಿ ಪ್ರದೇಶ ಸಂಬಂಧಿ ಭಿನ್ನತೆಯಿರುತ್ತದೆ. ಈ ಎಲ್ಲ ಗುಂಪುಗಳು ಅಧಿಕಾರದ ಮೇಲೆ ಸಮಾನವಾದ ನಿಯಂತ್ರಣ ಸಾಧಿಸಿಕೊಳ್ಳಲು ಅಥವಾ ಅಧಿಕಾರವನ್ನು ಸ್ಥಾಪಿಸಲು ಸಾಧ್ಯವಿಲ್ಲ.

**ಪ್ರಸ್ತಾವನೆ:**

ನಾವು ಸಾಮಾನ್ಯವಾಗಿ ಆರ್ಥಿಕ ಅಭಿವೃದ್ಧಿ ಎಂಬ ಪ್ರಣಾಳಿಕೆಯನ್ನು ಕೇಳಿದ್ದೇವೆ. ಇದು ಹೆಚ್ಚು ಪ್ರಚಲಿತದಲ್ಲಿರುವ ಪರಿಭಾವನೆ. ಇದು 1950ರ ನಂತರ, ಅಂದರೆ ಎರಡನೆಯ ಮಹಾಯುದ್ಧದ ನಂತರ ಹೆಚ್ಚು ಚಾಲ್ತಿಗೆ ಬಂದ ಪರಿಭಾವನೆಯಾಗಿದೆ. ಇತ್ತೀಚೆಗೆ ಸಾಮಾಜಿಕ ಅಭಿವೃದ್ಧಿ ಎಂಬ ಪ್ರಣಾಳಿಕೆಯು ಬಳಕೆಗೆ ಬರುತ್ತಿದೆ. ಯುಎನ್‌ಡಿಪಿಯು 1990ರಿಂದ 'ಮಾನವ ಅಭಿವೃಧಿವರದಿ'ಗಳನ್ನು ಪ್ರಕಟಿಸಲು ಶುರು ಮಾಡಿದ ಮೇಲೆ ಮತ್ತು ಅಮರ್ತ್ಯಸೇನ್ – ಮೆಹಬೂಬ್ ಉಲ್‌ಹಕ್ ಅವರ ಬರಹಗಳ ಹಿನ್ನೆಲೆಯಲ್ಲಿ ಸಾಮಾಜಿಕ ಅಭಿವೃದ್ಧಿ ಎಂಬುದು ಹೆಚ್ಚು ಪ್ರಚಲಿತಕ್ಕೆ ಬಂದಿದೆ. ವಾಸ್ತವವಾಗಿ ಸಾಮಾಜಿಕ ಎನ್ನುವುದು ಸಮಾಜ, ಆರ್ಥಿಕತೆ ಮತ್ತು ರಾಜಕೀಯವನ್ನು ಒಳಗೊಂಡಿರುವ ಸಂಯುಕ್ತ ಸಂಗತಿಯಾಗಿದೆ. ಆದರೆ ಆರ್ಥಿಕತೆಯು ಅತ್ಯಂತ ಸೀಮಿತವಾದ ಏಕಘಟಕ ಪರಿಭಾವನೆಯಾಗಿದೆ. ಅದು ಕೇವಲ ಆರ್ಥಿಕ ಚಟುವಟಿಕೆಗಳನ್ನು ಮಾತ್ರ ಒಳಗೊಂಡಿರುತ್ತದೆ. ಆದ್ದರಿಂದ 'ಸಾಮಾಜಿಕತೆ' ಎನ್ನುವುದು ವಿಸ್ತೃತವಾದ ಪರಿಭಾವನೆಯಾಗಿದೆ.

ನಮ್ಮಲ್ಲಿ ಸಾಮಾಜಿಕ ಬದಲಾವಣೆಯನ್ನು ಅಭಿವೃದ್ಧಿಗೆ ಸಂವಾದಿಯಾಗಿ ಬಳಸುವುದುಂಟು. ಅನೇಕ ಸಮಾಜ ಶಾಸ್ತ್ರಜ್ಞರು ಮತ್ತು ಅಭಿವೃದ್ಧಿ ವಿದ್ವಾಂಸರು ಅಭಿವೃದ್ಧಿಯನ್ನು ಸಾಮಾಜಿಕ ಪರಿವರ್ತನೆಯ ನೆಲೆಗಟ್ಟಿನಲ್ಲಿ ಪರಿಭಾವಿಸಿಕೊಳ್ಳುವುದು ಕಂಡುಬರುತ್ತದೆ. ನಮ್ಮ ಸಮಾಜ ಅಥವಾ ಹಾಗೆ ನೋಡಿದರೆ ಯಾವುದೇ ಸಮಾಜವಾಗಿರಲಿ ಅದು ಅಖಂಡವಾಗಿರಲು, ಒಂದು ಏಕರೂಪಿ ವ್ಯವಸ್ಥೆಯಾಗಿರುವುದು ಸಾಧ್ಯವಿಲ್ಲ. ಅದು ಅನೇಕ ಸಾಮಾಜಿಕ ಗುಂಪುಗಳಿಂದ ಕೂಡಿರುತ್ತದೆ. ಅಲ್ಲಿ ಲಿಂಗ ಸಂಬಂಧಿ ಭಿನ್ನತೆಯಿರುತ್ತದೆ. ಅಲ್ಲಿ ಪ್ರದೇಶ ಸಂಬಂಧಿ ಭಿನ್ನತೆಯಿರುತ್ತದೆ. ಈ ಎಲ್ಲ ಗುಂಪುಗಳು ಅಧಿಕಾರದ ಮೇಲೆ ಸಮಾನವಾದ ನಿಯಂತ್ರಣ ಸಾಧಿಸಿಕೊಳ್ಳಲು ಅಥವಾ ಅಧಿಕಾರವನ್ನು ಸ್ಥಾಪಿಸಲು ಸಾಧ್ಯವಿಲ್ಲ. ಈ ಸಮುದಾಯಗಳಿಗೆ ಅಧಿಕಾರದ ಜೊತೆಯಲ್ಲಿ ವಿವಿಧ ಬಗೆಯ ಸಂಬಂಧವಿರುತ್ತದೆ. ಅದು ಜಾತಿ ಸಂಬಂಧಿಯಾಗಿರುತ್ತದೆ. ಅದು ಭೂಮಿ ಸಂಬಂಧಿಯಾಗಿರುತ್ತದೆ. ಅದು ಲಿಂಗ ಸಂಬಂಧಿಯಾಗಿರುತ್ತದೆ.

ಈ ಸಂಬಂಧಗಳಿಗೆ ಅನುಗುಣವಾಗಿ ಅಭಿವೃದ್ಧಿಯ ಫಲಗಳನ್ನು ಅವು ಪಡೆದುಕೊಳ್ಳುತ್ತಿರುತ್ತವೆ. ಅಭಿವೃದ್ಧಿಯ ಫಲಗಳು ವಿವಿಧ ಸಾಮಾಜಿಕ ಗುಂಪುಗಳಿಗೆ ವಿವಿಧ ರೀತಿಯಲ್ಲಿ ಪ್ರಾಪ್ತವಾಗುವ ಪರಿಯು ಅನೇಕ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಂಗತಿಗಳನ್ನು ಅವಲಂಬಿಸಿಕೊಂಡಿರುತ್ತದೆ. ಅಭಿವೃದ್ಧಿ ಎನ್ನುವುದು ಕೇವಲ ಆರ್ಥಿಕತೆಗೆ ಸಂಬಂಧಿಸಿದ ಸಂಗತಿಯಲ್ಲವೆನ್ನುವುದು ಇಂದು ಸ್ಪಷ್ಟವಾಗುತ್ತಿದೆ. ಸಾಮಾಜಿಕ ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿಗಳ ನಡುವಿನ ಮುಖ್ಯ ಭಿನ್ನತೆಯೆಂದರೆ ಮೊದಲನೆಯದು ಜನರನ್ನು ಮುಖ್ಯ ಧಾತುವನ್ನಾಗಿ ಮಾಡಿಕೊಂಡಿದ್ದರೆ ಎರಡನೆಯದರಲ್ಲಿ ಜನರನ್ನು ಕೇವಲ ಸಂಪನ್ಮೂಲವನ್ನಾಗಿ, ಸಾಧನವನ್ನಾಗಿ ಮಾತ್ರ ಪರಿಭಾವಿಸಿ ಕೊಂಡಿದೆ. ಜನರು ಅಭಿವೃದ್ಧಿಯ ಸಂಪನ್ಮೂಲವೂ ಹೌದು, ಅವರು ಅದನ್ನು ಅನುಭವಿಸುವವರೂ ಹೌದು. ಜನರ ಕರ್ತೃತ್ವ ಪಾತ್ರವನ್ನು ಇಲ್ಲಿ ಮನ್ನಿಸಲಾಗಿದೆ. ಪ್ರಸ್ತುತ ಪ್ರಬಂಧದ ಮೊದಲ ಭಾಗದಲ್ಲಿ ಸಾಮಾಜಿಕ ಅಭಿವೃದ್ಧಿಯ ಸೈದ್ಧಾಂತಿಕ ಚೌಕಟ್ಟನ್ನು ಪರಿಶೀಲಿಸಲು ಪ್ರಯತ್ನಸಲಾಗಿದೆ. ಎರಡನೆಯ ಭಾಗದಲ್ಲಿ ಹೈದರಾಬಾದ್ ಕರ್ನಾಟಕದ ಜನರು ಎದುರಿಸುತ್ತಿರುವ ಅಭಿವೃದ್ಧಿ ಸಂಬಂಧಿ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಲಾಗಿದೆ.

**ಅಭಿವೃದ್ಧಿಯ ಸಾಮಾಜಿಕತೆ**

ಲಾಗಾಯ್ತಿನಿಂದಲೂ ಅಭಿವೃದ್ಧಿಯನ್ನು ಆರ್ಥಿಕ ಸಂಗತಿಯನ್ನಾಗಿ ಪರಿಭಾವಿಸಿಕೊಳ್ಳುವುದು ಕಂಡುಬರುತ್ತದೆ. ಆದರೆ ಇದೊಂದು ಸೀಮಿತವಾದ ಸಂಗತಿಯೆನ್ನುವುದನ್ನು ವಿದ್ವಾಂಸರು ಬಹಳ ಹಿಂದಿನಿಂದಲೂ ಟೀಕಿಸುತ್ತಾ ಬಂದಿದ್ದಾರೆ. ಜನಸಂಖ್ಯೆ ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧ ಕುರಿತಂತೆ ಈ ಟೀಕೆಯು ಹೆಚ್ಚು ಮುಂಚೂಣಿಗೆ ಬಂದಿದೆ. ಜನಸಂಖ್ಯಾ ಬೆಳವಣಿಗೆಯನ್ನು ತಡೆಯುವ ವಿಷಯದಲ್ಲಿ 'ಆರ್ಥಿಕ ಅಭಿವೃದ್ಧಿಯು ಅತ್ಯಂತ ಪರಿಣಾಮಕಾರಿಯಾದ ಕುಟುಂಬ ಯೋಜನಾ ಸಾಧನ' ಎಂಬ ಪ್ರಸಿದ್ಧ ಮಾತು ಇಂದು ಹುಸಿಯಾಗಿದೆ. ಇದಕ್ಕೆ ಪ್ರತಿಯಾಗಿ ವರಮಾನ ಸಂಬಂಧಿ, ಸರಕು ಸಂಬಂಧಿ ಅಭಿವೃದ್ಧಿಗೆ ಪ್ರತಿಯಾಗಿ ಸಾಕ್ಷರತೆ, ಶಿಕ್ಷಣ, ಉದ್ಯೋಗ, ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಸಹಭಾಗಿತ್ವ ಮುಂತಾದವು ಸಂತಾನೋತ್ಪತ್ತಿಯನ್ನು ನಿಯಂತ್ರಿಸುವಲ್ಲಿ, ಸಂತಾನೋತ್ಪತ್ತಿ ಪ್ರಮಾಣವನ್ನು ಕಡಿಮೆಮಾಡುವುದರಲ್ಲಿ ವರಮಾನ ಸಂಬಂಧಿ ಅಭಿವೃದ್ಧಿಗಿಂತ ಹೆಚ್ಚು ಪರಿಣಾಮಕಾರಿ ಎಂಬುದು ಅನೇಕ ಅಧ್ಯಯನಗಳಿಂದ ದೃಢವಾಗಿದೆ. ಲಿಂಗ ಸಮಾನತೆಯನ್ನು ಒಳಗೊಂಡ ಸಾಮಾಜಿಕ ಪರಿವರ್ತನೆಯು ಜನಸಂಖ್ಯೆಯ ಬೆಳವಣಿಗೆ ಮೇಲೆ ತೀವ್ರತರವಾದ ಪರಿಣಾಮವನ್ನು ಬೀರುತ್ತದೆ ಎಂಬುದು ಇಂದು ಸಿದ್ಧವಾಗಿದೆ.

ಈ ಎಲ್ಲ ಕಾರಣಗಳಿಂದ ಸಾಮಾಜಿಕ ಅಭಿವೃದ್ಧಿ ಎಂಬ ಪರಿಭಾವನೆಯು ನಮ್ಮಲ್ಲಿ ಹೆಚ್ಚು ಪ್ರಸಿದ್ಧಿಗೆ ಬಂದಿದೆ. ಮಾನವ ಅಭಿವೃದ್ಧಿ ವರದಿಗಳ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕದ ರೂವಾರಿಯಾದ ಮೆಹಬೂಬ್ ಉಲ್ ಹಕ್ ಅವರು ತಮ್ಮ ಪ್ರಸಿದ್ಧ ಕೃತಿಯೊಂದರಲ್ಲಿ (1996) 'ಜನರ ಬದುಕು ಎನ್ನುವುದು ಕೇವಲ ವರಮಾನದ ಮೊತ್ತವಲ್ಲ'ವೆಂದು ಮಾರ್ಮಿಕವಾಗಿ ಹೇಳಿದ್ದಾರೆ. ಆರ್ಥಿಕ ಅಭಿವೃದ್ಧಿಯನ್ನುವುದು ಅಥವಾ ವರಮಾನ ಅಭಿವೃದ್ಧಿ ಎಂಬ ಪ್ರಣಾಳಿಕೆಯು ಜನರ ಬದುಕನ್ನು ಸಮೃದ್ಧಗೊಳಿಸುವ ಅನೇಕ ಸಂಗತಿಗಳನ್ನು ಒಳಗೊಳ್ಳುವುದಿಲ್ಲ. ಉದಾಹರಣೆಗೆ ಅದು ಸ್ವಾತಂತ್ರ್ಯ, ಮಾನವ ಹಕ್ಕುಗಳು, ಸಾಮಾಜಿಕ ನ್ಯಾಯ, ಘನತೆಯಿಂದ ಕೂಡಿದ ಬದುಕು, ಲಿಂಗ ಸಮಾನತೆ, ಸಂಗೋಪನಾ ದುಡಿಮೆ (ಕೇರಿಂಗ್ ಲೇಬರ್) ಮುಂತಾದ ಸಂಗತಿಗಳನ್ನು ಒಳಗೊಳ್ಳುವುದಿಲ್ಲ. ಅದು ಸಾರಾಸಗಟಾಗಿ ಸರಕು ಸಂಬಂಧಿ ಪ್ರಣಾಳಿಕೆಯಾಗಿದೆ. ಅದರ ಮೂಲದಲ್ಲಿರುವುದು ಯುಟಿಲಿಟೇರಿಯನ್ ಸಿದ್ಧಾಂತವಾಗಿದೆ.

ಇಲ್ಲಿ ಸರಕು ಮತ್ತು ಸೇವೆಗಳ ಗರಿಷ್ಠ ಅನುಭೋಗವೇ ಸುಖಿ–ಸಮೃದ್ಧ ಬದುಕಿನ ಮಾಪನವಾಗಿದೆ. ಆದರೆ ಅಮರ್ತ್ಯಸೇನ್,

ಮಾರ್ತನುಸುಬೌಮ್, ಸ್ಟೀವರ್ನ್ಸ್, ಜೀನ್ ಡ್ರೀಜ್ ಮುಂತಾದವರು ಇದನ್ನು ತೀವ್ರವಾಗಿ ಟೀಕಿಸುತ್ತಿದ್ದಾರೆ. ಜನರ ಬದುಕು ಕೇವಲ ವರಮಾನದಿಂದ ಅಥವಾ ಬೃಹತ್ ಪ್ರಮಾಣದ ಉತ್ಪಾದನೆಯಿಂದ ಸಮೃದ್ಧವಾಗುವುದಿಲ್ಲ. ಸರಕು-ಸೇವೆಗಳಿಗೆ ಸಂಬಂಧಿಸಿದ ಆಯ್ಕೆಯ ವ್ಯಾಪ್ತಿಯ ವಿಸ್ತರಣೆಯಿಂದ ಬದುಕು ಸಮೃದ್ಧವಾಗುವುದಿಲ್ಲ. ಅದು ಅನೇಕ ಇತರೆ ಸಂಗತಿಗಳನ್ನು ಅವಲಂಬಿಸಿದೆ. ಈ ವರಮಾನ, ಉತ್ಪನ್ನ, ಕೈಗಾರಿಕೀಕರಣ, ಬಂಡವಾಳ(ದೇಶಿ-ವಿದೇಶಿ), ತಂತ್ರಜ್ಞಾನ ಮುಂತಾದ ಸಂಗತಿಗಳು ಅಭಿವೃದ್ಧಿಯ ಸಾಧನಗಳೇ ವಿನಾ ಅವೇ ಅಭಿವೃದ್ಧಿಯಲ್ಲ. ಆದರೆ ಆರ್ಥಿಕ ಅಭಿವೃದ್ಧಿಯಲ್ಲಿ ವರಮಾನದ ವರ್ಧನೆಯೇ ಅಭಿವೃದ್ಧಿಯೆನಿಸಿಕೊಂಡಿದೆ. ಕೈಗಾರಿಕೀಕರಣವೇ ಅಭಿವೃದ್ಧಿ ಎನಿಸಿಕೊಂಡಿದೆ. ಉದಾಹರಣೆಗೆ ನಮ್ಮ ರಾಜ್ಯ ಸರ್ಕಾರವು ಇನ್ನು ಒಂದೆರಡು ವರ್ಷಗಳಲ್ಲಿ ನಮ್ಮ ಬಜೆಟ್ಟಿನ ಗಾತ್ರವನ್ನು ಒಂದು ಲಕ್ಷ ಕೋಟಿಗೇರಿಸುವುದಾಗಿ ಹೇಳಿಕೊಳ್ಳುತ್ತಿದೆ. ಅದಕ್ಕೆ ಬಜೆಟ್ಟಿನ ಗಾತ್ರವನ್ನು ಹೆಚ್ಚಿಸುವುದೇ ಅಭಿವೃದ್ಧಿ. ಕೇಂದ್ರ ಸರ್ಕಾರವು ತನ್ನ ಜಿಡಿಪಿ ಬೆಳವಣಿಗೆ ಗತಿಯನ್ನು ಎರಡು ಅಂಕಿಗಳಿಗೆ ಹೆಚ್ಚಿಸುವುದನ್ನು ಪ್ರಥಮ ಆದ್ಯತೆಯನ್ನಾಗಿ ಮಾಡಿಕೊಂಡಿದೆ.

ಅದಕ್ಕೆ ಜಿಡಿಪಿಯ ಏರಿಕೆಯೇ ಅಭಿವೃದ್ಧಿ. ವಾಸ್ತವವಾಗಿ ಜಿಡಿಪಿಯು ಅಭಿವೃದ್ಧಿಯನ್ನು ಮಾಪನ ಮಾಡುವ ಸಾಧನವಾಗಿದೆ. ಒಂದು ದೇಶದ ಜಿಡಿಪಿಯು ಅಧಿಕಗೊಳ್ಳಬಹುದು. ಒಂದು ದೇಶದ ಉತ್ಪನ್ನದ ಪ್ರಮಾಣ ಅಗಾಧವಾಗಿ ಹೆಚ್ಚಬಹುದು. ಆದರಿಂದ ಜನರ ಬದುಕು ಸಮೃದ್ಧವಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಅಲ್ಲಿ ವರಮಾನದ ಏರಿಕೆಯ ಜೊತೆಯಲ್ಲಿ ಬಡತನವು ಅಧಿಕವಾಗುತ್ತಿರಬಹುದು. ಅಲ್ಲಿ ಲಿಂಗ ಅಸಮಾನತೆಯು ಉಲ್ಬಣಗೊಳ್ಳುತ್ತಿರಬಹುದು. ಸಾಮಾಜಿಕತೆಗೆ ಬೆನ್ನು ತಿರುಗಿನಿಂತ ಸಿದ್ಧಾಂತಗಳು ಮಾತ್ರ ಸರಕು-ಸರಂಜಾಮುಗಳಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಆಹಾರೋತ್ಪಾದನೆಯ ಮಾಹಿತಿಯು ಆಹಾರದ ಬಗ್ಗೆ ಮಾತ್ರ ಮಾಡಿರುವ ನಿರಪೇಕ್ಷ ಸಂಗತಿಯಾಗಿದ್ದರೆ ಹಸಿವಿಗೆ ಸಂಬಂಧಿಸಿದ ಸಂಗತಿಗಳು ಆಹಾರ ಮತ್ತು ಜನರ ನಡುವಿನ ಸಂಬಂಧ ಕುರಿತ ಹೇಳಿಕೆಗಳಾಗಿವೆ. ಈ ಸಂಬಂಧವು ಸಾಮಾಜಿಕವಾದುದಾಗಿರುತ್ತದೆ. ಯಾವ ವರ್ಗದ ಜನರಿಗೆ ಆಹಾರವು ಸಮೃದ್ಧವಾಗಿ ದೊರೆಯುತ್ತದೆ ಮತ್ತು ಯಾವ ವರ್ಗದ ಜನರಿಗೆ ದೊರೆಯುವುದಿಲ್ಲ ಎಂಬುದನ್ನು ನಿರ್ಧರಿಸುವ ಸಂಗತಿಯೆಂದರೆ ಸಾಮಾಜಿಕ ಸಂಬಂಧಗಳು.

ಈ ಸಂಬಂಧಗಳು ಸಮಾಜದಲ್ಲಿ ಏಣಿಶ್ರೇಣಿಗಳನ್ನು ನಿರ್ಮಿಸಿರುತ್ತವೆ. ಈ ಶ್ರೇಣೀಕರಣದ ಉನ್ನತ ಮಟ್ಟದಲ್ಲಿರುವ ಜನರಿಗೆ ಆಹಾರ ಸಮೃದ್ಧವಾಗಿ ದೊರೆತರೆ ಆ ಶ್ರೇಣಿಯ ಕೆಳಮಟ್ಟದಲ್ಲಿರುವ ಜನರಿಗೆ ಆಹಾರವು ಕೊರತೆಯಿಂದಿರುತ್ತದೆ ಅಥವಾ ದೊರೆಯುವುದಿಲ್ಲ ಅಥವಾ ದೊರೆತರೂ ಅದು ಸಮೃದ್ಧವಾಗಿರುವುದಿಲ್ಲ. ಈ ಬಗೆಯ ಸಂಬಂಧವನ್ನು ಜನ್ ಬ್ರಮನ್(2010) 'ಸಾಮಾಜಿಕ ಪ್ರಶ್ನೆಗಳು' ಎಂದು ಕರೆಯುತ್ತಾನೆ. ಅದೇ ರೀತಿಯಲ್ಲಿ ಅಭಿವೃದ್ಧಿಯ ಫಲಗಳು ಸಾಮಾಜಿಕ ಏಣಿಶ್ರೇಣಿಗಳಿಗೆ ಅನುಗುಣವಾಗಿ ಪ್ರಾಪ್ತವಾಗುತ್ತವೆ. ಅಭಿವೃದ್ಧಿಯನ್ನು ಕುರಿತಂತೆ ಚರ್ಚೆ ಮಾಡಲು ಸಾಮಾಜಿಕ ವ್ಯವಸ್ಥೆ ಬಗ್ಗೆ ಪೂರ್ಣ ಮಾಹಿತಿ ಇರಬೇಕಾಗುತ್ತದೆ.

ಸಾಮಾಜಿಕ ವ್ಯವಸ್ಥೆಯ ಬಗ್ಗೆ ಕುರುಡಾಗಿದ್ದರೆ ನಮಗೆ ಅಭಿವೃದ್ಧಿಯ ನೆಲೆ-ಬೆಲೆ ತಿಳಿಯುವುದಿಲ್ಲ. ಅಭಿವೃದ್ಧಿಯ ಮೌಲ್ಯಮಾಪನದಲ್ಲಿ ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ ವರಮಾನದಲ್ಲಿ ಏರಿಕೆಯಾಗಿದೆಯೋ ಅಥವಾ ಇಲ್ಲವೋ ಎಂಬುದಲ್ಲ. ಅದಕ್ಕೆ ಪ್ರತಿಯಾಗಿ ಅದು ಜನರ ಧಾರಣಾ ಸಾಮರ್ಥ್ಯವನ್ನು ನಿರ್ಧರಿಸುವ ಅವಕಾಶಗಳ ವ್ಯಾಪ್ತಿಯನ್ನು ವಿಸ್ತೃತಗೊಳಿಸಿದೆಯೇ ಅಥವಾ ಇಲ್ಲವೇ ಎಂಬುದಾಗಿದೆ. ಜನರು ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಸ್ವಾತಂತ್ರ್ಯ ಮತ್ತು ಸಾಮರ್ಥ್ಯವನ್ನು ಒದಗಿಸುತ್ತಿದೆಯೇ ಇಲ್ಲವೇ ಎಂಬುದಾಗಿದೆ.

> **ಈ ಸಾಮಾಜಿಕ ರಚನೆಯು ನಮ್ಮ ಸಂದರ್ಭದಲ್ಲಿ ಏಣಿ ಶ್ರೇಣಿಗಳಿಂದ ಕೂಡಿದೆ. ಆದ್ದರಿಂದ ಅಭಿವೃದ್ಧಿಯು ಎಲ್ಲ ಸಾಮಾಜಿಕ ಗುಂಪುಗಳ ನಡುವೆ ಸಮಾನವಾಗಿ ನಡೆಯುತ್ತಿಲ್ಲ. ವಿವಿಧ ಸಮುದಾಯಗಳ ನಡುವೆ ಅಭಿವೃದ್ಧಿಯಲ್ಲಿ ಅಂತರಗಳಿವೆ, ಅಸಮಾನತೆಗಳಿವೆ. ಈ ಅಂತರ ಮತ್ತು ಅಸಮಾನತೆಗಳು ಯಾವ ಯಾವ ಸಮುದಾಯಗಳಲ್ಲಿ ಯಾವ ಯಾವ ಪ್ರಮಾಣಗಳಲ್ಲಿವೆ, ಯಾವ ಯಾವ ಸ್ವರೂಪಗಳಲ್ಲಿವೆ ಎಂಬುದನ್ನು ತಿಳಿದುಕೊಳ್ಳಲು ನಮಗೆ ಖಚಿತವಾದ ಮತ್ತು ವಿಸ್ತೃತವಾದ ಮಾಹಿತಿಯಿಲ್ಲ. ಅದಕ್ಕಾಗಿ ಪ್ರಸ್ತುತ (2011) ಜನಗಣತಿಯ ಸಂದರ್ಭದಲ್ಲಿ ಜಾತಿಗಣತಿಯನ್ನು ನಡೆಸುವ ಅಗತ್ಯವಿದೆ. ವಾಸ್ತವವಾಗಿ ಇದು ಜಾತಿಗಣತಿಯಲ್ಲ. ಅದು ವರ್ಗಗಣತಿ. ಅದು ಅಭಿವೃದ್ಧಿಗೆ ಸಂಬಂಧಿಸಿದ ಗಣತಿ. ನಮ್ಮಲ್ಲಿ 'ಜಾತಿ' ಎಂಬುದು ಇಲ್ಲ. ನಮ್ಮಲ್ಲಿರುವುದು ಜಾತಿಗಳ ಒಕ್ಕೂಟ. ಲಿಂಗಾಯತ ಎನ್ನುವುದು ಒಂದು ಜಾತಿಯೂ ಹೌದು ಮತ್ತು ಅದು ಅನೇಕ ಜಾತಿಗಳ ಫೆಡರೇಶನ್ನೂ ಹೌದು.**

ಒಂದು ದೇಶ/ಪ್ರದೇಶದ ಸಾಮಾಜಿಕ ರಚನೆಗೆ ಅನುಗುಣವಾಗಿ ಅಭಿವೃದ್ಧಿಯು ಸಂಭವಿಸುತ್ತದೆ. ಸಾಮಾಜಿಕ ರಚನೆಯನ್ನು ಮೀರಿ ಅಭಿವೃದ್ಧಿಯು ಸಂಭವಿಸಲು ಸರ್ಕಾರದ ಮಧ್ಯಪ್ರವೇಶ ಬೇಕಾಗುತ್ತದೆ. ಸರ್ಕಾರದ ಮಧ್ಯಪ್ರವೇಶಕ್ಕೆ ಪ್ರತಿಯಾಗಿ ಅಭಿವೃದ್ಧಿಯು ಮಾರುಕಟ್ಟೆ ನಿರ್ದೇಶನದಲ್ಲಿ ನಡೆದರೆ ಅಲ್ಲಿ ಅಭಿವೃದ್ಧಿಯು ಸಾಮಾಜಿಕ ಏಣಿಶ್ರೇಣೀಕರಣಕ್ಕೆ ಅನುಗುಣವಾಗೇ ಪ್ರಾಪ್ತವಾಗುತ್ತದೆ. ಇಂತಹ ಅಭಿವೃದ್ಧಿಯು ಈಗಾಗಲೆ ಸಮಾಜದಲ್ಲಿ ನೆಲೆಗೊಂಡಿರುವ ಅಂತರ-ಅಸಮಾನತೆಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿರುತ್ತವೆ. ಮಾರುಕಟ್ಟೆ ಪ್ರಣೀತ ಅಭಿವೃದ್ಧಿಯು ಸಾಮಾಜಿಕ ಪ್ರಶ್ನೆಗಳನ್ನು ಮೂಲೆಗುಂಪು ಮಾಡಿಬಿಡುತ್ತದೆ. ಆದರೆ ಇಂದು ಅಭಿವೃದ್ಧಿಯನ್ನು ಸಾಮಾಜಿಕ ರಚನೆಗೆ ಅತೀತವಾದ ರೀತಿಯಲ್ಲಿ ಅದನ್ನು ನಿರ್ವಹಿಸಲಾಗುತ್ತಿದೆ(ನವ-ಉದಾರವಾದಿ ಪ್ರಣಾಳಿಕೆ). ಅಭಿವೃದ್ಧಿಯನ್ನು ಕುರಿತಂತೆ ಯೋಚಿಸುವಾಗ ಅಲ್ಲಿನ ಸಾಮಾಜಿಕ ವ್ಯವಸ್ಥೆಯ ತಿಳುವಳಿಕೆ ಅಗತ್ಯ.

ಈ ಸಾಮಾಜಿಕ ರಚನೆಯು ನಮ್ಮ ಸಂದರ್ಭದಲ್ಲಿ ಏಣಿ ಶ್ರೇಣಿಗಳಿಂದ ಕೂಡಿದೆ. ಆದ್ದರಿಂದ ಅಭಿವೃದ್ಧಿಯು ಎಲ್ಲ ಸಾಮಾಜಿಕ ಗುಂಪುಗಳ ನಡುವೆ ಸಮಾನವಾಗಿ ನಡೆಯುತ್ತಿಲ್ಲ. ವಿವಿಧ ಸಮುದಾಯಗಳ ನಡುವೆ ಅಭಿವೃದ್ಧಿಯಲ್ಲಿ ಅಂತರಗಳಿವೆ, ಅಸಮಾನತೆಗಳಿವೆ. ಈ ಅಂತರ ಮತ್ತು ಅಸಮಾನತೆಗಳು ಯಾವ ಯಾವ ಸಮುದಾಯಗಳಲ್ಲಿ ಯಾವ ಯಾವ ಪ್ರಮಾಣಗಳಲ್ಲಿವೆ, ಯಾವ ಯಾವ ಸ್ವರೂಪಗಳಲ್ಲಿವೆ ಎಂಬುದನ್ನು ತಿಳಿದುಕೊಳ್ಳಲು ನಮಗೆ ಖಚಿತವಾದ ಮತ್ತು ವಿಸ್ತೃತವಾದ ಮಾಹಿತಿಯಿಲ್ಲ. ಅದಕ್ಕಾಗಿ ಪ್ರಸ್ತುತ(2011) ಜನಗಣತಿಯ ಸಂದರ್ಭದಲ್ಲಿ ಜಾತಿಗಣತಿಯನ್ನು ನಡೆಸುವ ಅಗತ್ಯವಿದೆ. ವಾಸ್ತವವಾಗಿ ಇದು ಜಾತಿಗಣತಿಯಲ್ಲ, ಅದು ವರ್ಗಗಣತಿ. ಅದು ಅಭಿವೃದ್ಧಿಗೆ ಸಂಬಂಧಿಸಿದ ಗಣತಿ. ನಮ್ಮಲ್ಲಿ 'ಜಾತಿ'ಎಂಬುದು ಇಲ್ಲ. ನಮ್ಮಲ್ಲಿರುವುದು ಜಾತಿಗಳ ಒಕ್ಕೂಟ. ಲಿಂಗಾಯತ ಎನ್ನುವುದು ಒಂದು ಜಾತಿಯೂ ಹೌದು ಮತ್ತು ಅದು ಅನೇಕ ಜಾತಿಗಳ ಫೆಡರೇಶನ್ನೂ ಹೌದು.

ಲಿಂಗಾಯತರು ಅಭಿವೃದ್ಧಿ ಹೊಂದಿದ್ದಾರೆ ಎಂದು ಹೇಳಿಬಿಟ್ಟರೆ ಏನನ್ನೂ ಹೇಳಿದಂತಾಗಲಿಲ್ಲ. ಅದರೊಳಗೆ ಸಣ್ಣ ಪುಟ್ಟ ಜಾತಿಗಳ, ಉಪಜಾತಿಗಳ, ಒಳಪಂಗಡಗಳ ಸ್ಥಿತಿ ಏನಾಗಿದೆ?. ಈ ಮಾತು ಬೇರೆ ಜಾತಿಗಳಿಗೂ ಅನ್ವಯಿಸುತ್ತದೆ. ಈ ಕಾರಣದಿಂದ ಇಲ್ಲಿ ಒತ್ತಾಯಿಸುತ್ತಿರುವುದು ವಾಸ್ತವಿಕವಾಗಿ ಜಾತಿಗಣತಿಯಲ್ಲ. ಅದು ವರ್ಗಗಣತಿ. ಅದು ಅಭಿವೃದ್ಧಿ ಸಂಬಂಧಿ ಗಣತಿ. ಆದರೆ ಇದಕ್ಕೆ ನಮ್ಮಲ್ಲಿ ಸಾಕಷ್ಟು ವಿರೋಧವಿದೆ. ಇದರಿಂದ ದೇಶದ 'ಏಕತೆಗೆ ಭಂಗ ಬರುತ್ತದೆ' ಎಂದು ಭಯ ಹುಟ್ಟಿಸಲಾಗುತ್ತಿದೆ. ಇಂದು ಜಾತೀಯತೆಯೆಂಬುದು ಇಲ್ಲವೇ ಇಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ಶಾಲಾ-ಕಾಲೇಜುಗಳ ಪ್ರವೇಶ ಪತ್ರದಲ್ಲಿ ಜಾತಿಯ ಅಂಕಣವಿರುವುದರಿಂದ ನಮ್ಮಲ್ಲಿ ಜಾತೀಯತೆ ಬೆಳೆಯುತ್ತಿದೆ ಎಂಬ ಬಾಲಿಶ ಮಾತುಗಳು ಇಂದು ಕೇಳಿ ಬರುತ್ತಿವೆ.

ಸಾಮಾಜಿಕತೆಗೆ ಯಾರು ಕುರುಡರಾಗಿರುತ್ತಾರೋ ಅವರು ಇಂತಹ ಜಾತಿ/ವರ್ಗಗಣತಿಯನ್ನು ವಿರೋಧಿಸುತ್ತಾರೆ. ನಮ್ಮ ಗ್ರಾಮೀಣ ಸಮಾಜಶಾಸ್ತ್ರ ಗೊತ್ತಿರುವುದಿಲ್ಲವೋ ಅಥವಾ ಗೊತ್ತಿಲ್ಲದಂತೆ ನಟಿಸುತ್ತಿರುತ್ತಾರೋ ಅವರು ಜಾತಿಯ ಬಗ್ಗೆ, ಜಾತಿಗಣತಿ ಬಗ್ಗೆ ಹೀಗೆ ಸರಳೀಕೃತವಾಗಿ ಮಾತನಾಡಬಲ್ಲರು. ಇದರಿಂದ ದೇಶದ ಏಕತೆಗೆ ಭಂಗ ಬರುತ್ತದೆ ಎನ್ನುವ ಮಂದಿ ಇದ್ದಾರೆ. ಯಾರು ಈಗಾಗಲೆ ಜಾತಿ ವ್ಯವಸ್ಥೆಯಿಂದ ಅನುಕೂಲಗಳನ್ನು ಪಡೆದುಕೊಂಡು ಮೇಲ್ಮುಖಿ ಚಲನೆಯನ್ನು ಸಾಧಿಸಿಕೊಂಡಿದ್ದಾರೋ ಅಂತವರು ಜಾತಿಗಣತಿಯನ್ನು ವಿರೋಧಿಸುತ್ತಿದ್ದಾರೆ. ಸಾಮಾಜಿಕತೆಗೆ ಯಾರು ಬೆನ್ನು ತಿರುಗಿಸಿರುತ್ತಾರೋ ಅವರು ಅಭಿವೃದ್ಧಿಯನ್ನು ಅಖಂಡವಾಗಿ ಪರಿಭಾವಿಸಿಕೊಳ್ಳಲು ಒತ್ತಾಯಿಸುತ್ತಾರೆ. ಸಾಮಾಜಿಕತೆಗೆ ಕುರುಡಾಗಿರುವ ಜನವರ್ಗ ಇಂದು ಜಾಗತೀಕರಣವನ್ನು, ಮಾರ್ಕಟ್ಟೀಕರಣವನ್ನು, ಖಾಸಗೀಕರಣವನ್ನು ಒಪ್ಪಿಕೊಂಡಿವೆ ಮತ್ತು ಅದರ ಲಾಭವನ್ನು ತಮ್ಮ ವಶಮಾಡಿಕೊಳ್ಳುತ್ತಿವೆ. ಸಾಮಾಜಿಕವಾಗಿ ಹಿಂದುಳಿದ, ಏಣಿಶ್ರೇಣಿಗಳಿಂದ ಶೋಷಣೆಗೆ ಒಳಗಾದ ಜನವರ್ಗವು ಒಂದು ರೀತಿಯಲ್ಲಿ ಇಂದು ಔದಾಸೀನ್ಯಕ್ಕೆ ಒಳಗಾಗಿದೆ.

ಬದಲಾದ ರಾಜಕೀಯ, ಸಾಮಾಜಿಕ, ಧಾರ್ಮಿಕ

ಸನ್ನಿವೇಶದಲ್ಲಿ ಹಿಂದುಳಿದ ವರ್ಗಗಳಿಗೆ ತಮ್ಮ ಶತ್ರುಗಳು ಯಾರು ತಮ್ಮ ಹಿತರು ಯಾರು ಎಂಬುದೇ ತಿಳಿಯದ ಸ್ಥಿತಿಯು ಇಂದು ನಿರ್ಮಾಣವಾಗಿದೆ. ಅತ್ಯಂತ ವ್ಯವಸ್ಥಿತವಾಗಿ ಅವರ ಒಳಗೊಳಗೆ ದಲಿತರು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರನ್ನು ವಿರೋಧಿಸುವ ಪ್ರಣಾಳಿಕೆಯನ್ನು ಪ್ರಯೋಗಿಸುತ್ತಿರುವ 'ಹಿಂದು' ಉನ್ನತ ವರ್ಗದ ರಾಜಕಾರಣವನ್ನು ಅರಿತುಕೊಳ್ಳದೆ ನಮ್ಮ ಹಿಂದುಳಿದ ವರ್ಗಗಳು, ದಲಿತ ಸಮುದಾಯಗಳು ಪ್ರತಿಷ್ಠಿತ ವರ್ಗದ ಬಲೆಗೆ ಬೀಳುತ್ತಿವೆ. ಸಾಮಾಜಿಕ ರಚನೆಯಲ್ಲಿ ಏಣಿಶ್ರೇಣಿಗಳಿವೆ ಎಂಬುವನ್ನು ನಮ್ಮ ಸಮಾಜದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿಗಳ ನಡುವೆ ಸಂಬಂಧವಿದೆ.

ಈ ಸಂಚಿಕೆಯ ನೆಲೆಯಲ್ಲಿ ನಾವು ಅಭಿವೃದ್ಧಿಯನ್ನು ನಿರ್ವಹಿಸಬೇಕು ಮತ್ತು ಪರಿಭಾವಿಸಿಕೊಳ್ಳಬೇಕು. ಅಮರ್ತ್ಯಸೇನ್ ಅಭಿವೃದ್ಧಿಯನ್ನು ಹೀಗೆ ನಿರ್ವಚಿಸುತ್ತಾನೆ. 'ಎಲ್ಲ ಬಗೆಯ ಅಸ್ವಾತಂತ್ರ್ಯಗಳನ್ನು ತೊಡೆದುಹಾಕುವ ಒಂದು ಪ್ರಕ್ರಿಯೆಯೇ ಅಭಿವೃದ್ಧಿ. ಅವು ಜನರು ವಿವೇಚನಾಶೀಲರಾಗಿ ತಮ್ಮ ಕರ್ತೃತ್ವವನ್ನು ಬಳಸಿಕೊಳ್ಳಲು ಅಗತ್ಯವಾದ ಅವಕಾಶಗಳನ್ನು ಮಿತಗೊಳಿಸುತ್ತವೆ ಮತ್ತು ಆಯ್ಕೆಗಳ ವ್ಯಾಪ್ತಿಯನ್ನು ಸೀಮಿತಗೊಳಿಸುತ್ತವೆ'. ಮತ್ತೊಂದು ಕಡೆ 'ಸ್ವಾತಂತ್ರ್ಯದ ವರ್ಧನೆಯು ಅಭಿವೃದ್ಧಿಯ ಪ್ರಾಥಮಿಕ ಸಾಧನ ಮತ್ತು ಅದು ಅದರ ಪ್ರಥಮ ಗುರಿಯಾಗಿದೆ' ಎಂದು ಹೇಳುತ್ತಾನೆ. ಜೋಸೆಫ್ ಸ್ಟಿಗ್‌ಲಿಡ್ಜ್ ತನ್ನ ಇತ್ತೀಚಿಗಿನ ಕೃತಿಯಲ್ಲಿ(2003) 'ಅಭಿವೃದ್ಧಿಯೆನ್ನುವುದು ಸಮಾಜಗಳನ್ನು ಪರಿವರ್ತಿಸುವ ಪ್ರಕ್ರಿಯೆಗೆ ಸಂಬಂಧಿಸಿದ ಸಂಗತಿಯೆಂದು, ಅದು ಬಡವರ ಬದುಕನ್ನು ಉತ್ತಮ ಪಡಿಸುವವರಿಗೆ ಸಂಬಂಧಿಸಿದ ಸಂಗತಿಯೆಂದು ಮತ್ತು ಪ್ರತಿಯೊಬ್ಬರು ಆರೋಗ್ಯಸೇವೆ ಮತ್ತು ಶಿಕ್ಷಣ ಸೌಲಭ್ಯಗಳನ್ನು ಯಶಸ್ವಿಯಾಗಿ ಪಡೆದುಕೊಳ್ಳಲು ಅಗತ್ಯವಾದ ಸಾಮರ್ಥ್ಯವನ್ನು ವರ್ಧಿಸುವ ಪ್ರಕ್ರಿಯೆಗೆ ಸಂಬಂಧಿಸಿದ ಸಂಗತಿ' ಯೆಂದು ನಿರ್ವಚಿಸಿದ್ದಾನೆ.

ಸಾಮಾಜಿಕವಾಗಿ, ಆರ್ಥಿಕವಾಗಿ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಇಂದು ಜನರು ಹೊರಗಣತನವನ್ನು ಅನುಭವಿಸುತ್ತಿದ್ದಾರೆ. ಈ ಸಾಮಾಜಿಕ ಹೊರಗಣತನವನ್ನು ನಿವಾರಿಸಿ ಜನರನ್ನು ಒಳಗೊಳ್ಳುವಂತೆಮಾಡುವ ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಯೇ ಅಭಿವೃದ್ಧಿ. ಅಮರ್ತ್ಯ ಸೇನ್ 'ಸ್ವಾತಂತ್ರ್ಯ'ವನ್ನು ಇಲ್ಲಿ ಇತ್ಯಾತ್ಮಕ ನೆಲೆಯಲ್ಲಿ ಬಳಸಿದ್ದಾನೆ. ಇಲ್ಲಿ ಅನಕ್ಷರತೆಯು ಅಸ್ವಾತಂತ್ರ್ಯ, ಲಿಂಗ ಅಸಮಾನತೆಯು ಅಸ್ವಾತಂತ್ರ್ಯ, ಬಡತನವು ಅಸ್ವಾತಂತ್ರ್ಯ, ಸಾಮಾಜಿಕ ಹೊರಗಣತನವು ಅಸ್ವಾತಂತ್ರ್ಯ. ಈ ಎಲ್ಲ ಅಸ್ವಾತಂತ್ರ್ಯಗಳನ್ನು ತೊಡೆದು ಹಾಕಲು ಅಗತ್ಯವಾದ ಸ್ವಾತಂತ್ರ್ಯ ಮತ್ತು ಸಾಮರ್ಥ್ಯವನ್ನು ಸೇನ್ ಧಾರಣಾ ಸಾಮರ್ಥ್ಯವೆಂದು ಕರೆಯುತ್ತಾನೆ.

**ಜಾತಿಗಣತಿಯ ಸಾಮಾಜಿಕ ಪ್ರಶ್ನೆ**

ಇಂದು ಸಾಮಾಜಿಕತೆಗೆ ಬೆನ್ನು ತಿರುಗಿಸಿ ಜನರ ಸಮಸ್ಯೆಗಳನ್ನು ಚರ್ಚೆ ಮಾಡುವ ಉಪಕ್ರಮವು ವ್ಯಾಪಕವಾಗಿ ಬೆಳೆಯುತ್ತಿದೆ. ಸಾಮಾಜಿಕ ಭಿನ್ನತೆಯನ್ನು ಮತ್ತು ಸಾಮಾಜಿಕ ಪ್ರಶ್ನೆಯನ್ನು ಹತ್ತಿಕ್ಕುವ ಪ್ರಯತ್ನವು ತೀವ್ರವಾಗಿ ನಡೆದಿದೆ. ನಮ್ಮ ಸಮಾಜವನ್ನು ಅಖಂಡವಾಗಿ ಪರಿಭಾವಿಸಿಕೊಳ್ಳುವ ಕ್ರಮವು ತೀಕ್ಷ್ಣವಾಗುತ್ತಿದೆ. ಸಾಮಾಜಿಕ ಭಿನ್ನತೆ ಬಗ್ಗೆ ಸಮಾಜದ ಕೆಲವು ವರ್ಗಗಳಲ್ಲಿ ಅಸಹನೆಯಿದೆ. 'ಜಾತಿಯನ್ನು ಆದರಿಸಿದ ಜನಗಣತಿ ಜನರನ್ನು ಎಷ್ಟರ ಮಟ್ಟಿಗೆ ವಿಭಜಿಸಬಹುದು ಎಂಬುದನ್ನು ನಾವು ಅಂದಾಜಿಸಲು ಸಾಧ್ಯವಿಲ್ಲ' ಎಂಬ, 'ಇದು ದೇಶದ ಬಹುದೊಡ್ಡ ದುರಾದೃಷ್ಟ' ಎನ್ನುವ ಸಾಮಾಜಿಕತೆಗೆ ಬೆನ್ನು ತಿರುಗಿಸಿದವರ ಮಾತುಗಳಲ್ಲಿ ಸ್ಪಷ್ಟವಾಗಿ ಇದನ್ನು ಗುರುತಿಸಬಹುದು. ಸಾಮಾಜಿಕ ಭಿನ್ನತೆಯ ಮಾತುಗಳನ್ನು ದೇಶದ ಏಕತೆಗೆ ಭಂಗ ತರುವ ಸಂಗತಿಗಳನ್ನಾಗಿ ಅರ್ಥೈಸಲಾಗುತ್ತಿದೆ. ನಮ್ಮ ಸಮಾಜದ ಸಂದರ್ಭದಲ್ಲಿ ಸಾಮಾಜಿಕ ಭಿನ್ನತೆಯನ್ನು ಗುರುತಿಸದೆ, ಅದನ್ನು ಒಪ್ಪಿಕೊಳ್ಳದೆ ನಮ್ಮ ಜನರ ಬದುಕನ್ನು, ಬವಣೆಯನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ.

ಅದು ಸಾಧ್ಯವೆನ್ನುವ ಮಂದಿ ಇದ್ದಾರೆ ಎಂಬುದೇ ಅಚ್ಚರಿಯ ಸಂಗತಿಯಾಗಿದೆ. ಸಾಮಾಜಿಕತೆಗೆ ಬೆನ್ನು ತಿರುಗಿಸಿರುವ ಮಂದಿ ಇಂದು ಸಂಘಟಿತರಾಗುತ್ತಿದ್ದಾರೆ. ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಪ್ರಭಾವವನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ. ಸಂಘಟಿತವಾಗಿ ಸಾಮಾಜಿಕ ಪ್ರಶ್ನೆಗಳನ್ನು ತಿರಸ್ಕರಿಸುವ ಕೆಲಸ ನಡೆಯುತ್ತಿದೆ. ಸಾಮಾಜಿಕ ಭಿನ್ನತೆಯ ಪ್ರಶ್ನೆಯನ್ನು ಹತ್ತಿಕ್ಕಲು ಪ್ರಯತ್ನಸುತ್ತಿರುವ ಶಕ್ತಿಗಳಿಗೆ ಅನೇಕ ರೀತಿಯಲ್ಲಿ ಬೆಂಬಲ ಎಂ.ಎನ್.ಸಿಗಳಿಂದ ದೊರೆಯುತ್ತಿದೆ. ನಮ್ಮದೇ ಕಾರ್ಪೋರೇಟ್ ಕುಳಗಳಿಂದ ಒದಗುತ್ತಿದೆ. ರಾಜಕೀಯವಾಗಿ ಸಾಮಾಜಿಕತೆಯನ್ನು ಹತ್ತಿಕ್ಕಲಾಗುತ್ತಿದೆ. ಆರ್ಥಿಕವಾಗಿ ಏಕರೂಪೀಕರಣವನ್ನು ಸಾಧಿಸಿಕೊಳ್ಳುವ ಮೂಲಕ ಸಾಮಾಜಿಕತೆಯನ್ನು ಅಳಿಸಿ ಹಾಕುವ ಪ್ರಯತ್ನ ನಡೆದಿದೆ. ಏಕೆಂದರೆ ಇದರಿಂದ ಮಾರುಕಟ್ಟೆಯವ್ಯಾಪ್ತಿಯು ವಿಸ್ತರಿಸುತ್ತದೆ. ಲಾಭಮಾಡಿಕೊಳ್ಳಲು ಅವಕಾಶಗಳು ವಿಸ್ತೃತಗೊಳ್ಳುತ್ತವೆ. ಜಾತಿಗಣತಿಯು ಅಂತಹ ಮಾರುಕಟ್ಟೆಯ ವಿಸ್ತರಣೆಗೆ ಅಡ್ಡಿಯಾಗಬಹುದು. ಈ ಹಿನ್ನೆಲೆಯಲ್ಲಿ ನಾವು ಜಾತಿಗಣತಿ ಪ್ರಶ್ನೆಯನ್ನು ನೋಡಬೇಕಾಗಿದೆ.

**ಸಾಮಾಜಿಕತೆಯ ಭಯ!**

ಸಾಮಾಜಿಕತೆಯೆಂದರೆ ನಮ್ಮ ಸಮಾಜದಲ್ಲಿ ಕೆಲವು ಶಕ್ತಿಗಳು ಭಯಪಡುತ್ತವೆ. ಭಯದ ಜೊತೆಗೆ ಅದರ ಬಗ್ಗೆ ಕೆಲವರಿಗೆ ಅಸಹನೆಯಿದೆ. ಜಾತಿಗಣತಿ ವಿಷಯದಲ್ಲಿ ಕೆಲವರು ಇಲ್ಲದ ಸಮಸ್ಯೆಯನ್ನು ಹುಟ್ಟಿಹಾಕುತ್ತಿದ್ದಾರೆ.'ದೇಶದ ಏಕತೆಗೆ ಭಂಗ'ಎನ್ನುವುದು ಅಂತಹ ಒಂದು ಆತಂಕ.

> **ಸಾಮಾಜಿಕತೆಯೆಂದರೆ ನಮ್ಮ ಸಮಾಜದಲ್ಲಿ ಕೆಲವು ಶಕ್ತಿಗಳು ಭಯಪಡುತ್ತವೆ. ಭಯದ ಜೊತೆಗೆ ಅದರ ಬಗ್ಗೆ ಕೆಲವರಿಗೆ ಅಸಹನೆಯಿದೆ. ಜಾತಿಗಣತಿ ವಿಷಯದಲ್ಲಿ ಕೆಲವರು ಇಲ್ಲದ ಸಮಸ್ಯೆಯನ್ನು ಹುಟ್ಟಿ ಹಾಕುತ್ತಿದ್ದಾರೆ.'ದೇಶದ ಏಕತೆಗೆ ಭಂಗ' ಎನ್ನುವುದು ಅಂತಹ ಒಂದು ಆತಂಕ. 'ಮೀಸಲಾತಿಯ ಒತ್ತಡ ಜಾಸ್ತಿಯಾಗುತ್ತದೆ' ಎಂಬುದು ಮತ್ತೊಂದು ಆತಂಕ. ನಮ್ಮ ಗ್ರಾಮೀಣ ವ್ಯವಸ್ಥೆಯ ಸಮಾಜಶಾಸ್ತ್ರದ ಬಗ್ಗೆ ಇವರೆಲ್ಲ ಯಾಕೆ ಕುರುಡಾಗಿದ್ದಾರೆ ಎಂಬುದು ನಮಗೆ ಒಗಟಾಗಿ ಪರಿಣಮಿಸಿದೆ.**

'ಮೀಸಲಾತಿಯ ಒತ್ತಡ ಜಾಸ್ತಿಯಾಗುತ್ತದೆ' ಎಂಬುದು ಮತ್ತೊಂದು ಆತಂಕ. ನಮ್ಮ ಗ್ರಾಮೀಣ ವ್ಯವಸ್ಥೆಯ ಸಮಾಜಶಾಸ್ತ್ರದ ಬಗ್ಗೆ ಇವರೆಲ್ಲ ಯಾಕೆ ಕುರುಡಾಗಿದ್ದಾರೆ ಎಂಬುದು ನಮಗೆ ಒಗಟಾಗಿ ಪರಿಣಮಿಸಿದೆ. ಹತ್ತಾರು ದಶಕಗಳಿಂದ ನಮ್ಮ ಗ್ರಾಮೀಣ ಜಗತ್ತಿನ ಸಾಮಾಜಿಕತೆ ಬಗ್ಗೆ, ಸಾಮಾಜಿಕ ಪರಿವರ್ತನೆಯ ಸ್ವರೂಪ ಕುರಿತಂತೆ, ಸಾಮಾಜಿಕ ಪ್ರಶ್ನೆಗಳನ್ನು ಕುರಿತಂತೆ ನೂರಾರು ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಅಧ್ಯಯನಗಳನ್ನು ನಡೆಸುತ್ತಾ ಬಂದಿದ್ದಾರೆ. ಆದರೂ ಸಾಮಾಜಿಕತೆಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳು ಈಗಲೂ ಕಗ್ಗಂಟಾಗಿ ಉಳಿದಿವೆ.

ಕರ್ನಾಟಕದ ಆರೂವರೆ ಕೋಟಿ ಜನರ ಸಮಸ್ಯೆಗಳು ಒಂದೇ ರೀತಿಯಲ್ಲಿರುತ್ತವೆ ಎಂದು ಹೇಳಬಹುದೆ? ರಾಜ್ಯದ 30 ಜಿಲ್ಲೆಗಳಲ್ಲಿ ಜನರ ಸಮಸ್ಯೆಗಳು ಒಂದೇ ರೀತಿಯಲ್ಲಿವೆ ಎನ್ನಬಹುದೆ? ಮಹಿಳೆಯರ ಸಮಸ್ಯೆಗಳನ್ನು ಪುರುಷರ ಸಮಸ್ಯೆಗಳ ಜೊತೆಯಲ್ಲಿ ಸಮೀಕರಿಸಬಹುದೆ? ಸಫಾಯಿ ಕರ್ಮಚಾರಿಗಳ ಉದ್ಯೋಗ ಅಭದ್ರತೆಯನ್ನು, ಐಟಿ ತಂತ್ರಜ್ಞರ ಉದ್ಯೋಗ ಅಭದ್ರತೆಯ ಸಮಸ್ಯೆ ಒಂದೇ ಎಂದು ಹೇಳಬಹುದೇ?. ಸಾಮಾಜಿಕ ಸಂಗತಿಗಳಿಗೆ ಬೆನ್ನು ತಿರುಗಿಸಿದವರಿಗೆ ಸಾಮಾಜಿಕ ಭಿನ್ನತೆ, ಲಿಂಗ ಭಿನ್ನತೆ, ವರಮಾನ ಭಿನ್ನತೆ, ಪ್ರಾದೇಶಿಕ ಭಿನ್ನತೆ, ಭಾಷಾ ಭಿನ್ನತೆ, ವೃತ್ತಿ ಭಿನ್ನತೆ ಮುಂತಾದವುಗಳು ಸಮಸ್ಯೆಗಳೇ ಅಲ್ಲ. ಈ ಬಗೆಯಲ್ಲಿ ವಾದಿಸುವವರಿಗೆ ಬಡತನವು ಎಲ್ಲರಿಗೂ ಒಂದೆ ತೆರನಾಗಿರುತ್ತದೆ.

ಬಡತನಕ್ಕೆ ಸಂಬಂಧಿಸಿದಂತೆ ಅದರ ತೀವ್ರತೆಗೆ ಅನುಗುಣವಾಗಿ 'ಕಡುಬಡತನ' ವೆನ್ನುವುದನ್ನು ಅವರು ಒಪ್ಪಿಯಾರು. ಆದರೆ ಈ ಬಡತನವನ್ನು, ದುಸ್ಥಿತಿಯನ್ನು, ಕಡುಬಡತನವನ್ನು ಉಲ್ಬಣಗೊಳಿಸುವ 'ಸಾಮಾಜಿಕ ಹೊರಗಣತನ' ವೆನ್ನುವ ಕ್ರೂರ ಸ್ಥಿತಿಯನ್ನು ಅವರು ಒಪ್ಪುವುದಿಲ್ಲ. ಇದೋ ಇಲ್ಲಿದೆ ನಿಜವಾದ ಸಮಸ್ಯೆ.

ಈ ಸಾಮಾಜಿಕ ಭಿನ್ನತೆಯನ್ನು ವಿರೋಧಿಸುವುದರ ಮೂಲದಲ್ಲಿ ಮೀಸಲಾತಿಯ ಪ್ರಶ್ನೆಯು ಅಡಗಿರುವುದನ್ನು ಗುರುತಿಸುವುದು ನಮಗೆ ಕಷ್ಟವಾಗಲಾರದು. ಅಭಿವೃದ್ಧಿಯನ್ನು ಮಾನವ ಹಕ್ಕುಗಳ ಪರಿಭಾಷೆಯಲ್ಲಿ ಚರ್ಚಿಸುವ ಅರ್ಜುನ್‌ಸೇನ್‌ಗುಪ್ತ ಕಡುಬಡತನವನ್ನು 'ವರಮಾನದ ಕೊರತೆ( ಕೂಲಿ, ಉದ್ಯೋಗ, ಆಹಾರ ಭದ್ರತೆ),ಧಾರಣಾ ಸಾಮರ್ಥ್ಯದ ದುಸ್ಥಿತಿ(ಸಾಕ್ಷರತೆ, ಶಿಕ್ಷಣ, ಆರೋಗ್ಯ, ಲಿಂಗ ಸಮಾನತೆ) ಮತ್ತು ಸಾಮಾಜಿಕ ಹೊರಗಣತನಗಳಿಂದ ಮುಪ್ಪುರಿಗೊಂಡ ಒಂದು ಸ್ಥಿತಿ' ಎಂದು ನಿರ್ವಚಿಸಿದ್ದಾನೆ. ಕಡುಬಡತನವೆನ್ನುವುದು ಸಂಯುಕ್ತ ದುಸ್ಥಿತಿ ಸೂಚಿ. ಈ ಸಮಸ್ಯೆಯ ಸಾಮಾಜಿಕ ಹರವನ್ನು ಪರಿಶೀಲಿಸದೆ ಅದನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಸಾಮಾಜಿಕ ಹೊರಗಣತನವೆನ್ನುವುದು ನಮ್ಮ ಸಮಾಜದ ಸಂದರ್ಭದಲ್ಲಿ ಯಾಕೆ ಕೆಲವು ಜಾತಿಗಳನ್ನು ಮಾತ್ರ ಕಾಡುತ್ತಿದೆ? ಸಾಮಾಜಿಕ ಹೊರಗಣತನವನ್ನು ಅನುಭವಿಸುವ ಜಾತಿಗಳು ಯಾಕೆ ಸಫಾಯಿ ಕರ್ಮವನ್ನು ಹೆಚ್ಚಾಗಿ ನೆಚ್ಚಿಕೊಳ್ಳಬೇಕಾದ ಪ್ರಮೇಯ ಉಂಟಾಗಿದೆ?.

ಈ ಪ್ರಶ್ನೆಗಳನ್ನು ಕೇಳುವುದು ಅಪರಾಧವೆ? ಗುಲ್ಬರ್ಗಾ ನಗರದಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಎಸ್.ಕೆ.ಕಾಂತಾ ನೇತೃತ್ವದಲ್ಲಿ ನಡೆಯುತ್ತಿರುವ ಸಫಾಯಿ ಕರ್ಮಚಾರಿಗಳ ವೇತನ ಬಾಕಿ ಹೋರಾಟದಲ್ಲಿನ ಮಂದಿಯನ್ನು ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಬಿಕ್ಕಟ್ಟಿನಿಂದಾಗಿ ಕೆಲಸ ಕಳೆದುಕೊಂಡ ಬೆಂಗಳೂರಿನ

ಎಂಜಿನೀಯರುಗಳನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಹೇಗೆ?

ಸಾಮಾಜಿಕ ಹೊರಗಣ್ಣತನವೆನ್ನುವುದು ನಮ್ಮ ಸಮಾಜದಲ್ಲಿ ಅನೂಚಾನವಾಗಿ ಹರಿದುಕೊಂಡು ಬಂದಿರುವ ಕ್ರೂರ ಆಚರಣೆ. ಇಂದು ಆಧುನಿಕ ವಿಧಾನಗಳಲ್ಲಿ ಜನರನ್ನು ಹೊರಗಣದವರನ್ನಾಗಿ ಮಾಡಲಾಗುತ್ತಿದೆ. ಅದಕ್ಕೆ ಜಾತಿ ಮುಖವಿರುವಂತೆ ಲಿಂಗದ ಮುಖವೂ ಇದೆ. ಅದಕ್ಕೆ ಪ್ರಾದೇಶಿಕ ಮುಖವಿದೆ ಮತ್ತು ಶೈಕ್ಷಣಿಕ ಮುಖವಿದೆ. ಅದಕ್ಕೆ ತಂತ್ರಜ್ಞಾನದ ಆಯಾಮವಿದೆ. ಉದಾಹರಣೆಯಾಗಿ ಗುಲ್ಬರ್ಗಾ ನಗರದ ಸಫಾಯಿ ಕರ್ಮಚಾರಿ ಗಳ ಬವಣೆಯನ್ನು ಈ ರೀತಿ ನೋಡಬಹುದು.

ವೃತ್ತಿಶ್ರೇಣಿಯಲ್ಲಿ ಅವರು ಅತ್ಯಂತ ಕೆಳಮಟ್ಟದ ವೃತ್ತಿಯಲ್ಲಿದ್ದಾರೆ.

ಜಾತಿಶ್ರೇಣಿಯಲ್ಲಿ ಕೆಳಜಾತಿಯ ದುಡಿಮೆಗಾರರಾಗಿದ್ದಾರೆ.

ಅವರಲ್ಲಿ ಸರಿ ಸುಮಾರು ಮುಕ್ಕಾಲು ಪಾಲು ಅನಕ್ಷರಸ್ಥರಿದ್ದಾರೆ.

ಇವರಲ್ಲಿ ಶೇಕಡ ಐವತ್ತಕ್ಕಿಂತ ಅಧಿಕ ಮಹಿಳೆಯರಿದ್ದಾರೆ.

ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದ ಗುಲಬರ್ಗಾ ನಗರದಲ್ಲಿ ಹೋರಾಟ ನಡೆದಿದೆ.

ಬಡತನದ ಎಲ್ಲ ಮುಖಗಳು ಇಲ್ಲಿ ಮುತ್ತಿಕೊಂಡಿವೆ.

ಈ ಬಗೆಯ ದುಡಿಮೆಯ ಜಾತಿ ನೆಲೆಯನ್ನು ನಿರ್ಲಕ್ಷಿಸುವುದು ಹೇಗೆ?

**ಜಾತಿಗಣತಿ–ಮೀಸಲಾತಿ?**

ನಿಜ, ಜಾತಿಗಣತಿಯು ಒದಗಿಸುವ ಮಾಹಿತಿಯನ್ನು ಆಧರಿಸಿ ಕೆಲವು ಜಾತಿಗಳು ಹೆಚ್ಚಿನ ಮೀಸಲಾತಿಗಾಗಿ ಒತ್ತಾಯಿಸಬಹುದು. ಈ ಬೆಳವಣಿಗೆಯನ್ನು ಅಲ್ಲಗಳೆಯಲು ಬರುವುದಿಲ್ಲ. ಆದರೆ ವರಮಾನ ಕೊರತೆ, ಧಾರಣಾ ಸಾಮರ್ಥ್ಯದ ದುಸ್ಥಿತಿ ಮತ್ತು ಸಾಮಾಜಿಕ ಹೊರಗಣತನ ಗಳನ್ನು ಅನುಭವಿಸುತ್ತಿರುವ ಮಂದಿಗೆ ಕ್ರೂರ ಬಡತನದ ಕೂಪದಿಂದ ಹೊರಬರಲು ಮೀಸಲಾತಿಗೆ ಪರ್ಯಾಯವಾಗಿ ಇನ್ನಾವ ಮಾರ್ಗಗಳಿವೆ? ಈ ಬಗ್ಗೆ ಚಕಾರವೆತ್ತದೆ, ಜಾತಿಗಣತಿಯಿಂದ ದೇಶದ ಏಕತೆಗೆ ಭಂಗ ಬರುತ್ತದೆ ಎನ್ನುವ ನಿಲುವು ನ್ಯಾಯಯುತವಾದುದಲ್ಲ. ಜಾತಿಗಣತಿಯ ಮೂಲದಲ್ಲಿ ಮೀಸಲಾತಿಯನ್ನು ಬಿಟ್ಟು ಬೇರೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಶ್ನೆಗಳಿವೆ. ಈ ಪ್ರಶ್ನೆಗಳು ಅನೇಕ ದಶಕಗಳಿಂದ ಇನ್ನೂ ಪ್ರಶ್ನೆಗಳಾಗೆ ಉಳಿದುಕೊಂಡಿವೆ. ಜಾತಿಗಣತಿಯಿಂದ ನಮಗೆ ದೊರೆಯಬಹುದಾದ ಹಿಮಾಲಯ ಸದೃಶ ಮಾಹಿತಿಯಿಂದ ಇಂತಹ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳಬಹುದೆಂಬ ನಂಬಿಕೆ ಸಮಾಜ ವಿಜ್ಞಾನಿಗಳಲ್ಲಿದೆ. ದುರದೃಷ್ಟದ ಸಂಗತಿ ಯೆಂದರೆ ನಮ್ಮ ರಾಜ್ಯದ ಸಂದರ್ಭದಲ್ಲಿ ಜಾತಿಗಣತಿ ಪ್ರಶ್ನೆಯ ಬಗ್ಗೆ ಮಾತ ನಾಡಬೇಕಾದ ಮತ್ತು ಮಾರ್ಗದರ್ಶನ ನೀಡಬೇಕಾದ ಸಮಾಜ ವಿಜ್ಞಾನಿಗಳು ಮಾತನಾಡು ತ್ತಿಲ್ಲ. ಸಾಮಾಜಿಕತೆಗೆ ಬೆನ್ನು ತಿರುಗಿಸಿರುವ ಮಂದಿ ಅದರ ಬಗ್ಗೆ ಇಲ್ಲದ–ಸಲ್ಲದ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ.

**ಜಟಿಲ ಪ್ರಶ್ನೆಗಳು ಯಾವುವು?**

ನಮ್ಮ ಸಮಾಜವು ಹೇಗೆ ಶ್ರೇಣೀಕೃತವಾಗಿದೆಯೋ ಅದೇ ರೀತಿಯಲ್ಲಿ ಅಭಿವೃದ್ಧಿಯು ಶ್ರೇಣೀಕೃತವಾಗಿ ಯಾಕೆ

**ಜಾತಿಗಣತಿಯನ್ನು ವಿರೋಧಿಸುತ್ತಿರುವವರು ಜಾತೀಯತೆಯನ್ನು ಎಷ್ಟರ ಮಟ್ಟಿಗೆ ವಿರೋಧಿಸುತ್ತಿದ್ದಾರೋ ಅಷ್ಟೇ ಅಥವಾ ಅದಕ್ಕಿಂತಲೂ ಒಂದು ಪಟ್ಟು ಹೆಚ್ಚಿಗೆ ಜಾತಿಗಣತಿಯನ್ನು ಒತ್ತಾಯಿಸುತ್ತಿರುವವರು ಜಾತೀಯತೆಯನ್ನು ವಿರೋಧಿಸುತ್ತಾರೆ. ಜಾತೀಯತೆ ಯೆನ್ನುವುದು ಒಂದು ಕ್ಯಾನ್ಸರ್ ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ನಮ್ಮ ಸಂದರ್ಭ ಎಷ್ಟು ಸೂಕ್ಷ್ಮವಾಗಿದೆ.**

ಸಂಭವಿಸುತ್ತಿದೆ? ಮೀಸಲಾತಿಯ ಅನುಕೂಲವನ್ನು ಅರವತ್ತು ವರ್ಷಗಳಿಗೂ ಮೀರಿ ಪಡೆದುಕೊಳ್ಳುತ್ತಾ ಬಂದಿದ್ದರೂ ಕೆಲವು ಪರಿಶಿಷ್ಟ ಜಾತಿಗಳು ಇಂದಿಗೂ ಕಡು ಬಡತನದಲ್ಲಿ ಯಾಕೆ ಸಿಲುಕಿಕೊಂಡಿವೆ? ಅಭಿವೃದ್ಧಿಯ ಗತಿ, ಗಾತ್ರ ಮತ್ತು ಗುಣ ಕೆಲವು ಪ್ರದೇಶಗಳಲ್ಲಿ ಸಮೃದ್ಧವಾಗಿದ್ದರೆ ಕೆಲವು ಪ್ರದೇಶಗಳಲ್ಲಿ ಅವು ತೀರಾ ದುರ್ಬಲವಾಗಿವೆ ಯಾಕೆ?. ಲಿಂಗ ಅಸಮಾನತೆ ಕೂಡ ಯಾಕೆ ಸಾಮಾಜಿಕ ಶ್ರೇಣೀಕರಣಕ್ಕೆ ಅನುಗುಣವಾಗಿ ಸಂಭವಿಸುತ್ತಿದೆ? 'ಜಾತಿಯೊಳಗಿನ ಜಾತಿ'ಗಳಲ್ಲಿನ ಅಭಿವೃದ್ಧಿ–ದುಸ್ಥಿತಿ ಸಂಬಂಧ ಯಾಕೆ ಕಗ್ಗಂಟಾಗುತ್ತಿದೆ? ಈ ಸಾಮಾಜಿಕ ಪ್ರಶ್ನೆಗಳಿಗೆ ಜಾತಿಗಣತಿಯಲ್ಲಿ ಉತ್ತರ ಸಿಗುವ ಸಾಧ್ಯತೆಯಿದೆ. ಜಾತಿಗಣತಿಯನ್ನು ಬಿಟ್ಟು ಬೇರಾವ ರೀತಿಯಲ್ಲಿ ಅಧ್ಯಯನ ಮಾಡಿದರೆ ನಮ್ಮ ಮುಂದಿರುವ ಜಟಿಲ ಪ್ರಶ್ನೆಗಳಿಗೆ ಉತ್ತರಗಳು ದೊರೆತಾವು? ಜಾತಿಗಣತಿಯನ್ನು ವಿರೋಧಿಸುವವರು ಪರ್ಯಾಯವನ್ನು ನೀಡುತ್ತಿಲ್ಲ.

ಜಾತಿಗಣತಿಯನ್ನು ಅನಗತ್ಯವಾಗಿ ಸಮಸ್ಯೆಯನ್ನಾಗಿ ಮಾಡಲಾಗುತ್ತಿದೆ. ಅದೊಂದು ಸಮಾಜ ಸಂಶೋಧನಾ ಕಾರ್ಯಕ್ರಮ. ನಮ್ಮ ಸಮಾಜವನ್ನು ಅರ್ಥ ಮಾಡಿಕೊಳ್ಳಲು, ನಮ್ಮನ್ನು ಕಾಡುತ್ತಿರುವ ಅನೇಕ ಸಾಮಾಜಿಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಮತ್ತು ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಅನೇಕ ಕ್ರೂರ ಆಚರಣೆಗಳನ್ನು ಗುರುತಿಸಲು ಮತ್ತು ಅವುಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಲು ಜಾತಿಗಣತಿಯಿಂದ ಸಾಧ್ಯ ಮತ್ತು ಅದರಿಂದ ಪ್ರಾಪ್ತವಾಗುವ ಮಾಹಿತಿಯಿಂದ ಸಾಧ್ಯವಾಗುತ್ತದೆ. ಬರುವ 2011ರಲ್ಲಿ ನಡೆಯಬೇಕಾಗಿರುವ ಜನಗಣತಿಯಲ್ಲಿ ಜಾತಿಗಣತಿಯನ್ನು ನಡೆಸದಿದ್ದರೆ ಒಂದು ದೊಡ್ಡ ಅವಕಾಶವನ್ನು ನಾವು ಕಳೆದುಕೊಂಡಂತಾಗುತ್ತದೆ. ಇಂತಹ ಅವಕಾಶಕ್ಕೆ ಮತ್ತೆ ಹತ್ತು ವರ್ಷ ಕಾಯಬೇಕಾಗುತ್ತದೆ(2021). ಈಗಾಗಲೆ ನಾವು 80 ವರ್ಷಗಳನ್ನು (1931) ಕಳೆದುಕೊಂಡಿದ್ದೇವೆ.

ಸಾಮಾಜಿಕ ಪ್ರಶ್ನೆಗಳು ಬಂದಾಗಲೆಲ್ಲ ನ್ಯಾಯಾಲಯಗಳು ಜಾತಿಗಣತಿಯ ಬಗ್ಗೆ ಪ್ರಶ್ನೆ ಮಾಡುತ್ತಿವೆ. ಜಾತಿಗಣತಿ ನಡೆಸಲು ಅಗತ್ಯವಾದ ವಾತಾವರಣವನ್ನು ನಿರ್ಮಾಣ ಮಾಡುವ ಜವಾಬುದಾರಿಯು ನಮ್ಮ ನಾಡಿನ ಹಿರಿಯರ ಮತ್ತು ಮುತ್ಸದ್ದಿಗಳ ಮೇಲಿದೆ. ಕಡುಬಡತನವನ್ನು ಅನುಭವಿಸುತ್ತಿರುವವರ ಬಗ್ಗೆ, ದಲಿತರ ಬಗ್ಗೆ, ಶೂದ್ರರ ಬಗ್ಗೆ ಅಸಹನೆ ಸಲ್ಲ. ಜಾತಿಗಣತಿಯಿಂದ ದೇಶದ ಏಕತೆಗೆ ಭಂಗವಾಗುತ್ತದೆ ಎಂಬುದಕ್ಕೆ ಆಧಾರವೇನಿಲ್ಲ. 'ಕ್ವಿಟ್ ಇಂಡಿಯ ಚಳುವಳಿ'ಯ ಬಗ್ಗೆ ಸ್ವಾತಂತ್ರ್ಯ ಹೋರಾಟದ ಚರಿತ್ರೆಯ ವಿದ್ಯಾರ್ಥಿಗಳಿಗೆಲ್ಲ ಗೊತ್ತು. ಆದರೆ ಈಗ ಜಾತಿಗಣತಿಯು 'ಸ್ಪ್ಲಿಟ್ ಇಂಡಿಯ ಚಳುವಳಿ'ಗೆ ದಾರಿ ಮಾಡಿಕೊಡುತ್ತದೆ ಎಂಬ ಮಾತನ್ನು ನಂಬುವುದಕ್ಕೆ ಆಧಾರಗಳೇನಿಲ್ಲ. ಇದು ಸಮಸ್ಯೆಯನ್ನು ಅತಿಮಾಡುತ್ತಿರುವುದಕ್ಕೆ ಸಾಕ್ಷಿ. ಜಾತಿಗಣತಿಯನ್ನು ಯಾರು ಒತ್ತಾಯಿಸುತ್ತಿರುವರೋ ಅವರಿಗೂ ಜಾತೀಯತೆಯಲ್ಲಿ ನಂಬಿಕೆ ಇಲ್ಲ.

ಜಾತಿಗಣತಿಯನ್ನು ವಿರೋಧಿಸುತ್ತಿರುವವರು ಜಾತೀಯತೆಯನ್ನು ಎಷ್ಟರ ಮಟ್ಟಿಗೆ ವಿರೋಧಿಸುತ್ತಿದ್ದಾರೋ ಅಷ್ಟೇ ಅಥವಾ ಅದಕ್ಕಿಂತಲೂ ಒಂದು ಪಟ್ಟು ಹೆಚ್ಚಿಗೆ ಜಾತಿಗಣತಿಯನ್ನು ಒತ್ತಾಯಿಸುತ್ತಿರುವವರು ಜಾತೀಯತೆಯನ್ನು ವಿರೋಧಿಸುತ್ತಾರೆ. ಜಾತೀಯತೆ ಯೆನ್ನುವುದು ಒಂದು ಕ್ಯಾನ್ಸರ್ ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ನಮ್ಮ ಸಂದರ್ಭ ಎಷ್ಟು ಸೂಕ್ಷ್ಮವಾಗಿದೆ ಮತ್ತು ಸಂಕೀರ್ಣವಾಗಿದೆ ಎಂದರೆ ನಾವು ಜಾತಿಗೆ ಸಂಬಂಧಿಸಿದ ಸಂಗತಿಗಳನ್ನು ವೈಜ್ಞಾನಿಕವಾಗಿ ಮತ್ತು ವ್ಯಾವಹಾರಿಕವಾಗಿ ಬಳಸಿಕೊಳ್ಳಲೇ ಬೇಕಾಗಿದೆ. ಜಾತೀಯತೆಯನ್ನು ಜಾತಿಯತೆಯಿಂದಲೇ ನಿವಾರಣೆ ಮಾಡಿಕೊಳ್ಳ ಬೇಕಾಗಿದೆ. ನಿಜವಾಗಲೂ ಇದು ದೊಡ್ಡ ಸವಾಲಿನ ವಿಷಯ. ಕೇವಲ ಶಾಲಾ–ಕಾಲೇಜುಗಳ, ಉದ್ಯೋಗ–ನೌಕರಿಗಳ ಅರ್ಜಿಗಳಲ್ಲಿ ಜಾತಿಯ ಅಂಕಣವನ್ನು ರದ್ದು ಪಡಿಸಿದರೆ ಜಾತೀಯತೆ ನಾಶವಾಗುವುದಿಲ್ಲ. ಅದೊಂದು ಸಾಮಾಜಿಕ ವಾಸ್ತವ. ಅದನ್ನು ಮುಚ್ಚಿಟ್ಟುಕೊಂಡರೆ ಅದು ತೊಲಗಿಬಿಡುವುದಿಲ್ಲ. ಅದನ್ನು ನೇರವಾಗಿ ಮತ್ತು ಮುಕ್ತವಾಗಿ ಎದುರಿಸಬೇಕು. ಅದು ಸಮಸ್ಯೆಯೆನ್ನುವುದನ್ನು ನಾವು ಒಪ್ಪಿಕೊಳ್ಳಬೇಕು. ಅದಕ್ಕೆ ಜಾತಿಗಣತಿ ಬೇಕು.

**ನಾವೇನು ಮಾಡಬಹುದು?**

ಇದಕ್ಕೆ ಇರುವ ಮದ್ದೆಂದರೆ ಜನರ ರಾಜಕೀಯ ಸಂಘಟನೆ(ಪಕ್ಷ ರಾಜಕಾರಣವಲ್ಲ). ಇಂದು ಅಭಿವೃದ್ಧಿಯ ಪರಿಭಾಷೆಯು ತನ್ನ ಅರ್ಥ ಕಳೆದುಕೊಂಡಿದೆ. ಬಡತನವೆಂದರೆ, ಹಸಿವೆಂದರೆ, ಅಸ್ವಸ್ಥತೆಯೆಂದರೆ, ಹಂಗಿನ ಬದುಕೆಂದರೆ ಯಾರಿಗೂ ತಾಕುವುದಿಲ್ಲ. ಸಾಮಾಜಿಕವಾಗಿ ನಮ್ಮದು ಅತ್ಯಂತ ಸ್ಪಂದನೆಯಿಲ್ಲದ ರಾಜ್ಯವಾಗಿದೆ. ಇದಕ್ಕೆ ಒಂದೇ ಉತ್ತರವೆಂದರೆ ಶಿಕ್ಷಣ ಮತ್ತು ಸಾಕ್ಷರತಾ ಕ್ರಾಂತಿ. ಅಭಿವೃದ್ಧಿಯ ಸಾಮಾಜಿಕತೆಯನ್ನು ನಾವು ರಾಜಕೀಯಕರಣ ಗೊಳಿಸಬೇಕಾಗಿದೆ. ಹರಿಗಿನ ಪರಿಭಾಷೆಗೆ ಪ್ರತಿಯಾಗಿ ಹಕ್ಕಿನ ಪರಿಭಾಷೆಗೆ ಮನ್ನಣೆ ದೊರೆಯುವಂತೆ ಮಾಡಬೇ ಕಾಗಿದೆ. ಅಭಿವೃದ್ಧಿಯೆನ್ನುವುದು ದಾನ, ದತ್ತಿ, ಉಂಬಳಿಯಲ್ಲ. ಅದು ಜನರ ಹಕ್ಕು. ಅದು ಜನರ ಅಧಿಕಾರ. ದಲಿತರು, ಹಿಂದುಳಿದ ವರ್ಗಗಳು, ಮಹಿಳೆಯರು ತಮ್ಮ ತಮ್ಮ ಅಧಿಕಾರವನ್ನು, ತಮ್ಮ ತಮ್ಮ ಹಕ್ಕುಗಳನ್ನು, ಅಭಿವೃದ್ಧಿಯಲ್ಲಿ ತಮ್ಮ ಪಾಲನ್ನು ಒತ್ತಾಯಿಸಲು ಅಗತ್ಯವಾದ ದಲಿತವಾದಿ, ಹಿಂದುಳಿದವರ್ಗವಾದಿ, ಮಹಿಳಾವಾದಿ ರಾಜಕಾರಣವನ್ನು ರೂಪಿಸಬೇಕಲಾಗಿದೆ. ಈ ದಿಶೆಯಲ್ಲಿ ಸಮಾಜವಿಜ್ಞಾನಿಗಳ ಪಾತ್ರ ಗುರುತರವಾದುದಾಗಿದೆ.

(ದಿನಾಂಕ 3, 4.-5, 2010ರಂದು ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ 'ಕರ್ನಾಟಕ ಸಮಾಜಶಾಸ್ತ್ರ ಸಂಘ'ದ ಒಂಬತ್ತನೆಯ ಸಮಾವೇಶದ ಗೋಷ್ಠಿಯೊಂದರಲ್ಲಿ ಮಂಡಿಸಿದ ಪ್ರಬಂಧದ ಪರಿಷ್ಕೃತ ರೂಪ) ☐

# ದಲಿತರ ಮುಂದಿನ ಹೆಜ್ಜೆ

**ಚಂದ್ರಭಾನ್ ಪ್ರಸಾದ್**

**ದಲಿತ್ ಡೈರಿ**

ಅನು: ಸತ್ಯಪ್ರಕಾಶ್ ಎಂ ಆರ್

ಆದಿವಾಸಿಗಳು ಮತ್ತು ದಲಿತರ ಪ್ರಗತಿ ಕುರಿತು ಮಾತನಾಡಲು 2000ದಲ್ಲಿ ಮಧ್ಯ ಪ್ರದೇಶದ ಅಂದಿನ ಮುಖ್ಯ ಮಂತ್ರಿ ದಿಗ್ವಿಜಯ್ ಸಿಂಗ್ ನನ್ನನ್ನು ಸಂಪರ್ಕಿಸಿದ್ದರು. ದಿಗ್ವಿಜಯ್ ಅವರಂತೆ ದೂರದೃಷ್ಟಿ ಹೊಂದಿದ್ದು ಅವರ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಡಾ. ಅಮರ್ ಸಿಂಗ್ ಈ ಹೊಸ ಬೆಳವಣಿಗೆಯ ರೂವಾರಿಯಾಗಿದ್ದರು. ಸಿಂಗ್ ಅವರೊಡನೆ ಆರಂಭಿಕ ಮಾತುಕತೆ ನಡೆಸಿದ ನಂತರ ದೆಹಲಿಯ ಮಧ್ಯ ಪ್ರದೇಶ ಭವನದಲ್ಲಿ ದಿಗ್ವಿಜಯ್ ಅವರನ್ನು ಭೇಟಿಯಾದೆವು.

"ಹೆಚ್ಚಿನ ಅನುದಾನದ ನೆರವಿಲ್ಲದೆ ದಲಿತರು/ ಆದಿವಾಸಿಗಳು ತ್ವರಿತಗತಿಯಲ್ಲಿ ಹಾಗೂ ದೊಡ್ಡಮಟ್ಟದಲ್ಲಿ ಅಭಿವೃದ್ಧಿಗೊಳ್ಳುವ ನಿಟ್ಟಿನಲ್ಲಿ ನನ್ನ ಸರ್ಕಾರದಿಂದ ಸಹಾಯ ಮಾಡುವುದು ಹೇಗೆ?" ಎಂದು ದಿಗ್ವಿಜಯ್ ನಮ್ಮ ಮೊದಲ ಭೇಟಿಯಲ್ಲಿ ಕೇಳಿದ್ದರು. ದಶಕದ ಹಿಂದೆ ಬಹಳಷ್ಟು ರಾಜ್ಯ ಸರ್ಕಾರಗಳು ಹಣಕಾಸಿನ ಕೊರತೆ ಅನುಭವಿಸುತ್ತಿದ್ದವು. ಆಗ ಸರ್ಕಾರಿ ನೌಕರರಿಗೆ ವೇತನ ನೀಡುವುದು ಕೂಡ ಕಷ್ಟ ಕರವಾಗಿತ್ತು. 1990ರ ನಂತರದ ಬೃಹತ್ ಮಟ್ಟದ ಆರ್ಥಿಕ ಸುಧಾರಣೆಯ ಲಾಭ ರಾಜ್ಯ ಸರ್ಕಾರಗಳಿಗೆ ಇನ್ನೂ ತಲುಪಿರಲಿಲ್ಲ. ಈ ಹಿನ್ನೆಲೆಯಲ್ಲಿ ದಿಗ್ವಿಜಯ್ ಸಿಂಗ್ ಮಾತನಾಡಿದ್ದು ನಮಗೆ ಮನದಟ್ಟಾಯಿತು. ಯೋಜನಾ ತಜ್ಞರು ದಲಿತ/ ಆದಿವಾಸಿಗಳ ಕಲ್ಯಾಣಕ್ಕಾಗಿ ಸೂಚಿಸಿದ ಎಲ್ಲ ಯೋಜನೆಗಳಿಗೆ ಬೃಹತ್ ಪ್ರಮಾಣದ ಹಣಕಾಸಿನ ಅವಶ್ಯಕತೆ ಇರುವುದನ್ನು ದಿಗ್ವಿಜಯ್ ವಿವರಿಸಿದರು.

"ನಿಮ್ಮ ಸರ್ಕಾರ ಹೆಚ್ಚಿನ ಹಣ ತೊಡಗಿಸದೆ ಸಹಸ್ರ ಸಂಖ್ಯೆಯ ದಲಿತರು/ ಆದಿವಾಸಿಗಳನ್ನು ಸಬಲೀಕರಣದೆಡೆಗೆ ಕೊಂಡೊಯ್ಯಬಹುದು" ಎಂದು ನಾನಾಗ ಸಲಹೆ ನೀಡಿದ್ದೆ. ಡಾ. ಅಮರ್ ಸಿಂಗ್ ಅವರೊಂದಿಗಿನ ಭೇಟಿ ವೇಳೆ ಕೂಡ ನಾನು ಇದೇ ವಿಚಾರವನ್ನು ಪ್ರಸ್ತಾಪಿಸಿದ್ದೆ. ಈಗಲೂ ಈ ವಿಚಾರದ ಬಗ್ಗೆ ನನಗೆ ನಂಬಿಕೆಯಿದೆ. ಸರ್ಕಾರಗಳು ಕಡಿಮೆ ಹಣ ವಿನಿಯೋಗಿಸಿ ಅಧಿಕ ಸಂಖ್ಯೆಯ ದಲಿತರನ್ನು ಸಬಲೀಕರಣಗೊಳಿಸಬಹುದು.

ಆಗ ಹತ್ತುರೂ. ಬೆಲೆ ಬಾಳುತ್ತಿದ್ದ ಬಾಲ್‌ಪೆನ್ ಒಂದನ್ನು ನನ್ನ ಜೇಬಿನಿಂದ ತೆಗೆದು ದಿಗ್ವಿಜಯ್ ಅವರಿಗೆ ಹೀಗೆ ವಿವರಿಸಿದೆ: "ಈ ಲೇಖನಿಯನ್ನು ನಿಮ್ಮ ಸರ್ಕಾರ ಒಂಭತ್ತು ರೂ.ಗೆ ಖರೀದಿಸುತ್ತಿರಬಹುದು. ದಲಿತರು/ ಆದಿ ವಾಸಿಗಳಿಗೆ ಮಾರುಕಟ್ಟೆ ಪ್ರವೇಶಿಸಲು ಅವಕಾಶ ಮಾಡಿ ಕೊಡುವ ನಿಟ್ಟಿನಲ್ಲಿ ಈ ಲೇಖನಿಯನ್ನು 8.50ರೂ.ಗೆ ಅವರಿಂದ ಖರೀದಿಸಬಹುದು. ಹೊಸದಾಗಿ ಉದ್ಯಮಕ್ಕೆ ಕಾಲಿ ಡುತ್ತಿರುವುದರಿಂದ ಸರ್ಕಾರ ದೊಡನೆ ಕಡಿಮೆ ಮಾರ್ಜಿನ್‌ನಲ್ಲಿ ವ್ಯವಹರಿಸಲು ಅವರು ತಯಾರಿರುತ್ತಾರೆ."

ಮಾರುಕಟ್ಟೆಗೆ ಹೊಸ ಉದ್ಯಮಿಗಳು ಪ್ರವೇಶಿಸಿ ಯಶಸ್ವಿಯಾಗುವ ವಿಧಾನ ಇದು. ವಿಶ್ವದಾದ್ಯಂತ ಸರಕು – ಸೇವೆಗಳನ್ನು ಮುಕ್ತ ಮಾರುಕಟ್ಟೆಯಿಂದ ಸರ್ಕಾರಗಳು ದೊಡ್ಡ ಪ್ರಮಾಣದಲ್ಲಿ ಖರೀದಿಸುತ್ತಿರುವುದನ್ನು ದಿಗ್ವಿಜಯ್ ಅವರಿಗೆ ತಿಳಿಸಿದೆ. "ಇಂದು ಬೃಹತ್ ಪ್ರಮಾಣದಲ್ಲಿ ಬೆಳೆದಿರುವ ಕಾರ್ಪೋರೇಟ್ ಸಂಸ್ಥೆಗಳು ಆರಂಭದಲ್ಲಿ ಸರ್ಕಾರ ದೊಂದಿಗೆ ವ್ಯವಹರಿಸಿ ಅದರ ಲಾಭ ಪಡೆದಿರುವುದು ಸುಳ್ಳಲ್ಲ" ಎಂದಾಗ ದಿಗ್ವಿಜಯ್ ಅವರು ಹೌದೆಂದು ತಲೆಯಾಡಿಸಿದರು.

ದಲಿತ/ ಆದಿವಾಸಿ ವಿತರಕರ ಪ್ರಮಾಣ ಕಡಿಮೆಯಾಗಿರುವುದರಿಂದ ಸರ್ಕಾರದ ಇಂತಹ ಯೋಜನೆಗಳ ಲಾಭವನ್ನು ಲಕ್ಷಾಂತರ ಮಂದಿ ದಲಿತರು ಪಡೆದುಕೊಳ್ಳಬಹುದು. "ವಿಶ್ವದ ಯಾವುದೇ ಭಾಗದಲ್ಲಿ ಸರ್ಕಾರಗಳು ವೈಯುಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಒಂದು ಸಮುದಾಯ ಅಥವಾ ವ್ಯಕ್ತಿಗೆ ನೇರವಾಗಿ ಸಹಾಯಮಾಡಿ ಅವರನ್ನು ಮೇಲೆತ್ತಲಾಗುವುದಿಲ್ಲ. ನಿಮ್ಮ ಸರ್ಕಾರ ದಲಿತರು/ ಆದಿವಾಸಿಗಳು ಉದ್ಯಮ ವ್ಯವಹಾರಗಳಲ್ಲಿ ತೊಡಗುವ ನಿಟ್ಟಿನಲ್ಲಿ ಉತ್ತೇಜನ ನೀಡಬೇಕಿದೆ. ಆ ಮೂಲಕ ಒಟ್ಟಾರೆ ಸಮುದಾಯ ಸ್ವಯಂ ಅಭಿವೃದ್ಧಿಶೀಲವಾಗಬೇಕು. ದಲಿತ/ ಆದಿವಾಸಿ ಸಮುದಾಯಗಳ ಮಾದರಿ ಉದ್ಯಮಿಗಳನ್ನು ಸೃಷ್ಟಿಸುವ ಕೆಲಸವನ್ನು ನಿಮ್ಮ ಸರ್ಕಾರ ಮಾಡಬೇಕಿದೆ."

ಈ ವಿಚಾರವನ್ನು ಆಲಿಸಿ ಉತ್ಸುಕರಾದ ದಿಗ್ವಿಜಯ್ ಸಿಂಗ್, ದಲಿತ/ ಆದಿವಾಸಿಗಳ ಬೃಹತ್ ಅಧಿವೇಶನವನ್ನು ಭೋಪಾಲ್‌ನಲ್ಲಿ ಆಯೋಜಿಸಲು ಡಾ. ಅಮರ್ ಸಿಂಗ್ ಅವರಿಗೆ ಸೂಚನೆ ನೀಡಿದರು. 2002ರ ಜೂನ್‌ನಲ್ಲಿ ಡಾ. ಸಿಂಗ್ ಅವರ ನೇತೃತ್ವದಲ್ಲಿ ಆಯೋಜಿಸಲಾದ ಐತಿಹಾಸಿಕ ಭೋಪಾಲ್ ಅಧಿವೇಶನದಲ್ಲಿ ದೇಶದ ಮೂಲೆ ಮೂಲೆಗಳಿಂದ ಸುಮಾರು 300ಕ್ಕೂ ಹೆಚ್ಚು ದಲಿತ ಬುದ್ಧಿಜೀವಿಗಳು, ಅಭಿಪ್ರಾಯ ನಾಯಕರು, ಶೈಕ್ಷಣಿಕ ತಜ್ಞರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು. ನನ್ನ ಸಹುದ್ಯೋಗಿಗಳು – ಸ್ನೇಹಿತರಾದ ಡಿ.ಶ್ಯಾಂ ಬಾಬು, ಐಎಎಸ್ ಅಧಿಕಾರಿ ರಾಜಶೇಖರ್‌ವುಂದ್ರ ಅವರ ನೆರವಿನೊಂದಿಗೆ ಭೋಪಾಲ್ ಡ್ಯಾಕ್ಯುಮೆಂಟ್ ಸಿದ್ಧಪಡಿಸುವ ಶ್ರೇಯ ಆಗ ನನಗೆ ಒದಗಿ ಬಂತು.

ಭೋಪಾಲ್ ಅಧಿವೇಶನದ ಮುಕ್ತಾಯ ಸಮಾರಂಭದಲ್ಲಿ ದಿಗ್ವಿಜಯ್ ಸಿಂಗ್ 'ವಿತರಣಾ ವೈವಿಧ್ಯತೆ ನೀತಿ'ಯನ್ನು ಘೋಷಿಸಿದರು. ಈ ನೀತಿಯ ಪ್ರಕಾರ ಮಧ್ಯಪ್ರದೇಶ ಸರ್ಕಾರ ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸುವ ಒಟ್ಟಾರೆ ಸರಕು ಮತ್ತು ಸೇವೆಯಲ್ಲಿ ಶೇ. 30ರಷ್ಟು ಭಾಗ ದಲಿತ/ ಆದಿವಾಸಿ ಉದ್ಯಮಿಗಳದ್ದಾಗಿರಬೇಕು.

ದಲಿತರು/ ಆದಿವಾಸಿಗಳ ಅಭಿವೃದ್ಧಿಯ ವಿಚಾರದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದ ದಿಗ್ವಿಜಯ್ ಸಿಂಗ್, ನಂತರದ ಚುನಾವಣೆಯಲ್ಲಿ ಸೋಲನುಭವಿಸಿದರು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸ್ವಲ್ಪ ಮಂದಗತಿಯಲ್ಲಿ ಸಾಗುತ್ತಿರುವ 'ವಿತರಣಾ ವೈವಿಧ್ಯತೆ ನೀತಿ' ಈಗಲೂ ಕೂಡ ಚಾಲ್ತಿಯಲ್ಲಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ತಂತಮ್ಮ ಪ್ರಣಾಳಿಕೆಗಳಲ್ಲಿ ವಿತರಣಾ ವೈವಿಧ್ಯತೆಯ ಭರವಸೆಯನ್ನು ನೀಡಿವೆ.

ಬಹುತೇಕ ದಲಿತರಿಗೆ ತಿಳಿದಿರುವಂತೆ, ಭೋಪಾಲ್ ಅಧಿವೇಶನ ಹಲವು ನೆಲೆಗಟ್ಟುಗಳಲ್ಲಿ ಮುಖ್ಯವಾಗುತ್ತದೆ. ಖಾಯಂ ಸರ್ಕಾರಿ ಉದ್ಯೋಗಗಳ ಮೂಲಕ ಮಾತ್ರ ದಲಿತ/ ಆದಿವಾಸಿಗಳ ಏಳ್ಗೆ ಸಾಧ್ಯವಿಲ್ಲ. ದಲಿತರು ಮುಂಬರುವ ದಿನಗ

> **"ನಿಮ್ಮ ಸರ್ಕಾರ ಹೆಚ್ಚಿನ ಹಣ ತೊಡಗಿಸದೆ ಸಹಸ್ರ ಸಂಖ್ಯೆಯ ದಲಿತರು/ ಆದಿವಾಸಿಗಳನ್ನು ಸಬಲೀಕರಣದೆಡೆಗೆ ಕೊಂಡೊಯ್ಯಬಹುದು" ಎಂದು ನಾನಾಗ ಸಲಹೆ ನೀಡಿದ್ದೆ. ಡಾ.ಅಮರ್ ಸಿಂಗ್ ಅವ ರೊಂದಿಗಿನ ಭೇಟಿವೇಳೆ ಕೂಡ ನಾನು ಇದೇ ವಿಚಾರವನ್ನು ಪ್ರಸ್ತಾಪಿಸಿದ್ದೆ. ಈಗಲೂ ಈ ವಿಚಾರದ ಬಗ್ಗೆ ನನಗೆ ನಂಬಿಕೆಯಿದೆ. ಸರ್ಕಾರಗಳು ಕಡಿಮೆ ಹಣ ವಿನಿಯೋಗಿಸಿ ಅಧಿಕ ಸಂಖ್ಯೆಯ ದಲಿತರನ್ನು ಸಬಲೀಕರಣಗೊಳಿಸಬಹುದು. ಆಗ ಹತ್ತು ರೂ. ಬೆಲೆ ಬಾಳುತ್ತಿದ್ದ ಬಾಲ್‌ಪೆನ್ ಒಂದನ್ನು ನನ್ನ ಜೇಬಿನಿಂದ ತೆಗೆದು ದಿಗ್ವಿಜಯ್ ಅವರಿಗೆ ಹೀಗೆ ವಿವರಿಸಿದೆ: "ಈ ಲೇಖನಿಯನ್ನು ನಿಮ್ಮ ಸರ್ಕಾರ ಒಂಭತ್ತು ರೂ.ಗೆ ಖರೀದಿಸುತ್ತಿರಬಹುದು. ದಲಿತರು/ ಆದಿವಾಸಿಗಳಿಗೆ ಮಾರುಕಟ್ಟೆ ಪ್ರವೇಶಿ ಸಲು ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಈ ಲೇಖನಿಯನ್ನು ೮.೫೦ ರೂ.ಗೆ ಅವರಿಂದ ಖರೀದಿಸಬಹುದು.**

# ದಲಿತ ಉದ್ಯಮಿಗಳ ಹೊಸ ಯುಗ

ಳಲ್ಲಿ ಉದ್ಯಮಗಳನ್ನು ಪ್ರವೇಶಿಸಬೇಕಿದೆ ಎಂದು ಅಧಿವೇಶನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದರು. ಆದರೆ, ಭೋಪಾಲ್ ಅಧಿವೇಶನ ಕೂಡ ಸರ್ಕಾರದ ಸಹಾಯದಿಂದಲೇ ನಡೆದದ್ದು ಎಂಬ ಅಂಶವನ್ನು ನಾವು ಮರೆಯುವಂತಿಲ್ಲ.

ಭೋಪಾಲ್ ಅಧಿವೇಶನದ ತಾರ್ಕಿಕ ವಿಸ್ತೃತರೂಪ ಪುಣೆಯಲ್ಲಿ ಇತ್ತೀಚೆಗೆ ನಡೆದ ದಲಿತ್ ಎಕ್ಸ್‌ಪೋ. ಈಗ ದಲಿತರು/ ಆದಿವಾಸಿಗಳು ಖಾಸಗಿ ವಲಯ ದೊಂದಿಗೆ ಸಹಭಾಗಿತ್ವ ಹೊಂದುವ ಕಾಲ ಬಂದಿದೆ. ಭೋಪಾಲ್‌ನಲ್ಲಿ ದಿಗ್ವಿಜಯ್ ಮತ್ತು ಡಾ. ಅಮರ್ ಸಿಂಗ್ ಅವರು ಸಾಧಿಸಿದ್ದನ್ನು, ಪುಣೆಯಲ್ಲಿ ಮಿಲಿಂದ್ ಕಾಂಬಳೆ ಅವರು ದಲಿತರು ಮತ್ತು ಖಾಸಗಿ ವಲಯವನ್ನು ಒಂದುಗೂಡಿಸುವ ಮೂಲಕ ಸಾಧಿಸಿ ತೋರಿಸಿದ್ದಾರೆ.

*   *   *   *

ಎಲ್ಲ ಅಡೆತಡೆಗಳನ್ನು ಮೀರಿ ಪ್ರಗತಿಯ ಪಥದತ್ತ ಸಾಗುವಲ್ಲಿ ದಲಿತರಿಗೆ ದೊಡ್ಡ ತೊಡಕಾಗಿರುವುದು ತಮ್ಮ ಬಗ್ಗೆ ಸಮಾಜದಲ್ಲಿ ಚಾಲ್ತಿಯಲ್ಲಿರುವ ಸ್ಟಿರಿಯೋಟಿಪಿಕಲ್ ಅಭಿಪ್ರಾಯಗಳು. ದಲಿತರ ಬಗ್ಗೆ ಸಮಾಜ ಹೊಂದಿರುವ ದೃಷ್ಟಿಕೋನಗಳು ಅವರ ಆತ್ಮಸ್ಥೈರ್ಯವನ್ನು ಕಂಗೆಡಿಸುತ್ತದೆ. ಆಗ್ರಾದಲ್ಲಿರುವ ಹತ್ತು ಪ್ರಮುಖ ದಲಿತ ಉದ್ಯಮಿಗಳಲ್ಲಿ ಎಂಟು ಮಂದಿ ಹೋಟೆಲ್ ಉದ್ಯಮ ನಡೆಸುತ್ತಿದ್ದರೆ, ಇನ್ನಿಬ್ಬರು ಚರ್ಮದ ವಸ್ತುಗಳಿಗೆ ಯಾವುದೇ ಸಂಬಂಧ ಇಲ್ಲದ ಇತರ ಉದ್ಯಮಗಳಲ್ಲಿ ತೊಡಗಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಆಗ್ರಾದ ದಲಿತ ಉದ್ಯಮಿಗಳು ಹೋಟೆಲ್‌ಗಳಿಂದಾಗಿ ಪ್ರಸಿದ್ಧಿಯಾಗಬೇಕಿತ್ತು. ಆದರೆ ಸಾರ್ವಜನಿಕರ ದೃಷ್ಟಿಯಲ್ಲಿ ಇಲ್ಲಿನ ದಲಿತರು ಚರ್ಮೋದ್ಯಮಕ್ಕೆ ಹೆಸರುವಾಸಿ. ಇದನ್ನೇ ನಾನು 'ದಲಿತ ಸ್ಟಿರಿಯೋಟೈಪ್' ಎಂದು ಕರೆಯುವುದು. ದಲಿತರು ತಮ್ಮ ಸಾಮಾಜಿಕ ಅಸ್ಮಿತೆಯೊಡನೆ ಸಂಬಂಧ ಹೊಂದಿರುವ ಕ್ಷೇತ್ರಗಳಲ್ಲಿ ಮಾತ್ರ ಯಶಸ್ವಿಯಾಗುತ್ತಾರೆ ಎಂಬ ಸಾಂಪ್ರದಾಯಿಕ ಧೋರಣೆ ಇಲ್ಲಿ ಕೆಲಸ ಮಾಡುತ್ತದೆ.

ಇತ್ತೀಚೆಗೆ ಪುಣೆಯಲ್ಲಿ ನಡೆದ ದಲಿತ್ ಎಕ್ಸ್‌ಪೋ ಇಂತಹ ಸೀಮಿತ ಧೋರಣೆಗಳಿಗೆ ವ್ಯತಿರಿಕ್ತವಾದ ನಿದರ್ಶನಗಳನ್ನು ಒದಗಿಸಿತು. ಎಕ್ಸ್‌ಪೋದಲ್ಲಿ ಭಾಗವಹಿಸಿದ್ದ ಬಹುತೇಕ ಮಂದಿ ಚರ್ಮೋದ್ಯಮದಲ್ಲಿ ತೊಡಗಿಸಿಕೊಂಡಿರಬಹುದು ಎಂಬ ನಿರೀಕ್ಷೆಗಳು ಅಲ್ಲಿ ಹುಸಿಯಾದವು. ಎಕ್ಸ್‌ಪೋದಲ್ಲಿ ಅತಿಥಿಗಳಾಗಿ ಭಾಗವಹಿಸಿದ್ದ ದೆಹಲಿ ಮೂಲದ ಬಹಳಷ್ಟು ಮಂದಿ, ಅಲ್ಲಿ ಕಟ್ಟಡ ಕಾಮಗಾರಿ, ಸಕ್ಕರೆ ಉದ್ಯಮ, ಮೆಷಿನ್ ಉಪಕರಣಗಳ ಉದ್ಯಮ, ಆಹಾರ ಮತ್ತು ಪಾನೀಯ ಉದ್ಯಮಗಳನ್ನು ನಡೆಸುವ ದಲಿತ ಉದ್ಯಮಿಗಳನ್ನು ಕಂಡು ಆಶ್ಚರ್ಯಪಟ್ಟಿದ್ದು ಸುಳ್ಳಲ್ಲ. ಸಾಂಪ್ರದಾಯಿಕವಾಗಿ ಇತರ ಜಾತಿಯ ಉದ್ಯಮಿಗಳು ಮಾತ್ರ ಯಶಸ್ಸು ಸಾಧಿಸಲು ಸಾಧ್ಯ ಎಂಬಂತಹ ಕ್ಷೇತ್ರಗಳಿಗೆ ಲಗ್ಗೆಯಿಟ್ಟು ಯಶಸ್ಸು ಸಾಧಿಸಿರುವ ದಲಿತ ಉದ್ಯಮಿಗಳು ಎಕ್ಸ್‌ಪೋದಲ್ಲಿ ಭಾಗವಹಿಸಿದ್ದರು. ದಲಿತರು ನಡೆಸುತ್ತಿರುವ ಕೆಲವು ಉದ್ಯಮಗಳ ನಿದರ್ಶನಗಳು ಇಲ್ಲಿವೆ:

**ಓಐಸಿಎಲ್:** ಸಾಫ್ಟ್‌ವೇರ್ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಪ್ರತಿಭಾ ಕಾಂಬಳೆ ಓಷಿಯಾನಿಕ್ ಇಂಟರ್‌ನ್ಯಾಷನಲ್ ಕಾರ್ಪೋರೇಷನ್ ಲಿಮಿಟೆಡ್ ಎಂಬ ಬಿಪಿಓ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಬಹುತೇಕ ಬ್ರಿಟನ್ ಮೂಲದ ಸಂಸ್ಥೆಗಳಿಗೆ ಓಐಸಿಎಲ್ ಸೇವೆಯನ್ನು ಒದಗಿಸುತ್ತದೆ. 100ಕ್ಕೂ ಹೆಚ್ಚುಮಂದಿ ವಿವಿಧ ಜಾತಿಯ ಯುವಕ/ ಯುವತಿಯರು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿಭಾ, ಶೀಘ್ರದಲ್ಲಿ ಲಂಡನ್‌ನಲ್ಲಿ ಸಂಸ್ಥೆಯ ಶಾಖೆಯನ್ನು ಆರಂಭಿಸಲಿದ್ದಾರೆ. ಉದ್ಯಮದ ಯಾವುದೇ ಹಿನ್ನೆಲೆ ಹೊಂದಿರದ ದಲಿತ ಮಧ್ಯಮವರ್ಗದಿಂದ ಬಂದ ಪ್ರತಿಭಾ ಇಂದು ಈ ಮಟ್ಟದ ಸಾಧನೆ ಮಾಡಿದ್ದಾರೆ.

ಎಕ್ಸ್‌ಪೋದಲ್ಲಿ ಭಾಗವಹಿಸಿದ್ದ ಬಹಳಷ್ಟು ಮಂದಿ ದಲಿತ ಉದ್ಯಮಿಗಳು ಸಾಫ್ಟ್ ಕೌಶಲ್ಯ ಮತ್ತು ಬೌದ್ಧಿಕ ಸಾಮರ್ಥ್ಯ ಕ್ಷೇತ್ರಗಳಲ್ಲಿ ವ್ಯವಹಾರ ನಡೆಸುತ್ತಿರುವುದನ್ನು ಗಮನಿಸಿದೆ. ಇಂತಹ ಉದ್ಯಮಗಳನ್ನು ನಡೆಸಲು ಅಧಿಕ ಬಂಡವಾಳದ ಅಗತ್ಯವಿರುವುದಿಲ್ಲ ಮತ್ತು ಪಾರಂಪರಿಕವಾಗಿ ಔದ್ಯಮಿಕ ಹಿನ್ನೆಲೆ ಹೊಂದಿರಬೇಕಿಲ್ಲ. ಈ ಉದ್ಯಮಗಳನ್ನು ನಡೆಸುವ ಮಾಲೀಕರು ಮೂಲಭೂತವಾಗಿ ಕೌಶಲ್ಯವನ್ನು ಹೊಂದಿದ್ದು ವೃತ್ತಿಪರರಾಗಿಬೇಕು. ಹೊಸ ಕ್ಷೇತ್ರಗಳಲ್ಲಿ ವ್ಯವಹಾರ ನಡೆಸುತ್ತಿರುವ ಬಹುತೇಕ ದಲಿತ ಉದ್ಯಮಿಗಳು ಮಧ್ಯಮ ವರ್ಗದ ಕುಟುಂಬಗಳಿಂದ ಬಂದವರು. ಕೌಟುಂಬಿಕವಾಗಿ ಔದ್ಯಮಿಕ ಹಿನ್ನೆಲೆ ಹೊಂದಿಲ್ಲದವರು.

**ಹೊರೈಜ಼ನ್:** ಶೈಕ್ಷಣಿಕ ಸೇವೆ ಒದಗಿಸುವ ಹೊರೈಜ಼ನ್ ಎಂಬ ಸಂಸ್ಥೆಯನ್ನು ವಿವೇಕ್ ಎಸ್ ಡೊಲಾಸ್ ನಡೆಸುತ್ತಿದ್ದಾರೆ. ಬ್ರೈನ್ ಜಿಮ್ ಈ ಸಂಸ್ಥೆಯ ಪ್ರಮುಖವಾದ ಉತ್ಪನ್ನವಾಗಿದೆ. ಸಂಸ್ಥೆಯ ಈ ಮೆದುಳು ಅಭಿವೃದ್ಧಿ ಕಾರ್ಯಕ್ರಮ ಏಕಾಗ್ರತೆ, ನೆನಪಿನ ಶಕ್ತಿ, ತ್ವರಿತ ಓದು ಮತ್ತು ಮಾಹಿತಿ ಸಂಗ್ರಹಣಾ ಪ್ರಕ್ರಿಯೆಯನ್ನು ಒಳಗೊಂಡಿದೆ. ತಾಂತ್ರಿಕವಾಗಿ ಉನ್ನತವಾದ ಈ ಕೋರ್ಸ್‌ಗೆ ಶ್ರೀಮಂತರ ಮಕ್ಕಳು ವಿದ್ಯಾರ್ಥಿಗಳಾಗಿದ್ದಾರೆ.

**ಕ್ರಿಷ್:** ಹಿಂದಿಯ ಕ್ರಿಷ್ ಚಿತ್ರದಿಂದ ಪ್ರಭಾವಿತರಾದ ಸತ್ನುಲ್ ಸೊನಾವಲ್ ಭದ್ರತಾ ಉತ್ಪನ್ನಗಳ ತಯಾರಿಕಾ ಸಂಸ್ಥೆಯನ್ನು ಆರಂಭಿಸಿದ್ದಾರೆ. ಭಾರತದಾದ್ಯಂತ ಹಬ್ಬಿರುವ ಕ್ರಿಷ್ ಸಂಸ್ಥೆ ಸಿಸಿ ಟಿವಿಗಳು, ಸ್ಪೈಕ್ಯಾಮೆರಾ ಹೊಂದಿರುವ ಕೈಗಡಿಯಾರಗಳು, ಪೆನ್‌ಗಳು, ಸ್ಪೈಕ್ಯಾಮೆರಾ ಹೊಂದಿರುವ ತಂಪು ಕನ್ನಡಕಗಳು, ಕ್ಯಾಪ್‌ಗಳು, ಬಯೋಮೆಟ್ರಿಕ್ ದ್ವಾರ ಪ್ರವೇಶ ಉಪಕರಣ, ಮತ್ತಿತರ ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ತಯಾರಿಸುತ್ತದೆ.

**ಕೋಮ್‌ಸಾಲ್ವ್ ಮೀಡಿಯಾಟೆಕ್ ಪ್ರೈವೆಟ್ ಲಿಮಿ ಟೆಡ್:** ಲಲಿತ್ ಬನ್ಸೋಡ್ ಮಾಲೀಕತ್ವದ ಈ ಸಂಸ್ಥೆ ಇಂಟರ್ನೆಟ್ ಬ್ಯಾಂಡ್‌ವಿಡ್ತ್, ಇಂಟರ್ನೆಟ್ ಸೆಕ್ಯೂರಿಟಿ, ಬಿಪಿಓ, ವಿಡಿಯೋ ಕಾನ್ಫರೆನ್ಸಿಂಗ್ ಮತ್ತಿತರ ಸೇವೆಗಳನ್ನು ಒದಗಿಸುತ್ತದೆ. ಮಹಾರಾಷ್ಟ್ರದ ಪ್ರಮುಖ ಕಾರ್ಪೋರೇಟ್ ಸಂಸ್ಥೆಗಳಿಗೆ ಲಲಿತ್ ಸೇವೆ ಒದಗಿಸುತ್ತಿದ್ದಾರೆ.

**ಕಂಟೆಂಟ್:** ಸುನಿಲ್ ಮಾನೆ ಅವರ ಕಂಟೆಂಟ್ ಕಮ್ಯೂನಿಕೇಷನ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆ ಮಾಧ್ಯಮ ತಂತ್ರಗಾರಿಕೆ, ಕಾರ್ಪೋರೆಟ್ ಚಲನಚಿತ್ರಗಳು, ಸಾರ್ವಜನಿಕ ಸಂಪರ್ಕ, ಮಾಧ್ಯಮ ವ್ಯವಸ್ಥಾಪನೆ, ಬ್ರ್ಯಾಂಡಿಂಗ್ ಮತ್ತು ಉತ್ತೇಜನ ಮತ್ತಿತರ ಸೇವೆಗಳನ್ನು ಒದಗಿಸುತ್ತದೆ. ದೇಶದ ಪ್ರಮುಖ ಕಾರ್ಪೋರೇಟ್ ಸಂಸ್ಥೆಗಳಿಗೆ ಸುನಿಲ್ ಸೇವೆ ಒದಗಿಸುತ್ತಿದ್ದಾರೆ.

ಎಕ್ಸ್‌ಪೋದಲ್ಲಿ ಭಾಗವಹಿಸಿದ್ದ ಬಹಳಷ್ಟು ಮಂದಿ ದಲಿತ ಉದ್ಯಮಿಗಳು ಸಾಫ್ಟ್ ಕೌಶಲ್ಯ ಮತ್ತು ಬೌದ್ಧಿಕ ಸಾಮರ್ಥ್ಯ ಕ್ಷೇತ್ರಗಳಲ್ಲಿ ವ್ಯವಹಾರ ನಡೆಸುತ್ತಿರುವುದನ್ನು ಗಮನಿಸಿದೆ. ಇಂತಹ ಉದ್ಯಮಗಳನ್ನು ನಡೆಸಲು ಅಧಿಕ ಬಂಡವಾಳದ ಅಗತ್ಯವಿರುವುದಿಲ್ಲ ಮತ್ತು ಪಾರಂಪರಿಕವಾಗಿ ಔದ್ಯಮಿಕ ಹಿನ್ನೆಲೆ ಹೊಂದಿರಬೇಕಿಲ್ಲ. ಈ ಉದ್ಯಮಗಳನ್ನು ನಡೆಸುವ ಮಾಲೀಕರು ಮೂಲಭೂತವಾಗಿ ಕೌಶಲ್ಯವನ್ನು ಹೊಂದಿದ್ದು ವೃತ್ತಿಪರರಾಗಿಬೇಕು. ಹೊಸ ಕ್ಷೇತ್ರಗಳಲ್ಲಿ ವ್ಯವಹಾರ ನಡೆಸುತ್ತಿರುವ ಬಹುತೇಕ ದಲಿತ ಉದ್ಯಮಿಗಳು ಮಧ್ಯಮ ವರ್ಗದ ಕುಟುಂಬಗಳಿಂದ ಬಂದವರು. ಕೌಟುಂಬಿಕವಾಗಿ ಔದ್ಯಮಿಕ ಹಿನ್ನೆಲೆ ಹೊಂದಿಲ್ಲದವರು. ಈ ಉದ್ಯಮ ಕ್ಷೇತ್ರಗಳು ಕೂಡ ಸಾಂಪ್ರದಾ ಯಿಕವಾದುದಲ್ಲ.

ಪುಣೆಯ ಎಕ್ಸ್‌ಪೋ ದಲಿತ ಯುವಕರ ಪಾಲಿಗೆ ಅವಕಾಶಗಳ ಹೊಸ ಬಾಗಿಲು ತೆರೆಯಿತು ಎಂದರೆ ತಪ್ಪಾಗಲಾರದು. ದಲಿತರು ಬೌದ್ಧಿಕ ಕ್ಷೇತ್ರಗಳಲ್ಲಿ ಕೂಡ ಯಶಸ್ಸು ಸಾಧಿಸಲು ಸಾಧ್ಯ ಎಂಬ ಅಂಶ ಇಲ್ಲಿ ಸಾಬೀತಾಯಿತು. ಜಾಗತೀಕರಣದ ಪರಿಣಾಮ ಸಾಮಾಜಿಕ ಒತ್ತಡಗಳಿಂದ ಮುಕ್ತವಾದ ಹೊಸ ಉದ್ಯಮಗಳು ಭಾರತಕ್ಕೆ ಕಾಲಿರಿಸಿವೆ. ಈ ಹೊಸ ಉದ್ಯಮಗಳು ಜಾತಿ ಪ್ರಾಬಲ್ಯವನ್ನು ಕೂಡ ಹೊಂದಿಲ್ಲ. ಯಾವುದೇ ಜಾತಿ ಇಂತಹ ಉದ್ಯಮಗಳಲ್ಲಿ ಪರಿಣತಿ ಹೊಂದಿರುವುದಾಗಿ ಹೇಳಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ದಲಿತರು ಸಮಾನವಾದ ಮಾರುಕಟ್ಟೆಯಲ್ಲಿ ವ್ಯವಹಾರ ನಡೆಸಲು ಸಾಧ್ಯವಾಗಿದೆ.

ಆದರೆ ಇದಿಷ್ಟೇ ಸಾಲದು. ಮಿಲಿಂದ್ ಕಾಂಬಳೆ ಭಾರತೀಯ ದಲಿತ ವಾಣಿಜ್ಯ ಮತ್ತು ಕೈಗಾರಿಕೆಗಳ ಒಕ್ಕೂಟ (ಡಿಐಸಿಸಿಐ)ದ ಶಾಖೆಗಳನ್ನು ಭಾರತದಾದ್ಯಂತ ವಿಸ್ತೃತಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ದಲಿತ್ ಎಕ್ಸ್‌ಪೋಗಳನ್ನು ಭಾರತದಾದ್ಯಂತ ಆಯೋಜಿಸುವಂತಾಗಬೇಕು.

ಎಲ್ಲಕ್ಕಿಂತ ಮುಖ್ಯವಾಗಿ, ಮಹತ್ವಾಕಾಂಕ್ಷೆಯನ್ನು ಹೊಂದಿರುವ ಹೊಸ ಪೀಳಿಗೆಯ ದಲಿತರಿಗೆ ಪ್ರೇರಣೆ ಮತ್ತು ಉತ್ತೇಜನ ನೀಡಬೇಕು. ಪ್ರತಿಭೆಯಲ್ಲಿ ಯಾವುದೇ ಕೊರತೆ ಇಲ್ಲದ ದಲಿತರ ಮಹತ್ವಾಕಾಂಕ್ಷೆಯನ್ನು ನೀರೆರೆದು ಪೋಷಿಸುವ ಕೆಲಸವಾಗಬೇಕು. ಆ ಮೂಲಕ ಜಾತಿವಾದಿ ಇತಿಹಾಸವನ್ನು ಬದಲಾಯಿಸುವ ಹೊಸ ಶಕೆಗೆ ನಾಂದಿ ಹಾಡಬೇಕು.

* * * *

**ಭಾ**ರತ ಸರ್ಕಾರದ ಇಂಜಿನಿಯರಿಂಗ್ ಪ್ರಾಜೆಕ್ಟ್ಸ್ (ಇಂಡಿಯಾ) (ಇಪಿಐ) ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ ದಲಿತ ಇಂಜಿನಿಯರೊಬ್ಬರ ಪರಿಚಯ ನನಗಿದೆ. ಬೃಹತ್ ಯೋಜನೆಗಳ ರಚನೆ ಮತ್ತು ಅನುಷ್ಠಾನವನ್ನು ಇಪಿಐ ಕೈಗೆತ್ತಿಕೊಳ್ಳುತ್ತದೆ. ಕೆಲವು ವರ್ಷಗಳ ಹಿಂದೆ ಅಂತರ್‌ರಾಷ್ಟ್ರೀಯ ಯೋಜನೆಯೊಂದನ್ನು ಇಪಿಐ ಪಡೆದುಕೊಂಡಿತು. ಯೋಜನೆಯ ಉಸ್ತುವಾರಿಯನ್ನು ಇದೇ ದಲಿತ ಇಂಜಿನಿಯರ್ ವಹಿಸಿಕೊಂಡಿದ್ದರು. ಇವರು ಮೀಸಲಾತಿ ನೀತಿಯ ಲಾಭ ಪಡೆದು ಇಂಜಿನಿಯರಿಂಗ್ ಕಾಲೇಜಿಗೆ ಪ್ರವೇಶ ಪಡೆದು, ಇಪಿಐನಲ್ಲಿ ಉದ್ಯೋಗ ಪಡೆದವರು. ನಂತರ ಇಪಿಐನಲ್ಲಿ ತಮ್ಮ ಸ್ವಸಾಮರ್ಥ್ಯದಿಂದ ಉನ್ನತ ಹುದ್ದೆಗೆ ಬಂದವರು.

ಅದೇ ರೀತಿ ಭಾರತ ಸರ್ಕಾರದ ನವರತ್ನ ಸಂಸ್ಥೆಗಳಲ್ಲಿ ಒಂದಾದ ಬಿಎಚ್‌ಇಎಲ್‌ನಲ್ಲಿ ಕಾರ್ಯ ನಿರ್ವಹಿಸುವ ದಲಿತ ಇಂಜಿನಿಯರೊಬ್ಬರ ಪರಿಚಯ ನನಗಿದೆ. ಬೃಹತ್ ಮಟ್ಟದ ಇಂಜಿನಿಯರಿಂಗ್ ಯೋಜನೆಗಳನ್ನು ಕೈಗೆತ್ತುಕೊಳ್ಳುವಲ್ಲಿ ಪ್ರಸಿದ್ಧವಾದ ಬಿಎಚ್‌ಇಎಲ್ ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ ಕೂಡ ಯೋಜನೆಗಳನ್ನು ಪಡೆದುಕೊಳ್ಳುತ್ತದೆ. ಕೆಲವು ವರ್ಷಗಳ ಹಿಂದೆ ಬಿಎಚ್‌ಇಎಲ್ ಜರ್ಮನಿಯಲ್ಲಿ ಬಾಯ್ಲರ್ ಯೋಜನೆಯನ್ನು ಪಡೆದುಕೊಂಡಿತು. ಇದರ ಅನುಷ್ಠಾನಕ್ಕೆ ಇದೇ ದಲಿತ ಇಂಜಿನಿಯರ್ ನಾಯಕತ್ವ ವಹಿಸಿದ್ದರು. ಇಪಿಐನ ಇಂಜಿನಿಯರ್‌ರಂತೆ ಇವರೂ ಕೂಡ ಮೀಸಲಾತಿ ನೀತಿಯ ಲಾಭ ಪಡೆದು ಇಂಜಿನಿಯರಿಂಗ್ ಕಾಲೇಜು ಪ್ರವೇಶಿಸಿ ನಂತರ ಬಿಎಚ್‌ಇಎಲ್‌ನಲ್ಲಿ ಉದ್ಯೋಗಗಳಿಸಿದವರು. ನಂತರ ಇವರೂ ಕೂಡ ತಮ್ಮ ಸಾಮರ್ಥ್ಯದಿಂದ ಮೇಲೆ ಬಂದವರು.

ಅದೇ ರೀತಿ ವಿಶ್ವದಾದ್ಯಂತ ವ್ಯವಹಾರ ನಡೆಸುವ ಚೆನ್ನೈ ಮೂಲದ ಬಹುರಾಷ್ಟ್ರೀಯ ಐಟಿ ಸಂಸ್ಥೆಯೊಂದರ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುವ ದಲಿತರೊಬ್ಬರ ಪರಿಚಯ ನನಗಿದೆ. ಇವರೂ ಕೂಡ ಇಂಜಿನಿಯರಿಂಗ್ ಕಾಲೇಜಿಗೆ ಪ್ರವೇಶ ಪಡೆಯುವಲ್ಲಿ ಮೀಸಲಾತಿ ನೀತಿಯ ಲಾಭ ಪಡೆದವರೇ ಆಗಿದ್ದಾರೆ. ಇಂತಹವರ ಪಟ್ಟಿಯನ್ನು ಸಿದ್ಧಪಡಿಸಲು ನೂರಾರು ಪುಟಗಳು ಬೇಕಾಗಬಹುದು. ತಮ್ಮ ಆಡಳಿತ ಶೈಲಿಯಿಂದ ಮನೆಮಾತಾಗಿರುವ ದಲಿತ ಐಎಎಸ್ ಅಧಿಕಾರಿಗಳು ದೇಶದ ಎಲ್ಲ ರಾಜ್ಯಗಳಲ್ಲಿಯೂ ಇದ್ದಾರೆ. ಹರ್ಷದ್ ಮೆಹ್ತಾ ಷೇರು ಮಾರುಕಟ್ಟೆ ಹಗರಣವನ್ನು ಭೇದಿಸಿದ್ದು ಓರ್ವ ದಲಿತ ಐಎಎಸ್ ಅಧಿಕಾರಿ (ರೆವಿನ್ಯೂ). ಈ ಎಲ್ಲ ದಲಿತರು ಶಿಕ್ಷಣ – ಉದ್ಯೋಗಕ್ಕಾಗಿ ಮೀಸಲಾತಿಯನ್ನು ಅವಲಂಬಿಸಿದವರಾಗಿದ್ದರೂ, ನಂತರ ಸಾಮರ್ಥ್ಯ ಮತ್ತು ಪ್ರತಿಭೆಯಿಂದ ತಂತಮ್ಮ ವೃತ್ತಿಗಳಲ್ಲಿ ದೊಡ್ಡ ಮಟ್ಟದ ಯಶಸ್ಸು ಗಳಿಸಿದ್ದಾರೆ.

ಆದರೆ ಇಲ್ಲೊಂದು ಸಮಸ್ಯೆಯಿದೆ. . ಪ್ರತಿಭೆ, ಸಾಮರ್ಥ್ಯ, ವೃತ್ತಿಪರತೆಯನ್ನು ಹೊಂದಿದ್ದರೂ ಮೀಸಲಾತಿಯ ಫಲವಾಗಿ ಶಿಕ್ಷಣ ಮತ್ತು ಉದ್ಯೋಗ ಗಳಿಸಿದ ದಲಿತರನ್ನು 'ಕೀಳಾಗಿ" ಕಾಣಲಾಗುತ್ತದೆ. ಇತರರಿಗಿಂತ ಸ್ವಲ್ಪ ಕಡಿಮೆ ಅಂಕಗಳಿಸಿದ್ದರೂ ದಲಿತರಿಗೆ ಕಾಲೇಜುಗಳಲ್ಲಿ ಪ್ರವೇಶ ಸಿಗುತ್ತದೆ. ಅದೇ ರೀತಿ ಉದ್ಯೋಗದಲ್ಲಿ ಕೂಡ ರಿಯಾಯಿತಿ ಸಿಗುವುದರಿಂದ ದಲಿತರು ಕಡಿಮೆ ಸಾಮರ್ಥ್ಯ ಹೊಂದಿರುವವರು ಎಂಬ ಪರಿಸ್ಥಿತಿ ಇದೆ. ಭಾರತದ ಜಾತಿಯಾಧಾರಿತ ಸಮಾಜದ ಬಹುದೊಡ್ಡ ಸಮಸ್ಯೆ ಇದು. ಇಲ್ಲಿ ಶತಮಾನಗಳಿಂದ ಬೇರೂರಿರುವ ತಾರತಮ್ಯದ ಧೋರಣೆಯನ್ನು ಮೀರಲು ಸಾಧ್ಯವಾಗುವುದೇ ಇಲ್ಲ. ಆದರೆ ಇದೆಲ್ಲದರ ಮಧ್ಯೆ ಶಾಲಾ ಕಾಲೇಜುಗಳಲ್ಲಿ, ನೆರೆಹೊರೆಯಲ್ಲಿ ಸವಾಲುಗಳನ್ನು ಎದುರಿಸಿ ದಲಿತರು ಇತರರಿಗೆ ಸರಿಸಮಾನರಾಗಿ ಸಾಧನೆ ಮಾಡುವುದು ನಿಜಕ್ಕೂ ಅದ್ಭುತ. ಮೀಸಲಾತಿಯ ಲಾಭ ಪಡೆದ ಎಲ್ಲ ದಲಿತರು ಜಾತಿ ವ್ಯವಸ್ಥೆಯ ಭಾರವನ್ನು ಹೊತ್ತು ಜೀವನ ಸಾಗಿಸಬೇಕು. ಇದರಿಂದ ಅವರಿಗೆ ಮುಕ್ತಿಯಿಲ್ಲ.

ಆದರೆ ಕಳೆದ ಜೂನ್ ತಿಂಗಳಲ್ಲಿ ಮಿಲಿಂದ್ ಕಾಂಬಳೆ ಆಯೋಜಿಸಿದ ಐತಿಹಾಸಿಕ ದಲಿತ್ ಎಕ್ಸ್‌ಪೋ ಒಟ್ಟಾರೆ ಸಮುದಾಯದ ಪ್ರತ್ಯೇಕತೆಯ ಗೋಡೆಯನ್ನು ಹೊಡೆದುರುಳಿಸಿದೆ. ದಲಿತ್ ಎಕ್ಸ್‌ಪೋದಲ್ಲಿ ಪ್ರದರ್ಶಿಸಲಾದ ಉತ್ಪನ್ನಗಳನ್ನು ನೋಡಿ ಮೆಚ್ಚಿಕೊಂಡ ಪುಣೆ ಮೂಲದ ಟಾಟಾ ಮೋಟರ್ಸ್‌ನ ವ್ಯವಸ್ಥಾಪಕರು ಟಾಟಾ ಮಾರಾಟಗಾರರ ಆಯ್ಕೆ ಮಂಡಳಿಯ ಸಭೆಯಲ್ಲಿ ದಲಿತ ಉದ್ಯಮಿಗಳು ಭಾಗವಹಿಸುವಂತೆ ಕಾಂಬಳೆ ಅವರಿಗೆ ಆಹ್ವಾನ ನೀಡಿದರು. ದಲಿತ ಉದ್ಯಮಿಗಳಿಂದ ನೇರವಾಗಿ ಬಿಡಿಭಾಗಗಳನ್ನು ಖರೀದಿಸುವ ಸಂಬಂಧ ಈ ಸಭೆ ನಡೆಯುತ್ತದೆ. ಭಾರತೀಯ – ವಿದೇಶಿ ಸಂಸ್ಥೆಗಳು ಬಳಸುವ ಅಂತರಾಷ್ಟ್ರೀಯ ಗುಣಮಟ್ಟದ ಬಿಡಿಭಾಗಗಳನ್ನು ಉತ್ಪಾದಿಸುವ ಬಹಳಷ್ಟು ಮಂದಿ ದಲಿತ ಉದ್ಯಮಿಗಳಿದ್ದಾರೆ. ಆದರೆ ಇವರೆಲ್ಲರೂ ಮಧ್ಯವರ್ತಿಗಳ ಮೂಲಕ ಇವುಗಳನ್ನು ಮಾರಾಟ ಮಾಡುತ್ತಿದ್ದಾರೆ. ಸಾಮಾಜಿಕ ಕಾರಣಗಳಿಂದಾಗಿ ದಲಿತರು ಕಾರ್ಪೋರೇಟ್ ಸಂಸ್ಥೆಗಳ ಮೇಲ್ಮಟ್ಟದ ಅಧಿಕಾರಿಗಳ ಸಂಪರ್ಕ ಹೊಂದಿರುವುದಿಲ್ಲ.

> **ಭಾರತ ಸರ್ಕಾರದ ನವರತ್ನ ಸಂಸ್ಥೆಗಳಲ್ಲಿ ಒಂದಾದ ಬಿಎಚ್‌ಇಎಲ್‌ನಲ್ಲಿ ಕಾರ್ಯ ನಿರ್ವಹಿಸುವ ದಲಿತ ಇಂಜಿನಿಯರೊಬ್ಬರ ಪರಿಚಯ ನನಗಿದೆ. ಬೃಹತ್ ಮಟ್ಟದ ಇಂಜಿನಿಯರಿಂಗ್ ಯೋಜನೆಗಳನ್ನು ಕೈಗೆತ್ತುಕೊಳ್ಳುವಲ್ಲಿ ಪ್ರಸಿದ್ಧವಾದ ಬಿಎಚ್‌ಇಎಲ್ ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ ಕೂಡ ಯೋಜನೆಗಳನ್ನು ಪಡೆದುಕೊಳ್ಳುತ್ತದೆ. ಕೆಲವು ವರ್ಷಗಳ ಹಿಂದೆ ಬಿಎಚ್‌ಇಎಲ್ ಜರ್ಮನಿಯಲ್ಲಿ ಬಾಯ್ಲರ್ ಯೋಜನೆಯನ್ನು ಪಡೆದು ಕೊಂಡಿತು. ಇದರ ಅನುಷ್ಠಾನಕ್ಕೆ ಇದೇ ದಲಿತ ಇಂಜಿನಿಯರ್ ನಾಯಕತ್ವ ವಹಿಸಿದ್ದರು. ಇಪಿಐನ ಇಂಜಿನಿಯರ್‌ರಂತೆ ಇವರೂ ಕೂಡ ಮೀಸಲಾತಿ ನೀತಿಯ ಲಾಭ ಪಡೆದು ಇಂಜಿನಿಯರಿಂಗ್ ಕಾಲೇಜು ಪ್ರವೇಶಿಸಿ ನಂತರ ಬಿಎಚ್‌ಇಎಲ್‌ನಲ್ಲಿ ಉದ್ಯೋಗ ಗಳಿಸಿ ದವರು. ನಂತರ ಇವರೂ ಕೂಡ ತಮ್ಮ ಸಾಮರ್ಥ್ಯದಿಂದ ಮೇಲೆ ಬಂದವರು.**

ಟಾಟಾ ಸಂಸ್ಥೆಯ ಐತಿಹಾಸಿಕ ಆಹ್ವಾನದ ಮಹತ್ವವನ್ನು ಅರಿತ ಕಾಂಬಳೆ, ಸಭೆಗೆ ಡಾ. ಅಮರ್ ಸಿಂಗ್, ಡಿ ಶ್ಯಾಂ ಬಾಬು, ಮತ್ತು ನನ್ನನ್ನು ಆಹ್ವಾನಿಸಿದರು. ಜೂನ್ 23ರಂದು ದಲಿತ ಉದ್ಯಮಿಗಳು ಟಾಟಾ ವ್ಯವಸ್ಥಾಪಕರ ಮುಂದೆ ದಲಿತ ಉದ್ಯಮಿಗಳು ತಮ್ಮ ಪ್ರಸ್ತುತಿಯನ್ನು ಮಂಡಿಸಿದರು. ಡಿಐಸಿಸಿಐ ಪರವಾಗಿ ಡಾ. ಅಮರ್ ಸಿಂಗ್ ಸಂಕ್ಷಿಪ್ತವಾಗಿ ಮಾತನಾಡಿದರು.

"ದಲಿತರಿಗೆ ಸಂಪರ್ಕ ಬೇಕು, ವಿನಾಯಿತಿಗಳು ಬೇಡ. ಅಂತರಾಷ್ಟ್ರೀಯ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುವ ಸಾಮರ್ಥ್ಯ ದಲಿತರಿಗಿದೆ. ಹೀಗಾಗಿ ಮಾನದಂಡ, ಗುಣಮಟ್ಟ ಮತ್ತು ಬೆಲೆಯಲ್ಲಿ ಯಾವುದೇ ರಿಯಾಯಿತಿಗಳ ಅವಶ್ಯಕತೆಯಿಲ್ಲ. ಉದಾಹರಣೆಗೆ ದಲಿತರು ಈಗತಾನೆ ಮಂಡಿಸಿದ ಪ್ರಸ್ತುತಿಗಳನ್ನು ನೋಡಿ" ಎಂದಾಗ ಟಾಟಾ ಮೋಟರ್ಸ್‌ನ ವ್ಯವಸ್ಥಾಪಕರನ್ನೊಳಗೊಂಡಂತೆ ಎಲ್ಲರೂ ಕರತಾಡನ ಮಾಡಿದರು.

ದಲಿತರು ಎಲ್ಲ ವಿಚಾರಗಳಲ್ಲಿ ವಿನಾಯಿತಿ ಬಯಸುವವರು ಎಂದು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ದಲಿತ ಸ್ಟಿರಿಯೋಟೈಪ್ ಬಗ್ಗೆ ಆಲೋಚನೆ ಮಾಡಿದಂತೆ ಕಂಡು ಬಂದ ಡಾ. ಸಿಂಗ್, "ದಲಿತರು ವಿನಾಯಿತಿ ಬಯಸುವವರಲ್ಲ" ಎಂದು ಹೇಳಿದರು. ದಲಿತರ ಕುರಿತು ಇಂತಹ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಸಮಾಜ ಮಾತ್ರ ಕಾರಣವಲ್ಲ. ಯಾವಾಗಲೂ ಸರ್ಕಾರದ ಮುಂದೆ ಬೇಡಿಕೆ ಇಡುವ ದಲಿತ ಗುಂಪುಗಳು, ದಲಿತ ಸರ್ಕಾರೇತರ ಸಂಘ ಸಂಸ್ಥೆಗಳು ಕೂಡ ಇದಕ್ಕೆ ಕಾರಣ. ಹೀಗಾಗಿ ಡಾ. ಸಿಂಗ್ "ನಾವು ವಿನಾಯಿತಿ ಬಯಸಿ ಬಂದಿಲ್ಲ" ಎಂದು ಸ್ಪಷ್ಟ ಪಡಿಸಿದರು.

ಐತಿಹಾಸಿಕವಾಗಿ ದಲಿತರು ಸಾಮಾಜಿಕ ಬಂಡವಾಳ ಮತ್ತು ಸಾಂಸ್ಕೃತಿಕ ಸಂಪರ್ಕದಿಂದ ವಂಚಿತರಾಗುತ್ತಾ ಬಂದಿರುವುದರಿಂದ ದಲಿತರಿಗೆ ನಿಜವಾಗಿ ಬೇಕಾಗಿರುವುದು ವಿನಾಯಿತಿಗಳಲ್ಲ, ಸಂಪರ್ಕ.

* * * *

**ಯಾ**ವುದೇ ಉದ್ಯಮ ಸಂಸ್ಥೆಗೆ ಸಂವಹನ–ಸಂಪರ್ಕ ಅತಿ ಮುಖ್ಯ. ವಿಶ್ವದಾದ್ಯಂತ ಉದ್ಯಮ ಸಂಸ್ಥೆಗಳು ಸಾರ್ವಜನಿಕ ಸಂಪರ್ಕ ವಿಭಾಗವನ್ನು ಹೊಂದಿದ್ದು, ಲಾಬಿದಾರರ ಮೂಲಕ ಆಡಳಿತ ವರ್ಗದ ಸಂಪರ್ಕ ಸಾಧಿಸುತ್ತವೆ. ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಮೂಲಕ ಉದ್ಯಮ ಸಂಸ್ಥೆಗಳು ಅಧಿಕಾರದ ಚುಕ್ಕಾಣಿ

# ವಿನಾಯಿತಿ ಬೇಡ, ಸಂಪರ್ಕ ಬೇಕು

# ಉದ್ಯಮದಲ್ಲಿ ಪ್ರತ್ಯೇಕತೆ

ಹಿಡಿದ ನಾಯಕರ ಸಂಪರ್ಕ ಗಳಿಸಿಕೊಳ್ಳುತ್ತವೆ. ಭಾರತದಲ್ಲಿ ಕೂಡ ಉದ್ಯಮ ವ್ಯವಹಾರ ನಡೆಸಲು ಸಂಪರ್ಕ ಅತ್ಯವಶ್ಯಕ. ದಲಿತರ ವಿಷಯ ಬಿಡಿ. ಆಯಕಟ್ಟಿನ ಸ್ಥಳಗಳಲ್ಲಿ ಸಂಪರ್ಕ ಸಾಧಿಸಲು ಇತರ ಜಾತಿಗಳು ತಂತಮ್ಮಲ್ಲೇ ಸ್ಪರ್ಧೆಗೆ ಬಿದ್ದಿರುತ್ತವೆ. ಈ ನಿಟ್ಟಿನಲ್ಲಿ ಹಣವನ್ನು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡಲಾಗುತ್ತದೆ.

ಹಾಗಾದರೆ ಶತಮಾನಗಳಿಂದ ಸಮಾಜದ ಮುಖ್ಯವಾಹಿನಿಯಿಂದ ಹೊರಗುಳಿದಿರುವ ಸಮುದಾಯ (ದಲಿತ ಸಮುದಾಯ) ಏನು ಮಾಡಬೇಕು? ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯದ ಭಾರತೀಯ ಉನ್ನತ ಅಧ್ಯಯನ ಕೇಂದ್ರ (ಸಿಎಎಸ್‌ಐ) ಉತ್ತರ ಪ್ರದೇಶದ ಎರಡು ದಲಿತ ಗುಂಪುಗಳ ಆಹಾರ ಪದ್ಧತಿ, ಜೀವನಶೈಲಿ, ಔದ್ಯೋಗಿಕ ಪಲ್ಲಟ ಮತ್ತಿತರ ವಿಚಾರಗಳ ಬಗ್ಗೆ 1990ರಿಂದ 2007ರ ನಡುವೆ ಸಮೀಕ್ಷೆಯೊಂದನ್ನು ಕೈಗೊಂಡಿತ್ತು. "ಹಳ್ಳಿಗಳಲ್ಲಿ ದಲಿತೇತರರು ಆಯೋಜಿಸಿದ ಸಾಮೂಹಿಕ ಭೋಜನಕೂಟಗಳಲ್ಲಿ ಎಷ್ಟು ಸಲ ಪ್ರತ್ಯೇಕವಾಗಿ ನಿಮ್ಮನ್ನು ಕೂರಿಸಲಾಗಿದೆ" ಎಂಬ ಪ್ರಶ್ನೆಯನ್ನು ಸಿಎಎಸ್‌ಐ ಸಂಶೋಧಕರು ಕೇಳಿದ್ದರು. ಸಾಮಾನ್ಯವಾಗಿ ಜನರು ತಮ್ಮ ಮಕ್ಕಳ ಮದುವೆ, ಅಥವಾ ಕುಟುಂಬದ ಹಿರಿಯರ ತಿಥಿ ಸಮಾರಂಭಗಳಲ್ಲಿ ಸಾಮೂಹಿಕ ಭೋಜನ ಏರ್ಪಡಿಸುವುದು ವಾಡಿಕೆ.

ಉತ್ತರ ಪ್ರದೇಶದ ಪೂರ್ವಭಾಗದ ಶೇ.73.1 ರಷ್ಟು ಮಂದಿ ಇಂತಹ ಸಮಾರಂಭಗಳಲ್ಲಿ ತಮ್ಮನ್ನು "ಪ್ರತ್ಯೇಕವಾಗಿ ಕೂರಿಸಲಾಗಿತ್ತು" ಎಂಬ ಉತ್ತರ ನೀಡಿದರೆ, ಪೂರ್ವ ಭಾಗದಲ್ಲಿ ಶೇ. 77.3ರಷ್ಟು ಮಂದಿ ಇದೇ ಉತ್ತರ ನೀಡಿದ್ದರು. ಆದರೆ 2007ರ ವೇಳೆಗೆ ದಲಿತರ ಪರವಾಗಿ ಒಟ್ಟಾರೆ ಚಿತ್ರಣ ಬದಲಾಗುತ್ತಾ ಬಂತು. ಮುಖ್ಯವಾಹಿನಿಯ ಸಾಮಾಜಿಕ ಜೀವನದಿಂದ ದಲಿತರನ್ನು ಹೇಗೆ ಪ್ರತ್ಯೇಕಗೊಳಿಸಲಾಗಿತ್ತು ಎಂಬ ಅಂಶವನ್ನು ಪ್ರಸ್ತುತಪಡಿಸಲು ಈ ನಿದರ್ಶನವನ್ನು ನೀಡಿದೆ. ಪ್ರತ್ಯೇಕತೆಯು ಆರ್ಥಿಕ ಮತ್ತು ಔದ್ಯಮಿಕ ಚಟುವಟಿಕೆಗಳ ಮೇಲೂ ಪರಿಣಾಮ ಬೀರುವುದರಲ್ಲಿ ಯಾವುದೇ ಸಂಶಯವಿಲ್ಲ.

ಐತಿಹಾಸಿಕವಾದ ಪ್ರತ್ಯೇಕತೆಯ ಪರಿಣಾಮದಿಂದ ಈ ಹಿಂದೆ ಪ್ರಾಬಲ್ಯ ಸಾಧಿಸಿದ್ದ ಕ್ಷೇತ್ರಗಳ ಮೇಲೂ ದಲಿತರು ಹಿಡಿತ ಕಳೆದುಕೊಂಡರು. ಉದಾಹರಣೆಗೆ ಆಗ್ರಾದ ನಿದರ್ಶನವನ್ನು ನೋಡಿ. ಎರಡನೆಯ ಮಹಾ ಯುದ್ಧದ ವೇಳೆ ಸುಮಾರು ಒಂದು ಡಜನ್ ದಲಿತರು ದಲಿತ್ ರಿಪಬ್ಲಿಕ್ ಎಂಬ ಹೆಸರಿನಲ್ಲಿ ಉದ್ಯಮವನ್ನು ಆರಂಭಿಸಿದರು. ಯುದ್ಧಕಾಲದಲ್ಲಿ ಬೂಟ್‌ಗಳು, ಬೆಲ್ಟ್‌ಗಳು, ಚರ್ಮದ ಕೋಟುಗಳು ಮತ್ತಿತರ ವಸ್ತುಗಳಿಗೆ ಜಗತ್ತಿನಾದ್ಯಂತ ಭಾರೀ ಬೇಡಿಕೆ ಇತ್ತು. ಬ್ರಿಟಿಷ್- ಇಂಡಿಯಾ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಚರ್ಮದ ವಸ್ತುಗಳನ್ನು ಖರೀದಿಸುತ್ತಿತ್ತು. ಆಗ್ರಾದ ದಲಿತರು ಆಗ ಇದರ ಲಾಭ ಪಡೆಯುತ್ತಿದ್ದರು. ಜಲಂಧರ್, ಕಾನ್ಪುರ್ ಮತ್ತಿತರ ನಗರಗಳ ದಲಿತರು ಕೂಡ ಈ ಸಂದರ್ಭದಲ್ಲಿ ಬೆಳವಣಿಗೆ ಕಂಡರು. ಆದರೆ ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಬೂಟ್, ಬೆಲ್ಟ್ ಮತ್ತಿತರ ಚರ್ಮೋತ್ಪನ್ನಗಳ ಖರೀದಿಯನ್ನು ಕೇಂದ್ರೀಕೃತಗೊಳಿಸಿತು. ಪರಿಣಾಮವಾಗಿ ಟೆಂಡರ್‌ಗಳ ಮೂಲಕ ಖರೀದಿಸುವ ವ್ಯವಸ್ಥೆ ಜಾರಿಗೆ ಬಂತು.

> **ಜಾಗತೀಕರಣದಿಂದಾಗಿ ಜಗತ್ತಿನಾದ್ಯಂತ ಔದ್ಯಮಿಕ ಚಟುವಟಿಕೆಗಳು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದು, ಮೊದಲ ಪೀಳಿಗೆಯ ಉದ್ಯಮಿಗಳಿಗೆ ಸುವರ್ಣಾವಕಾಶ ಒದಗಿಸಿದೆ. ಹಲವಾರು ಸಾಮಾಜಿಕ ಒತ್ತಡಗಳ ಹೊರತಾಗಿಯೂ ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ದಲಿತರು ಕೂಡ ತಮ್ಮ ಅದೃಷ್ಟ ಪರೀಕ್ಷೆ ಮಾಡುತ್ತಿದ್ದಾರೆ. ಆದರೆ ಅವರಿಗೆ ಐತಿಹಾಸಿಕವಾದ ಸಾಮಾಜಿಕ ಪ್ರತ್ಯೇಕತೆ ದೊಡ್ಡ ತೊಡಕಾಗಿ ಪರಿಣಮಿಸಿದೆ.ದಲಿತ ಉದ್ಯಮಿಗಳು ಕಠಿಣ ಪರಿಶ್ರಮ ವಹಿಸಿ ದುಡಿಯುತ್ತಿರುವುದೇನೋ ನಿಜ.**

ಚರ್ಮೋತ್ಪನ್ನಗಳ ಖರೀದಿಯನ್ನು ಕೇಂದ್ರೀಕೃತಗೊಳಿಸಿತು. ಪರಿಣಾಮವಾಗಿ ಟೆಂಡರ್‌ಗಳ ಮೂಲಕ ಖರೀದಿಸುವ ವ್ಯವಸ್ಥೆ ಜಾರಿಗೆ ಬಂತು. ಚರ್ಮೋತ್ಪನ್ನಗಳ ತಯಾರಿಕೆಯ ಯಾವುದೇ ಇತಿಹಾಸ ಹೊಂದಿರದ ಹಲವಾರು ಮಂದಿ ಉದ್ಯಮಕ್ಕೆ ಕಾಲಿರಿಸಿದರು. ಐತಿಹಾಸಿಕವಾಗಿ ಚಮ್ಮಾರರನ್ನು ಕೀಳಾಗಿ ಕಾಣುತ್ತಿದ್ದವರು ಈಗ ತಮ್ಮ 'ಜಾತಿ'ಬಲದಿಂದ ದೆಹಲಿಯ ಸಂಪರ್ಕ ಬಳಸಿ ಭಾರತೀಯ ಸೇನೆಗೆ ಚರ್ಮೋತ್ಪನ್ನ ಸರಬರಾಜು ಮಾಡುವ ಗುತ್ತಿಗೆ ಪಡೆದರು.

ದೆಹಲಿಯ ಆಡಳಿತವರ್ಗದ ಸಂಪರ್ಕ ಕಳೆದುಕೊಂಡ ಆಗ್ರಾದ ದಲಿತ್ ರಿಪಬ್ಲಿಕ್ ಮಾರುಕಟ್ಟೆಯಲ್ಲಿ ಬೇಡಿಕೆ ಕಳೆದುಕೊಂಡರು. ಈಗಲೂ ಕೂಡ ಅವರು ಚರ್ಮೋತ್ಪನ್ನಗಳನ್ನು ತಯಾರಿಸಿದರೂ ದೆಹಲಿಯಲ್ಲಿ ಕುಳಿತ ಮಧ್ಯವರ್ತಿಗಳು ಚರ್ಮದ ವಸ್ತುಗಳ ಗಂಧಗಾಳಿ ಗೊತ್ತಿಲ್ಲದಿದ್ದರೂ ಸಾಕಷ್ಟು ಹಣಗಳಿಸಿದರು. ತಮ್ಮದೇ ಸಂಸ್ಥೆಗಳನ್ನು ಆರಂಭಿಸಿ ದಲಿತರನ್ನು ಉದ್ಯಮದಿಂದ ಮೂಲೆಗುಂಪು ಮಾಡಿದರು. ಪರಿಣಾಮ, ಬಹುತೇಕ ದಲಿತರು ಸಣ್ಣ ಉತ್ಪಾದಕರಾಗಿ ಪರಿವರ್ತಿತರಾದರು. ಇನ್ನು ಕೆಲವು ಮಂದಿ ಮುಳುಗಿ ಹೋದರು.

ಇನ್ನು ಕೆಲವು ನಿದರ್ಶನಗಳನ್ನು ನೋಡಿ. ಸರ್ಕಾರಿ ಆಸ್ಪತ್ರೆಗಳು ಮತ್ತು ರೈಲ್ವೆ ಇಲಾಖೆಯ ಬಟ್ಟೆಗಳನ್ನು ಶುಚಿಗೊಳಿಸುವ ಉದ್ಯಮ ದೊಡ್ಡ ಮಟ್ಟದಲ್ಲಿ ಹಣ ಗಳಿಸಬಹುದಾದ ವ್ಯವಹಾರವಾಗಿದೆ. ಐತಿಹಾಸಿಕವಾಗಿ ಬಟ್ಟೆ ಒಗೆಯುವ ಯಾವುದೇ ಹಿನ್ನೆಲೆ ಹೊಂದಿರದ ಗುತ್ತಿಗೆದಾರರು ಈಗ ಈ ವೃತ್ತಿಯನ್ನು ನಡೆಸುತ್ತಿದ್ದಾರೆ. ಆದರೆ ಬಟ್ಟೆ ಒಗೆದು ಶುಚಿಗೊಳಿಸುವವರು ಮಾತ್ರ ಈಗಲೂ ದಲಿತರೇ. ಬೀದಿ ಗುಡಿಸವವರ ಪರಿಸ್ಥಿತಿ ಕೂಡ ಇದೇ ರೀತಿ ಇದೆ. ಖಾಸಗೀಕರಣದ ನಂತರ ಬೀದಿ ಮತ್ತು ಚರಂಡಿ ಶುದ್ಧೀಕರಣ ಕೆಲಸದಲ್ಲಿ ಯಾವುದೇ ಪರಿಣತಿ ಹೊಂದಿರದವರು ಗುತ್ತಿಗೆಗಳನ್ನು ಪಡೆದು ದಲಿತರಿಂದ ಕೆಲಸ ಮಾಡಿಸುತ್ತಾ ಬಂದಿದ್ದಾರೆ. ಇಂತಹ ನಿದರ್ಶನಗಳ ಪಟ್ಟಿ ದೊಡ್ಡದೇ ಇದೆ.

ಈ ನಿದರ್ಶನವನ್ನು ನೋಡಿ. ಪುಣೆಯ ಗೋಕುಲ್ ಗಾಯಕ್ವಾಡ್ ಟಾಟಾ ಇಂಡಿಗೋ ಕಾರ್‌ನ ಪ್ರಮುಖ ಬಿಡಿ ಭಾಗವೊಂದನ್ನು ಉತ್ಪಾದಿಸುತ್ತಾರೆ. ಪುಣೆಯ ಟಾಟಾ ಮೋಟರ್ಸ್‌ನ ಮುಖ್ಯದ್ವಾರದ ಬಳಿಯಲ್ಲಿಯೇ ಇರುವ ಗಾಯಕ್ವಾಡ್ ಒಮ್ಮೆಯೂ ಕಾರ್ಖಾನೆಯ ಒಳಗೆ ಹೋಗಿಲ್ಲ. ಆದರೆ ಡಿಐಸಿಸಿಐ ಆಯೋಜಿಸಿದ್ದ ದಲಿತ್ ಎಕ್ಸ್‌ಪೋದ ಪರಿಣಾಮ ಗಾಯಕ್ವಾಡ್ ತಮ್ಮ ಉತ್ಪನ್ನಗಳ ಬಗ್ಗೆ ಮಾಹಿತಿಯನ್ನು ಟಾಟಾ ಮಾರಾಟಗಾರರ ಆಯ್ಕೆ ಮಂಡಳಿಯ ಸಭೆಯಲ್ಲಿ ಪ್ರಸ್ತುತಪಡಿಸಿದರು. ಟಾಟಾ ಮೋಟರ್ಸ್‌ನ ಅಧಿಕಾರಿಗಳು ಗಾಯಕ್ವಾಡ್ ಅವರು ಕಾರ್ಖಾನೆಯ ಒಳಗೆ ಬರಬಾರದಂತೆ ನಿಷೇಧವನ್ನೇನೂ ಹೇರಿರಲಿಲ್ಲ. ಗಾಯಕ್ವಾಡ್ ಅವರಿಗೆ ಟಾಟಾ ವ್ಯವಸ್ಥಾಪಕರಲ್ಲಿ ಯಾರ ಪರಿಚಯವೂ ಇರಲಿಲ್ಲ ಅಷ್ಟೆ

ಜಾಗತೀಕರಣದಿಂದಾಗಿ ಜಗತ್ತಿನಾದ್ಯಂತ ಔದ್ಯಮಿಕ ಚಟುವಟಿಕೆಗಳು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದು, ಮೊದಲ ಪೀಳಿಗೆಯ ಉದ್ಯಮಿಗಳಿಗೆ ಸುವರ್ಣಾವಕಾಶ ಒದಗಿಸಿದೆ. ಹಲವಾರು ಸಾಮಾಜಿಕ ಒತ್ತಡಗಳ ಹೊರತಾಗಿಯೂ ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ದಲಿತರು ಕೂಡ ತಮ್ಮ ಅದೃಷ್ಟ ಪರೀಕ್ಷೆ ಮಾಡುತ್ತಿದ್ದಾರೆ. ಆದರೆ ಅವರಿಗೆ ಐತಿಹಾಸಿಕವಾದ ಸಾಮಾಜಿಕ ಪ್ರತ್ಯೇಕತೆ ದೊಡ್ಡ ತೊಡಕಾಗಿ ಪರಿಣಮಿಸಿದೆ. ದಲಿತ ಉದ್ಯಮಿಗಳು ಕಠಿಣ ಪರಿಶ್ರಮ ವಹಿಸಿ ದುಡಿಯುತ್ತಿರುವುದೇನೋ ನಿಜ. ಆದರೆ ಇವರ್‍ಯಾರೂ ಇನ್ನೂ ಕೋಟ್ಯಾಧಿಪತಿಗಳಾಗಲೂ ಸಾಧ್ಯವಾಗಿಲ್ಲ.

ಹೀಗಾಗಿ, ದಲಿತ ಉದ್ಯಮಿಗಳಿಗೆ ಮಾರುಕಟ್ಟೆ ಒದಗಿಸುವ ಕೆಲಸವಾಗಬೇಕಿದೆ. ಅಂದರೆ ದಲಿತರಿಗೆ ಔದ್ಯಮಿಕ ಸಂಪರ್ಕವನ್ನು ಒದಗಿಸಬೇಕಿದೆ. ದಲಿತರನ್ನು ಕೂಡ ಔದ್ಯಮಿಕ ಸರಪಳಿಯೊಳಗೆ ಸೇರ್ಪಡಿಸಿಕೊಳ್ಳುವ ನೈತಿಕ ಜವಾಬ್ದಾರಿ ಜಾತಿಯಾಧಾರಿತ ಸಮಾಜದ ಎಲ್ಲ ಲಾಭಗಳನ್ನು ಪಡೆದವರಿಗಿದೆಯಲ್ಲವೇ? □

## ಸಹ್ಯಾದ್ರಿ

ಸಹ್ಯಾದ್ರಿ
ಕಣುವೆ
ಕಂದರ
'ಇನ್ನೆಲ್ಲಿ ಸುಂದರ?
ಅಲ್ಲಿ
ಇರುವುದೆಲ್ಲಾ
ರಕ್ತದಲಿ
ಸಾರಿಸಿದ ನೆಲ!

○ ಟಿ.ಎಸ್. ರಾಜೇಂದ್ರ ಪ್ರಸಾದ್

ಬುದ್ಧಾಯಣ

೩೯

# ತಾಯಿಯ ದೋಷ ಹೇಳದೆ ನಾವಿನ್ನು ಬರುತ್ತೇವೆ!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತವನದಲ್ಲಿ ತನ್ನ ಅಪಾರ ಭೀಕ್ಷುಗಳೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ಬೋಧಿಸತ್ವರು ಕಾಶಿ ದೇಶದಲ್ಲಿ ಒಂದು ಗಿಳಿಯಾಗಿ ಹುಟ್ಟಿದ್ದರು. ಅವರೊಂದಿಗೆ ಅವರ ತಮ್ಮ ಕೂಡ ಜೀವಿಸುತ್ತಿದ್ದ. ಹೀಗಿರಲು ಒಂದು ದಿನ ಆ ಇಬ್ಬರು ಅಣ್ಣ ತಮ್ಮಂದಿರು ವಾರಾಣಾಸಿಯ ಒಬ್ಬ ಸಾತ್ವಿಕನಾದ ಬ್ರಾಹ್ಮಣನ ದೃಷ್ಟಿಗೆ ಬಿದ್ದರು. ಆತನಿಗೆ ಆ ಎರಡೂ ಗಿಳಿಗಳ ಮೇಲೆ ಪ್ರೀತಿ ಹುಟ್ಟಿತು. ಅವುಗಳನ್ನು ತನ್ನ ಮನೆಗೆ ತಂದು ಮುದ್ದಾಗಿ ಸಾಕಿದ್ದ. ಮಕ್ಕಳಿಲ್ಲದ ಅವನು ಆ ಎರಡು ಗಿಳಿಗಳನ್ನು ತನ್ನ ಮಕ್ಕಳಂತೆ ಪರಿಗಣಿಸಿ ಮಮತೆಯನ್ನು ತೋರುತ್ತಿದ್ದ. ಬೋಧಿಸತ್ವ ಗಿಳಿಗೆ ಪೋಟ್ಠಪಾದನೆಂದು ಮತ್ತು ಅವರ ತಮ್ಮನಿಗೆ ರಾಧನೆಂದು ನಾಮಕರಣ ಮಾಡಿದರು.

ಆತನಿಗೆ ಒಬ್ಬಳು ಹೆಂಡತಿ ಇದ್ದಳು. ಆಕೆ ರೂಪದಲ್ಲಿ ಸುಂದರಿಯಾಗಿದ್ದಳು. ಆದರೆ ಗುಣ ಮತ್ತು ಶೀಲದಲ್ಲಿ ವ್ಯಬಿಚಾರಿಣಿಯಾಗಿದ್ದಳು. ಆಕೆಯನ್ನು ಸದ್ಗುಣಿಯನ್ನಾಗಿಸಲು ಆತ ಮಾಡದ ಪ್ರಯತ್ನವೇ ಇರಲ್ಲಿಲ್ಲ. ಆದರೂ ಆಕೆಯನ್ನು ಸರಿ ದಾರಿಗೆ ತರಲು ಸಾಧ್ಯವಿಲ್ಲದೆ ಕೊನೆಗೆ ಸೋತು ಸುಮ್ಮನಾಗಿದ್ದ. ತಾನು ವ್ಯಾಪಾರಕ್ಕೆ ಹೋದ ಸಮಯದಲ್ಲಿ ಆಕೆಯನ್ನು ಕಾಯಲು ತನ್ನವರನ್ನು ತಂದು ನೇಮಿಸಿದ್ದ. ಅವರುಗಳು ತನ್ನ ದೋಷವನ್ನು ಗಂಡನಿಗೆ ತಿಳಿಸುತ್ತಾರೆಂದು ಅವರಿಗೆ ಇನ್ನಿಲ್ಲದ ಕಿರುಕುಳವನ್ನು ಕೊಟ್ಟು ಅವರಾಗಿಯೇ ಮನೆ ಬಿಟ್ಟು ಓಡಿ ಹೋಗುವಂತೆ ಮಾಡುತ್ತಿದ್ದಳು.

ಹಾಗಾಗಿ ಯಾರೂ ಆಕೆಯ ಕಾವಲಿಗಾಗಿ ಮನೆಯಲ್ಲಿ ಇರಲು ಒಪ್ಪುತ್ತಿರಲ್ಲಿಲ್ಲ. ಹೀಗಿರಲು ಆ ಬ್ರಾಹ್ಮಣ ಒಂದು ದಿನ ಹೀಗೆ ಯೋಚಿಸಿದ ; ನಾನೇಕೆ ನನ್ನ ಪ್ರೀತಿಯ ಮಕ್ಕಳಾದ ಗಿಳಿಗಳಿಗೆ ಮಾತುಕಲಿಸಿ ಅವರ ಮೂಲಕ ನನ್ನ ಹೆಂಡತಿಯನ್ನು ರಕ್ಷಿಸಬಾರದು ಎಂಬ ತೀರ್ಮಾನಕ್ಕೆ ಬಂದ. ಅಂದಿನಿಂದಲೆ ಗಿಳಿಗಳಿಗೆ ಮಾತು ಕಲಿಸಲು ಪ್ರಾರಂಬಿಸಿದ. ಅವು ಅಲ್ಪ ಅವಧಿಯಲ್ಲಿ ಮನುಷ್ಯರಂತೆ ಮಾತು ಕಲಿತವು.

ಒಂದು ದಿನ ಆ ಬ್ರಾಹ್ಮಣನು ದೂರದ ಊರಿಗೆ ವ್ಯಾಪಾರದ ಸಲುವಾಗಿ ಹೋಗಬೇಕಾದ ಪ್ರಸಂಗವು ಬಂದಿತು. ತನ್ನ ಇಬ್ಬರು ಮಕ್ಕಳನ್ನು ಕುರಿತು; "ಮಕ್ಕಳೇ, ನಾನು ದೂರದ ನಗರಕ್ಕೆ ವ್ಯಾಪಾರದ ಸಲುವಾಗಿ ಹೋಗುತ್ತಿದ್ದೇನೆ. ನಾನು ಬರುವುದು ಬಲು ತಡವಾಗುತ್ತದೆ, ನಿಮ್ಮ ತಾಯಿಯು ದುರಾಚಾರಿಯಾಗಿದ್ದಾಳೆ. ನಾನಿಲ್ಲದ ಸಮಯದಲ್ಲಿ ಸ್ವೇಚ್ಚೆಯಾಗಿ ವರ್ತಿಸಬಹುದು. ಅವಳು ಪಾಪ ಮಾಡದಂತೆ ತಡೆಯಿರಿ!" ಎನ್ನಲು ಬೋಧಿಸತ್ವ ಗಿಳಿಯು :

"ತಂದೆಯೇ, ಆಗಬಹುದು ತಡೆಯಲು ಸಾಧ್ಯೆವಾದರೆ ತಡೆಯುತ್ತೇವೆ. ಇಲ್ಲವೆಂದರೆ ಮೌನವಾಗಿರುತ್ತೇವೆ. ತಾವು ಬಂದ ನಂತರ ಇಲ್ಲಿನ ಚಿತ್ರಣವನ್ನು ತಮ್ಮ ಮುಂದಿಡುತ್ತೇವೆ" ಎಂದರು. ಬಳಿಕ ಆ ಬ್ರಾಹ್ಮಣನು ವ್ಯಾಪಾರದ ಸಲುವಾಗಿ ದೂರದ ಊರಿಗೆ ಹೋರಟು ಹೋದ. ಅತ್ತ ಗಂಡ ಕಣ್ಮರೆಯಾಗುತ್ತಿದಂತೆ ಇತ್ತ ಆತನ ಹೆಂಡತಿಯು ತನ್ನ ದಾಸಿಯೊಬ್ಬಳನ್ನು ಕರೆದು ತನ್ನ ಗೆಳೆಯರನ್ನು ಒಬ್ಬರಾದ ನಂತರ ಮತ್ತೊಬ್ಬರನ್ನು ಕರೆಯಲು ಕಳುಹಿಸಿದಳು. ಆ ದಾಸಿಯು ಒಡತಿಯ ಆಜ್ಞೆಯನ್ನು ಚಾಚು ತಪ್ಪದೆ ಪರಿಪಾಲಿಸಿದಳು. ಹೀಗೆ ಬಂದು ಹೋಗುವ ಪ್ರಿಯತಮರೊಂದಿಗೆ ಹಗಲು ರಾತ್ರಿ ಎನ್ನದೆ ಆಕೆ ಸರಸ ಸಲ್ಲಾಪದಲ್ಲಿ ತೊಡಗಿದಳು. ಇದನ್ನು ಕಂಡ ಬೋಧಿಸತ್ವರ ತಮ್ಮನಾದ ರಾಧನು ಅಣ್ಣನನ್ನು ಉದ್ದೇಶಿಸಿ

"ಅಣ್ಣ, ನಾವು ತಾಯಿಯ ಅನಾಚಾರವನ್ನು ತಡೆಯೋಣವೇ?"

"ಮಗು, ಆಕೆ ಶೀಲಭ್ರಷ್ಟಳಷ್ಟೇ ಅಲ್ಲ, ಜಗಳಗಂಟಿ, ಕುತಂತ್ರಿ, ನಯವಂಚಕಿ ಮತ್ತು ಅದ್ಭುತವಾದ ನಟಿ. ವಾಸ್ತವ ಸತ್ಯವು ಹೀಗಿರುವಾಗ ನಾವು ಅವಳನ್ನು ತಡೆಯಲು ಹೋದರೆ ನಮ್ಮ ಮಾತಿಗೆ ಬೆಲೆ ಕೊಡುವಳೇ? ತನ್ನ ತಪ್ಪನ್ನು ತಾನು ಅರಿತು ಸರಿದಾರಿಗೆ ಬರುವಳೇ? ತಂದೆ ಇಲ್ಲದ ಈ ಸಮಯದಲ್ಲಿ ನಮ್ಮ ಮೇಲೆ ಸೇಡು ತಿರಿಸಿಕೊಳ್ಳದೆ ಬಿಡುವಳೇ? ತಂದೆ ಬರುವಷ್ಟರೊಳಗೆ ನಮ್ಮಿಬ್ಬರ ಕತ್ತು ಹಿಸುಕಿ ಸಾಯಿಸದೇ ಸುಮ್ಮನೆ ಬಿಡುವಳೇ?"

"ಅಣ್ಣ, ಇಂದಿನದು– ಮುಂದಿನದು ಏನಾಗುತ್ತದೋನಾನರಿಯೆ ಆದರೆ ಈಗ ನಾನು ಹೋಗಿ ಆಕೆಯ ಅನಾಚಾರವನ್ನು ತಡೆಯುತ್ತೇನೆ "



" ಮಗು , ನೀನು ನಿನ್ನ ಮುಗ್ಧತೆ, ಅಜ್ಞಾನ – ಮೂರ್ಖತನದ ಕಾರಣ ಹೀಗೆ ಮಾತನಾಡುತ್ತಿರುವೆ .ಆದರೆ ಕಾಮುಕಳಾದ ಹೆಂಗಸ್ಸನ್ನು ತಲೆಯ ಮೇಲೆ ಹೊತ್ತು ತಿರುಗಿದರೂ ಅವರನ್ನು ಪಾಪ ಕೃತ್ಯದಿಂದ ರಕ್ಷಿಸಲಾಗುವುದಿಲ್ಲ. ಆದುದರಿಂದ ನಾವು ಮೌನಕ್ಕೆ ಶರಣಾಗುವುದೇ ಸಮಂಜಸ!" ಎಂದಿತು .

ಬ್ರಾಹ್ಮಣನು ಹಲವು ದಿನಗಳ ನಂತರ ಮನೆಗೆ ಬಂದ. ಅವನ ಹೆಂಡತಿಯು ಮತ್ತೆ ಮಹಾಪತಿವ್ರತೆಯಂತೆ ಅವನೊಂದಿಗೆ ಅತೀ ವಿನಯದಿಂದ ನಟಿಸತೊಡಗಿದಳು. ಇದರಿಂದ

**"ತಂದೆಯೇ, ಆಗಬಹುದು ತಡೆಯಲು ಸಾಧ್ಯವಾದರೆ ತಡೆಯುತ್ತೇವೆ. ಇಲ್ಲವೆಂದರೆ ಮೌನವಾಗಿರುತ್ತೇವೆ. ತಾವು ಬಂದ ನಂತರ ಇಲ್ಲಿನ ಚಿತ್ರಣವನ್ನು ತಮ್ಮ ಮುಂದಿಡುತ್ತೇವೆ" ಎಂದರು. ಬಳಿಕ ಆ ಬ್ರಾಹ್ಮಣನು ವ್ಯಾಪಾರದ ಸಲುವಾಗಿ ದೂರದ ಊರಿಗೆ ಹೋರಟು ಹೋದ. ಆತ್ತ ಗಂಡ ಕಣ್ಮರೆಯಾಗುತ್ತಿದಂತೆ ಇತ್ತ ಆತನ ಹೆಂಡತಿಯು ತನ್ನ ದಾಸಿಯೊಬ್ಬಳನ್ನು ಕರೆದು ತನ್ನ ಗೆಳೆಯರನ್ನು ಒಬ್ಬರಾದ ನಂತರ ಮತ್ತೊಬ್ಬರನ್ನು ಕರೆಯಲು ಕಳುಹಿಸಿದಳು. ಆ ದಾಸಿಯು ಒಡತಿಯ ಆಜ್ಞೆಯನ್ನು ಚಾಚು ತಪ್ಪದೆ ಪರಿಪಾಲಿಸಿದಳು.**

ಸಿ. ಹೆಚ್. ರಾಜಶೇಖರ್

ಮುಜುಗರಗೊಂಡ ಬ್ರಾಹ್ಮಣನು ತನ್ನ ಮಕ್ಕಳಲ್ಲಿ ಹಿರಿಯ ನಾದ ಬೋಧಿಸತ್ವರನ್ನು ಕುರಿತು ;

"ಮಗು, ನಾನಿಲ್ಲದ ಸಮಯದಲ್ಲಿ ನಿನ್ನ ತಾಯಿಯ ನಡವಳಿಕೆ ಹೇಗಿತ್ತು?" ಎನ್ನಲು ಅವರು ನಡೆದ ಸಕಲವನ್ನು ಸವಿವರವಾಗಿ ಹೇಳಿದ ನಂತರ "ತಂದೆ, ತಾಯಿಯ ದೋಷವು ಹೀಗಿದೆ. ಆದುದರಿಂದ ನಿನಗೆ ಇಂತಹ ಹೆಣ್ಣಿನ ಅಗತ್ಯ ಇದಿಯೇ ಎಂಬ ಬಗ್ಗೆ ಯೋಚಿಸಿ ನಿರ್ಧಾರಕ್ಕೆ ಬಾ. ನಾವಿನ್ನು ಬರುತ್ತೇವೆ. ನಿನ್ನ ಪ್ರೀತಿಗೆ ನಿನ್ನ ನೀತಿಗೆ ವಂದನೆಯು ತಂದೆ!" ಎನ್ನಲು

"ಮಗು, ಆಕೆ ಮಾಡಿದ ತಪ್ಪಿಗೆ ನೀವೇಕೆ ಶಿಕ್ಷೆಯನ್ನು ಅನುಭವಿಸುತ್ತೀರಿ?"

"ತಂದೆ ಹೆಂಗಸರು ಮಾಯಾವಿಗಳು. ಸತ್ಯವನ್ನು ತಿನ್ನುವುದರಲ್ಲಿ ಮತ್ತು ತಿರುಚುವುದರಲ್ಲಿ ನಿಸ್ಸೀಮರು. ನೀನು ಈ ಬಗ್ಗೆ ವಿಷಯವನ್ನು ಆಕೆಯಲ್ಲಿ ಪ್ರಸ್ತಾಪಿಸುತ್ತಿದ್ದಂತೆ ನಮ್ಮ ಕಡೆ ಕೆಂಗಣ್ಣು ಬೀರುತ್ತಾಳೆ. ಅದೇ ಸಮಯದಲ್ಲಿ ನಿನ್ನೆದುರು ಹೇಗೆ ನಟಿಸಬೇಕು. ಹೇಗೆ ನಂಬಿಸಬೇಕು ಎಂಬುದನ್ನು ಆಕೆ ಬಲ್ಲಳು. ಮೊದ ಮೊದಲು ಸುಳ್ಳು ಹೇಳುತ್ತಾಳೆ. ಸತ್ಯವನ್ನು ತಿರುಚಿ ಕೊನೆಗೆ ನಮ್ಮ ಕುತ್ತಿಗೆಗೆ ಕಟ್ಟುವಳು. ನಂತರ ಕಣ್ಣೀರಾಕುವಳು. ಆಣೆ ಪ್ರಮಾಣ ಮಾಡುವಳು. ತನ್ನಂಥಹ ಕುಲಟೆಯರು ಮತ್ತು ವಿಲಾಸ ಪ್ರಿಯರನ್ನು ಸಾಕ್ಷಿ ತಂದು ನಿನ್ನ ಮತ್ತು ನಮ್ಮೆದುರು ನಿಲ್ಲಿಸುವಳು. ತಾನು ಎಂಥವಳು ತನ್ನ ಏಳು ತಲೆಮಾರಿನ ವಂಶಜರು ಎಂಥಹ ಶೀಲಸಂಪನ್ನರು ಎಂಬ ಬಗ್ಗೆ ಉದ್ದುದ್ದ ಇತಿಹಾಸವನ್ನು ಬಿಚ್ಚುವಳು. ನೀನು ಇಷ್ಟಕ್ಕೂ ಬಗ್ಗದೆ ಹೋದರೆ ಕೊನೆಯ ಅಸ್ತ್ರವಾಗಿ ತನ್ನಂಥಹ ಸಾಧ್ವಿಗೆ ಈ ಭೂಮಿಯಲ್ಲಿ ಸ್ಥಳವಿಲ್ಲ ಎಂದು ನಟಿಸುತ್ತ ನೇಣಿಗೆ ಶರಣಾಗಲು ಹೋಗುವಳು. ಅಷ್ಟರಲ್ಲಿ ನಿನಗೆ ಸಹಜವಾಗಿ ನಮ್ಮ ಮೇಲೆ ಸಂಶಯ ಮೂಡಿರುತ್ತದೆ. ಮನುಷ್ಯ ಸಹಜವಾದ ಹೆಣ್ಣಿನ ಮೇಲಿನ ಮೋಹ ಒಂದು ಕಡೆ ನಿನ್ನ ಮನಸ್ಸನ್ನು ದುರ್ಬಲಗೊಳಿಸಿರುತ್ತದೆ. ಆ ಎಲ್ಲಾ ದ್ವಂದ್ವದ ನಡುವೆ ಒಂದು ಪಕ್ಷ ಆಕೆ ನೇಣು ಹಾಕಿಕೊಂಡು ಸತ್ತರೆ, ಆ ಅಪರಾಧಕ್ಕೆ ನಾನು ವೃಥ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದು ಹೆದರುವೆ. ಅಂತಿಮವಾಗಿ ನಿನ್ನ ಹೆಂಡತಿಯ ಪರ ಅನಿವಾರ್ಯವಾಗಿ ನಿಲ್ಲುವೆ. ಆಗ ನಾವು ಇತ್ತ ನಿನ್ನ ಪ್ರೀತಿಯನ್ನೂ ಕಳೆದುಕೊಳ್ಳುತ್ತೇವೆ. ಅತ್ತ ನನ್ನ ತಾಯಿಯ ಆಶ್ರಯವನ್ನೂ ಕಳೆದುಕೊಳ್ಳುತ್ತೇವೆ. ಅದರ ಬದಲು ಮಧ್ಯಮ ಮಾರ್ಗ ಅನುಸರಿಸಿ ನಿನ್ನನ್ನು ತೊರೆಯುವುದೆ ಉಚಿತವಲ್ಲವೆ?" ಎನ್ನಲು ಆ ಬ್ರಾಹ್ಮಣನು ಬೋಧಿಸತ್ವರಿಗೆ ತಲೆಬಾಗಿ ವಂದಿಸುತ್ತಾ ;

" ಹೌದು ಮಗು, ನಿನ್ನ ದೂರದೃಷ್ಟಿ ಶಾಂತಿ ಮತ್ತು ಮೈತ್ರಿಯಿಂದ ಕೂಡಿದ್ದು! ನಿನ್ನ ದಾರಿಯನ್ನು ನೀನು ನೋಡಿಕೊ!! ನನ್ನ ದಾರಿಯನ್ನು ನಾನು ನೋಡಿಕೊಳ್ಳುತೇನೆ ... !" ಎಂದ ಆತ ಆ ಗಿಳಿಗಳನ್ನು ಮತ್ತು ತನ್ನ ಹೆಂಡತಿಯನ್ನು ತೊರೆದು ನಡೆದನು. □

# ಉನ್ನತಿಯ ಮಹಾಮಾರ್ಗ

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತವನದಲ್ಲಿ ತಂಗಿದ್ದರು. ಆ ಸಮಯದಲ್ಲಿ ಸಾವತ್ಥಿಯ ಅಗರ್ಭ ಶ್ರೀಮಂತನಾದ ಶ್ರೇಷ್ಠಿಯೊಬ್ಬನಿಗೆ ಏಳು ವರ್ಷದ ಪುತ್ರನೊಬ್ಬನಿದ್ದ ಆತ ತನ್ನ ವಯಸ್ಸಿಗೆ ಮೀರಿದ ಜಾಣನಾಗಿದ್ದ, ಅತ ತನ್ನ ತಂದೆಗೆ ಅತಿ ಮುದ್ದಿನ ಮಗನಾಗಿದ್ದ. ಆತ ಸದಾ ತಂದೆಗೆ ನಾನಾ ಬಗೆಯ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಿದ್ದ. ತಂದೆಯು ಸಹ ಬೇಸರಿಸದೆ ತಮಗೆ ತಿಳಿದ ಉತ್ತರವನ್ನು ನೀಡಿ ಮಗನ ಜ್ಞಾನದಾಹವನ್ನು ಪುರಸ್ಕರಿಸುತ್ತಿದ್ದರು.

ಹೀಗಿರಲು ಒಂದು ದಿನ ಮಗನು "ತಂದೆಯೇ, ಬದುಕಿನ ಮಹಾಉನ್ನತಿಯ ಮಾರ್ಗಗಳು ಯಾವುವು?' ಎಂದು ಕೇಳಿದ. ಈ ಪ್ರಶ್ನೆಗೆ ಆತನಲ್ಲಿ ಸಮಂಜಸವಾದ ಉತ್ತರ ಇರಲಿಲ್ಲ. ಈ ಮಹತ್ತರ ಪ್ರಶ್ನೆಗೆ ಸರಿಯಾಗಿ ಉತ್ತರಿಸಬಲ್ಲ ಮಾಹಾಪುರುಷ ನೆಂದರೆ, ಬುದ್ಧರೆ ಸರಿ ಎಂದು ತೀರ್ಮಾನಿಸಿದ. ಗಂಧ ಮಾಲಾಧಿಗಳನ್ನು ತೆಗೆದುಕೊಂಡು ಮಗನೊಂದಿಗೆ ಬುದ್ಧರ ಬಳಿ ಬಂದು ಅವರಿಗೆ ವಂದಿಸಿ ತಂಗಿದ ಸ್ಥಳದಲ್ಲಿ ಕುಳಿತ ಬಳಿಕ ಅವರಿಗೆ ವಂದಿಸುತ್ತಾ :

ಗುರುದೇವಾ, ಈತ ನನ್ನ ಮಗ ನನಗೊಂದು ಅರ್ಥವಾಗದ ಪ್ರಶ್ನೆಯನ್ನು ಕೇಳಿದ ಅದೇಂದರೆ; "ತಂದೆಯೇ, ಬದುಕಿನಲ್ಲಿ ಮಾಹಾ ಉನ್ನತಿಯನ್ನು ತರುವಂತಹ ಮಾರ್ಗಗಳು ಯಾವುವು ?"ಎಂಬುದೇ ಆಗಿದೆ. ನನಗೆ ಇದರ ನಿಜ ಅರ್ಥ ತಿಳಿಯದು. ಕೃಪೆ ತೋರಿ ಉತ್ತರಿಸಬೇಕಾಗಿ ವಿನಂತಿ: ಎಂದು ಬೇಡಿಕೊಂಡ ನಂತರ ಬುದ್ಧರು ನಸುನಕ್ಕು ಹೀಗೆ ಉತ್ತರಿಸಿದರು:

ಮಗು, ಪ್ರತಿ ಮಾನವರಿಗೂ ಉನ್ನತಿಯನ್ನು ತರುವಂತದ್ದು ಆರು ಗುಣಗಳಿಂದ ಕೂಡಿದೆ. ಅವುಗಳೆಂದರೆ, ಆರೋಗ್ಯ, ಶೀಲ, ಜ್ಞಾನವೃದ್ಧರ ಉಪದೇಶ, ಬಹುಶ್ರುತತ್ವ, ಧರ್ಮಾಚರಣೆ ಮತ್ತು ಅನಾಸಕ್ತಿಯೇ ಆಗಿದೆ. ಆಗ ಆ ಬಾಲಕನು ಬುದ್ಧರನ್ನು ಕುರಿತು:

ತಂದೆಯೇ, ತಾವು ನನ್ನ ಭವಿಷ್ಯವನ್ನು ರೂಪಿಸಿದ ಮಹಾಗುರುವು ತಮಗೆ ವಂದನೆಯು ...! ಎಂದು ಮುನ್ನಡೆದ □

'SAMVADA' Kannada Monthly, August 2010 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month


ಭಾರತಿಗೆ ಬಲವಾಗಿ
ವಸುಮತಿಗೆ ಚೆಲುವಾಗಿ
ಸಕಲರಿಗೆ ಗೆಲುವಾಗಿ
ನಮ್ಮ ಹೊಸ ಹುಟ್ಟು
ಇದಕ್ಕಾಗಿ ಒಂದಾಗಿ
ದುಡಿಯುವೆವು ನಾವು
-ಕವಿ ಕಾವ್ಯಾನಂದ

ಸಾರ್ಥಕ ಎರಡು ವರುಷ

# ಸಾಧನೆಯ ಹಾದಿಯಲ್ಲಿ ನಮ್ಮ ಪಯಣ ನಿರಂತರ ...

**30.05.2008 :** 'ನವ ಕರ್ನಾಟಕ'ದ ನಿರ್ಮಾಣಕ್ಕೆ ಮತದಾರರು ಮುನ್ನುಡಿ ಬರೆದ ಚರಿತ್ರಾರ್ಹ ದಿನ.

ನಮ್ಮ ಸರ್ಕಾರ ಯಶಸ್ವಿ 2 ವರ್ಷ ಪೂರೈಸಿದ ಶುಭ ಸಂದರ್ಭವಿದು.

ಕರ್ನಾಟಕವನ್ನು ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯ ನಾಡಾಗಿ ನಿರ್ಮಿಸುವುದು ನಮ್ಮ ಸಂಕಲ್ಪ. ಈ ಸಂಕಲ್ಪವನ್ನು ಸಾಕಾರಗೊಳಿಸಲು ನಮ್ಮ ಪಯಣ ನಿರಂತರ. ನಮ್ಮ ಸಾಧನೆಗೆ ಬೆಂಬಲವಾಗಿ ನಿಂತಿರುವ ನಾಡಿನ ಸಮಸ್ತ ಜನತೆಗೆ ನಮ್ಮ ಅನಂತ ಧನ್ಯವಾದಗಳು.



**30.05.2010 :** ಸಮೃದ್ಧ ಕರ್ನಾಟಕ ನಿರ್ಮಾಣದಲ್ಲಿ ಸಾರ್ಥಕ ಸಾಧನೆಯ ಸಿಂಹಾವಲೋಕನ.

ಇಂದು - ಕರ್ನಾಟಕ ದೇಶದಲ್ಲಿಯೇ ಪ್ರಥಮ

• ರೈತರು, ನೇಕಾರರು, ಮೀನುಗಾರರಿಗೆ ಶೇ. 3ರ ಬಡ್ಡಿದರದಲ್ಲಿ ಅಲ್ಪಾವಧಿ ಸಾಲಸೌಲಭ್ಯ. • ಹಾಲು ಉತ್ಪಾದಕರಿಗೆ ಒಟ್ಟಾರೆ ಪ್ರತಿ ಲೀಟರ್‌ಗೆ ರೂ. 4.50 ರಂತೆ ಹೆಚ್ಚಿನ ದರ. • ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನಕ್ಕಾಗಿ ಬೆಳಗಾವಿ, ಗುಲ್ಬರ್ಗ ಜಿಲ್ಲೆಗಳಿಗೆ ರಾಷ್ಟ್ರೀಯ ಪುರಸ್ಕಾರ. • ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಅನುಷ್ಠಾನದಲ್ಲಿ ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನ. • ಸಾವಯವ ಕೃಷಿ ಮಿಷನ್ ಸ್ಥಾಪನೆ. • ರಾಜ್ಯ ಮಟ್ಟದಲ್ಲಿ ಜ್ಞಾನ ಆಯೋಗ ರಚನೆ.
• ಸೆಮಿಕಂಡಕ್ಟರ್ ನೀತಿ ಜಾರಿ. • 'ಭಾಗ್ಯಲಕ್ಷ್ಮಿ' ವಿಮಾ ಯೋಜನೆ.
• ವಿವಿಧ ಉದ್ದೇಶಗಳಿಗೆ ಭೂ ಬ್ಯಾಂಕ್ ಸ್ಥಾಪನೆ. • ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಗಳಿಗೆ ಮೀಸಲಾದ ವಿಶೇಷ ವಿಧಾನ ಮಂಡಲ ಅಧಿವೇಶನ.

ಅಭಿವೃದ್ಧಿಯೇ ಆಡಳಿತ ಮಂತ್ರ

ಕರ್ನಾಟಕ ವಾರ್ತೆ